ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

01 ಜುಲೈ 2015 ಪುಟ 20 ರೂ. 15/-

ಹಾಸ್ಯಲೇಖನ
ರಾಜಕಾರಣಿಗಳ
ಪುತ್ರರೇ
ಹೊಸ
ಹಿರೋಗಳು



ಯಶ್
ತಾಯಿ ತಂದಿಟ್ಟ ಯಡವಟ್ಟು



ರಾಯಚೂರು

ಜಯ ಜ್ಯೋತ್ಸ್ನಾ



ಗೇಟ್‌ಪಾಸ್

ಉತ್ತರ ಕನ್ನಡ


ಕೆಡಿಸಿಸಿ ಕಿರೀಟಕ್ಕಾಗಿ ಕೊಳಕರ ಕಿತ್ತಾಟ!!

ಮಂಡ್ಯ

ಗೆದ್ದು ಬಿದ್ದ ಅಂಬಿ



ಡಬ್ಲ್ಯುಟಿಓ- ಗ್ಯಾಟ್ಸ್(WTO - GATS)ನ ವಶಕ್ಕೆ ಶಿಕ್ಷ



ಈ ಡಿಸೆಂಬರ್‌ನಲ್ಲಿ ರಾಷ್ಟ್ರ ನಿರ್ಮಾಣದ ಆಶಯಕ್ಕೆ ಕೊನೆ ಮೊಳೆ ಹೊಡೆಯಲಿರುವ ದೇಶ ಭಕ್ತರು

ಭರತವರ್ಷವನ್ನು ಆಳುತ್ತಿರುವ ದೇಶ ಭಕ್ತರು ಮಾಡುತ್ತಿರುವ 'ಅಭಿವೃದ್ಧಿಯೋ ಅಭಿವೃದ್ಧಿ'ಯು ಈ ಡಿಸೆಂಬರ್‌ನಲ್ಲಿ ಒಂದು ಪ್ರಮುಖ ತಿರುವನ್ನು ಪಡೆದುಕೊಳ್ಳಲಿದೆ. ಆಫ್ರಿಕಾ ಖಂಡದ ಕೀನ್ಯಾ ದೇಶದ ರಾಜಧಾನಿ ನೈರೋಬಿಯಲ್ಲಿ ಇದೇ ಡಿಸೆಂಬರ್ 15ರಿಂದ 18ರವರೆಗೆ ಡಬ್ಲ್ಯುಟಿಓದ ಪ್ರಮುಖ ಸಭೆಯೊಂದು ನಡೆಯಲಿದೆ. ಅದು ವಿಶ್ವ ವ್ಯಾಪಾರ ಸಂಸ್ಥೆ - ಡಬ್ಲ್ಯುಟಿಓದ 10ನೇ ಮಂತ್ರಿ ಪರಿಷತ್ತಿನ ಸಮ್ಮೇಳನವಾಗಿರುತ್ತದೆ (10th ministerial conference). ಅಲ್ಲಿ ಸಹಿಯಾಗಲಿರುವ ಒಪ್ಪಂದವು ಅಂತರಾಷ್ಟ್ರೀಯ ಒಪ್ಪಂದಗಳ ದೃಷ್ಟಿಯಿಂದ ಕಳೆದ 10 ವರ್ಷಗಳಲ್ಲಿ ಒಂದು 'ಮಹತ್ವ'ದ ಒಪ್ಪಂದವಾಗಿರುತ್ತದೆ.

ಅದೇನೆಂದು ಅರ್ಥಮಾಡಿಕೊಳ್ಳಲು ಡಬ್ಲ್ಯುಟಿಓದ ಹಿನ್ನೆಲೆಯನ್ನು ಸ್ವಲ್ಪ ಮಟ್ಟಿಗೆ ಮೆಲುಕು ಹಾಕುವ ಅಗತ್ಯವಿದೆ. ಪ್ರಪಂಚದ ದೊಡ್ಡ ಬಂಡವಾಳಿಗರು, ಭೂಗೋಳದ ಯಾವುದೇ ಭಾಗಕ್ಕಾದರೂ ಹೋಗಿ ಲಾಭ ಮಾಡಿಕೊಳ್ಳುವ ಉದ್ದಿಮೆಗಳನ್ನು ಆರಂಭಿಸಲು ಬೇಕಾದ ನೀತಿಯನ್ನು '80ರ ದಶಕದಿಂದಲೇ ಪ್ರತಿಪಾದಿಸಲಾಯಿತು. '90ರ ದಶಕದ ಆರಂಭದಲ್ಲಿ ಅದು ಡಂಕೆಲ್ ಪ್ರಸ್ತಾಪವಾಗಿ ಸ್ಪಷ್ಟ ರೂಪವನ್ನು ಪಡೆದುಕೊಂಡಿತು. ಅದೇ 1994ರಲ್ಲಿ ಗ್ಯಾಟ್ ಒಪ್ಪಂದವೆಂಬ ಹೆಸರಿನಲ್ಲಿ ಮುಂದೆ ಬಂದಾಗ ಜಗತ್ತಿನ ಅರ್ಧಕ್ಕೂ ಹೆಚ್ಚು ದೇಶಗಳ ಮುಖ್ಯಸ್ಥರು ಸಹಿ ಹಾಕಿದರು. ಭಾರತವೂ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ವಿವಿಧ ಜನವಿಭಾಗಗಳು ತೀವ್ರವಾಗಿ ಅದನ್ನು ವಿರೋಧಿಸಿದರು. ಆ ಎಲ್ಲಾ ವಿರೋಧಗಳ ಹೊರತಾಗ್ಯೂ ಗ್ಯಾಟ್ ಒಪ್ಪಂದವು ಜಾರಿಗೆ ಬಂದಿತಲ್ಲದೇ, 1995ರಲ್ಲಿ ಡಬ್ಲ್ಯುಟಿಓ - ವಿಶ್ವ ವಾಣಿಜ್ಯ ಸಂಸ್ಥೆಯ ಹೆಸರಿನಲ್ಲಿ ಸಾಂಸ್ಥಿಕ ರೂಪವನ್ನು ಪಡೆದುಕೊಂಡಿತು.

ಡಬ್ಲ್ಯುಟಿಓ ಒಪ್ಪಂದವೆಂದರೆ, ಕೃಷಿ ಒಪ್ಪಂದವನ್ನೂ ಒಳಗೊಂಡ 1994ರ ಗ್ಯಾಟ್ ಒಪ್ಪಂದ (General Agreement on Trade and Tariff), ವಾಣಿಜ್ಯಕ್ಕೆ ಸಂಬಂಧಿಸಿದ ಬೌದ್ಧಿಕ ಆಸ್ತಿ ಹಕ್ಕುಗಳ ಒಪ್ಪಂದ (TRIPS - Trade Related Intellectual Property Rights) ಮತ್ತು ಸೇವಾವಲಯದಲ್ಲಿ ವಾಣಿಜ್ಯಕ್ಕೆ ಸಂಬಂಧಿಸಿದ ಒಪ್ಪಂದ (GATS - General Agreement of Trade in Services) ಈ ಮೂರೂ ಒಪ್ಪಂದಗಳ ಒಂದು ಸಮೂಹ.

ಇದರಲ್ಲಿ ಗ್ಯಾಟ್ಸ್‌ನಲ್ಲಿ ಸೇವಾವಲಯವೆಂದು ಕರೆಯಲ್ಪಡುವ ವಿವಿಧ 'ವ್ಯವಹಾರಗಳು' ಬರುತ್ತವೆ. ಅದರಲ್ಲಿ ಶಿಕ್ಷಣವೂ ಇದೆ, ನೈಟ್ ಕ್ಲಬ್-ರಿಕ್ರಿಯೇಷನ್ ಕ್ಲಬ್‌ಗಳೂ ಇವೆ. ಶಿಕ್ಷಣದ ವ್ಯಾಪಾರವನ್ನು ಹೇಗೆ ನಡೆಸಬೇಕೆಂಬ ನಿಯಮಗಳಿಗೂ, ನೈಟ್ ಕ್ಲಬ್ ವ್ಯಾಪಾರವನ್ನು ಹೇಗೆ ನಡೆಸಬೇಕೆಂಬ ನಿಯಮಗಳಿಗೂ ಹೆಚ್ಚೇನೂ ವ್ಯತ್ಯಾಸವಿಲ್ಲ! ಈ ಮೂರನೆಯ ಒಪ್ಪಂದವು ಇನ್ನೂ ಸಂಪೂರ್ಣವಾಗಿ ಅಂತಿಮಗೊಂಡಿಲ್ಲ. ಇವೆಲ್ಲಕ್ಕೆ, ಸಂಬಂಧಿಸಿದಂತೆ ನಡೆಯುತ್ತಿರುವ ಮಾತುಕತೆಗಳು ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿವೆ.

ಹಾಲಿ ಡಬ್ಲ್ಯುಟಿಓದಲ್ಲಿ 160 ಸದಸ್ಯ ರಾಷ್ಟ್ರಗಳು ಇವೆ. ಡಬ್ಲ್ಯುಟಿಓದಿಂದ ದೇಶದ ಸಾಮಾನ್ಯ ಜನರಿಗೆ ಬಹಳ ತೊಂದರೆ ಕಾದಿದೆಯೆಂದು ಗೊತ್ತಿದ್ದರೂ, ತಮ್ಮ ದೇಶಗಳ ಕುಬೇರರಿಗೆ ಅದರಿಂದ ಅನುಕೂಲವಾಗುವುದರಿಂದ ದೇಶಗಳ ಮುಖ್ಯಸ್ಥರು ಸಹಿ ಹಾಕಿದ್ದಾರೆ. ಆದರೆ, ದಿನೇದಿನೇ ಕೆಲವು ದೇಶಗಳಿಗಂತೂ ಉಸಿರುಗಟ್ಟಲು ಆರಂಭವಾಯಿತು. ಹೀಗಾಗಿ 2001ರಲ್ಲಿ ಕತಾರ್‌ನ ದೋಹಾದಲ್ಲಿ ಆರಂಭವಾದ ದೋಹಾ ಸುತ್ತಿನ ಮಾತುಕತೆಯ ಹೊತ್ತಿಗೆ ಬಡ ಹಾಗೂ ಅಭಿವೃದ್ಧಿ ಹೊಂದಿದ ದೇಶಗಳು ಅನಿವಾರ್ಯವಾಗಿ ವಿರೋಧ ಮಾಡಲಾರಂಭಿಸಿದರು. ಅಲ್ಲಿಂದ ಮುಂದಕ್ಕೆ, ಕೆಲವು ಕ್ಷೇತ್ರಗಳಲ್ಲಿ ಮಾತುಕತೆ ಮುಂದಕ್ಕೆ ಹೋಗದೇ ನೆನೆಗುದಿಗೆ ಬಿದ್ದವು. ಕೆಲವು ಅಂಶಗಳಲ್ಲಿ 10 ವರ್ಷಗಳ ಚರ್ಚೆಯ ನಂತರವೂ ಅಂತಿಮಗೊಳ್ಳಲಿಲ್ಲ.

ಹೀಗಾಗಿ ಡಬ್ಲ್ಯುಟಿಓದ ಸಾಮಾನ್ಯ ಮಂಡಳಿಯ ವಿಶೇಷ ಸಭೆಯನ್ನು ನವೆಂಬರ್ 2014ರಲ್ಲಿ ಜಿನೀವಾದಲ್ಲೇ ಕರೆಯಲಾಗಿತ್ತು. ಅಲ್ಲಿ ನೆನೆಗುದಿಗೆ ಬಿದ್ದಿರುವ ದೋಹಾ ಸುತ್ತಿನ ಮಾತುಕತೆಗೆ ಒಂದು ಗತಿ ಕಾಣಿಸಲೇಬೇಕೆಂದು ತೀರ್ಮಾನಿಸಲಾಯಿತು. ಅಭಿವೃದ್ಧಿ ಹೊಂದುತ್ತಿರುವ ಮತ್ತು ಅತ್ಯಂತ ಕಡಿಮೆ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಕಳೆದ 10 ವರ್ಷಗಳಿಂದ ಒಡ್ಡುತ್ತಾ ಬಂದಿರುವ ಪ್ರತಿರೋಧವನ್ನು ಬಗ್ಗುಬಡಿಯಲು 'ಸೂಕ್ತ ಕ್ರಮ'ಗಳನ್ನು ಕೈಗೊಳ್ಳಲಾಯಿತು. ಅದರಲ್ಲೂ ಸೇವಾವಲಯದಲ್ಲಿ - ಶಿಕ್ಷಣ ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿ - ಪ್ರಪಂಚದ ಭಾರೀ ದೊಡ್ಡ ಬಂಡವಾಳಶಾಹಿಗಳು ಲೂಟಿ ಮಾಡಲು ಬೇಕಾದ ಕ್ರಮಗಳಿಗೆ ಮುಂದಾಗಲಾಯಿತು.

ದೋಹಾ ಸುತ್ತಿನ ಮಾತುಕತೆಯ ಅಂತಿಮ ಚರಣದಲ್ಲಿ, ಅಂದರೆ, ಆಗಸ್ಟ್ 2005ರಲ್ಲಿ ಭಾರತ ಸರ್ಕಾರದ ವತಿಯಿಂದ ಉನ್ನತ ಶಿಕ್ಷಣದ ಉಪ-ಕ್ಷೇತ್ರದಲ್ಲಿ ಮಾರುಕಟ್ಟೆ ಪ್ರವೇಶದ 'ಆಫರ್' ನೀಡಲಾಯಿತು. ಆದರೆ ಅದು ವಾಸ್ತವದಲ್ಲಿ ಜಾರಿಗೆ ಬರಲಿಲ್ಲ. ಏಕೆಂದರೆ, ದೋಹಾ ಸುತ್ತಿನ ಮಾತುಕತೆಯೇ ಪೂರ್ಣವಾಗಿರಲಿಲ್ಲ. ಇದೀಗ ಜಿನೀವಾದ 'ನಿರ್ಣಾಯಕ' ತೀರ್ಮಾನದಿಂದಾಗಿ ಅದು ಜಾರಿಗೆ ಬರಲಿದೆ. ಈ ವರ್ಷ ಡಿಸೆಂಬರ್ 15ರಿಂದ 18ರ ನಡುವೆ ಕೀನ್ಯಾದ ನೈರೋಬಿಯಲ್ಲಿ ನಡೆಯಲಿರುವ 10ನೇ ಮಂತ್ರಿ ಪರಿಷತ್ತಿನ ಸಭೆಯಲ್ಲಿ ಇದನ್ನು ಒಪ್ಪಂದವನ್ನಾಗಿಸುವ ಉದ್ದೇಶ ಹೊಂದಲಾಗಿದೆ.

ಮಾಡುವುದು ಇತ್ಯಾದಿ. ಇದನ್ನೇ ನೀವು ನೈಟ್ ಕ್ಲಬ್‌ಗೂ ಅನ್ವಯಿಸಬಹುದು; ಜೀವವಿಮೆಗೂ ಅನ್ವಯಿಸಬಹುದು.

ಆಫರ್ ಮಾಡಿದ ತಕ್ಷಣ ಅದು ಜಾರಿಗೆ ಬರುವುದಿಲ್ಲ. ಅದು ನಂತರದ ಸುತ್ತಿನ ಮಾತುಕತೆಯಲ್ಲಿ ಒಪ್ಪಂದವಾಗಬೇಕು. ಅದನ್ನು ಬದ್ಧತೆ (commitment) ಎನ್ನಲಾಗುತ್ತದೆ. ಶಿಕ್ಷಣದ ವಿಚಾರದಲ್ಲಿ ಈಗಾಗಲೇ ಆಫರ್ ನೀಡಲಾಗಿದೆ. ಆದರೆ ಇನ್ನೂ ಅದಕ್ಕೆ 'ಬದ್ಧತೆ'ಯಾಗಿಲ್ಲ. ನೈರೋಬಿಯಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ ಮಂತ್ರಿಗಳ ಸಮ್ಮೇಳನದಲ್ಲಿ ಅದಕ್ಕೆ ಅಂತಿಮ ಸಹಿ ಹಾಕಲಾಗುತ್ತದೆ. ಒಮ್ಮೆ ಸಹಿ ಹಾಕಿದ ನಂತರ ಯಾವುದೇ ಕಾರಣಕ್ಕೆ ಅದರಿಂದ ಹಿಂದೆ ಹೋಗುವಂತಿಲ್ಲ. ಆ ಸಭೆಗೆ ಮುಂಚೆಯೇ ಭಾರತ ಸರ್ಕಾರವು ತನ್ನ ಆಫರ್‌ಅನ್ನು ಹಿಂತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅದು ತನ್ನಂತೆ ತಾನೇ ಕಮಿಟ್‌ಮೆಂಟ್ ಆಗಿ ಬದಲಾಗುತ್ತದೆ.

ಅಲ್ಲಿಂದಾಚೆಗೆ, ವಿದೇಶದ ಯಾವುದೇ ಕಂಪೆನಿಯು ವಿಶ್ವವಿದ್ಯಾಲಯಗಳ ಹೆಸರಿನಲ್ಲಿ, ಶಿಕ್ಷಣ ಸಂಸ್ಥೆಯ ಹೆಸರಿನಲ್ಲಿ ಇಲ್ಲಿಗೆ ಬಂದು ಅಂಗಡಿ ತೆರೆಯಬಹುದು. ಅದರಿಂದ ಏನೆಲ್ಲಾ ಪರಿಣಾಮ ಉಂಟಾಗಬಹುದು ಎಂಬುದನ್ನು ನಾವು-ನೀವೆಲ್ಲರೂ ಊಹಿಸಿಕೊಳ್ಳಬಹುದು. ಮುಂದಿನ ಹಂತ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವಾಗಿರುತ್ತದೆ. ಈಗಿನಂತೆ ಸರ್ಕಾರದ ಸಂಸ್ಥೆಗಳು, ಸರ್ಕಾರದ ಶುಲ್ಕ ವಿನಾಯಿತಿ, ಮೀಸಲಾತಿ, ಪರಿಶಿಷ್ಟ ಜಾತಿ-ಪಂಗಡಗಳವರಿಗೆ ರಿಯಾಯಿತಿ ಇವ್ಯಾವೂ ಇರುವುದಿಲ್ಲ. (ಆರಂಭದಲ್ಲಿ ವರ್ಷಕ್ಕೆ ಇಂತಿಷ್ಟು ಬಡ-ಹಿಂದುಳಿದ-ದಲಿತ ವಿದ್ಯಾರ್ಥಿಗಳ ಇಷ್ಟು ಶುಲ್ಕವನ್ನು ಸರ್ಕಾರ ಭರಿಸಬೇಕೆಂದು ಹೇಳುವುದು, ನಂತರ ಅದನ್ನೂ ಇಲ್ಲವಾಗಿಸುವುದು ಇತ್ಯಾದಿ ವಿಧಾನಗಳು ಹೇಗೂ ನಮ್ಮನ್ನು ಆಳುವವರಿಗೆ ಕರಗತವಾಗಿವೆ). ಗುಣಮಟ್ಟದ ಶಿಕ್ಷಣದ ಹೆಸರಿನಲ್ಲಿ ಈ ದೇಶದ ಎಲ್ಲಾ ಬಡವರ, ಶ್ರಮಿಕರ, ದಲಿತ-ಹಿಂದುಳಿದವರ ಪಾಲಿಗೆ ಶಿಕ್ಷಣವನ್ನು ಗಗನಕುಸುಮ ಮಾಡುವುದರಲ್ಲಿ ಅನುಮಾನವೇ ಇಲ್ಲ. ಈಗಾಗಲೇ ವೈದ್ಯಕೀಯ ಶಿಕ್ಷಣದಂತಹ ಕೆಲವು ಕ್ಷೇತ್ರಗಳು ಮಧ್ಯಮವರ್ಗಕ್ಕಿಂತ ಕೆಳಗಿನ ಯಾರಿಗೂ ದಕ್ಕದಂತೆ ಆಗಿರುವುದರ ಪರಿಣಾಮವನ್ನು ನಾವೆಲ್ಲರೂ ನೋಡುತ್ತಿದ್ದೇವೆ.



ಆಫರ್ ಎಂದರೇನು? ಮಾತುಕತೆಗೆ ಕೂತಾಗ, ಪ್ರತೀ ದೇಶವೂ ಒಂದಾದ ಮೇಲೆ ಒಂದರಂತೆ ತನ್ನ ದೇಶದ ವಿವಿಧ ಕ್ಷೇತ್ರಗಳನ್ನು ವ್ಯಾಪಾರಕ್ಕೆ ಒಡ್ಡಬೇಕಾಗುತ್ತದೆ. ಇದನ್ನು ಧರ್ಮರಾಯ ಜೂಜಿಗೆ ಕೂತಾಗ ಒಂದಾದ ಮೇಲೆ ಒಂದರಂತೆ ಒಡ್ಡಿದ ಪಣ ಎನ್ನಬಹುದು ಅಥವಾ 'ಸಂತೆಯಲ್ಲಿ ನಿಂತು ಸೀರೆ ಬಿಚ್ಚಿದಂತೆ' ಎನ್ನುವ ಕನ್ನಡದ 'ಕೆಟ್ಟ' ಗಾದೆಯಂತೆ ಎಂತಲೂ ಹೇಳಬಹುದು. ವಾಸ್ತವದಲ್ಲಿ ಇದು ಅದಕ್ಕಿಂತ ಭಿನ್ನವೇನಲ್ಲ. ನಾವು ಪಣದಲ್ಲಿ ಶಿಕ್ಷಣವನ್ನು ಒಡ್ಡುತ್ತೇವೆ, ನೀವು ಕೃಷಿಯ ಈ ಉಪ ವಿಭಾಗವನ್ನು ಒಡ್ಡಿ, ನೀವು ಜೀವವಿಮೆಯ ಆ ವಿಭಾಗವನ್ನು ಒಡ್ಡಿ - ಈ ರೀತಿ.

ಈ ಆಫರ್‌ಗಳನ್ನು ಕ್ಷೇತ್ರವಾರು ಮತ್ತು ವಿಧಾನವಾರು ಮಾಡಲಾಗುತ್ತದೆ. ಉದಾಹರಣೆಗೆ ಶಿಕ್ಷಣ ಎಂಬುದು ಒಂದು ವಿಭಾಗ. ಅದರಲ್ಲಿ ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಉನ್ನತ ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಇತರೆ ಎಂಬ ಐದು ಉಪ-ವಿಭಾಗಗಳಿವೆ (ಈಗಾಗಲೇ ಉನ್ನತ ಶಿಕ್ಷಣ ಆಫರ್‌ಅನ್ನು ಭಾರತ ಸರ್ಕಾರ ಮಾಡಿದೆ.) ಇದಲ್ಲದೇ ಎಲ್ಲಾ ವ್ಯಾಪಾರಗಳಲ್ಲೂ 4 ಬಗೆಯ ವ್ಯಾಪಾರದ ವಿಧಾನಗಳಿವೆ. ಅಂತರ್ ಗಡಿ ಪೂರೈಕೆ, ಹೊರದೇಶಗಳಲ್ಲಿ ಸೇವೆ ಪಡೆದುಕೊಳ್ಳುವುದು, ವಾಣಿಜ್ಯ ಅಸ್ತಿತ್ವ, ನೈಸರ್ಗಿಕ ವ್ಯಕ್ತಿಯ ಅಸ್ತಿತ್ವ. ಅಂದರೆ, ಉದಾಹರಣೆಗೆ ಶಿಕ್ಷಣ ಕ್ಷೇತ್ರದಲ್ಲಿ ಈ ರೀತಿ ಇರುತ್ತದೆ. ಅಂತರ್‌ಗಡಿ ಪೂರೈಕೆ ಎಂದರೆ, ಹೊರ ದೇಶಗಳ ಶಿಕ್ಷಣ ಸಂಸ್ಥೆಗಳಿಂದ ದೂರಶಿಕ್ಷಣ ಪಡೆದುಕೊಳ್ಳುವುದು. ಹೊರದೇಶಗಳಲ್ಲಿ ಸೇವೆ ಪಡೆದುಕೊಳ್ಳುವುದು ಎಂದರೆ, ಇಲ್ಲಿಂದ ವಿದ್ಯಾರ್ಥಿ ಬೇರೆ ದೇಶಕ್ಕೆ ಹೋಗಿ ಶಿಕ್ಷಣ ಪಡೆದುಕೊಂಡು ಬರುವುದು. ವಾಣಿಜ್ಯ ಅಸ್ತಿತ್ವ ಎಂದರೆ, ವಿದೇಶದ ಕಂಪೆನಿ ನಮ್ಮಲ್ಲಿ ಬಂದು ಶಿಕ್ಷಣದ ಅಂಗಡಿ ತೆರೆಯುವುದು. ನೈಸರ್ಗಿಕ ವ್ಯಕ್ತಿಯ ಅಸ್ತಿತ್ವ ಎಂದರೆ, ಇಲ್ಲಿಗೆ ವಿದೇಶೀ ಪ್ರಾಧ್ಯಾಪಕರುಗಳೇ ಬಂದು ಪಾಠ

ಹಾಗೆಂದು ಇದೇ ಕೇವಲ ಹಣದ ಪ್ರಶ್ನೆ ಮಾತ್ರವಲ್ಲ. ಶಿಕ್ಷಣವೆನ್ನುವುದು ರಾಷ್ಟ್ರ ನಿರ್ಮಾಣದ ಕೆಲಸವಾಗಿದೆ. ಸಮಾಜದ ಬದಲಾವಣೆಯ ಸಾಧನವಾಗಿದೆ. ದೇಶಪ್ರೇಮ, ದೇಶದ ಸಮಸ್ತ ಜನತೆಯ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪುನರ್ನಿರ್ಮಾಣದ ಕಡೆಗೆ ಹೋಗಲು ಬೇಕಾದ ಮಹತ್ತರವಾದ ಸಾಧನವಾಗಿದೆ. ಅದನ್ನು ಕೇವಲ ದಂಧೆ, ಒಂದು ಅಂತರಾಷ್ಟ್ರೀಯ ಮಟ್ಟದ ದಂಧೆಯನ್ನಾಗಿಸಿದ ಮೇಲೆ ಇನ್ನೇನು ಉಳಿದಿರುತ್ತದೆ?

ಆದರೆ, ಇದನ್ನು ಗುಣಮಟ್ಟದ ಶಿಕ್ಷಣ ನೀಡುವ ಹೆಸರಿನಲ್ಲಿ ಮತ್ತು ಎಲ್ಲರಿಗೂ ಉನ್ನತ ಶಿಕ್ಷಣವನ್ನು ಕಲ್ಪಿಸಲು ಬೇಕಾದ ಹಣ ನಮ್ಮಲ್ಲಿಲ್ಲ ಎನ್ನುವ ಹೆಸರಿನಲ್ಲಿ ತರಲಾಗುತ್ತದೆ. ವಾಸ್ತವದಲ್ಲಿ ಅತ್ಯುತ್ತಮ ವಿಶ್ವವಿದ್ಯಾಲಯಗಳೂ ಸಹ ಎರಡನೆ ದರ್ಜೆ ಶಿಕ್ಷಣವನ್ನೇ ಇಲ್ಲಿ ನೀಡುತ್ತಾರೆ. ಇದನ್ನು ನಾವ್ಯಾರೂ ಹೇಳುತ್ತಿರುವುದಲ್ಲ, ಸ್ವತಃ ವಿಶ್ವಬ್ಯಾಂಕ್ (2000ರಲ್ಲಿ) 'ಅಭಿವೃದ್ಧಿ ಹೊಂದಿರುವ ದೇಶಗಳ ಪ್ರಸಿದ್ಧ ವಿಶ್ವವಿದ್ಯಾಲಯಗಳು ಹಿಂದುಳಿದ ದೇಶಗಳಲ್ಲಿ ಕಡಿಮೆ ದರ್ಜೆಯ ಸಂಸ್ಥೆಗಳನ್ನೇ ಪ್ರಾರಂಭಿಸಿವೆ' ಎಂದು ಹೇಳಿದೆ. ಶಿಕ್ಷಣವೆನ್ನುವುದು ಒಂದು ಸರಕು ಮತ್ತು ವಿದ್ಯಾರ್ಥಿಗಳು ಅದರ ಗ್ರಾಹಕರು ಎಂಬುದು ಮಾರುಕಟ್ಟೆ ಸಿದ್ಧಾಂತ. ರಾಷ್ಟ್ರ ನಿರ್ಮಾಣ, ವ್ಯಕ್ತಿತ್ವ ನಿರ್ಮಾಣ, ಸಂವಿಧಾನದ ಆಶಯಗಳು, ಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯ ಎಲ್ಲವೂ ಲೊಳಲೊಟ್ಟೆ.

ಹಾಗಾದರೆ, ವಿದೇಶದಿಂದ ಬರುವ ಜ್ಞಾನ ಬೇಡವೇ? ಖಂಡಿತಾ ಬೇಕು. ಜಗತ್ತಿನ ಎಲ್ಲೆಡೆಯ ನಮಗೆ ಬೇಕಿದೆ. ಇದುವರೆಗೆ ಈ ಜ್ಞಾನ ಬರುತ್ತಿರ ದೇಶದೇಶಗಳ ನಡುವಿನ ಶೈಕ್ಷಣಿಕ ಮತ್ತು ಸ ಸಂಬಂಧದ ಭಾಗವಾಗಿ ಆ ಜ್ಞಾನ ಹರಿದುಬರುವ ಒಂದು ವ್ಯಾಪಾರದ ರೂಪದಲ್ಲಿ ಬರುವುದಕ್ಕೂ ವ್ಯತ್ಯಾಸವನ್ನು ಯಾರು ಬೇಕಾದರೂ ಊಹಿಸಬ

ಡಿಸೆಂಬರ್‌ನಲ್ಲಿ ದೇಶಭಕ್ತ ಸರ್ಕಾರದ ದಲ ಹೋಗಿ ಸಹಿ ಹಾಕಿದರೆ ಏನಾಗುತ್ತದೆ ಎನ ಈಗಾಗಲೇ ಡಬ್ಲ್ಯುಟಿಓ ಒಪ್ಪಂದದ ಭಾಗವಾಗಿ ಅನುಭವಿಸಿದ್ದೇವೆನ್ನುವುದನ್ನು ನೋಡಿದರೆ ತಿಳಿಯುತ್ತದೆ. ಡಬ್ಲ್ಯುಟಿಓದ ಅಂಗವೇ ಆಗಿರುವ ನೀತಿ ಸಮೀಕ್ಷಾ ಯಂತ್ರಾಂಗವು (TPRM - T policy review mechanism) ಪ್ರತೀ ವಿವಿಧ ದೇಶಗಳ ವಾಣಿಜ್ಯ ನೀತಿಯನ್ನು ಪರಿಶೀ ಮತ್ತು ಸದಸ್ಯ ರಾಷ್ಟ್ರಗಳ ನೀತಿಗಳಲ್ಲಿ ಬರಬೆ ಬದಲಾವಣೆಗಳನ್ನು ಸೂಚಿಸುತ್ತದೆ. ಇದು ದ ಸಾರ್ವಭೌಮತೆ ಮತ್ತು ಸ್ವಾತಂತ್ರ್ಯದ ಸಂ ಉಲ್ಲಂಘನೆಯಾಗಿದೆ. ವರ್ಷದಿಂದ ವರ್ಷಕ್ಕೆ ಅಭಿವ ಮತ್ತು ಕಡಿಮೆ ಅಭಿವೃದ್ಧಿ ಹೊಂದಿದ ದೇ ಬಲಿಪಶುಗಳಾಗುತ್ತಾ ಹೋಗುತ್ತವೆ. ಈ ಟಿಪಿ ಅಧಿಕಾರಿಗಳು ನಿರಂತರವಾಗಿ ದೇಶದ ಅ ಅಧಿಕಾರಿಗಳು, ಮಂತ್ರಿಗಳು ಮತ್ತು ಸಂಬ ಇಲಾಖೆಯ ಅಧಿಕಾರಸ್ಥರನ್ನು ಭೇಟಿಯಾಗುತ್ತಾ ಬದಲಾವಣೆಗೆ ಒತ್ತಡ ಹೇರುತ್ತಾ ಇರುತ್ತಾ ಅಧಿಕಾರಸ್ಥರು ಭಾರತದ ಜನತೆಗಿಂತ ಹೆ ಕಂಪೆನಿಗಳಿಗೇ ನಿಷ್ಠರಾಗಿರುತ್ತಾರೆ. ಮೋದಿ ಸ ಇದುವರೆಗೆ ಈ ದೇಶದ ಇದುವರೆಗಿನ ಇತಿಹಾ ಅತ್ಯಂತ ಹೆಚ್ಚು ಬಂಡವಾಳಿಗರ ಪರವಾದ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾ

ಈ ಹಿಂದೆ ಯುಪಿಎ ಸರ್ಕಾರವಿದ್ದಾಗ ಟಿಪಿಆರ್‌ಎಂನ 'ಸೂಚನೆ'ಗಳಿಗೆ ಅನುಗುಣವಾ ಸಂಸತ್ತಿನಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಮಸೂದೆಗಳನ್ನು ಮುಂದಿಡಲಾಗಿತ್ತು. ಕಾಯ್ದೆಯ ಹೋಗಿದ್ದರಿಂದ ಸದ್ಯಕ್ಕೆ ಅವು ರದ್ದಾಗಿವೆಯಾದರೂ, ಸರ್ಕಾರ ಮತ್ತಷ್ಟು ಜನವಿರೋಧಿಯಾ ದೇಶದ್ರೋಹಿಯಾದ ತಿದ್ದುಪಡಿಗಳೊಂದಿಗೆ ಮುಂದಿಡುವುದು ಖಚಿತ. ಸ್ವತಂತ್ರ ನಿಯ ಪ್ರಾಧಿಕಾರಗಳ (IRAs- Indepen regulatory authorities) ಹೆಸರಿನಲ್ಲಿ ಹಾಗೂ ಇನ್ನೂ ಕೆಲವು ಕ್ಷೇತ್ರಗಳಲ್ಲಿ ಶಾಸನ ಅಧಿಕಾರ ಕಳೆದುಕೊಂಡಿವೆ. 'ಇತರ ಮಧ್ಯಪ್ರವೇಶ ಮುಕ್ತವಾಗಿರಬೇಕು ಮತ್ತು ನಿಷ್ಪಕ್ಷಪಾತವಾಗಿರಬೇಕು ಹೆಸರಿನಲ್ಲಿ, ಜನತೆಯ ಪ್ರತಿರೋಧದಿಂದಾಗಿ ಬದಲಾವಣೆಗಳಿಗೂ ಅವಕಾಶವಿಲ್ಲದಂತೆ ಮಾಡ ಶಿಕ್ಷಣ ಕ್ಷೇತ್ರದಲ್ಲೂ ಎನ್‌ಸಿಎಚ್‌ಇಆರ್ (Na commission for higher educatio research) ಎಂಬುದನ್ನು ಸ್ಥಾಪಿಸುವ ಪ್ರಸ್ತಾಪ ಸರ್ಕಾರವಿದ್ದಾಗಲೇ ಬಂದಿತ್ತು. ಇದನ್ನು ಜಾರಿಗೊಳಿಸುವುದಾಗಿ ಬಿಜೆಪಿ ತನ್ನ ಚುನ ಪ್ರಣಾಳಿಕೆಯಲ್ಲೇ ಹೇಳಿಕೊಂಡಿತ್ತು.

ಅಂದರೆ ಹಿಂದಿನ ಸರ್ಕಾರ ಆರಂಭಿಸಿದ್ದ ದೇಶವ ಕ್ರಮಗಳನ್ನು, ಈ ದೇಶದ್ರೋಹಿ ಸರ್ಕಾರವು ಹಾಗೂ ಅಭಿವೃದ್ಧಿಯ ಹೆಸರಿನಲ್ಲೇ ಜಾರಿಗೆ ತರು ಸಾಧ್ಯತೆಯಿದೆ. ಇವೆಲ್ಲದರಿಂದ ಕೇವಲ ವಿ ಕಂಪೆನಿಗಳಿಗೆ ಮಾತ್ರ ಅನುಕೂಲವಾಗ ಎಂದುಕೊಳ್ಳಬೇಡಿ. ಜಾಗತೀಕರಣ ನೀತಿಗಳ ನಂತರ ಈ ದೇಶದಲ್ಲೂ ದೊಡ್ಡ ದೊಡ್ಡ ಕು ಬೆಳೆದಿದ್ದಾರೆ. ತಮಗೂ ಬೇರೆ ದೇಶಗಳಿಗೆ ಹೋಗಿ ವ್ಯಾಪಾರ ಮಾಡುವ ಅವಕಾಶ ಸಿಗುತ್ತದೆ ಎಂದು ಇದಕ್ಕೆ ಒತ್ತಾಸೆ ನೀಡುತ್ತಾರೆ. ದೇಶದೊಳಗೆ ವಿದಾ ಮತ್ತು ಪೋಷಕರ ಲೂಟಿ ಮಾಡಲು ಮುಂದಾಗುತ್ತಾರೆ. ಅಲ್ಲಿಗೆ ಶಿಕ್ಷಣವೆನ್ನುವುದು ನಿರ್ಮಾಣದ ಕೆಲಸವೆನ್ನುವುದಕ್ಕೆ ಸಂಪೂರ್ಣ ತಿ ಇಟ್ಟಂತೆಯೇ.

ದೇಶದ ಎಲ್ಲಾ ಪ್ರಜ್ಞಾವಂತರು, ಶಿಕ್ಷಣಾಸಕ್ತರು ದೇಶಪ್ರೇಮಿಗಳು ಈಗಿಂದೀಗಲೇ ಎಚ್ಚೆತ್ತುಕೊಂ ಸದ್ಯಕ್ಕೆ ಶಿಕ್ಷಣವನ್ನು ಡಬ್ಲ್ಯುಟಿಓ-ಗ್ಯಾಟ್ಸ್‌ನಿಂದ ಹೊ ಬೇಕಾದ ಒತ್ತಡವನ್ನು ರೂಢಿಸಲು ಚ ಆಂದೋಲನವನ್ನು ನಡೆಸುವ ತುರ್ತು ಅಗತ್ಯವಿ

ಅನ್ನಭಾಗ್ಯ ಮತ್ತು ಭೈರಪ್ಪ ಎಂಬ ದೌರ್ಭಾಗ್ಯ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

"ಅಪ್ಪ ಸತ್ತರೂ ತಡಕೊಳ್ಳಬಹುದು, ಆರೆ ಹೊಟ್ಟೆ ತಡಕೊಳ್ಳೋದು ಕಷ್ಟ ಎಂಬ ಗಾದೆಮಾತು ನಿಜವಾಯಿತು."

ಈ ಸಾಲು ಬರುವುದು ಎಸ್.ಎಲ್.ಭೈರಪ್ಪನವರ 'ಭಿತ್ತಿ' ಎಂಬ ಆತ್ಮಚರಿತ್ರೆಯಲ್ಲಿ. ಭೈರಪ್ಪನವರ ಬಾಲ್ಯಕ್ಕೂ ಬಡತನ ಮತ್ತು ಹಸಿವಿಗೂ ನಿಕಟ ಸಂಬಂಧವಿತ್ತು. ಸಂಪೂರ್ಣವಾಗಿ ವೇಸ್ಟ್ ಬಾಡಿ ಆಗಿದ್ದ ತಂದೆ ಲಿಂಗಣ್ಣಯ್ಯನ ಬೇಜವಾಬ್ದಾರಿತನದಿಂದಾಗಿ ಭೈರಪ್ಪನವರ ತಾಯಿ ಗೌರಮ್ಮ "ಮಗ ಓದಿ ಶಾಲಾ ಮಾಸ್ತರಾಗಿ ಬಿಟ್ಟರೆ ಸಂಸಾರದ ಎರಡು ಹೊತ್ತಿನ ಮುದ್ದೆಗೆ ಕಾಯಂ ಪಾಡು ಸಿಗುತ್ತದೆ" ಎಂಬ ಆಶೆಯಲ್ಲೇ ಜೀವನ ಸಾಗಿಸಿದವರು. ಅದನ್ನೆಲ್ಲ ಭೈರಪ್ಪ 'ಗೃಹಭಂಗ' ಕಾದಂಬರಿಯಲ್ಲಿ ಮನಮಿಡಿಯುವಂತೆ ಚಿತ್ರಿಸಿದ್ದಾರೆ.

ಭೈರಪ್ಪ ಬಾಲಕನಾಗಿದ್ದಾಗ ಹೊಟ್ಟೆಯ ಹಸಿವನ್ನು ಇಂಗಿಸಿಕೊಳ್ಳಲು ಕದ್ದುಮುಚ್ಚಿ ಲಿಂಗಾಯತರ ಮತ್ತು ಒಕ್ಕಲಿಗರ ಮನೆಗಳಲ್ಲಿ ತಿಂದದ್ದೂ ಇದೆ. ಮಾತ್ರವಲ್ಲ, ಭೈರಪ್ಪ ಶಿಕ್ಷಣ ಪಡೆದದ್ದು ವಾರಾನ್ನ ಮಾಡುತ್ತಾ ಮತ್ತು ಭಿಕ್ಷಾನ್ನ ಬೇಡುತ್ತಾ. "ಎಷ್ಟೇ ಬಡತನವಿದ್ದರೂ ಧಾರ್ಮಿಕ ಹಾಗೂ ಪದ್ಧತಿಯ ನೆಲೆ ಇದ್ದರೂ ವಾರಾನ್ನ ತಿನ್ನುವುದು ಮುಜುಗರದ ಜೀವನ. ವಾರದ ಊಟಕ್ಕೆ ಹೋದಾಗ ಮನಸ್ಸು ಮಾತ್ರವಲ್ಲ, ಶರೀರವೂ ಕುಗ್ಗುತ್ತಿತ್ತು... ಭಿಕ್ಷಾನ್ನಕ್ಕೆ ಅಣಿಯಾಗಲು ಅಲ್ಪಸ್ವಲ್ಪ ಸ್ವಾಭಿಮಾನವನ್ನು ಗಂಟುಕಟ್ಟಿ ಮೂಲೆಯಲ್ಲಿ ಅಡಗಿಸಿಡಬೇಕು. ಭಿಕ್ಷಾನ್ನ ಮಾಡುವವನು ಅಭಿಮಾನ ಅಹಂಭಾವಗಳನ್ನು ತುಳಿದಿಟ್ಟುಕೊಳ್ಳಬೇಕು" ಎಂದು ಬರೆಯುವ ಮೂಲಕ ಬಡತನ ಮತ್ತು ಹಸಿವು ಹೇಗೆ ಮನುಷ್ಯನ ಆತ್ಮಸ್ಥೈರ್ಯವನ್ನು ಕುಗ್ಗಿಸುತ್ತವೆ ಎಂದು ಅದೇ 'ಭಿತ್ತಿ'ಯಲ್ಲಿ ಚಿತ್ರಿಸಿದ್ದಾರೆ.


ಇಂತಹ ಅನುಭವಗಳನ್ನು ಹೊಂದಿರುವ ಭೈರಪ್ಪ ಬೇರೆ ಎಲ್ಲಾ ಸಾಹಿತಿಗಳಿಗಿಂತಲೂ ಸರ್ಕಾರದ 'ಅನ್ನಭಾಗ್ಯ' ಮತ್ತು 'ಕ್ಷೀರಭಾಗ್ಯ' ಯೋಜನೆಗಳನ್ನು ಬೆಂಬಲಿಸುತ್ತಾರೆ ಎಂಬ ನಿರೀಕ್ಷೆಯನ್ನು ಮೊನ್ನೆ ಅವರು ಮಣ್ಣುಪಾಲು ಮಾಡಿದ್ದಾರೆ.

ಅವರು ಶಾದಿ ಭಾಗ್ಯ ಯೋಜನೆಯನ್ನು ಟೀಕಿಸಿರುವುದು ಸರಿಯಾಗಿಯೇ ಇದ್ದರೂ, ಇವತ್ತು ರಾಜ್ಯದಾದ್ಯಂತ 'ಅನ್ನ ಭಾಗ್ಯ' ಯೋಜನೆ ಲಕ್ಷಾಂತರ ಬಡವರಿಗೆ ಕಡಿಮೆ ದರದಲ್ಲಿ ಅಕ್ಕಿ ಕೊಡುತ್ತಿರುವುದನ್ನು ಮತ್ತು ಬಡ ಶಾಲಾಮಕ್ಕಳಿಗೆ ವಾರಕ್ಕೆ ಮೂರು ಬಾರಿ ಹಾಲು ಕೊಡುತ್ತಿರುವ 'ಕ್ಷೀರಭಾಗ್ಯ' ಯೋಜನೆಯನ್ನು ಟೀಕಿಸಿರುವುದು ಖಂಡನಾರ್ಹವಾಗಿದೆ.

"ಇಂತಹ ಯೋಜನೆಗಳು ದೇಶವನ್ನು ಉದ್ಧಾರ ಮಾಡುವುದಿಲ್ಲ, ಬದಲಾಗಿ ನಾಶ ಮಾಡುತ್ತವೆ. ಬಿಟ್ಟಿಯಾಗಿ ದೊರಕುವ ಆಹಾರ ಜನರನ್ನು ಸೋಂಭೇರಿಗಳಾಗಿಸುತ್ತದೆ. ಇಂತಹ ಓಟ್‌ಬ್ಯಾಂಕ್ ರಾಜಕೀಯ ಮಾಡುವ ಬದಲು ಸರ್ಕಾರ ಉದ್ಯೋಗಗಳನ್ನು ಸೃಷ್ಟಿಸಬೇಕು. ಜನರು ದುಡಿದು ತಿನ್ನುವುದನ್ನು ಸರ್ಕಾರ ಕಲಿಸಬೇಕು" ಎಂದಿದ್ದಾರೆ ಭೈರಪ್ಪ. ಹೌದು, ಸ್ವಾತಂತ್ರ್ಯ ಬಂದು ಎಪ್ಪತ್ತು ವರ್ಷಗಳೇ ಆಗುತ್ತಾ ಬಂದಿದ್ದರೂ ಇವತ್ತಿಗೂ ನಮ್ಮ ದೇಶದಲ್ಲಿ ಬಡತನ ತಾಂಡವವಾಡುತ್ತಿರುವುದು, ನಿರುದ್ಯೋಗ ಜ್ವಲಂತ ಸಮಸ್ಯೆಯಾಗಿರುವುದು ದುರದೃಷ್ಟಕರವೇ. ಅದರ ಬಗ್ಗೆ ಭಿನ್ನಾಭಿಪ್ರಾಯವಿರಲು ಸಾಧ್ಯವಿಲ್ಲ. ಆದರೆ ಬಡವರ ಹಸಿವನ್ನು ಇಂಗಿಸಲು ಅವರಿಗೆ ಕಡಿಮೆ ದರದಲ್ಲಿ ಆಹಾರ ಕೊಟ್ಟರೆ ಯಾವ ತಪ್ಪು? ಭೈರಪ್ಪ ಬಾಲಕನಾಗಿದ್ದಾಗ 'ಅನ್ನ ಭಾಗ್ಯ' ಮತ್ತು 'ಕ್ಷೀರ ಭಾಗ್ಯ' ತರಹದ ಯೋಜನೆಗಳು ಇದ್ದಿದ್ದರೆ ಅವರು ವಾರಾನ್ನ ಮತ್ತು ಭಿಕ್ಷಾನ್ನದಂತಹ ಅವಮಾನದಿಂದಲಾದರೂ ತಪ್ಪಿಸಿಕೊಳ್ಳಬಹುದಿತ್ತಲ್ಲವೇ? ಆದರೆ ಪಾಪ, ಭೈರಪ್ಪನವರಿಗೆ ಅಂತಹ ಸಂಗತಿಗಳೆಲ್ಲ ನೆನಪಾಗದೆ ಸಂಪೂರ್ಣ ವೇಸ್ಟ್‌ಬಾಡಿ ಆಗಿದ್ದ ಅವರ 'ತೀರ್ಥರೂಪ' ಲಿಂಗಣ್ಣಯ್ಯ ನೆನಪಾಗಿ ಸರ್ಕಾರ ಉದ್ಯೋಗ ಸೃಷ್ಟಿಸಿದ್ದರೆ ಆತ ತನ್ನ ಜೀವನದಲ್ಲಿ ಪ್ರಾಮಾಣಿಕವಾಗಿ ದುಡಿಯುತ್ತಿದ್ದ ಅನ್ನಿಸಿರಬೇಕು. ಆದರೆ 'ಭಿತ್ತಿ' ಮತ್ತು 'ಗೃಹಭಂಗ' ಓದಿದ ಯಾರಿಗಾದರೂ ಭೈರಪ್ಪನವರ ತಂದೆ ಲಿಂಗಣ್ಣಯ್ಯ ಎಂತಹ ಜೋಭದ್ರಗೇಡಿ ಎಂದು ಅರ್ಥವಾಗಿರುತ್ತದೆ.

'ಪುಕ್ಕಟೆಯಾಗಿ ಕೊಡುವುದು ದೇಶವನ್ನು ನಾಶ ಮಾಡುತ್ತದೆ' ಎಂದಿರುವ ಭೈರಪ್ಪ ತಮ್ಮ ಆತ್ಮಕತೆಯಲ್ಲಿ ಇನ್ನೊಂದು ಅಂಶವನ್ನು ಹೀಗೆ ದಾಖಲಿಸುತ್ತಾರೆ: "ಒಂದು ಸಂತೋಷದ ಸಂಗತಿ ಎಂದರೆ ನಮಗೆ ನಾಲ್ಕೆಕರೆ ಹೊಲದ ಭೂಮಿ ಸಿಕ್ಕಿತ್ತು. ಸರ್ಕಾರವು ಜಮೀನಿಲ್ಲದ ಬಡವರಿಗೆ ದರಖಾಸ್ತಿನಲ್ಲಿ ಭೂಮಿಕೊಡುವ ಒಂದು ಯೋಜನೆ ಮಾಡಿತ್ತು. ಯಾರು ಯಾರಿಗೆ ಕೊಡಬೇಕೆಂಬ ಪರಿಶೀಲನೆ ಮಾಡಲು ಶೇಕದಾರರು ರಾಂಪುರಕ್ಕೆ ಬಂದಾಗ ಪಟೇಲ ಚನ್ನೇಗೌಡರು 'ನಮ್ಮ ಶಾನುಭೋಗರಿಗೆ ಅಂಗೈ ಅಗಲ ಭೂಮಿಯೂ ಇಲ್ಲ, ಅವರಿಗೆ ನಾಲ್ಕೆಕರೆ ಕೊಡಿ' ಎಂದರಂತೆ. ಶೇಕದಾರರು ಹಾಗೆಯೇ ಬರೆದದನ್ನು ಅಮಲ್ದಾರರು ಮಂಜೂರು ಮಾಡಿದರಂತೆ."

ಅಂದರೆ ಜಮೀನಿಲ್ಲದ ತನ್ನ ಕುಟುಂಬಕ್ಕೆ ಸರ್ಕಾರ ಪುಕ್ಕಟೆಯಾಗಿ ನಾಲ್ಕು ಎಕರೆ ಭೂಮಿ ಕೊಟ್ಟರೆ ಅದು 'ಸಂತೋಷದ' ವಿಚಾರ, ಆದರೆ ಹಸಿವಿನಲ್ಲಿ ಬೇಯುತ್ತಿರುವ ಬಡವರಿಗೆ ಎರಡು ಹೊತ್ತಿನ ಗಂಜಿಗೆಂದು ಕಡಿಮೆ ದರದಲ್ಲಿ ಅಕ್ಕಿ ವಿತರಿಸಿದರೆ ಅದು 'ದೇಶನಾಶ ಮಾಡುವ' ವಿಚಾರ! ಅಲ್ಲಾ, ಭೂಮಿಯನ್ನು ಕೊಡುವುದು ಬಡವರು ಅದನ್ನು ಉತ್ತಿ, ಬಿತ್ತಿ ಸ್ವಾವಲಂಬಿಗಳಾಗಲಿ ಎಂಬ ಉದ್ದೇಶದಿಂದ ಎಂಬ ವಾದವನ್ನು ಇಟ್ಟುಕೊಂಡರೂ ಭೈರಪ್ಪ ಆಗಲಿ, ಅವರ ಯೂಸ್‌ಲೆಸ್ ತಂದೆ ಲಿಂಗಣ್ಣಯ್ಯನಾಗಲಿ ಎಂದೂ ಆ ನಾಲ್ಕೆಕರೆ ಭೂಮಿಯಲ್ಲಿ ಕೆಲಸ ಮಾಡಿದವರಲ್ಲ. ಬದಲಾಗಿ ಪಾಳು ಬಿದ್ದಿದ್ದ ಆ ಭೂಮಿಯನ್ನು ಸುಮಾರು ನಾಲ್ಕು ದಶಕಗಳ ಹಿಂದೆ ನಮ್ಮ ಬಿ.ಚಂದ್ರೇಗೌಡರ ಸಂಬಂಧಿಕರಾದ ಸಂತೇಶಿವರದ ನಂಜುಂಡಪ್ಪನವರು ಖರೀದಿಸಿದರು. ಅದರರ್ಥ ಸರ್ಕಾರ ಭೈರಪ್ಪನವರ ಕುಟುಂಬಕ್ಕೆ ಪುಕ್ಕಟೆಯಾಗಿ ಭೂಮಿ ಕೊಟ್ಟಿದ್ದು ವೇಸ್ಟ್ ಮಾತ್ರವಲ್ಲ ಅದನ್ನು ಅವರು ಮಾರಿದ್ದೂ ಕೂಡ ಸರ್ಕಾರಕ್ಕೆ ಮಾಡಿದ ವಂಚನೆಯೇ ಅಲ್ಲವೇ? ಸರ್ಕಾರ ಕೊಟ್ಟ ಭೂಮಿಯನ್ನು ಮಾರಿಕೊಂಡು ತಿಂದವರಿಗೆ ಅನ್ನಭಾಗ್ಯದ



ಅಕ್ಕಿಯನ್ನು ಹತ್ತು ರೂಪಾಯಿಗೆ ಮಾರುವ ಬಡವರ ಬಗ್ಗೆ ಮಾತನಾಡಲು ನೈತಿಕತೆ ಇದೆಯೆ?

'ಭಿತ್ತಿ'ಯಲ್ಲಿ ಭೈರಪ್ಪನವರು ವಾರಾನ್ನದ ಸಂಕಷ್ಟಗಳನ್ನು ವಿವರಿಸುತ್ತಾ ಹೀಗೆ ಬರೆಯುತ್ತಾರೆ: "ಜಿರಾಯ್ತಿ ಕಸುಬು ಮಾಡುವ ಮನೆಗಳವರ ಊಟ ಎಲೆಯ ತುಂಬ. ಅವರು ಬಡಿಸುವುದೂ ತುಂಬಿತುಂಬಿಯೇ. ಸಂಬಳದಾರರು, ಸ್ವತಃ ದುಡಿಯದ ಅನುಕೂಲಸ್ಥರು ಸ್ವತಃ ಉಣ್ಣುವುದೂ ಅಲ್ಪ ಆದ್ದರಿಂದ ಇಕ್ಕುವುದೂ ಅದೇ ಪ್ರಮಾಣದಲ್ಲಿ. ಇನ್ನೊಂದು ಸಲ, ಇನ್ನಷ್ಟು ಬೇಕು ಎಂದು ಕೇಳುವ ಸೊಲ್ಲು ನನಗೆ ಬರುತ್ತಿರಲಿಲ್ಲ. ಬೆಳೆಯುತ್ತಿರುವ ಬೆಳಗಿನಿಂದ ಏನೂ ತಿನ್ನದ ವಾರದ ಹುಡುಗನ ಹೊಟ್ಟೆಯ ಗಾತ್ರ ಅಂಥ ಹೆಂಗಸರಿಗೆ ತಿಳಿಯುತ್ತಿರಲಿಲ್ಲ."

ಹಸಿದ ಹುಡುಗನ ಹೊಟ್ಟೆಯ ಗಾತ್ರ ಅನುಕೂಲಸ್ಥ ಮಹಿಳೆಯರಿಗೆ ಗೊತ್ತಿಲ್ಲದಿರುವುದಕ್ಕೆ ಕಾರಣ 'ವರ್ಗವ್ಯತ್ಯಾಸ' ಎಂದೂ ಭೈರಪ್ಪ ಗುರುತಿಸುತ್ತಾರೆ. ತಮಾಷೆಯ ಸಂಗತಿ ಯಾವುದೆಂದರೆ ಆಗ ಬಡವನಾಗಿದ್ದ ಬಾಲಕ ಭೈರಪ್ಪ ಈಗ ಸಾವಿರಾರು ರೂಪಾಯಿಗಳ ಪಿಂಚಣಿ ಪಡೆಯುವ, ಕೋಮುವಾದಿ ಮೋದಿ ಸರ್ಕಾರದಿಂದ ರಾಷ್ಟ್ರೀಯ ಅಧ್ಯಾಪಕ ಎಂದು ನೇಮಕಗೊಂಡು ಪ್ರತಿ ತಿಂಗಳು ಸುಮಾರು ಒಂದು ಲಕ್ಷ ರೂಪಾಯಿಗಳ "ಗೌರವಕ್ಕೆ" ಪಾತ್ರವಾಗಿರುವ ಹಿರಿಯರು. ಆದ್ದರಿಂದಲೇ ಪಾಪ ಅವರಿಗೆ ಈಗ ಬಡವರ ಹೊಟ್ಟೆಯ ಗಾತ್ರ ಅರ್ಥವಾಗುತ್ತಿಲ್ಲ ಎಂದು ಅವರೇ ಹೇಳಿರುವಂತೆ ನಾವಿಂದು ತರ್ಕಿಸಬಹುದು.

ಮುಂದುವರೆಯುತ್ತಾ ಭೈರಪ್ಪ "ಹಳ್ಳಿಯಲ್ಲಿ ಪ್ರಚಲಿತವಿರುವ ಒಂದು ಮಾತನ್ನು ಎಲ್ಲರೂ ಅರ್ಥಮಾಡಿಕೊಂಡಿರುವುದಿಲ್ಲ, ಏನನ್ನು ಕೊಟ್ಟರೂ ಸಾಕು ಅನ್ನಿಸಲು ಸಾಧ್ಯವಿಲ್ಲ, ಕೋಟಿ ರೂಪಾಯಿ ಕೊಟ್ಟರೆ ಮೇಲೆ ಇನ್ನೊಂದು ಸಾವಿರ ಯಾಕೆ ಕೊಡಬಾರದು ಎಂದು ಇಸಕೊಳ್ಳುವವನ ಮನಸ್ಸು ಬಯಸುತ್ತದೆ. ಆದರೆ ಅನ್ನವನ್ನು ಮಾತ್ರ ಸಾಕು ಎನ್ನಿಸುವುದು ಸುಲಭ. ಎಂಥವನನ್ನು ಕೂಡ ಇನ್ನು ಸಾಧ್ಯವೇ ಇಲ್ಲ ಎಂದು ಕೈ ಅಡ್ಡ ಹಿಡಿದು ತಾನೇ ಎಲೆಗೆ ಅಡ್ಡವಾಗುವಂತೆ ಬಗ್ಗಿಸಬಹುದು. ಸಾಕು ಎನ್ನಿಸುವಂತೆ ಮಾಡಬಹುದಾದ ದಾನ ಅದೊಂದೇ."

ಇಂತಹ ಸಾಲುಗಳನ್ನು ಬರೆದಿರುವ ಅದೇ ಭೈರಪ್ಪ ಇವತ್ತು 'ದಾನ' ಅಲ್ಲ, ಕಡಿಮೆ ದರದ 'ಅನ್ನ ಭಾಗ್ಯ' ಯೋಜನೆಯನ್ನು ಓಟ್‌ಬ್ಯಾಂಕ್ ಪಾಲಿಟಿಕ್ಸ್ ಎಂದು ಜರಿದಿದ್ದಾರೆ. ಭೈರಪ್ಪನವರ ಇಬ್ಬಂದಿತನಗಳು ಇಲ್ಲಿಗೇ ನಿಲ್ಲುವುದಿಲ್ಲ, ಇತ್ತೀಚೆಗೆ ಬ್ರಾಹ್ಮಣ ಯುವಕರು ಇತರೆ ಜಾತಿಯ (ಬೇರೆ ಧರ್ಮದವರನ್ನಲ್ಲ) ಯುವತಿಯರನ್ನು ಮದುವೆಯಾದರೂ ಬ್ರಾಹ್ಮಣ್ಯವನ್ನು ಬಿಡಬಾರದು ಎಂದಿದ್ದಾರೆ. ಪಾಪ ಅವರು ಚಿಕ್ಕವರಾಗಿದ್ದಾಗ ಇತರೆ ಜಾತಿಯವರ ಮನೆಗಳಲ್ಲಿ ತಿನ್ನುತ್ತಿದ್ದಾಗ ಬ್ರಾಹ್ಮಣ್ಯದ ಕಟ್ಟುಪಾಡುಗಳನ್ನು ಮುರಿದಿದ್ದೆ ಎಂಬುದು ನೆನಪಿಲ್ಲ.

ಭೈರಪ್ಪ ಹೇಳಿಕೇಳಿ ಹಿಂದೂತ್ವವಾದಿ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಅಷ್ಟು ಶಾಕಿಂಗ್ ಅಲ್ಲ, ಆದರೆ ಅವರ ಅಭಿಪ್ರಾಯಗಳನ್ನು ಬೆಂಬಲಿಸುವಂತಹ ಹೇಳಿಕೆಗಳನ್ನು ನೀಡಿರುವ ಚಂದ್ರಶೇಖರ ಕಂಬಾರ, ಕುಂ.ವೀರಭದ್ರಪ್ಪ ಮತ್ತು ನಾಗತಿಹಳ್ಳಿ ಚಂದ್ರಶೇಖರ್ ತರಹದ ಹಿಂದುಳಿದ ವರ್ಗಗಳ, ಅನುಕೂಲಸ್ಥ ಹಿನ್ನಲೆ ಇರದ, ಜನಪರ ಚಿಂತನೆಯ ವ್ಯಕ್ತಿಗಳಿಗೂ ಇವತ್ತು ಅದೆಂತಹ ಗರ ಬಡಿದಿದೆಯೋ ಅರ್ಥವಾಗುತ್ತಿಲ್ಲ. ಪ್ರಾಯಶಃ ಈಗ ಅವರೆಲ್ಲರ ವರ್ಗಗಳೂ ಬದಲಾಗಿರುವುದೇ ಅವರಿಂದ ಈ ನಿಲುವುಗಳನ್ನು ಹೊರಡಿಸಿರಬೇಕು. ಸಮಾಧಾನದ ಸಂಗತಿ ಯಾವುದೆಂದರೆ ಹೊಸ ಪೀಳಿಗೆಯ ಜನರು ಭೈರಪ್ಪನಿಂದ ಹಿಡಿದು ಚಂದ್ರಶೇಖರ್ ತನಕ ಎಲ್ಲರ ಬಡವರ ವಿರೋಧಿ ನಿಲುವನ್ನು ಖಂಡಿಸುತ್ತಿರುವುದು.

ಉದಾಹರಣೆಗೆ ವಿಕಾಸ್ ಆರ್ ಮೌರ್ಯ ಎಂಬ ಶಿಕ್ಷಕ 'ಸೋಮಾರಿ' ಅಂದರೆ ಯಾರು ಎಂಬುದನ್ನೇ ನಮ್ಮ ಸಮಾಜ ಸರಿಯಾಗಿ ಅರ್ಥಮಾಡಿಕೊಳ್ಳಬೇಕು ಎಂದಿದ್ದಾರೆ. "ಈ ಸೋಮಾರಿತನ ಎಂಬ ಪದವನ್ನು ಬಳಸುವ ಮೂಲದಲ್ಲಿಯೇ ಲೋಪಗಳಿವೆ. ಎಲ್ಲಾ ಧರ್ಮದಲ್ಲಿ ದೇವರ ಮತ್ತು ಜನತೆಯ ನಡುವೆ ವ್ಯವಹರಿಸಿ ದೇವರನ್ನೇ ಬಂಡವಾಳವಾಗಿಸಿಕೊಂಡು ಸಂಪಾದಿಸುತ್ತಿರುವ ಪುರೋಹಿತಶಾಹಿಗಳದ್ದು ಸೋಮಾರಿತನವಲ್ಲವೆ? ಯಾಗ-ಯಜ್ಞ, ಹೋಮ-ಹವನಗಳಿಗೆ ಗಂಟೆಗಟ್ಟಲೆ ಸಮಯವನ್ನೂ ಸಂಪತ್ತನ್ನೂ ಹಾಳು ಮಾಡುವವರು ಸೋಮಾರಿಗಳಲ್ಲವೆ? ಭವಿಷ್ಯ, ಜ್ಯೋತಿಷ್ಯ, ವಶೀಕರಣ, ಭೂತೋಚ್ಚಾಟನೆ ಎಂದು ಬೋರ್ಡು ಹಾಕಿಕೊಂಡು ಸಲಹೆ ನೀಡಿ ಜನತೆಯನ್ನು ಮೋಸಗೊಳಿಸುತ್ತಿರುವವರದ್ದು ಸೋಮಾರಿತನವಲ್ಲವೆ? ಹತ್ತು ರೂಪಾಯಿಗೆ 'ಅನ್ನ ಭಾಗ್ಯ'ದ ಅಕ್ಕಿ ಮಾರಿಕೊಳ್ಳುವವರು ಮಾತ್ರ ಭೈರಪ್ಪರವರಿಗೆ ಕಾಣುತ್ತಾರೆ. ಆದರೆ ಹಸಿವಿನ ಹೊಡೆತಕ್ಕೆ ತಮ್ಮ ಮಕ್ಕಳನ್ನೇ ಮಾರಿಕೊಳ್ಳುವವರು ಕಾಣುತ್ತಿಲ್ಲ! ಈ ನೆಲದಲ್ಲಿ ಉಚಿತವಾಗಿ ಅಕ್ಕಿ, ಬಟ್ಟೆ, ಮನೆ ಪಡೆಯಲು ಅರ್ಹರಾಗಿರುವವರೆಂದರೆ ಕೃಷಿ ಕಾರ್ಮಿಕರಂತಹ, ಪೌರಕಾರ್ಮಿಕರಂತಹ ದುಡಿಯುವ ಜನರು ಮಾತ್ರ" ಎಂದು ಮೌರ್ಯ ವಾದಿಸುತ್ತಾರೆ.

ಮುಂದುವರೆಯುತ್ತಾ "ಕಾಲಾಂತರಗಳಿಂದ ಬೌದ್ಧಿಕ ಕಸರತ್ತು ಮತ್ತು ದೈಹಿಕ ಕಸರತ್ತುಗಳನ್ನು ಬೇರೆಬೇರೆ ತಕ್ಕಡಿಗಳಲ್ಲಿ ತೂಗಲಾಗುತ್ತಿದೆ. ಬೌದ್ಧಿಕ ಕಸರತ್ತು ದೈಹಿಕ ಕಸರತ್ತಿಗಿಂತ ಮೇಲೆಂಬ ಭಾವನೆಯನ್ನು ಸಮಾಜದಲ್ಲಿ ಬಿತ್ತಲಾಗಿದೆ. ಆ ಕಾರಣಕ್ಕಾಗಿಯೇ ಅನ್ನ ಬೆಳೆಯುವವರಿಗಿಂತ ಚಿನ್ನ ತಯಾರಿಸುವವರೂ, ಬಟ್ಟೆ ನೇಯ್ದು ಮಾನ ಮುಚ್ಚುವವರಿಗಿಂತ ಮಂತ್ರ ಪಠಿಸುವವರೂ, ಚಪ್ಪಲಿ ಹೊಲೆಯುವವರಿಗಿಂತ ಅದನ್ನು ಮೆಟ್ಟಿ ಪೋಸು ಕೊಡುವವರೂ ಉಚ್ಚರೆಂದು ಸಮಾಜ ತೀರ್ಮಾನಿಸುತ್ತಿದೆ. ಇದೇ ಕಾರಣಕ್ಕೆ ನೌಕರಶಾಹಿಯಲ್ಲಿಯೂ ತಾರತಮ್ಯವನ್ನು ಮಾಡಲಾಗುತ್ತಿದೆ. ಎ ಗ್ರೂಪ್ ನೌಕರ ಶ್ರೇಷ್ಠನೆಂದೂ, ಡಿ ಗ್ರೂಪ್ ನೌಕರ ಕನಿಷ್ಠನೆಂದೂ, ಪೌರಕಾರ್ಮಿಕರು ಅತೀ ಕೆಳವರ್ಗದವರೆಂದೂ ಬಗೆಯಲಾಗುತ್ತಿದೆ. ಅದಕ್ಕಾಗಿಯೇ ಅಸ್ಪೃಶ್ಯರನ್ನು ಅಲ್ಲಿಗೆ ಸೀಮಿತಗೊಳಿಸಿದೆ. ಆದ್ದರಿಂದ ಬೌದ್ಧಿಕತೆ ಮೆರೆಯುವವರು ಶ್ರಮಿಕರನ್ನು ಯಾವಾಗಲೂ ತುಳಿಯಲು ಬಯಸುತ್ತಿರುತ್ತಾರೆ. ಏಕೆಂದರೆ ತಮ್ಮ ಮಟ್ಟಕ್ಕೆ ಅವರನ್ನು ಸರಿಸಮಾನವಾಗಿಸಿಕೊಂಡರೆ ತಮಗಂಟಿಸಿಕೊಂಡಿರುವ 'ಉಚ್ಚ' ಎಂಬ ಪಟ್ಟವನ್ನು ಕಳೆದುಕೊಂಡು ಬಿಡುತ್ತೇನೋ ಎಂಬ ಭಯ. ಈ ಭಯವೇ ಭೈರಪ್ಪರಂತಹವರನ್ನು ಯಾವಾಗಲೂ ಕಾಡುತ್ತಿರುವುದು. ಅಭಿವೃದ್ಧಿ ಎಂದರೆ ಕೇವಲ ಬೃಹತ್ ಕೈಗಾರಿಕೆಗಳು, ಬಹುಮಹಡಿ ಕಟ್ಟಡಗಳು, ಚತುಷ್ಪಥ ರೋಡುಗಳು, ಎ.ಸಿ ರೂಮುಗಳ ಉದ್ಯೋಗಗಳಲ್ಲ, ಸರ್ವಜನರ ಹೊಟ್ಟೆ ತುಂಬಿಸುವ, ಮೈ ಮುಚ್ಚುವ, ಸೂರು ಕಾಣಿಸುವ ಕಾಯಕವೇ ನಿಜವಾದ ಅಭಿವೃದ್ಧಿ" ಎನ್ನುತ್ತಾರೆ ಮೌರ್ಯ.

ಹಾಗೆಯೇ ಮಿತ್ರ ಬಿ.ಎಂ.ಬಷೀರ್ ತಮ್ಮ ಫೇಸ್‌ಬುಕ್ ಪೋಸ್ಟ್‌ನಲ್ಲಿ ಬಡವರಿಗೆ ಅಕ್ಕಿ ಕೊಡುವುದನ್ನು ಟೀಕಿಸುತ್ತಿರುವವರು ಯಾಕೆ ಕಾರ್ಪೊರೇಟ್ ಕಂಪನಿಗಳಿಗೆ ಸರ್ಕಾರ ಕೊಟ್ಟಿರುವ 'ವಿನಾಯತಿ'ಗಳನ್ನು ಪ್ರಶ್ನಿಸುತ್ತಿಲ್ಲ ಎಂದೂ ಕೇಳಿದ್ದಾರೆ. "ಕಳೆದ ಕೇಂದ್ರ ಬಜೆಟ್ ತಿಳಿಸುವಂತೆ 2006ರಿಂದ 2014ರ ವರೆಗೆ ಈ ದೇಶದ ಕಾರ್ಪೋರೇಟ್ ಕ್ಷೇತ್ರ ಕೇವಲ ನೇರ ಕಾರ್ಪೊರೇಟ್ ಆದಾಯ ತೆರಿಗೆ ಮನ್ನಾ ಒಂದರಿಂದಲೇ ಪಡೆದ ಲಾಭ ಮೂವತ್ತಾರುವರೆ ಲಕ್ಷ ಕೋಟಿ ರುಪಾಯಿ" ಎಂದು ಬೊಟ್ಟು ಮಾಡಿದ್ದಾರಲ್ಲದೆ "ಅತಿ ದೊಡ್ಡ ವಿಪರ್ಯಾಸವೆಂದರೆ 2009 ರಿಂದ 2012ರ ವರೆಗೆ ಭಾರತದ ಗೋದಾಮುಗಳಲ್ಲಿ ಕೊಳೆತು ನಾಶವಾದ ಆಹಾರ ಧಾನ್ಯ 18 ಸಾವಿರ ಟನ್. ಈ ದೇಶದಲ್ಲಿ ಸೂಕ್ತ ವ್ಯವಸ್ಥೆ ಇಲ್ಲದೆ ಗೋದಾಮುಗಳಲ್ಲಿ ಪ್ರತಿವರ್ಷ 44 ಸಾವಿರ ಕೋಟಿ ರೂ.ನಷ್ಟು ಆಹಾರ ಧಾನ್ಯ ಮತ್ತು ತರಕಾರಿ ನಾಶವಾಗಿ ಹೋಗುತ್ತದೆ. ಇದೇ ಹೊತ್ತಿನಲ್ಲಿ ನಮ್ಮ ದೇಶದಲ್ಲಿ 20 ಕೋಟಿಗೂ ಅಧಿಕ ಜನ ತುತ್ತು ಅನ್ನಕ್ಕೂ ಗತಿಯಿಲ್ಲದೆ ಪರದಾಡುತ್ತಿದ್ದಾರೆ ಎನ್ನುತ್ತದೆ ವಿಶ್ವಸಂಸ್ಥೆ. ಇನ್ನು ಅವರು ತಮ್ಮ ಮಕ್ಕಳ ಶಿಕ್ಷಣ, ಆರೋಗ್ಯ, ಬಟ್ಟೆ ಬರೆ ಕಡೆ ಗಮನ ನೀಡೋದು ಹೇಗೆ? ಶೇಕಡಾ 45ಕ್ಕೂ ಅಧಿಕ ಮಂದಿ ಅಪೌಷ್ಟಿಕತೆಯಿಂದ ರೋಗ ಪೀಡಿತರಾಗಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಬಡವರಿಗೆ ಕಡಿಮೆ ದರದಲ್ಲಿ ಧಾನ್ಯ ಕೊಟ್ಟರೆ ತಪ್ಪೇನು?" ಎಂಬು ನಿಲುವು ಬಷೀರ್‌ರದ್ದು.

ಇನ್ನೋರ್ವ ಯುವ ಮಿತ್ರ ಅರುಣ್ ಜೋಳದಕೂಡ್ಲಿಗಿ 'ಮೀನು ಹಿಡಿಯುವುದನ್ನು ಕಲಿಸಬೇಕೇ ಹೊರತು, ಮೀನು ಹಿಡಿದು ಕೊಡಬಾರದು' ಎಂಬ ಚೀನಿ ಗಾದೆಯನ್ನು ಉಲ್ಲೇಖಿಸಿ "ಈ ನೀತಿಯನ್ನು ಕೆಲವರು ಅನ್ನಭಾಗ್ಯಕ್ಕೂ ಅನ್ವಯಿಸಿ ಮಾತನಾಡುವುದನ್ನು ಕೇಳಿದ್ದೇನೆ. ಇದನ್ನೇ ಇನ್ನೊಂದು ಮಗ್ಗಲಿನಿಂದ ನೋಡೋಣ. ಮೀನಿರುವ ಸ್ಥಳ (ಕೆರೆ, ನದಿ, ಹಳ್ಳ ಇತ್ಯಾದಿ) ನೀರೇ ಇಲ್ಲದೆ ಬತ್ತಿ ಒಣಗಿದ್ದರೆ, ನೀರಿದ್ದೂ ಇಲ್ಲಿ ಮೀನು ಇಲ್ಲದಿದ್ದರೆ? ಈ ಮೇಲಿನ ಮಾತು ಅನ್ವಯವಾಗುವುದಿಲ್ಲ. ಈ ಮಾತು ಅನ್ವಯವಾಗಲು ಮೊದಲು ಬತ್ತಿದ ಕೆರೆ ಮತ್ತು ನದಿಗೆ ನೀರು ತುಂಬುವಂತೆ ವ್ಯವಸ್ಥೆ ಮಾಡಬೇಕು, ನೀರು ತುಂಬಿದ ಮೇಲೆ ಮೀನು ಬಿಡಬೇಕು, ಆ ಮೀನು ಇನ್ನೊಬ್ಬರ ಹಸಿವು ನೀಗಿಸುವಷ್ಟು ದೊಡ್ಡದಾಗುವವರೆಗೂ ಸಾಕಬೇಕು. ಆಗ ಮೇಲಿನ ಮಾತು ಅನ್ವಯವಾಗುತ್ತದೆ. ಬತ್ತಿದ ಕೆರೆ/ನದಿ/ಹಳ್ಳಕ್ಕೆ ನೀರು ತುಂಬುವ ಕೆಲಸ ಆಗುವವರೆಗೂ, ನೀರು ತುಂಬಿದ ನಂತರ ಮೀನು ಸಾಕುವವರೆಗೂ ಈ ಸ್ಥಳವನ್ನೇ ನಂಬಿರುವ ಜನರ ಹಸಿವೆಗೆ ಪರ್ಯಾಯವನ್ನು ಕೊಡಬೇಕಲ್ಲವೆ? ಈ ಕೆಲಸವನ್ನು ಜನಪರವಾದ ಆಳುವ ಪ್ರಭುತ್ವ ಮಾಡಬೇಕಾಗುತ್ತದೆ. ಈ ಕೆಲಸ ಆಗುವವರೆಗೂ ಪರ್ಯಾಯ ಒದಗಿಸುವ ಸಂದರ್ಭದಲ್ಲೇ 'ಮೀನು ಹಿಡಿಯುವುದನ್ನು ಕಲಿಸಬೇಕೇ ಹೊರತು, ಮೀನು ಹಿಡಿದು ಕೊಡಬಾರದು' ಎಂಬ ಗಾದೆ ಹೇಗೆ ಹಾಸ್ಯಾಸ್ಪದವಾಗುತ್ತದೆ ಎನ್ನುವುದನ್ನು ಗಮನಿಸಿ" ಎಂದು ತರ್ಕಿಸಿದ್ದಾರೆ.

ಹೀಗೆ ಮಾನವೀಯವಾಗಿ, ಜನಪರವಾಗಿ ಯೋಚಿಸುವ ಇಂತಹ ಸಾವಿರಾರು ಯುವಕರು ಭವಿಷ್ಯದ ಬಗ್ಗೆ ನನ್ನಂತವರಲ್ಲಿ ಇನ್ನೂ ಭರವಸೆಯನ್ನು ಮೂಡಿಸುತ್ತಾರೆ...

ಎಲ್ಲಕ್ಕಿಂತ ಮುಖ್ಯವಾದ ಒಂದು ವಿಷಯ ಎಲ್ಲರೂ ಗಮನಿಸೋಣ. ಇಂದು ಈ ದೇಶ ನಡೆಯುತ್ತಿರುವುದು ಶ್ರೀಮಂತರು ಕೊಡುತ್ತಿರುವ ತೆರಿಗೆಯಿಂದಲ್ಲ, ಬದಲಿಗೆ 'ಅನ್ನಭಾಗ್ಯ' ಪಡೆದವರ ದುಡಿಮೆಯಿಂದ. ಹೀಗಾಗಿ ದುಡಿಯುದ ಜನರೆಲ್ಲ ಅವರ 'ಶ್ರಮ ಭಾಗ್ಯ'ವನ್ನು ಪುಕ್ಕಟೆಯಾಗಿ ಪಡೆಯುತ್ತಿರುವವರೇ. ಈ ದೇಶದಲ್ಲಿ ತಾವು ಕೊಡುವ ತೆರಿಗೆಗೆ ಇಪ್ಪತ್ತು ಪಟ್ಟು ಸೌಲಭ್ಯವನ್ನು ಪಡೆದು ದೇಶವನ್ನು ದೋಚುತ್ತಿರುವವರು, ಭೈರಪ್ಪನವರು ಬೆಂಬಲಕ್ಕೆ ನಿಂತಿರುವ ಕಾರ್ಪೊರೇಟ್ ಬಂಡವಾಳಶಾಹಿಗಳು. ಆದರೆ ಬಡಜನರು 'ಅನ್ನಭಾಗ್ಯ'ದ ಮೂಲಕ ಪಡೆಯುತ್ತಿರುವುದು ತಾವು ಹತ್ತು ಹಲವು ಬಗೆಯಲ್ಲಿ ಕಟ್ಟುವ ಪರೋಕ್ಷ ತೆರಿಗೆಯ ಹತ್ತನೇ ಒಂದು ಪಾಲು. ಅವರ ಹಕ್ಕಿನ ಪಾಲು. ಭೈರಪ್ಪನವರ ಭಿಕ್ಷೆಯೂ ಅಲ್ಲ, ಸಿದ್ಧರಾಮಯ್ಯನವರ ಔದಾರ್ಯವೂ ಅಲ್ಲ, ಇನ್ನಾದರೂ ತಿಳಿಯೋಣ. ■

ಉತ್ತರ ಕನ್ನಡ: ಕೆಡಿಸಿಸಿ ಕಿರೀಟಕ್ಕಾಗಿ ಕೊಳಕರ ಕಿತ್ತಾಟ!

ಉತ್ತರ ಕನ್ನಡದ ಪ್ರತಿಷ್ಠಿತ ಜಿಲ್ಲಾ ಕೇಂದ್ರ ಸಹಕಾರಿ (ಕೆಡಿಸಿಸಿ) ಬ್ಯಾಂಕ್ ಭಂಡ ರಾಜಕೀಯ ದಂಧೆಕೋರರ ಆಡಂಬೋಲದಂತಾಗಿಹೋಗಿದೆ. ಸಹಕಾರಿ ತತ್ವಾದರ್ಶದ ಗಂಧ ಗಾಳಿಯೇ ಇಲ್ಲದ ತಾಲ್ಲೂಕ್ ಮಟ್ಟದ ಫುಲ್‌ಟೈಮ್ 'ಗಾಂವಠಿ' ಪುಢಾರಿಗಳ ಕಪಿಮುಷ್ಠಿಯಲ್ಲಿ ಸಿಲುಕಿರುವ ಬ್ಯಾಂಕ್ ಎದುಸಿರು ಬಿಡುತ್ತಿದೆ. ಮೊನ್ನೆ ನಡೆದ ಆಡಳಿತ ಮಂಡಳಿ ಚುನಾವಣೆಯಲ್ಲಂತೂ ಸೋಗಲಾಡಿ ಶಾಸಕರು, ಶಾಸಕಗಿರಿಗೆ ಸ್ಪರ್ಧಿಸಿ ಸೋತವರು, ನಕಲಿ ಸಹಕಾರಿಗಳೆಲ್ಲ ಆರಿಸಿಬಂದಿರುವುದು ಬ್ಯಾಂಕಿನ ಭವಿಷ್ಯದ ಬಗ್ಗೆ ಭಯ ಮೂಡಿಸಿಬಿಟ್ಟಿದೆ!!

ಅದೊಂದು ಕಾಲವಿತ್ತು, ಶುದ್ಧ ಸಹಕಾರಿ ಸಿದ್ಧಾಂತದ ಜಿ.ಎಸ್. ಹೆಗಡೆ ಅಜ್ಜಿಬಳ, ಆರ್.ಎಸ್. ಭಾಗ್ವತ್‌ರಂಥವರು ಅರ್ಪಣಾಭಾವದಿಂದ ಕೆಡಿಸಿಸಿ ಕಟ್ಟಿ ಬೆಳೆಸಿದ್ದರು. ಪಕ್ಕಾ ವ್ಯಾಪಾರಿ ಜಾಯಮಾನದ ರಾಜಕೀಯ ಪಟು ಆರ್.ವಿ. ದೇಶಪಾಂಡೆ ಜಿಲ್ಲಾ ರಾಜಕಾರಣದ ಮುಖ್ಯ ಭೂಮಿಕೆಗೆ ಬಂದಿದ್ದೇ ಬಂದಿದ್ದು ಕೆಡಿಸಿಸಿ ಎಂಬುದು ಆತನ ಪರಮಾಪ್ತ ಗಂಡಾಗುಂಡಿ ಚೇಲಾಗಳ ಗಂಜಿ ಕೇಂದ್ರ ಎಂಬಂತಾಗಿ ಹೋಯಿತು. ಷರದಿಯಲ್ಲಿ ಬ್ಯಾಂಕಿನ ಗದ್ದುಗೆಗೆ ವಕ್ಕರಿಸಿದ ದೇಶಪಾಂಡೆಯ ನಿಷ್ಠಾವಂತ ಬಂಟರಾದ ವಿ.ಡಿ. ಹೆಗಡೆ, ಎಸ್.ಎಲ್. ಘೋಟನೇಕರ್, ಶಾಂತಾರಾಮ ಹೆಗಡೆ, ರೈತರ-ಬಡವರ ಈ ಬ್ಯಾಂಕ್‌ನ ವಿಶ್ವಾಸಾರ್ಹತೆ, ಮಾನ, ಮರ್ಯಾದೆ ಹರಾಜಾಗಿ ಎಮ್ಮೆಲ್ಸಿ, ಅಸೆಂಬ್ಲಿ ಕ್ಯಾಂಡಿಡೇಟಾಗಿ ಭುಗಿಲೆದ್ದು ಬಿಟ್ಟರು!!

ಇವತ್ತು ಹಳಿಯಾಳದಲ್ಲಿ ದೇಶಪಾಂಡೆಗೆ ಪರಮವೈರಿಯಾಗಿ ರಾಜಕಾರಣ ಮಾಡುತ್ತಿರುವ ಮಾಜಿ


ಕೆಡಿಸಿಸಿ ಬ್ಯಾಂಕ್ ಬಿಲ್ಡಿಂಗ್



ಪಂಗನಾಮ ವಿಡಿ, ಘೋಟನೇಕರ್ ಹಾಕಿದ್ದಾರೆ. ಸಹಕಾರಿ ಇಲಾಖೆ ಮಾಡಿದ ತನಿಖೆಯಲ್ಲಿ ಹಲವು ಹಗರಣದ ಹೂರಣ ಹೊರಬಂದಿದೆ. ಆ ನಂತರ ಕೆಡಿಸಿಸಿಗೆ ಗಂಟು ಬಿದ್ದ ಮೊದ್ಮಣಿ ಶಾಂತಾರಾಮ ಹೆಗಡೆ ಕಾಂಗ್ರೆಸ್ ಕೆಲಸಕ್ಕೆ, ತನ್ನ ಮನೆಯ ಚಾಕರಿಗೆ ಬ್ಯಾಂಕಿನ ಐಷಾರಾಮಿ ವಾಹನ


ಸಾರಾಸಗಟಾಗಿ ತಿರಸ್ಕರಿಸಿ ಆತನ ಶಾಸಕಗಿರಿ ಆಸೆಗೆ ಎಳ್ಳುನೀರು ಬಿಟ್ಟಿದ್ದಾರೆ.


ಮೊನ್ನೆ ನಡೆದ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಇದೇ ಸೋಂಭೇರಿ ಶಾಂತಣ್ಣ, ಪ್ರಳಯಾಂತಕ ಘೋಟನೇಕರ್, ಸೋಗಲಾಡಿ ಶಾಸಕ



ಆರ್.ವಿ. ದೇಶಪಾಂಡೆ


ಒಳಸುಳಿ ನಮೂನೆ ನೋಡಿದರೆ ದೇಶಪಾಂಡೆ ವಿರೋಧಿಗಳೇ ಮೇಲುಗೈ ಸಾಧಿಸಿದ್ದು ಸಾಬೀತಾಗು


ಹೇಗೆ ದೇಶಪಾಂಡೆ ಸಾಕಿದ್ದ ವಿ.ಡಿ. ಹೆಗಡೆ ಎ ಗಿಣಿ ಹದ್ದಾಗಿ ಆತನ ಕುಕ್ಕುತ್ತೋ ಅದೇ ಸ್ಟೈಲಲ್ಲೀಗ ಎ ಘೋಟನೇಕರ್ ಬಾಸ್‌ಗೆ ಬುದ್ಧಿ ಕಲಿಸಲು ಕೆಡಿಸಿಸಿ ಆ ಆಯ್ಕೆ ಆಖಾಡದಲ್ಲಿ ಸೆಡ್ಡು ಹೊಡೆದು ನಿಂತಿದ್ದಾರೆ. ಕ ಲೋಕಸಭೆ ಎಲೆಕ್ಷನ್ ವೇಳೆಗೇ ದೇಶಪಾಂಡೆ-ಘೋಟನೇ ನಡುವೆ ಸಣ್ಣಗೆ ವೈಮನಸ್ಯ ಮೂಡಿತ್ತು. ದೇಶಪಾ


ಶಿವರಾಮ ಹೆಬ್ಬಾರ್


ಶಾಂತರಾಮ ಹೆಗಡೆ


ಷಣ್ಮುಖ ಗೌಡ


ಮಂಕಾಳ ವೈದ್ಯ



ಶಾಸಕ ಸುನಿಲ್ ಹೆಗಡೆಯ ತಂದೆ ಮಾಜಿ ಎಮ್ಮೆಲ್ಸಿ ವಿ.ಡಿ. ಹೆಗಡೆ ಹಲವು ವರ್ಷ ಆತನ ಆತ್ಮೀಯ ಸೇನಾಧಿಪತಿಯಾಗಿ ಅಟ್ಟಹಾಸದಿಂದ ಮೆರೆದಾತ. ಈ ಅಪ್ಪ-ಮಗ ದೇಶಪಾಂಡೆ ಗರಡಿಯಲ್ಲೇ ಪಳಗಿದ ಪ್ರಚಂಡರು. ಕೆಡಿಸಿಸಿ ಬ್ಯಾಂಕಿಗೆ ವಿ.ಡಿ. ಹೆಗಡೆ ಅಧ್ಯಕ್ಷರಾಗಿ ಅವತರಿಸಿದ್ದೇ ದೇಶಪಾಂಡೆಯ ಹಳಯಾಳ ಲೋಕಲ್ ರಾಜಕಾರಣದ ಅಡಚಣೆಯಿಂದಾಗಿತ್ತು. ಆನಂತರ ಸ್ಥಳೀಯ ಸಂಸ್ಥೆಗಳಿಂದ ವಿ.ಡಿ. ಹೆಗಡೆಗೆ ದೇಶಪಾಂಡೆ ಎಮ್ಮೆಲ್ಸಿಯೂ ಮಾಡಿ 'ಗುರು'ವಿನ ಋಣ ತೀರಿಸಿದರು. ಆದರೆ ಎರಡನೇ ಬಾರಿ ವಿಡಿಗೆ ದೇಶಪಾಂಡೆ ಅವಕಾಶ ಕೊಡಲಿಲ್ಲ. ತನ್ನ ಮೀರಿ ಬೆಳೆವ ಭಯದಲ್ಲಿ ವಿಡಿ ಬಾಲ ಕಟ್ ಮಾಡಿದ ದೇಶಪಾಂಡೆಗೆ ಆತನ ಮಗ ಸುನಿಲ್‌ನೇ ಪ್ರತಿಸ್ಪರ್ಧಿಯಾಗಿ ತಯಾರಾಗಿಹೋದ.

ಆಗ ದೇಶಪಾಂಡೆ ಹಳಿಯಾಳದ ಬಹುಸಂಖ್ಯಾತ ಮರಾಠ ಕೋಮಿನ ಎಸ್.ಎಲ್. ಘೋಟನೇಕರ್‌ನನ್ನು ತನ್ನ ಗ್ಯಾಂಗ್ ಲೀಡರ್ ಆಗಿ ನೇಮಿಸಿಕೊಂಡರು. ಘೋಟನೇಕರ್ ಮಾತುಮಾತಿಗೆ ವಿಡಿ, ಸುನಿಲ್‌ಗೆ ತಿರುಗಿಬೀಳುತ್ತ ಧೂಳೆಬ್ಬಿಸತೊಡಗಿದರು. ಇದಕ್ಕೆ ಇನಾಮಾಗಿ ದೇಶಪಾಂಡೆ ಶಿಷ್ಯನಿಗೆ ಕೆಡಿಸಿಸಿ ಬ್ಯಾಂಕ್‌ನ ಗೂಟದ ಕಾರು ಕೊಡಿಸಿದರು. ಕೆಡಿಸಿಸಿ ಅಂಗಳದಲ್ಲಿ ರಾಜಕಾರಣಿಯಾಗಿ ರೂಪುಗೊಂಡ ಘೋಟನೇಕರ್ ಬಾಸ್‌ಗೆ ಎಮ್ಮೆಲ್ಸಿ ಮಾಡುವಂತೆ ಗಂಟು ಬಿದ್ದು ಕಾಡಲಾರಂಭಿಸಿದರು. ವಿಡಿಗೆ ಎಮ್ಮೆಲ್ಸಿ ಮಾಡಿ ಕೈ ಸುಟ್ಟುಕೊಂಡಿದ್ದ ದೇಶಪಾಂಡೆಗೆ ಇದು ಇಷ್ಟವೇ ಇಲ್ಲದ ಕೆಲಸವಾಗಿತ್ತು, "ವಿಡಿಯನ್ನು ಹೇಗೆ ಎಮ್ಮೆಲ್ಸಿ ಮಾಡಿದಿರೋ ಹಾಗೇ ನಂಗೂ ವಿಧಾನ ಪರಿಷತ್‌ಗೆ ಕಳಿಸಿ... ಇಲ್ಲದಿದ್ರೆ ತಿರುಗಿ ಬಿದ್ದು ವಿಡಿ ಬಣ ಸೇರುತ್ತೇನೆ...." ಎಂದು ಬ್ಲಾಕ್‌ಮೇಲ್ ಮಾಡಿಯೇ ಹೊಲಸು ನಾಲಿಗೆಯ ಘೋಟನೇಕರ್ ವಿಧಾನ ಪರಿಷತ್ ಜಾಕ್‌ಪಾಟ್ ಹೊಡೆದಿದ್ದರು!


ಈ ವಿಡಿ, ಘೋಟನೇಕರ್ ಎಂಬ ಶುಂಭ-ನಿಶುಂಭರು ಕೆಡಿಸಿಸಿ ಬ್ಯಾಂಕಿನಲ್ಲಿ ಬೇಕಷ್ಟು ಭಾನಗಡಿ ಮಾಡಿದ್ದು ಇನ್ನೂ ಯಾರೂ ಮರೆತಿಲ್ಲ. ಜಿಲ್ಲೆಯ ಹೊರಗಿನ ಸಕ್ಕರೆ ಕಾರ್ಖಾನೆಗೆ, ದೇಶಪಾಂಡೆಯ ಪರಮಾಪ್ತ ಆರ್.ಎನ್.ಶೆಟ್ಟಿ ಎಂಬ ದಗಲುಬಾಜಿ ಉದ್ಯಮಿಯ ಸಿಗಡಿ ಫ್ಯಾಕ್ಟರಿ (ಶಶಾಂಕಾ ಸೀ ಫುಡ್ಸ್)ಗೆ ಕೋಟಿಗಟ್ಟಲೆ ಸಾಲಕೊಟ್ಟು ಬ್ಯಾಂಕಿಗೆ


ದುರ್ಬಳಕೆ ಮಾಡಿ ಅಸೆಂಬ್ಲಿ ಟಿಕೆಟ್ಟೂ ಪಡೆದುಕೊಂಡಿದ್ದರು. ಟಿಎಸ್‌ಎಸ್ ಎಂಬ ತೋಟಿಗರ ಜೀವನಾಡಿಯಾಗಿದ್ದ ಸಂಸ್ಥೆಗೆ ಗೆದ್ದಲಿನಂತೆ ಹಿಡಿದುಕೊಂಡಿರುವ ಶಾಂತಣ್ಣ ಕೆಡಿಸಿಸಿಯ ಕೇಡುಗಾಲಕ್ಕೂ ಒಂದಷ್ಟು ಕೊಡುಗೆ ನೀಡಿದ್ದಾರೆ. ಇಂಥ ಚರಿತ್ರೆಯ ಶಾಂತಣ್ಣನನ್ನ ಅಂಕೋಲಾ-ಶಿರಸಿ ಮಂದಿ

ಶಿವರಾಮ ಹೆಬ್ಬಾರ್, ಭಟ್ಕಳದ ಬನಾವಟಿ ಎಮ್ಮೆಲ್ಲೆ ಮಂಕಾಳ ವೈದ್ಯ, ಸಿದ್ದಾಪುರದ ಸೈತಾನ ಷಣ್ಮುಖ ಗೌಡ, ಹೊನ್ನಾವರದ ದರಿಡಪಿಂಡ ಶಿವಾನಂದ ಹೆಗಡೆ... ವಗೈರೆ ದಗಾಕೋರರು ಗೆದ್ದಿದ್ದಾರೆ. ಹೊರನೋಟಕ್ಕೆ ಕಾಂಗ್ರೆಸ್ ಬೆಂಬಲಿತರೇ ಹೆಚ್ಚು ಗೆದ್ದಿರುವಂತೆ ಕಾಣಿಸುತ್ತದಾದರೂ

ಎಂದೂ ತನಗೆ ಸಮಾನಾಂತರವಾಗಿ ಯಾವ ಪಕ್ಷದ ಯಾರನ್ನೂ ಬೆಳೆಯಲು ಬಿಡಲಾರ. ಆತನ ಸರ್ವ ಸಂಬಂಧವೇ ಅಂಥದ್ದು. ವಿಡಿಯನ್ನು ಕಡೆಗಣಿಸಿದಂತೆ ದೇಶಪಾಂಡೆ ಸಿದ್ದು ಸರ್ಕಾರದಲ್ಲಿ ಸಚಿವನಾದ ಘೋಟನೇಕರ್‌ನ ಹಾರಾಟಕ್ಕೂ ಕಡಿವಾಣ ಹಾಕಿ

ಎಮ್ಮೆಲ್ಸಿ ಟಿಕೆಟ್ ಸಮೀಕರಣ


ರವೀಂದ್ರನಾಥ ನಾಯ್ಕ


ಧೀರೂ ಶಾನಭಾಗ

ಕೆಲವೇ ತಿಂಗಳಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಚುನಾವಣೆ ನಡೆಯಲಿದೆ. ಈ ಕ್ಷೇತ್ರದ ಹಾಲಿ ಸದಸ್ಯ ಶ್ರೀಕಾಂತ ಘೋಟನೇಕರ್‌ಗೆ ಮನೆಗೆ ಕಳಿಸಲು ಬಾಸ್ ದೇಶಪಾಂಡೆ ಅದೆಂದೋ ತೀರ್ಮಾನ ತೆಗೆದುಕೊಂಡಿದ್ದಾರೆ. ಹಾಗಿದ್ದರೆ ಕಾಂಗ್ರೆಸ್ ಟಿಕೆಟ್ ಯಾರಿಗೆ?

ಈಗ ಜಿಲ್ಲಾ ಕಾಂಗ್ರೆಸ್ ಪಡಸಾಲೆಯಲ್ಲಿ ದೇಶಪಾಂಡೆ ಮೂಡ್ ನೋಡಿ ಟಿಕೆಟ್ ಲೆಕ್ಕಾಚಾರ ನಡೆಯುತ್ತಿದೆ. ಒಂದು ಸಮೀಕರಣದ ಪ್ರಕಾರ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಗಳು ಇಬ್ಬರು. ಒಬ್ಬ ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕ, ಮತ್ತೊಬ್ಬ ಅರಣ್ಯ ಅತಿಕ್ರಮಣದಾರರ ಪಡೆಯ ಸ್ವಯಂಘೋಷಿತ ಅಧ್ಯಕ್ಷ ರವೀಂದ್ರನಾಥ ನಾಯ್ಕ. ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಶಿರಸಿ ಕ್ಷೇತ್ರದ ಟಿಕೆಟ್ ತನಗೆ ದೇಶಪಾಂಡೆ ಕೊಡಿಸಿಲ್ಲ ಎಂಬ ಬೇಜಾರು ಭೀಮಣ್ಣನಿಗಿದೆ ನಿಜ. ಸ್ಥಳೀಯ ಸಂಸ್ಥೆಯ ಟಿಕೆಟ್ ಈಗ ಕೊಡಿ ಎಂದಾತ ಹಠಕ್ಕೆ ಬಿದ್ದಿದ್ದಾರೆ.

ಆದರೆ ಒಂಥರಾ ಪೆದ್ದಣ್ಣ ಚಹರೆಯ ಭೀಮಣ್ಣನಿಗೆ ಗ್ರಾಪಂ-ತಾಪಂ-ಜಿಪಂ-ಮುನ್ಸಿಪಾಲ್ಟಿ.... ಮುಂತಾದ ಸ್ಥಳೀಯಾಡಳಿತದ ಸದಸ್ಯರ ಮತ ಪಡೆಯುವ ಫಾರ್ಮ್ ಇಲ್ಲವೆಂಬುದು ದೇಶಪಾಂಡೆಯ ಅನಿಸಿಕೆ. ಹೀಗಾಗಿ ಆತನ ಕಣ್ಣು ಜಿಲ್ಲೆಯಲ್ಲಿ ಅರಣ್ಯ ಅತಿಕ್ರಮಣದಾರರ ಹೋರಾಟದ ದೆಸೆಯಿಂದ ಕ್ರಿಯಾಶೀಲನಾಗಿರುವ ರವೀಂದ್ರನಾಥ ನಾಯ್ಕರ ಮೇಲೆ ಬಿದ್ದಿದೆ. ಮ್ಯಾಗಿ ಗ್ಯಾಂಗಿನಲ್ಲಿದ್ದ ರವಿ ಕ್ರಮೇಣ ದೇಶಪಾಂಡೆಗೆ ಶರಣಾಗಿ ಹೋದರು. ಕಳೆದ ಪಾರ್ಲಿಮೆಂಟ್ ಇಲೆಕ್ಷನ್ ಹೊತ್ತಲ್ಲಿ ಮ್ಯಾಗಿ ಫರ್ಮಾನು ಧಿಕ್ಕರಿಸಿ ದೇಶಪಾಂಡೆ ಮಗನ ಗೆಲುವಿಗೆ ಓಡಾಡಿದರು. ತನ್ಮೂಲಕ ಗುರುಗುಡುತ್ತಿದ್ದ ದೇಶಪಾಂಡೆಯನ್ನು ಸಂಪ್ರೀತಗೊಳಿಸಿದರು. ಇದು ಈಗ ರವಿಯ ನೆರವಿಗೆ ಬಂದಿದೆ.

ಒಂದು ಅಂದಾಜಿನಂತೆ ಈಚೆಗೆ ನಡೆದ ಗ್ರಾಪಂ ಚುನಾವಣೆಯಲ್ಲಿ ಗೆದ್ದಿರುವವರಲ್ಲಿ ಶೇ. 35 ರಷ್ಟು ಮಂದಿ ಒಂದಲ್ಲ ಒಂದು ರೀತಿಯಲ್ಲಿ ಅರಣ್ಯ ಅತಿಕ್ರಮಣದಾರರ ನಂಟಿರುವವರು. ಅರ್ಥಾತ್ ರವಿ ನಾಯ್ಕನ ಬಗ್ಗೆ ಒಲವಿರುವವರು. ಎಮ್ಮೆಲ್ಸಿ ಟಿಕೆಟ್

ಸಿಕ್ಕರೆ ಇದು ರವಿಗೆ ವರವಾಗಲಿದೆ. ಹಾಗೆಯೇ ಅರಣ್ಯ ಅತಿಕ್ರಮಣದಾರರಿಗೆ ಅವರ ಭೂಮಿ ಮಂಜೂರಿ ಮಾಡುವಂತೆ ದೊಡ್ಡ ಧ್ವನಿಯಲ್ಲಿ ಬೊಬ್ಬೆ ಹಾಕುತ್ತಿರುವ ಸ್ಪೀಕರ್ ಕಾಗೋಡು ತಿಮ್ಮಪ್ಪ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಕೆ. ಹರಿಪ್ರಸಾದ್ ಸಹ ರವಿ ಪರ ಲಾಬಿ ಈಗಾಗಲೇ ಆರಂಭಿಸಿದ್ದಾರೆ. ದೇಶಪಾಂಡೆಯ ಕೃಪಾಕಟಾಕ್ಷವೂ ಸಿಗುವ ಸೂಚನೆ ಗೋಚರಿಸುತ್ತಿದೆ. ಹೀಗಾದರೆ ಮತ್ತೆ ಭೀಮ ಬಲಿಯಾಗುತ್ತಾರೆ. ಸ್ವ-ಜಾತಿ (ದೀವರ) ಹಿತಶತ್ರು ರವಿನಾಯ್ಕಗೆ ಟಿಕೆಟ್ ಕೊ ಅದನ್ನು ಅರಗಿಸಿಕೊಳ್ಳಲು ಭೀಮಣ್ಣನಿಗೆ ಕಷ್ಟವಾಗಲಿದೆ. ಹಾಗೇನಾದರೂ "ರ ಕ್ಯಾಂಡಿಡೇಟಾಗಿ ಸಿದ್ದಾಪುರದ ಪುಂಡರ ದೊರೆ ಷಣ್ಮುಖ ಗೌಡರಿಗೆ ಛಾನ್ಸ್ ಸಿಗಲೂಬಹು ಎಲ್ಲಾ ದೇಶಪಾಂಡೆ ಮರ್ಜಿ!!

ಅತ್ತ ಬಿಜೆಪಿಯ ಬಿಡಾರದಲ್ಲಿ ವಿಚಿತ್ರ ಸುದ್ದಿಯೊಂದು ಹಬ್ಬಿದೆ. ಗೆಲ್ಲುವ ಛ ಇಲ್ಲದ್ದರಿಂದ ಎಮ್ಮೆಲ್ಸಿ ಟಿಕೆಟ್ ಕೇಳುವವರೇ ಇಲ್ಲ ಚಡ್ಡಿ ಗ್ಯಾಂಗಲ್ಲಿ, ಹೀಗಾಗಿ ಕುವ ಎಪಿಎಂಸಿ ಅಧ್ಯಕ್ಷನೂ, ಸರ್ಕಾರಿ ಕಂಟ್ರಾಕ್ಟರಿಕೆಯಿಂದ ಕೊಪ್ಪರಿಗಟ್ಟಲೆ ಕಾಸು ಮಾಡಿ ಧೀರೂ ಶಾನಭಾಗ ಯಾನೆ ರಾಮನಾಥ ಶಾನಭಾಗ್ ಎಂಬ ದೇಶಪಾಂಡೆಯ ಅ ಜಾತಿ ಬಂಧು ಬಿಜೆಪಿ ಟಿಕೆಟ್‌ಗೆ ಕಟಿಪಿಟಿ ನಡೆಸಿದ್ದಾರೆ. ಹರಕು ಬಾಯಿಂದ ಖ್ಯಾತಿ ಪಡೆದಿರುವ ಧೀರೂ ಅಷ್ಟು ದುಷ್ಟನೇನಲ್ಲ. ಕುಮಟೆಯ ಕಾಮತ್ ಹೋಟೆ ಅಡ್ಡೆ ಹಾಕುವ ಖೋಟಾ ಕಂಟ್ರಾಕ್ಟರ್‌ಗಳು ಮತ್ತು ಬೋಗಸ್ ಬಿಲ್ ಪಂಡಿತರಿ ಧೀರೂ ನಿಯತ್ತಿನವನೆಂದು ಜನ ಮಾತಾಡಿಕೊಳ್ಳುತ್ತಾರೆ.

ಅದೇನೇ ಇರಲಿ, ಧೀರೂಗೆ ಕಾಡುತ್ತಿರುವ ಎಮ್ಮೆಲ್ಸಿ ತೆವಲು ಬಿಜೆಪಿ ಅಲ್ಲೋಲಕಲ್ಲೋಲ ಮಾಡುತ್ತಿದೆ. ಕೋಟ್ಯಾಧಿಪತಿ ಕಂಟ್ರಾಕ್ಟರ್ ಧೀರೂನ ಸಾಕಿ-ಸಲು ರಘಣ್ಣ (ದೇಶಪಾಂಡೆಗೆ ಕೊಂಕಣಿ ವಲಯದಲ್ಲಿರುವ ನಿಕ್‌ನೇಮ್) ಇದೆಲ್ಲ ಕಂಡೂಕಾಣ ಅವಲೋಕಿಸುತ್ತಿದ್ದಾರೆ. ಧೀರೂಗೆ ದುಡ್ಡಿನ ಮದದಿಂದ ವಿಧಾನಸೌಧದ ತೆ ಶುರುವಾಗಿರುವುದು ಕುಮಟೆಯಲ್ಲಿ ಮಜಮಜಾ ಮಾತುಗಾರಿಕೆಗೆ ವಸ್ತುವಾಗಿದೆ

...ದರಿಂದ ಕರೆಸಿದ್ದ ಘೋಟನೇಕರ್ ದೊರೆ ಮಗ ಪ್ರಶಾಂತ ದೇಶಪಾಂಡೆ ಪಾರ್ಲಿಮೆಂಟ್‌ಗೆ ಗೆಲ್ಲದಂತೆ ಏನೇನು ಮಾಡಲು ಸಾಧ್ಯವೋ ಅದೆಲ್ಲಾ ತಳಿಯಾಳ-ಜೋಯಿಡಾದಲ್ಲಿ ಮಾಡಿದ್ದಾರೆ.

ಈ ಸಿಟ್ಟಲ್ಲಿ ದೇಶಪಾಂಡೆ ತನಗೆ ಕೆಲವೇ ತಿಂಗಳಲ್ಲಿ ನಡೆಯಲಿರುವ ವಿಧಾನ ಪರಿಷತ್ ಎಲೆಕ್ಷನ್‌ಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಬಿಡಲಾರರೆಂಬುದು ಖಾತ್ರಿಯಾಗಿದೆ ಘೋಟನೇಕರ್‌ಗೆ. ದೇಶಪಾಂಡೆಯನ್ನು ಪಳಗಿಸಲು ಘೋಟನೇಕರ್ ಈಗ ಕೆಡಿಸಿಸಿ ಬ್ಯಾಂಕಿನ ಗದ್ದುಗೆ ಗುದ್ದಾಟ ದಾಳವಾಗಿ ಬಳಸಿಕೊಳ್ಳಲು ಸ್ಕೆಚ್ ಹಾಕಿದ್ದಾರೆ. ದೇಶಪಾಂಡೆ ವಿರೋಧಿ ಶಾಸಕ ಯಲ್ಲಾಪುರದ ಆದಿರುಗಳ್ಳ ಶಿವರಾಮ ಹೆಬ್ಬಾರನ ಜತೆ ಸೇರಿಕೊಂಡು ಸಿಂಡಿಕೇಟ್ ರಚಿಸಿಕೊಂಡಿದ್ದಾರೆ. ಇದರಲ್ಲಿ ದೇಶಪಾಂಡೆಯ ಅಚ್ಚುಮೆಚ್ಚಿನ ಭಟ್ಕಳದ ಶಾಸಕ ಮಂಕಾಳ ವೈದ್ಯನೂ ರಹಸ್ಯವಾಗಿ ನುಸುಳಿಕೊಂಡಿರುವುದು ವಿಚಿತ್ರವಾದರೂ ಸತ್ಯ. ಹಾಗೆಯೇ ಹೊನ್ನಾವರದ ಎಡವಟ್ಟು ಮಾಣಿ ಶಿವಾನಂದ ಹೆಗಡೆ ಉರುಫ್ ಬಾಬು ಹೆಗಡೆಯೂ ಕ್ರಿಯ ಸದಸ್ಯನಾಗಿದ್ದಾನೆ. ದೇಶಪಾಂಡೆ ವಿರೋಧಿ ಬಳಗದಲ್ಲಿ ಸಿದ್ದಾಪುರದ ಷಣ್ಮುಖ ಗೌಡರಿಗೂ ದೇಶಪಾಂಡೆಗೆ ಎದುರಿಸಿದರೆ ಲಾಭ ಹೆಚ್ಚೆಂಬ ಭಾವನೆ ಬಂದಿದೆ.

ಘೋಟನೇಕರ್‌ಗೆ ಮತ್ತೆ ಕೆಡಿಸಿಸಿ ಬ್ಯಾಂಕ್ ಪಟ್ಟವೇರುವ ಮನಸ್ಸು ಒಂಚೂರೂ ಇಲ್ಲ. ಆದರೆ ಕೆಡಿಸಿಸಿ ಪೀಠದ ಬೇಡಿಕೆಯಿಟ್ಟು ದೇಶಪಾಂಡೆ ರಾಜಿಗೆ ಬರುವಂತೆ ಮಾಡುವ ತಂತ್ರ ಘೋಟನೇಕರ್ ಹೆಣೆದಿದ್ದಾರೆ. ಕೆಡಿಸಿಸಿ ಕೊಡಲು ದೇಶಪಾಂಡೆ ನಿರಾಕರಿಸಿದರೆ ಮತ್ತೆ ಎಮ್ಮೆಲ್ಸಿ ಟಿಕೆಟ್ ಕೊಡುವಂತೆ ಘೋಟನೇಕರ್ ಹಠ ಹಿಡಿಯುವ ಯೋಚನೆಯಲ್ಲಿದ್ದಾರೆ. ಈ ಮೇಲಾಟದಲ್ಲಿ ಯಾವುದಾದರೂ ಒಂದು ಸಿಕ್ಕರೆ ಜಿಲ್ಲಾ ಮಟ್ಟದಲ್ಲಿ ಮೆರೆಯಬಹುದೆಂಬುದು ಘೋಟನೇಕರ್ ಲೆಕ್ಕಾಚಾರ. ಈ ಗುರು-ಶಿಷ್ಯ ಕಾಳಗದಲ್ಲಿ ತನ್ನ ರೊಟ್ಟಿ ಜಾರಿ ತುಪ್ಪಕ್ಕೆ ಬೀಳಲಿದೆ ಎಂದು ಶಾಸಕ ಶಿವರಾಮ ಹೆಬ್ಬಾರ್ ಕನಸು ಕಾಣುತ್ತಿದ್ದಾರೆ. ಹೇಗೆ ನೋಡಿದರೂ ಈ ಹೆಬ್ಬಾರ್‌ಗೆ ಕೆಡಿಸಿಸಿ ಕುರ್ಚಿಯ ಚಟ ತೀವ್ರವಾಗಿ ಕಾಡುತ್ತಿರುವುದು ಗೋಚರಿಸುತ್ತದೆ.

ಹೆಬ್ಬಾರ್ ಮತ್ತು ಘೋಟನೇಕರ್ ನಡುವೆ ಒಂದು ರಹಸ್ಯ ಒಪ್ಪಂದವಾಗಿದೆ. ಘೋಟನೇಕರ್‌ನನ್ನು ಕೆಡಿಸಿಸಿಗೆ ಸೀಮಿತ ಮಾಡಿ ಎಮ್ಮೆಲ್ಸಿಗಿರಿ ತಪ್ಪಿಸುವ ದೂರಾಲೋಚನೆ ದೇಶಪಾಂಡೆ ಹಾಕಿದರೆ ಆಗ ತನಗೆ ಅಪೆಕ್ಸ್ ಬ್ಯಾಂಕ್ ನಿರ್ದೇಶಕತ್ವ ಸಿಗುವಂತೆ ಪ್ರಯತ್ನ ನಡೆಸಲು ಹೆಬ್ಬಾರ್ ಮಿತ್ರಮಂಡಳಿಗೆ ಹೋಗಿದ್ದಾರೆ. ಮಜಾ ಅಂದರೆ, ಈ ಹೆಬ್ಬಾರ್-ಘೋಟನೇಕರ್ ಇಬ್ಬರ ಕಂಡರೂ ಡಾನ್ ದೇಶಪಾಂಡೆಗೆ ಆಗದು. ಆತನ ಡಾರ್ಕ್ ಹಾರ್ಸ್ ಆಗಿದ್ದ ನಾಗೇಶ್ ಗಾಂವಕರ್‌ಗೆ ಡೈರೆಕ್ಟರ್ ಆಗಿ ಆಯ್ಕೆಯಾಗಲಿಕ್ಕೆ ಸಾಧ್ಯವಾಗದೇ ಮಕಾಡೆ ಬಿದ್ದಿದ್ದಾನೆ. ಕೆಡಿಸಿಸಿಯ ಮಾಜಿ ಎಂಡಿ, ಮಾಜಿ ನಿರ್ದೇಶಕನಾದ ಗಾಂವಕರ್ ತಾನೊಬ್ಬ ಸಹಕಾರಿ ರತ್ನ' ಎಂಬ ಹಮ್ಮು-ಬಿಮ್ಮಿನಲ್ಲಿ ಕೆಡಿಸಿಸಿ ಆಡಳಿತ ನಿಯಂತ್ರಿಸುತ್ತಿದ್ದುದು ಹೆಬ್ಬಾರ್-ಘೋಟನೇಕರ್ ಮತ್ತಿತರರ ಕಣ್ಣು ಕೆಂಪಾಗಿಸಿತ್ತು. ದೇಶಪಾಂಡೆ ಬಲದಿಂದ ಹಾರಾಡುತ್ತಿದ್ದ ಗಾಂವಕರ್ ಈ ಬಾರಿ ಅಧ್ಯಕ್ಷನಾಗುವ ಭಯವೂ ಹೆಬ್ಬಾರ್-ಘೋಟನೇಕರ್ ಬಳಗಕ್ಕೆ ಶುರುವಾಗಿತ್ತು. ಹೀಗಾಗಿ ಎಲ್ಲರೂ ಸೇರಿ ಗಾಂವಕರ್‌ಗೆ ಸೋಲಿಸಿದ್ದಾರೆ.

ಈಗ ದೇಶಪಾಂಡೆ ಸಾಹೇಬರಿಗೆ ಇರುವುದು ಎರಡೇ ಆಯ್ಕೆ. ಒಂದು ಸಿದ್ದಾಪುರದ ಷಣ್ಮುಖ ಗೌಡ, ಮತ್ತೊಂದು ಹಾಲಿ ಅಧ್ಯಕ್ಷ ಶಾಂತಾರಾಮ ಹೆಗಡೆ. ಶಾಂತಾರಾಮ ಹೆಗಡೆ ಬಗ್ಗೆ ಹಳೆ-ಹೊಸ ನಿರ್ದೇಶಕರಲ್ಲಿ ಒಳ್ಳೆಯ ಅಭಿಪ್ರಾಯವಿಲ್ಲ. ಈತ ದಡ್ಡ ಶಿಖಾಮಣಿ. ಒಣ ರುಬಾಬಿಗೆ ಕೆಡಿಸಿಸಿ ಬ್ಯಾಂಕ್ ಪೀಠ-ವಾಹನ ಬಳಸುತ್ತಾನೆಯೇ ಹೊರತು ಸಹಕಾರಿ ತತ್ವದ ಬದ್ಧತೆ, ಹಣಕಾಸು ಸಂಸ್ಥೆ ನಿಭಾಯಿಸುವ ಯೋಗ್ಯತೆ ಯಾವುದೂ ಇಲ್ಲದವನೆಂದು ಇಡೀ ಜಿಲ್ಲೆಯ ಜನ ಅರಿಯುತ್ತಿದ್ದಾರೆ. ಹೀಗಾಗಿ ಷಣ್ಮುಖ ಗೌಡರಿಗೆ ಪಟ್ಟ ಕಟ್ಟಲು ದೇಶಪಾಂಡೆ ಹವಣಿಸಬಹುದು. ಆದರೆ ಷಡ್ಯಂತ್ರದಲ್ಲಿ ಪಳಗಿರುವ ದೇಶಪಾಂಡೆ ಒಂದೇ ಕಲ್ಲಿನಲ್ಲಿ ಘೋಟನೇಕರ್, ಹೆಬ್ಬಾರ್ ಹಣಿಯಲು ಪ್ಲಾನ್ ಹಾಕದೇಬಿಡರು.

ಒಂದಂತೂ ಖರೆ; ಈ ಬಾರಿ ಘೋಟನೇಕರ್‌ಗೆ ಮತ್ತೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಲು ದೇಶಪಾಂಡೆ ಬಿಡಲಾರರು. ಆತ ಯಾರಿಗೇ ಆಗಲಿ ಕೊಡುವುದು ಒಂದೇ ಛಾನ್ಸ್. ಎರಡನೇ ಅವಕಾಶ ಕೊಟ್ಟರೆ ತನ್ನ ಬುಡಕ್ಕೇ ನೀರು ತರುತ್ತಾರೆಂಬ ಆತಂಕ ಆತನದು. ಅದೇ ರೀತಿ ಕೆಡಿಸಿಸಿ ಪೀಠಕ್ಕೂ ಘೋಟನೇಕರ್ ಮತ್ತು ಹೆಬ್ಬಾರ್‌ಗೆ ಹತ್ತಲು ಆತ ಬಿಡಲಾರ. ಘೋಟನೇಕರ್ ಅಂತಿಮವಾಗಿ ಅಪೆಕ್ಸ್ ಬ್ಯಾಂಕ್ ಡೈರೆಕ್ಟರಿಕೆಗೆ ಒಪ್ಪಿ ರಾಜಿಯಾದರೆ ಹಾದಿ ಮೇಲೆ ಬೀಳೋದು ಮಾತ್ರ ಹೆಬ್ಬಾರ್! ಗೌಡ್ರು ಕನಸು ಕಾಣುತ್ತಿದ್ದಾರೆ; ಶಾಂತಣ್ಣ ಬೆಗ್ಗಾಗಿದ್ದಾರೆ.

ಗುರುವಿನ' ಗುಲಾಮಗಿರಿ ಮಾಡಿದವರಿಗೂ ನೆಮ್ಮದಿಯಿಲ್ಲ, ಇದೇ ಜಿಲ್ಲಾ ರಾಜಕಾರಣದ ಚದುರಂಗ ಆಡಿಸುವ ದೇಶಪಾಂಡೆಯ ರಾಜಕಾರಣದ ಶೈಲಿ!!

■ ನಹುಷ

ಕುಂ. ವೀರಭದ್ರಪ್ಪನೂ, ಭೈರಪ್ಪನೂ ಬ್ರದರ್ಸ್ ಸಾರ್!

ಥೂತ್ತೇರಿ

▸ ಯಾಹೂ

ಲಂಕೇಶ್ ತೀರಿಕೊಂಡು ಹದಿನೈದು ವರ್ಷಗಳು ತುಂಬಿದ ನಂತರ ಅವರಿಂದ ಒದೆಸಿಕೊಂಡು ಹೊರಗೋದವರು, ಈಗ ಎಚ್ಚೆತ್ತುಕೊಂಡು "ಲಂಕೇಶ್ ಮೀಸಲಾತಿ ವಿರೋಧಿಯಾಗಿದ್ದರು. ಪರವಾಗಿದ್ದರೆ ನಮ್ಮನ್ನು ಅಲ್ಲಿಯೇ ಇಟ್ಟುಕೊಂಡು ಬರೆಸುತ್ತಿದ್ದರು. ವ್ಯಭಿಚಾರಿಗಳ ವಿಷಯದಲ್ಲಿ ಅವರು ತಾರತಮ್ಯ ಮಾಡುತ್ತಿದ್ದರು. ಗಂಡು ವ್ಯಭಿಚಾರಿಗಳನ್ನು ವಿರೋಧಿಸಿ ಹೆಣ್ಣು ವ್ಯಭಿಚಾರಿಗಳ ಪರವಿದ್ದರು" ಎಂದು ಬನ್ನಂಜೆ ಗೋವಿಂದಾಚಾರಿಯಂತೆ ಕೂದಲು ಸೀಳಿ ಮಾತನಾಡತೊಡಗಿದ್ದಾರಂತಲ್ಲಾ, ಮನುಷ್ಯ ನೀಚ, ಆದ್ದರಿಂದ ಅವನೊಡನೆ ಎಚ್ಚರಿಕೆಯಿಂದ ವರ್ತಿಸಬೇಕು ಎಂದು ಹೇಳುತ್ತ ಬರೆಯುತ್ತಲೇ ಬಂದ ಲಂಕೇಶರು ನೀಚರಿಂದಲೇ ಸುತ್ತುವರಿದಿದ್ದರು. ಅವರು ತೀರಿಕೊಂಡನಂತರ ಅವರೆಲ್ಲಾ ನಿರ್ಭೀತಿಯಿಂದ ವರ್ತಿಸಿ ಲಂಕೇಶ್ ಇಲ್ಲದಿರುವುದೇ ಒಳ್ಳೆಯದಾಯ್ತೆಂದು ಭಾವಿಸಿರುವುದನ್ನು ಮಾತ್ರ ಒಳನೋಟದ ಲೇಖಕರು ಹೇಳುತ್ತಿಲ್ಲವಂತಲ್ಲಾ, ಇದೆಲ್ಲಕ್ಕಿಂತ ಮುಖ್ಯವಾಗಿ ಲಂಕೇಶ್ ಹೇಳಿದ್ದು, ಬರೆದಿದ್ದು ಈಗೇನಾದರೂ ನಮ್ಮ ಬದುಕಿಗೆ ಅಣತೆಯಾಗಿ ಕಂಡೀತೇ ಎಂಬ ಬಗ್ಗೆ ಯೋಚಿಸುವುದು ಬಿಟ್ಟು, ಆ ಕ್ಷಣದ ಸತ್ಯವನ್ನ ದಾಖಲಿಸಿ ಹೋಗಿರುವ ಲೇಖನಗಳನ್ನಿಡಿದು, ಪುರೋಹಿತರಿಗೆ ಪುಳಿಯೋಗರೆ ಸವಿ ನೀಡುತ್ತಿರುವ ವಿದ್ವಾಂಸರ ಗಾಯಗಳು ಈ ಹದಿನೈದು ವರ್ಷವಾದರೂ ಮಾಯ್ದಿಲ್ಲ ಎಂದಮೇಲೆ ಗಾಯದ ತೀವ್ರತೆ ಎಷ್ಟಿರಬಹುದಲ್ಲವೇ, ಥೂತ್ತೇರಿ!!

* * * *

ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆಯಂತೆ. ಆದರೆ ಕಳ್ಳರ ತಾಯಿಗೆ ಏನೆನ್ನಬೇಕು? ಇಂತದೊಂದು ಹೊಸ ಗಾದೆಯನ್ನು ಈಗ ಸೃಷ್ಟಿಸಬೇಕಿದೆ. ಬಳ್ಳಾರಿ ಗಣಿಕಳ್ಳರಾದ ರೆಡ್ಡಿ-ರಾಮುಲು ತಾಯಿಯವರಾದ ಸುಷ್ಮಾ ಸ್ವರಾಜ್ ಎಂಬ ಕಾಂಚಾಣ ಪ್ರಿಯೆ, ಪ್ರತಿ ವರ್ಷ ಬಂದು ತನ್ನ ಕಳ್ಳ ಮಕ್ಕಳನ್ನು ಕೂರಿಸಿಕೊಂಡು, ಲಕ್ಷ್ಮಿ ಪೂಜೆ ಮಾಡಿ, ಪೂಜೆ ಮಾಡಿದ ಲಕ್ಷ್ಮಿಯನ್ನು ಮಡಿಲಿಗೆ ತುಂಬಿಕೊಂಡು ವಿಮಾನವೇರಿ ಹೋಗುತ್ತಿದ್ದುದ್ದು ಒಂದು ಕಳ್ಳ ಸಂಪ್ರದಾಯವೇ ಆಗಿತ್ತು. ಯಾವಾಗ ರೆಡ್ಡಿ ಜೈಲುಪಾಲಾಗಿ ಇನ್ನೇನು ರಾಮುಲು ಕೂಡ ಜೈಲು ಹಾದಿ ಹಿಡಿಯಲಿದ್ದಾನೆ ಎಂದಾಗ, ಈ ಅಮ್ಮ "ನಾನು ದೆಹಲಿಯವಳು. ಸದರಿ ಗಣಿಕಳ್ಳರು ಬಳ್ಳಾರಿಯವರು. ಆದ್ದರಿಂದ ನನಗೂ ಅವರಿಗೂ ಯಾವ ಸಂಬಂಧವೂ ಇಲ್ಲ" ಎಂದುಬಿಟ್ಟಳಂತಲ್ಲಾ, ಆದರೂ ಅಮ್ಮ ಹೊರ ದೇಶಕ್ಕೆ ಗಣಿ ಮಾರುವ ಮಾರ್ಗ ತೋರಿದ್ದರಿಂದ ಕೃತಜ್ಞತಾಭಾವದಲ್ಲಿ ಚಕಾರವೆತ್ತದೆ ಸುಮ್ಮನಾದ ರೆಡ್ಡಿ-ರಾಮುಲು ಬಹು ಬೆಲೆಯ ಅಮ್ಮನನ್ನು ಮರೆತು ಹಾಯಾಗಿರಬೇಕಾದರೆ, ಈಗ ಅದೇ ಅಮ್ಮ ಲಲಿತ್ ಮೋದಿಯ ಅತ್ತಿಗೆ ರೂಪದಲ್ಲಿ ಪ್ರತ್ಯಕ್ಷವಾಗಿದ್ದಾಳಂತಲ್ಲಾ, ಥೂತ್ತೇರಿ!!

* * * *

ಅದೇನೋ ಏನೊ, ಮೊದಲಿಂದಲೂ ಈ ಅಮ್ಮನಿಗೆ ಸಜ್ಜನರ ಸಹವಾಸವೆಂದರೆ ಅಷ್ಟಕಷ್ಟೆ. ಗಣಿ ಕಳ್ಳರೆಂದರೆ ತನ್ನ ವಯೋಮಾನವನ್ನು ಮರೆತು ತಾಯಿಯಾಗಿ ಬಿಡುತ್ತಾಳೆ. ಐಪಿಎಲ್ ಕಳ್ಳನೆಂದರೆ ಆತನಿಗೆ ಏನು ಮಾಡಲೂ ತಯಾರಾಗಿ ಬಿಡುತ್ತಾಳೆ. ಆದ್ದರಿಂದಲೇ ಕಳ್ಳನೊಬ್ಬ ದೇಶಬಿಟ್ಟು ಹೋಗಲು ಪರವಾನಗಿ ಕೊಡಿಸಿ ಸಿಕ್ಕಿಬಿದ್ದಿದ್ದಾಳೆ. ಎಂದಿನಂತೆ ಭಂಡ ಬದುಕಿಗೆ ಹೆಸರಾದ ಚೆಡ್ಡಿಪಡೆ ಮಾನವೀಯತೆ, ಅಂತಃಕರಣ, ಮನುಷ್ಯ ಸಹಜಗುಣದ ಬಗ್ಗೆ ಮಾತನಾಡತೊಡಗಿದೆ. ಇದೇ ಕೆಲಸವನ್ನು ಇನ್ನ ಯಾರೇ ಮಾಡಿದ್ದರೂ ದೇಶವನ್ನೇ ಕ್ಷೋಭೆಗೀಡು ಮಾಡುತ್ತಿದ್ದವಂತಲ್ಲಾ; ಹಾಗೆ ನೋಡಿದರೆ ಸುಷ್ಮಾ ತಾಯಿಯ ಈ ಮಾನವೀಯತೆಯ ಅಂತಃಕರಣದ ತೀರ್ಮಾನ ಇದ್ದಕ್ಕಿದ್ದಂತೆ ಉಕ್ಕಿದ ರಸವಲ್ಲ, ಇದಕ್ಕಾಗಿ ನಡೆದ ಮೆಹನತ್ತಿನ ಹಿಂದೆ, ಮೋದಿ ಹಲವಾರು ಬಾರಿ ಸುಷ್ಮಾನ ಸಂಬಂಧಿಗಳಿಗೆ ನೆರವಾಗಿ, ಐಪಿಎಲ್ ಹಗರಣದ ಹಣದಲ್ಲೇ ಸಹಾಯ ಮಾಡಿದ್ದನಂತಲ್ಲಾ, ಥೂತ್ತೇರಿ!!

* * * *

ಕುಂ. ವೀರಭದ್ರಪ್ಪ ಮತ್ತು ಎಸ್ಸೆಲ್ ಭೈರಪ್ಪ ಎಂಬ ಭಯಂಕರ ಸಾಹಿತಿಗಳು ಒಟ್ಟಾಗಿ ಅನ್ನಭಾಗ್ಯದ ಬಡವರ ಮೇಲೆ ಬಿದ್ದಿರುವ ಈ ಸಮಯದಲ್ಲಿ, ಯಾರನ್ನಾದರೂ ಈ ಬಗ್ಗೆ ಮಾತನಾಡಿಸಬೇಕೆಂದು ಯೋಚಿಸುತ್ತಿರುವಾಗ, ಹೊಳೆದ ಹೆಸರೇ ವಾಟಿಸ್ಸೆ. ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು,

"ಹಲೋ? ಉಯೀಸ್ ಸ್ಪೀಕಿಂಗ್?"

"ನಾನು ವಾಟಿಸ್ಸೆ, ಯಾಹೂ."

"ಒಳ್ಳೆ ಟೈಮಿಗೆ ಫೋನ್ ಮಾಡಿದ್ರಿ, ಸಾರ್."

"ಗೊತ್ತಾಯ್ತು ನೂರ್‍ರುಪಾಯಿ ಕರೆನ್ಸಿ ಹಾಕುಸ್ಕಿನಿ. ಒಂದು ಪ್ರತಿಕ್ರಿಯೆ ಬೇಕಿತ್ತಲ್ಲ ನಿನ್ನಿಂದ?"

"ಒಂದೇನು ಹತ್ತು ಕೇಳಿ ಸಾರ್."


"ಏನಿಲ್ಲ. ಅನ್ನ ಭಾಗ್ಯ ಯೋಜನೆಗಳಿಂದ ಸೋಮಾರಿಗಳು ಸೃಷ್ಟಿಯಾಯ್ತರೆ ಅಂತ ಎಸ್ಸೆಲ್ ಭೈರಪ್ಪ ಹೇಳ್ಯವ್ರರೆ. ಇದಕೇನೇಳ್ತೀ?"

"ಅವ್ರುನ ಮಾತನ್ನ ನಾನು ಒಪ್ಪುತಿನಿ ಸಾರ್."

"ಹೌದಾ?"

"ಹೌದು ಸಾರ್. ಆತ ಬ್ರಾಹ್ಮಣ ಸಾಹಿತಿ. ಬ್ರಾಹ್ಮಣರ ಕೇರಿಲಿ ಇದ್ದೋನು. ಅಲ್ಲಿ ಬಿಟ್ಟಿಕೂಳ ತಿನ್ನಕಂಡು ಸೋಮಾರಿಗಳಾಗಿ ತಮ್ಮ ಕೇರಿಲಿದ್ದ ಇನ್ನೊಬ್ಬರ ಜಗಲಿ ಮೇಲೆ ಕುಂತಿದ್ದ ಬ್ರಾಹ್ಮಣ್ರು ನೋಡಿ ಆ ಮಾತ ಹೇಳಿರಬಹುದು. ಪರೆಗ್‌ಜಾಂಪಲ್ ಶೃಂಗೇರಿ ಬ್ರಾಹ್ಮಣ್ರು ಅಲ್ಲಿ ಇಲ್ಲಿ ತಿರುಗಾಡಿಕೊಂಡು ಊಟದ ಟೈಮಿಗೆ ಮಠದ ಕಡಿಕೆ ಓಡೋರಂತೆ. ಇದನ್ನ ನನ್ನ ಫ್ರೆಂಡ್ ಲಕ್ಷ್ಮಿನಾರಾಯಣ ಹೇಳಿದ್ದ, ಅವನೂ ಬ್ರಾಹ್ಮಣನೆ. ಆದ್ರಿಂದ ನಮ್ಮ ಭೈರಪ್ಪ ಹೇಳಿರೊ ಮಾತು ಅವ್ರುನ ಜನಾಂಗದ ಭಾಗಕ್ಕೆ ನಿಜ ಸಾರ್."

"ಶೂದ್ರರ ಭಾಗಕ್ಕೆ ಸುಳ್ಳು ಅಂತಿಯಾ?"



"ಹಂಡ್ರೆಡ್ ಪರಸೆಂಟು ಸುಳ್ಳು ಸಾರ್. ಇದೇ ಭೈರಪ್ಪ ಒಂದು ಕಾಲದಲ್ಲಿ ಶೂದ್ರ ಆಗಿದ್ದ. ಅಂದ್ರೆ ಅವ್ರ ಮನಿಯೋರು ಹೋಗಿ ಒಕ್ಕಲಿಗರು, ಕುರುಬರ ಮನೆ ರಾಗಿ, ಉಳ್ಳಿಕಾಳು ತಿಂದ್ರೆ ಬಾಳು. ಇಲ್ಲ ಅಂದ್ರೆ ಉಪಾಸ. ಅಂತದೊಂದು ಸ್ಥಿತಿ ಅವ್ರುನು ಸಂತೆಶಿವರದಲ್ಲಿದ್ದಾಗ ಸೃಷ್ಟೀತಿತ್ತು. ಇದನ್ನ ಅವ್ರುನೇ ಹೇಳ್ಯವ್ರನೆ. ಆಗೇನಾಕ ಸಿದ್ದರಾಮಯ್ಯ ಇದ್ರೆ ಇವ್ರುನಿಗೆ ಅಂಥಾಸ್ಥಿತಿ ಬರತಿರಲಿಲ್ಲ. ಭಿಕ್ಷೆ ಅನ್ನ ತಿಂದೋನು ಬಿಟ್ಟಿ ಅಕ್ಕಿ ಅಂತ ಟೀಕೆ ಮಾಡ್ತನೆ. ಇವ್ರುನಿಗೇನನ್ನಬೇಕು."

"ಭೈರಪ್ಪ ಭಿಕ್ಷಾನ್ನ ತಿಂತಿದ್ರೆ?"

"ಅವ್ರುನ ಜಮೀನು ಕೊಂಡಕಂಡ ನಮ್ಮ ರಿಲೇಶನ್ನು ಅದ್ನೆ ಹೇಳಿದ. ಭೈರಣ್ಣ ಚಂದ್ರಾಪಟ್ನದಲ್ಲಿ ಓದುವಾಗ ವಾರಾನ್ನ ಮಾಡಿದ. ಅದು ಹುಡುಕಿ ಬ್ರಾಹ್ಮಣರ ಮನಿ ಮಾತ್ರ ಹೋಯ್ತಿದ್ದ. ಅಂಗೆ ಈಸಗಂಡು ಬಂದ ಅನ್ನದಲ್ಲಿ ಅವ್ರರಷ್ಟನೂ ಪಾಲು ಕೇಳತಿದ್ದ. ಇದನ್ನ ಅವ್ರುನೇ ಬರದವ್ರನೆ. ಸರಿ, ಈತರ ಬಿಟ್ಟಿ ವಾರಾನ್ನ ಈಸಗಂಡು ಬತ್ತಿದ್ದೋನು ಸೋಮಾರಿಯಾಗಿದ್ನಾ?"

"ಇಲ್ಲ."

"ಮತ್ತೆ ಅನ್ನಭಾಗ್ಯದ ಅಕ್ಕಿ ತಿಂದೋರು ಸೋಮಾರಿಗಳಾಯ್ತರೆ ಅಂತ ಯಂಗೇಳಿದಾ? ಬಿಟ್ಟಿ ಅನ್ನ ತಿಂದ ಶೂದ್ರರು ಮಾತ್ರ ಸೋಮಾರಿಗಳಾಯ್ತರೆ. ಅದೇ ಇವ್ರು ಮತ್ತು ಇವ್ರುನಷ್ಟ ದೇಶಸೇವೆ ಮಾಡ್ತರೆ ಅಲಾ ಸಾರ್?"

"ಸಿದ್ದರಾಮಯ್ಯ ಓಟ್‌ಬ್ಯಾಂಕಿಗೆ ಹಿಂಗೆ ಮಾಡ್ತರೆ ಅಂದವ್ರರೆ."

"ಸಿದ್ದರಾಮಯ್ಯ ಈಗ ಓಟು ತಗಂಡೇನಾಗಬೇಕು ಸಾರ್? ಅವ್ರರವ್ರಧಿ ಅರ್ಧ ಮುಗೀತು. ಬಡುವ್ರರಿಗೇನಾರ ಮಾಡನ ಅಂದ್ರೆ ಏನು ಮಾಡದು. ಪಟ್ಟೆ ತುಂಬ ಊಟ ಹಾಕನ ಅಂತ ಹಳ್ಳಿಮಗನೆ ತರ ಯೋಚನೆ ಮಾಡಿ ಅಕ್ಕಿ ಕೊಟ್ಟ. ಅದು ಗೋಡನ್ನಲ್ಲಿ ಹಾಳಾದ್ರು ಸರಿ, ಆದ್ರೆ ಯಾರಿಗೂ ಕೊಡಬಾರದು ಅನ್ನೊ ಪಟ್ಟೆ ತುಂಬಿದೋರ ಮಾತ ನೆಗ್ಲೆಟ್ ಮಾಡಬ್ಬೇಕು ಸಾರ್."

"ಸಿದ್ದರಾಮಯ್ಯ ಅಕ್ಕಿ ಕೊಟ್ಟು ಸೋಮಾರಿ ಮಾಡಿದ. ಅದೇ ಎಸ್ಸೆಂ ಕೃಷ್ಣ ಸಿಲಿಕಾನ್ ಸಿಟಿ ಮಾಡಿದ ಅಂತರಲ್ಲಾ ಭೈರಪ್ಪಾ?"

"ಭೈರಪ್ಪ ಯಾಕಂಗಂತನೇ ಅಂದ್ರೇ ಯಸ್ಸೆಂ ಕೃಷ್ಣ ಆ ಬಡಕಲು ಮನ್ಸ ಪೇಜಾವರನ್ನ ಮನಿಗೆ ಕರೆದು ಪಾದಪೂಜೆ ಮಾಡಿದ್ದ, ಅದ್ಕೆ ಭೈರಪ್ಪನಂಥೋರಿಗೆ ಎಸ್ಸೆಂ ಕೃಷ್ಣ ಎ.ಒನ್ ಮುಖ್ಯಮಂತ್ರಿ, ಅಷ್ಟೆ ಸಾರ್."

"ಕುಂ. ವೀರಭದ್ರಪ್ಪನೋರು ಭೈರಪ್ಪನ ಮಾತ ಅನುಮೋದಿಸಿದ್ದಾರೆ!?"

"ಈರಭದ್ರಪ್ಪ ಭೈರಪ್ಪ ಬ್ರದರ್ಸ ಸಾರ್."

"ಇಲ್ಲ ಕಂಡ್ರೀ. ಇಬ್ರೂ ಬ್ಯಾರೆ ಜಾತಿ."

"ಬ್ಯಾರೆ ಜಾತಿಯಾದ್ರು ಐಡಿಯಾಲಜಿ ಒಂದೇ ಆದಾಗ ಬ್ರದರ್ಸ್ ಆಯ್ತರೆ ಸಾ. ಈ ಕುಮ್ಮೀರಭದ್ರಪ್ಪ ಅವ್ರುನಲ್ಲಾ, ಅವ್ರುನ ಕತೆ ಓದಕ್ಕೆ ಭಯ ಸಾರ್."

"ಕತೆ ಓದಕ್ಕೆ ಭಯನೆ?"

"ಹೌದು ಸಾರ್. ಅವ್ರುನೆಷ್ಟು ಭಯಾನಕವಾಗಿ ಕತೆ ಬರೀತನೆ ಅಂದ್ರೆ ಬಡವ್ರುರು ಹಸಿವ್ರು ತಡಿಯಕ್ಕಾಗದೆ ಹೊಲದ ಇಲಿಗಳು ಹಿಡಿದು ಸುಟಗಂಡು ತಿಂತರೆ ಸಾರ್. ನಾನೂ ತಿಂದಿದಿನಿ. ಆದ್ರೆ ಇವ್ರುನು ಬರಿಯದ ನೋಡಿ ಆಶ್ಚರ್ಯ ಆಯ್ತು. ಹಸಿವಿಗೆ ಇಲಿ ತಿಂತರೆ ಅಂತ ಬರಿಯೋ ಈ ಮನ್ಸ, ಅದೇ ಬಡವರಿಗೆ ಅಕ್ಕಿ ಕೊಟ್ರೆ ಕರ್ನಾಟಕನೆ ಸರ್ವನಾಶ ಆಯ್ತದೆ ಅಂತನಲ್ಲಾ, ನಿಜವಾಗ್ಲು ಈಡಿಯಟ್ ಸಾರ್ ಇವ್ರುನು."

"ಜ್ಞಾನಪೀಠ ಪಡಿಯೋವಷ್ಟು ಪ್ರಭಾವಿ ಸಾಹಿತಿನ ಈಡಿಯಟ್ ಅನ್ನಬಾರ್ದು ವಾಟಿಸ್ಸೆ."

"ಸಾರಿ ಸಾರ್. ನಾನು ಇವ್ರುನ ಕತೆ ಓದಿ ಅತ್ತಿದ್ದೆ ಸಾರ್. ಏನು ಕತೆ ಗೊತ್ತಾ ಅದು? ದೇವರ ಹೆಣ ಅಂತ. ಒಬ್ಬ ಗೌಡ ಸತ್ತೋಗಿರೊ ಎತ್ತ ಹೂತಿರತನೆ. ತೋಟದಲ್ಲಿ ಕೊಣ್ಣೆ ಅಂತ ಒಬ್ಬ ದಲಿತ ಹೋಗಿ ಹೂತಿರೊ ಎತ್ತು ಕಿತ್ತು ಖಂಡದ ಮಾಂಸನ್ನಲ್ಲಿ ತಂದು ಹೆಂಡತಿ ಮಕ್ಕಳ ಜೊತೆ ಬೇಯಿಸಿಕೊಂಡು ತಿಂದಿರತನೆ ಸಾರ್."

"ಬಹಳ ಹಾರಿಬಲ್ ಕತೆ ಬಿಡಿ."

"ನಿಜವಾಗ್ಲು ನ್ಯಡದಿರೋದಂತೆ ಸಾರ್. ಭೈರಪ್ಪನ ಕಡಿಯೋರು ನಮಿಗೂ ಬಡತನ ಗೊತ್ತು ಕಂಡ್ರೀ ಅಂತ ಅಂದಾಗ, ನಾನು ನಿಮ್ಮ ಬಡತನ ಯಂತಾದ್ದು ಅಂದ್ರೇ ಬರಿ ಅನ್ನಸಾರು. ಇದಕ್ಕೆ ಉಪ್ಪಿನಕಾಯಿ, ಪಲ್ಯ, ಪತ್ರೋಡೆ, ಕೋಸಂಬರಿನೇ ಇಲ್ಲ ಅನ್ನೋ ಬಡತನ. ಅದೇ ನಮ್ಮ ವೀರಭದ್ರಪ್ಪನ ಕಡಿಯೋರು ಹೂತಿರೊ ಎತ್ತನೇ ಕಿತಗಂಡು ಬಂದು ತಿಂದವ್ರರೆ. ಉತ್ತರ ಕೊಡ್ರೀ, ಯಾರದು ಬಡತನ ಅಂತ ವಾದ ಮಾಡಿ ಸೋಲಿಸಿದ್ದೆ ಸಾರ್."

"ಪರವಾಗಿಲ್ಲ ನೀನು ಸುಮಾರಾಗಿ ಓದಿಕಂಡಿದ್ದಿ."


"ಇನ್ನೋದ್‌ಕುಲ್ಲ ಸಾರ್. ಈ ಮುಂದೆ ಮಕ್ಕಳು ಸಾಯಿತಿಗಳು ಬರಿಯದೇ ಒಂದು ಬದುಕೋದೇ ಒಂದು. ಅದರಲ್ಲಿಲ್ಲ ಬರದಂಗೆ ಬದುಕೋನು ನಮ್ಮ ಭೈರಣ್ಣ ಮಾತ್ರ ಸಾರ್."

"ಅಂಗಂತಿಯಾ?"

"ಹೌದು ಸಾರ್. ಅವ್ರುನು ಅವತ್ತಿನ ಕಾಲದ ಧರ್ಮಶ್ರೀ ಅಂತ ಬರದನಲ್ಲ, ಅವತ್ತು ಯಂಗಿದ್ನೊ ಇವತ್ತೂ ಅಂಗೇ ಅವನೆ. ಅಂಗೇ ಮಾತಾಡ್ತನೆ. ಅಂಗೇ ಬದುಕ್ತನೆ. ಬದುರಾಕೋಲು ಬದ್ಲಾಗಲ್ಲ ಸಾರ್. ಬೇಕಾದ್ರೆ ಬಡ್ಡಿಡಿಬವ್ರುದು."

"ಥೂತ್ತೇರಿ!!!" ■

ಲಮೋಗೆ ನಮೋ ಬೆಂಬಲ!



ನಾಲ್ಕು ದಿನಗಳ ಹಿಂದೆ ಲಂಡನ್‌ನ ಸಂಡೇ ಟೈಮ್ಸ್ ಪತ್ರಿಕೆ ಮೋದಿ ಸರಕಾರ ಮತ್ತು ಹಗರಣಗಳ ಸರದಾರರ ನಡುವಿನ ಸಂಬಂಧವನ್ನು ತೋರುವ ಒಂದು ಸ್ಫೋಟಕ ಮಾಹಿತಿಯನ್ನು ಬಿಚ್ಚಿಟ್ಟಿತ್ತು. ಮೋದಿ ಸರ್ಕಾರದಲ್ಲಿ ವಿದೇಶಾಂಗ ಮಂತ್ರಿಯಾಗಿರುವ ಸುಷ್ಮಾ ಸ್ವರಾಜ್ ಭಾರತ ಮೂಲದ ಉದ್ಯಮಿಯೊಬ್ಬನಿಗೆ ವೀಸಾ ಮಂಜೂರು ಮಾಡುವಂತೆ ಇಂಗ್ಲೆಂಡ್‌ನ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಮೇಲೆ ಒತ್ತಡ ಹಾಕಿದ್ದರು. ಆ ಉದ್ಯಮಿ ಮಾಮೂಲಿ ಉದ್ಯಮಿಯಲ್ಲ; ನಾನಾ ಹಗರಣಗಳಲ್ಲಿ ಮುಳುಗಿರುವ ಆತನ ಹೆಸರು ಲಲಿತ್ ಮೋದಿ. 1700 ಕೋಟಿ ಅವ್ಯವಹಾರದ ಕೇಸಿನಲ್ಲಿ ಭಾರತದ ಜಾರಿ ನಿರ್ದೇಶನಾಲಯದ ಅಧಿಕಾರಿಗಳಿಗೆ ಈತ 'ವಾಂಟೆಡ್ ಪರ್ಸನ್'!

ಸುಷ್ಮಾ ಸ್ವರಾಜ್ ಎಂದರೆ ಬಿಜೆಪಿಯಲ್ಲಿ ಅವರದ್ದೇ ಆದ ಚರಿಶ್ಮಾ ಇದೆ. ಹಲವು ವರ್ಷಗಳ ಕಾಲ ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕಿಯಾಗಿದ್ದವರು. ತಮ್ಮ ವಿರೋಧಿಗಳ ತಪ್ಪುಗಳನ್ನು ದೊಡ್ಡಗಂಟಲಿನಲ್ಲಿ ಎಳೆಎಳೆಯಾಗಿ ಬಿಚ್ಚಿಡುವುದರಲ್ಲಿ ಈಕೆ ನಿಸ್ಸೀಮಳು. ಅಷ್ಟೇ ಏಕೆ? ಕಳೆದ ಚುನಾವಣೆಯಲ್ಲಿ ಬಿಜೆಪಿಯ ಪ್ರಧಾನಿ ಅಭ್ಯರ್ಥಿಯಾಗಬಹುದೆಂಬ ಊಹಾಪೋಹಗಳೂ ಇದ್ದವು.

ಇಂಥಾ ಘನತೆ ಗಳಿಸಿದ್ದ ಸುಷ್ಮಾ ಸ್ವರಾಜ್ ಶಿಫಾರಸ್ಸು ಮಾಡಿದ್ದು ಕ್ರಿಮಿನಲ್ ಹಿನ್ನೆಲೆಯಿರುವ, ನಾನಾ ಆರ್ಥಿಕ ಅಪರಾಧಗಳಲ್ಲಿ ತೊಡಗಿರುವ ಅಪ್ಪಟ ಗೋಲ್‌ಮಾಲ್ ವ್ಯಕ್ತಿಗೆ. ಈ ಬಗ್ಗೆ ನಡೆದ ಒಂದಷ್ಟು ಇ-ಮೇಲ್ ಸಂವಾದಗಳು ಈಗ ಜಗಜ್ಜಾಹೀರಾಗಿವೆ. ಹೀಗಾಗಿ ವಿರೋಧ ಪಕ್ಷಗಳಿಂದ ಸುಷ್ಮಾ ರಾಜೀನಾಮೆ ಕೊಡಬೇಕೆಂಬ ಕೂಗು ಎದ್ದಿದೆ. ಹಣಕಾಸು ಸಚಿವ ಅರುಣ್ ಜೈಟ್ಲಿ ರಾಜೀನಾಮೆಯ ಅಗತ್ಯವೇ ಇಲ್ಲ ಎಂದು ಸಮರ್ಥನೆ ಕೊಟ್ಟಿದ್ದಾರೆ. ಲಲಿತ್ ಮೋದಿಯ ಪತ್ನಿಗೆ ಕ್ಯಾನ್ಸರ್ ಆಗಿದ್ದುದರಿಂದ ಅವರಿಗೆ ವೀಸಾ ಪಡೆದುಕೊಳ್ಳುವ ತುರ್ತು ಇತ್ತು; ಇಂಥಾ ಸಂದರ್ಭದಲ್ಲಿ ವಿದೇಶಾಂಗ ಸಚಿವೆ ಮಾನವೀಯ ನೆಲೆಯಲ್ಲಿ ನೆರವು ಒದಗಿಸಿದ್ದಾರೆ ಎಂಬುದು ಅವರುಗಳ ವಿವರಣೆ. ರಾಜನಾಥ್ ಸಿಂಗ್, ಶಿವಸೇನೆಯ ಕೆಲ ನಾಯಕರು, ಸಮಾಜವಾದಿ ಪಕ್ಷದ ಎಂಪಿಗಳು ಹೀಗೆ ಸಾಕಷ್ಟು ಮಂದಿ ಸುಷ್ಮಾ ರಕ್ಷಣೆಗೆ ನಿಂತಿದ್ದಾರೆ. ಆರೆಸ್ಸೆಸ್‌ನ ನಾಯಕರು ಸುಷ್ಮಾ ಪರವಾಗಿ ಬ್ಯಾಟಿಂಗ್‌ಗೆ ಇಳಿದಿದ್ದಾರೆ. ಆದರೆ ಈ ಸುದ್ದಿ ಹೊರಬಿದ್ದಾಗಿನಿಂದ ಮಾನ್ಯ ಪ್ರಧಾನಿ ಮೋದಿಯವರ ನಾಲಗೆ ಮತ್ತು ಗಂಟಲುಗಳು ಸಂಪೂರ್ಣ ನಿತ್ರಾಣವಾಗಿ ಹೋಗಿದ್ದು ಬಾಯಿಂದ ಒಂದು ಮಾತೂ ಹೊರಟಿಲ್ಲ, ಅವರು ಮಾಮೂಲಿಯಂತೆ ತಮ್ಮ 56 ಇಂಚಿನ ಎದೆ ತಟ್ಟಿ, ಟೇಬಲ್ ಕುಟ್ಟಿ ಮಾತಾಡುತ್ತಿಲ್ಲ.

ಹೀಗೇಕೆ? ಇದಕ್ಕೆಲ್ಲ ಬಲವಾದ ಕಾರಣಗಳಿವೆ.

ಈ ನಮೋ ಮತ್ತು ಲಮೋ (ಲಲಿತ್ ಮೋದಿ) ಎಂಬ ಇಬ್ಬರು ಮೋದಿಗಳ ನಡುವಿನ ಸಂಬಂಧ ಇಂದು ನಿನ್ನೆಯದಲ್ಲ, ಅದಕ್ಕೆ ದಶಕಗಳ ಇತಿಹಾಸವಿದೆ. ಆ ಬಗ್ಗೆ ಚರ್ಚಿಸುವ ಮುನ್ನ ಈ ಲಲಿತ್ ಮೋದಿಯ ಪೂರ್ವಾಪರದ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ.

50 ವರ್ಷ ವಯಸ್ಸಿನ ಲಲಿತ್ ಮೋದಿ ಎಂಬ ಪ್ರಭೃತಿ ಉದ್ಯಮಿ ಕೃಷ್ಣಕುಮಾರ್ ಮೋದಿ ಅಲಿಯಾಸ್ ಕೆಕೆ ಮೋದಿ ಎಂಬ ಪ್ರಖ್ಯಾತ ಉದ್ಯಮಿಯ ಮಗ. ಈ ಕೆಕೆ ಮೋದಿ ಭಾರತದ ಉದ್ಯಮಿಗಳ ಸಂಘಟನೆ ಫಿಕ್ಕಿಯ ಮಾಜಿ ಅಧ್ಯಕ್ಷ. ಇವರ ನಾಯಕತ್ವದಲ್ಲಿರುವ ಮೋದಿ ಗ್ರೂಪ್ ಆಫ್ ಕಂಪನೀಸ್ ಸಿಗರೇಟ್, ಡಿಸ್ಟಿಲರಿ, ಸಕ್ಕರೆ, ಪೇಂಟ್ಸ್, ರಬ್ಬರ್ ಇತ್ಯಾದಿ ಉದ್ಯಮಗಳಲ್ಲಿ ತೊಡಗಿಸಿಕೊಂಡಿವೆ.

'ಮೋದಿ ಕೇರ್' ಎಂಬ ಚೈನ್‌ಲಿಂಕ್ ದಂಧೆಯೊಂದು ದೇಶಾದ್ಯಂತ ಲಕ್ಷಾಂತರ ಜನರಿಗೆ ಯಾಮಾರಿಸಿ ಗೋಲ್‌ಮಾಲ್ ದಂಧೆ ನಡೆಸಿದ್ದು ನೆನಪಿದೆಯೆ? ಅದು ಈಗಲೂ ಹೊಸಹೊಸ ಪ್ರದೇಶಗಳಲ್ಲಿ ತನ್ನ ಬೇಟೆಯ ಮಿಕಗಳನ್ನು ಹುಡುಕುತ್ತಲೇ ಇದೆ. ಮಾನ್ಯ ಲಮೋ ಅವರ ಅಪ್ಪ ಕೆಕೆ ಮೋದಿಯವರೇ ಇದರ ರೂವಾರಿ. ದೇಶದಲ್ಲಿ ಬ್ಲೇಡ್ ಕಂಪನಿಗಳಲ್ಲೇ ಅತ್ಯಂತ ವಿಶಿಷ್ಟ ಸ್ಥಾನವನ್ನು ಗಿಟ್ಟಿಸಿಕೊಂಡಿರುವ ಇವರನ್ನು ಬ್ಲೇಡ್ ಪಿತಾಮಹ ಎನ್ನಬಹುದು.

1985ರ ಮಾರ್ಚ್‌ನಲ್ಲಿ ಮೋದಿ ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದ. ವ್ಯಾಸಂಗ ಮಾಡೋದನ್ನು ಬಿಟ್ಟು ಆತ ಮಾಡಿದ್ದೇನು ಗೊತ್ತೆ? ಕೊಕೈನ್ ಎಂಬ ಮಾದಕ ದ್ರವ್ಯ ಕಳ್ಳಸಾಗಣೆ. ತನ್ನ 20ನೇ ವಯಸ್ಸಿನಲ್ಲೇ ಡ್ರಗ್ ಸ್ಮಗ್ಲಿಂಗ್, ಕಿಡ್ನಾಪ್ ಇತ್ಯಾದಿ ಕೇಸುಗಳಲ್ಲಿ ಸಿಕ್ಕಿಕೊಂಡ. ಅದೂ ಅಮೆರಿಕದಲ್ಲಿ, ಈ ವಿಷಯದಲ್ಲಿ ಎರಡು ವರ್ಷಗಳ ಜೈಲುವಾಸ ಅನುಭವಿಸಬೇಕಾಗಿತ್ತು, ಆದರೆ ಪ್ರಭಾವಿ ಉದ್ಯಮಿಯಾಗಿದ್ದ ತಂದೆ ಹೇಗೇಗೋ ಮಾಡಿ ಕ್ಷಮಾದಾನ ಮಾಡಿಸಿ, ಜಾಮೀನು ಕೊಟ್ಟು ಹೊರತಂದರು.

ನಂತರ ಏನೇನೋ ವ್ಯವಹಾರಕ್ಕಿಳಿದ ಈತ ಒಂದೂ ಬರಕತ್ತಾಗಲಿಲ್ಲ. ಈಶಾನ್ಯ ರಾಜ್ಯಗಳಲ್ಲಿ ಅಕ್ರಮ ಲಾಟರಿ ದಂಧೆಯಲ್ಲೂ ಈತನ ಕೈವಾಡವಿತ್ತು. ಅಷ್ಟರಲ್ಲಿ ಲಮೋನ ಅಮ್ಮ ಬೀನಾ ಮೋದಿಯ ಗೆಳತಿ ಮಿನಾಲ್ ಎಂಬ ಶ್ರೀಮಂತ ಮಹಿಳೆಯೊಂದಿಗೆ ಈ ಲಮೋಗೆ ಅಫೇರ್ ಶುರುವಾಯಿತು. ಕೊನೆಗೆ ಇವರಿಬ್ಬರು ಮದುವೆಯಾಗುವುದಾಗಿ ತೀರ್ಮಾನಿಸಿದರು. ಇದಕ್ಕೆ ತಂದೆ ತಾಯಿಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು, ಆದಕ್ಕೆ ಕಾರಣ ಮಿನಾಲ್ ಈತನಿಗಿಂತಲೂ ಹತ್ತು ವರ್ಷ ದೊಡ್ಡವಳು ಎಂಬುದು. ಕೊನೆಗೆ ಭಾರೀ ಹಠ ಮಾಡಿ, ತನ್ನ ತಂದೆಯನ್ನು ಬ್ಲಾಕ್‌ಮೇಲ್ ಮಾಡಿ, ಬೆದರಿಕೆ ಒಡ್ಡಿ ಮದುವೆಗೆ ಒಪ್ಪಿಸುವಲ್ಲಿ ಲಮೋ ಯಶಸ್ವಿಯಾಗಿದ್ದ. ಆ ಮಹಿಳೆಯ ಬಳಿ ಸಾಕಷ್ಟು ಹಣ ಆಸ್ತಿ ಇದ್ದುದರಿಂದ ಇದು ಭಾರೀ ಲಾಭದಾಯಕ ಮದುವೆಯೆಂದು ಇವರ ನಿಕಟವರ್ತಿಗಳು ಆಡಿಕೊಂಡಿದ್ದರು.

ಇದೇ ಸಂದರ್ಭದಲ್ಲಿ ಲಮೋ ಅಪ್ಪನ ಕಂಪನಿಯಲ್ಲಿ ಡೈರೆಕ್ಟರ್ ಆಗಿ ಸ್ಥಾಪಿತನಾದ. ಇಂದಿಗೂ ಈತನೇ 'ಮೋದಿ ಎಂಟರ್‌ಪ್ರೈಸಸ್'ನ ಹಾಲಿ ಮ್ಯಾನೇಜಿಂಗ್ ಡೈರೆಕ್ಟರ್. ಈತನ ತಮ್ಮ ಸಮೀರ್ ಮೋದಿ ಸದ್ಯ ಅದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾನೆ.

ಈ ಲಲಿತ್ ಮೋದಿ ವೀಸಾ ಪ್ರಕರಣದಲ್ಲಿ ಸುಷ್ಮಾ ಸ್ವರಾಜ್ ಮಾತ್ರವಲ್ಲ; ಇಂದಿನ ರಾಜಸ್ಥಾನದ ಸಿಎಂ ವಸುಂಧರ ರಾಜೇ ಅರಸ್ ಹೆಸರು ಕೂಡ ಹೊರಬಂದಿದೆ. 2011ರಲ್ಲಿ ವಸುಂಧರಾ ವಿರೋಧಪಕ್ಷದ ನಾಯಕಿಯಾಗಿದ್ದ ಸಂದರ್ಭದಲ್ಲಿ ಈತನ ವೀಸಾ ದಾಖಲೆಗೆ ಶಿಫಾರಸ್ಸು ಮಾಡಿ ಸಿಕ್ಕಿಬಿದ್ದಿದ್ದಾಳೆ. ತನ್ನ ಶಿಫಾರಸ್ಸು ಪತ್ರದ ತೂಕ ಹೆಚ್ಚಿಸಲಿಕ್ಕಾಗಿ 'ತಾನು ರಾಜಸ್ಥಾನ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕಿಯಾಗಿರುವುದಾಗಿಯೂ, ತಾನು ಗ್ವಾಲಿಯರ್‌ನ ಮಹಾರಾಜ ಜೀವಾಜಿರಾವ್ ಸಿಂಧಿಯಾ ಮತ್ತು ವಿಜಯರಾಜೇ ಸಿಂಧಿಯರ ಮಗಳು ಎಂತಲೂ ವಿವರಣೆಗಳನ್ನು ನೀಡಿದ್ದಾರೆ. ಈ ಲಲಿತ್ ಮೋದಿಗೂ ವಸುಂಧರಾ ರಾಜೇಗೂ ನಡುವೆ ಅಂಥ ನಂಟು ಏನಿದ್ದಿರಬಹುದು?

ಲಲಿತ್ ಮೋದಿ ವಸುಂಧರಾ ಆಪ್ತ ವಲಯ ಸೇರಿ ಸುಮಾರು 15 ವರ್ಷಗಳೇ ಕಳೆದುಹೋಗಿವೆ. ವಸುಂಧರ ರಾಜೇ ಮಗನ ಕಂಪನಿಯಲ್ಲಿ ಈಗಲೂ ಲಲಿತ್ ಮೋದಿಯ ಬಂಡವಾಳವಿದೆ. 2003-08ರ ಅವಧಿಯಲ್ಲಿ ಆಕೆ ಸಿಎಂ ಆಗಿದ್ದಾಗ ಇದೇ ಲಲಿತ್ ಮೋದಿ ರಾಜಸ್ಥಾನದ ಅನಧಿಕೃತ ಸಿಎಂ ಆಗಿ ಮೆರೆದಿದ್ದ. ಸಿಎಂ ಕಚೇರಿಯಲ್ಲಿ ಮೀಟಿಂಗ್‌ಗಳು ನಡೆಯುತ್ತಿದ್ದಾಗ "ನಡುವಿನ ಟೇಬಲ್ ಮೇಲೆ ಕಾಲುಚಾಚಿ ಸಿಎಂ ಎದುರು ಕೂರುತ್ತಿದ್ದ" ಎಂದು ಕೆಲವು ಅಧಿಕಾರಿಗಳು ಆರೋಪಿಸಿದ್ದಾರೆ. ವಸುಂಧರಾ ರಾಜೇಗೂ ಲಲಿತ್ ಮೋದಿಗೂ ನಡುವಿನ ಸಂಬಂಧ ವ್ಯವಹಾರಗಳ ಬಗ್ಗೆ ನಾನಾ ಗುಸುಗುಸುಗಳು ಎದ್ದಿದ್ದವು. "ವಸುಂಧರಾ ಅಧಿಕಾರದಲ್ಲಿಲ್ಲದಿದ್ದ ಅವಧಿಯಲ್ಲಿ ಮೋದಿ ಮತ್ತು ವಸುಂಧರಾ ಇಬ್ಬರೂ ತಿಂಗಳುಗಟ್ಟಲೆ ಇಂಗ್ಲೆಂಡ್‌ನಲ್ಲಿ ನೆಲೆಸುತ್ತಿದ್ದರು. ಅವರಿಬ್ಬರ ನಡುವಿನ ಸಂಬಂಧವನ್ನು ಔಪಚಾರಿಕವಾಗಿ ಬಹಿರಂಗಪಡಿಸಲಿ" ಎಂದು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಲ್ಲೋಟ್ ಬಹಿರಂಗವಾಗಿ ಆಗ್ರಹಿಸಿದ್ದಾರೆಂದರೆ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಿದೆಯೆಂಬುದನ್ನು ನಾವು ಅಂದಾಜಿಸಬಹುದು.

ಹೀಗೆ ಈ ಲಲಿತ್ ಮೋದಿ ಎಂಬ ಆಸಾಮಿಗೆ ಬಿಜೆಪಿಯ ನಾನಾ ನಾಯಕರು, ಅದರಲ್ಲೂ ಮೋದಿಯ ಪಟಾಲಂನಲ್ಲಿರುವ ಅಮಿತ್ ಶಾ, ಅರುಣ್‌ಜೈಟ್ಲಿ ಮುಂತಾದವರೊಂದಿಗೂ ಆತ್ಮೀಯ ನಂಟಿದೆ. ಭಾರತ ಕಂಡ ಭಾರೀ ಭ್ರಷ್ಟ ಹಾಗೂ ಶ್ರೀಮಂತ ರಾಜಕಾರಣಿ ಶರದ್ ಪವಾರ್ ಈತನಿಗೆ ಪರಮಾಪ್ತ. ಇಂಥಾ ರಾಜಕಾರಣಿಗಳ ನಂಟನ್ನು ಬಳಸಿಕೊಂಡು ಈತ ಇಳಿದದ್ದು ಕ್ರಿಕೆಟ್ ಎಂಬ ಭಾರೀ ಲಾಭದಾಯಕ ಉದ್ದಿಮೆಗೆ. ಈತನಿಗಾಗಿಯೇ ಕ್ರಿಕೆಟ್ ಮಂಡಳಿಯ ನಿಯಮಾವಳಿಗಳಿಗೆ ಬದಲಾವಣೆ ತಂದು ಲಲಿತ್ ಮೋದಿಯನ್ನು ರಾಜಸ್ಥಾನ ಕ್ರಿಕೆಟ್ ಮಂಡಳಿಯಲ್ಲಿ ಪ್ರತಿಷ್ಠಾಪಿಸಿದರೆಂಬ ಆರೋಪ ವಸುಂಧರಾ ಮೇಲಿದೆ. ರಾಜಸ್ಥಾನ ಮಾತ್ರವಲ್ಲದೆ, ಪಂಜಾಬ್, ಹರ್‍ಯಾಣ ಮುಂತಾದ ರಾಜ್ಯಗಳ ಕ್ರಿಕೆಟ್ ಮಂಡಳಿಯಲ್ಲೂ ಅಂತಿಮವಾಗಿ ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಉಪಾಧ್ಯಕ್ಷನೂ ಆಗಿ ಮೆರೆದಿದ್ದಾನೆ.

2008ರಲ್ಲಿ ಪ್ರಾರಂಭವಾದ ಐಪಿಎಲ್ ಕ್ರಿಕೆಟ್ ಈತನ ಕನಸಿನ ಕೂಸು. ಐಪಿಎಲ್ ಟಿವಿ ಪ್ರಚಾರದ ಹಕ್ಕು ಮಾರಾಟವೊಂದರಲ್ಲೇ ಸಾವಿರಾರು ಕೋಟಿ ಬಾಚಿಕೊಂಡ. ರಾಜಸ್ಥಾನ್ ರಾಯಲ್ಸ್, ಕೋಲ್ಕತ್ತಾ ನೈಟ್ ರೈಡರ್ಸ್, ಕಿಂಗ್ಸ್ ಇಲೆವನ್ ಪಂಜಾಬ್ ಮುಂತಾದ ತಂಡಗಳಲ್ಲಿ ಈತ ನಾನಾ ವ್ಯಕ್ತಿಗಳ ಮೂಲಕ ಬಂಡವಾಳ ಹೂಡಿದ್ದಾನೆ. ಅದರಲ್ಲಿ ಭಾರೀ ಪ್ರಮಾಣದ ಕಪ್ಪುಹಣ ಚಲಾವಣೆ ನಡೆದಿದೆ. ಅಂದಿನ ಗುಜರಾತ್ ಸಿಎಂ ನರೇಂದ್ರ ಮೋದಿಯ ಬೆಂಬಲದೊಂದಿಗೆ ಅಹಮದಾಬಾದ್‌ನ ತಂಡವನ್ನು ಕಟ್ಟಲು ವಿಫಲ ಪ್ರಯತ್ನ ನಡೆಸಿದ್ದ.

ಒಟ್ಟಾರೆ 3 ವರ್ಷಗಳ ಕಾಲ ಅದ್ದೂರಿಯಾಗಿ ಐಪಿಎಲ್ ನಡೆಸಿದ ನಂತರ ನಾನಾ ಹಗರಣಗಳು ಬಹಿರಂಗವಾಗಿ ಸಿಕ್ಕಿಬಿದ್ದ. ಹುದ್ದೆಯಿಂದ ವಜಾಗೊಂಡಿದ್ದು ಮಾತ್ರವಲ್ಲದೆ, ಈತ ಜೀವಮಾನ ಇರುವವರೆಗೂ ಬಿಸಿಸಿಐ ಕಡೆ ತಲೆಹಾಕದಂತೆ ನಿಷೇಧ ವಿಧಿಸಲಾಗಿದೆ. ಈಗಲೂ ಹತ್ತಾರು ಉದ್ದಿಮೆಗಳಲ್ಲಿ ಪಾಲು ಹೊಂದಿರುವ ಲಲಿತ್ ಮೋದಿ ಫ್ಯಾಷನ್ ಟಿವಿ ಎಂಬ ಚಾನೆಲ್‌ಗೆ ಭಾರತದ ಪ್ರಸಾರದ ಹಕ್ಕು ಪಡೆದುಕೊಂಡಿದ್ದಾನೆ. ಇಎಸ್‌ಪಿಎನ್ ಸ್ಪೋರ್ಟ್ಸ್ ಚಾನೆಲ್‌ನ ಹಕ್ಕನ್ನು ಹತ್ತು ವರ್ಷಗಳಿಗೆ ಗುತ್ತಿಗೆ ಹಿಡಿದಿದ್ದೂ ಉಂಟು.

ಹೀಗಿದ್ದಾಗ 2009ರಲ್ಲಿ ಮುಂಬೈ ಪೊಲೀಸರು ರಷೀದ್ ಮಲಬಾರಿ ಎಂಬ ಅಂಡರ್‌ವರ್ಲ್ಡ್ ಕ್ರಿಮಿನಲ್ ಒಬ್ಬನನ್ನು ಬಂಧಿಸಿದರು. ವಿಚಾರಣೆಯ ವೇಳೆ ಗೊತ್ತಾಗಿದ್ದೇನೆಂದರೆ ಆತ ದಾವೂದ್ ಇಬ್ರಾಹಿಂ ಕಡೆಯವನೆಂದು ಮತ್ತು ಲಲಿತ್ ಮೋದಿ ಮತ್ತು ಕುಟುಂಬವನ್ನು ಮುಗಿಸಲಿಕ್ಕೆಂದೇ ಆತ ನಿಯೋಜಿತನಾಗಿದ್ದನೆಂಬುದು. ಅಂದಿನಿಂದ ಈತ ಜೀವಭಯದ ಕಾರಣ ನೀಡಿ ಇಂಗ್ಲೆಂಡ್‌ನಲ್ಲಿ ಉಳಿದುಕೊಂಡು ತನ್ನ ವ್ಯವಹಾರಗಳನ್ನು ನಡೆಸುತ್ತಿದ್ದಾನೆ.

ಆದರೆ ಕೆಲವರ ಗುಮಾನಿಯೇನೆಂದರೆ ಭಾರತದಲ್ಲಿ ಈತ ಹಲವಾರು ಗೋಲ್‌ಮಾಲ್ ಪ್ರಕರಣಗಳಲ್ಲಿ ಬೇಕಾದ ವ್ಯಕ್ತಿಯಾಗಿರುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದಲೇ ಜೀವಭಯದ ಕತೆ ಸೃಷ್ಟಿಸಿದ್ದಾನೆ ಎಂದು. ಈ ಎರಡೂ ಅಂಶಗಳನ್ನು ನಂಬಲು ನಮಗೆ ಕಾರಣಗಳಿವೆ. ಯಾಕೆಂದರೆ ಈತನಿಗೆ ನಾನಾ ಅಕ್ರಮ ದಂಧೆಗಳೊಂದಿಗೆ ಸಂಬಂಧವುಂಟು ಮತ್ತು ನಾನಾ ಕೇಸುಗಳ ವಿಚಾರಣೆಯೂ ಉಂಟು.

ಭಾರತದಲ್ಲಿ ಈಗ ಅಚ್ಚೆ ದಿನ್ ಬಂದಿರುವುದರಿಂದ ಈತನ ಅದೃಷ್ಟವೂ ಖುಲಾಯಿಸುತ್ತಿದೆ. ಇದು ಇಷ್ಟು ಸುದ್ದಿಯಾಗದೆ ಹೋಗಿದ್ದರೆ ಹಂತಹಂತವಾಗಿ ಈತನ ಮೇಲಿನ ತನಿಖೆಗಳನ್ನು ಹಳ್ಳಹಿಡಿಸಿ, ಈತನನ್ನು ರಾಜ ಮರ್‍ಯಾದೆ ಯೊಂದಿಗೆ ಬರಮಾಡಿಕೊಳ್ಳುತ್ತಿದ್ದರು ಎಂದು ಕಾಣುತ್ತದೆ. ಹೇಗೂ ಅಚ್ಚೆ ದಿನ್‌ಗಳು ಬಂದಿರುವು ದರಿಂದ ಹೇಳೋರು ಇಲ್ಲ; ಕೇಳೋರು ಇಲ್ಲ.

ಈ ಪ್ರಕರಣ ಹೊರಬಿದ್ದಿರುವುದೇ ಬಿಜೆಪಿಯೊಳಗಿನ ಒಳಜಗಳಗಳಿಂದ ಎನ್ನುವ ವಾದಗಳೂ ಕೇಳಿಬರುತ್ತಿವೆ. ಒಳಜಗಳಗಳೇನೇ ಇರಬಹುದು. ಆದರೆ ಲಲಿತ್ ಮೋದಿಯೆಂಬ ವ್ಯಕ್ತಿ ಮಹಾ ಖದೀಮನೆಂಬುದೂ, ಆತನನ್ನು ರಕ್ಷಿಸಲು ದೇಶಭಕ್ತ ಪಕ್ಷದ ಮಹಾನ್ ನಾಯಕರು ಸಾಲುಗಟ್ಟಿ ನಿಂತಿದ್ದಾರೆಂಬುದಂತೂ ಸೂರ್ಯನಷ್ಟೇ ಸತ್ಯ.

ಮೋದಿಯ ಬಾಯಿಗೆ ಬೀಗ ಬಿದ್ದಿರುವುದು ಇಲ್ಲಿ ಕುತೂಹಲಕರ ಸಂಗತಿ. ಆಕಾಶವಾಣಿ, ದೂರದರ್ಶನಗಳಲ್ಲಿ ಮೋದಿ ಈಗ ತಮ್ಮ 'ಮನದಾಳದ ಮಾತು'ಗಳನ್ನಾಡಲಿ. ತಮಗೂ ಈ ಹಗರಣಗಳ ಸರದಾರ ಲಲಿತ್ ಮೋದಿಗೂ ನಡುವಿನ ಸಂಬಂಧ ಎಂಥದ್ದು? ದಶಕಗಳ ಕಾಲ ಇಂಥವರ ಬಾಂಧವ್ಯದಿಂದ ಈ ದೇಶಕ್ಕೆ ಏನೇನು ಉಪಕಾರವಾಗಿದೆ ಎಂಬ ಎಲ್ಲ ವಿವರಗಳನ್ನೂ ಬಿಚ್ಚಿಡಲಿ. ಅಂಥಾ 56 ಇಂಚಿನ ಎದೆಗಾರಿಕೆಯನ್ನು ಮತ್ತು ಟೀ ಮಾರುವವನ ಪ್ರಾಮಾಣಿಕತೆಯನ್ನು ನಾವು ನಿರೀಕ್ಷಿಸಬಹುದೆ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ










ನಮ್ಮ ಚಿತ್ರರಂಗದ ಹೊಸ ಹೀರೋಗಳು

ನಾನೊಂದು ಕಾಲೇಜಿಗೆ ಭಾಷಣಕ್ಕೆ ಹೋಗಿದ್ದೆ. ಕಾಲೇಜಿನ ಸಮಾರಂಭದಲ್ಲಿ ಮಾತನಾಡಲಿರುವ ಅತಿಥಿಗಳನ್ನು ಪರಿಚಯಿಸುತ್ತಿದ್ದ ಮೈಕು " 'ಅವ್ವ' ಚಿತ್ರನಟ ಬಿ. ಚಂದ್ರೇಗೌಡರು ಆಗಮಿಸಿದ್ದಾರೆ" ಎಂದು ಕೂಗುತ್ತಿತ್ತು. ನನಗೆ ಮುಜುಗರವಾಗಿ "ಇದ್ಯಾರ್ರಿ ಈ ತರ ಅನೌನ್ಸ್ ಮಾಡ್ತ ಅವ್ರೆ" ಎಂದೆ. "ಹುಡುಗರು ಬರ್ಲಿ ಅಂತ ಅಂಗಂತರೆ ಬಿಡ್ರಿ ಹೋಗಲತ್ತಗೆ" ಎಂದು ಗೆಳೆಯ ಸಂತೋಷ್ ನಕ್ಕ. ಆದರೆ ನಾನು ಈ ಅಪಹಾಸ್ಯವನ್ನು ಗಂಭೀರವಾಗಿ ಯೋಚಿಸತೊಡಗಿದೆ.







ಕಳೆದ 34 ವರ್ಷದಿಂದ ಲಂಕೇಶ್‌ಗೆ ಬರೆಯುತ್ತ ಕತೆ, ಕಾದಂಬರಿ ಮತ್ತು ನಾಟಕ ಬರೆದು, ಇಪ್ಪತ್ತು ವರ್ಷ 'ಕಟ್ಟೆ ಪುರಾಣ' ಬರೆದದ್ದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಕೆಲವು ಸೆಕೆಂಡು 'ಅವ್ವ' ಚಿತ್ರದಲ್ಲಿ ಬಂದುಹೋದದನ್ನೇ ಗುರುತಿಸಿ "'ಅವ್ವ' ಚಿತ್ರನಟನ ಆಗಮನ" ಎಂದು ಕೂಗಬೇಕಾದರೆ ನಮ್ಮ ಜನಕ್ಕೆ ಏನೋ ಆಗಿದೆ ಅನ್ನಿಸಿತು.

ಇದುವರೆಗೆ ಕವಿತಾ ಲಂಕೇಶ್ ನಿರ್ದೇಶನದ 'ಅವ್ವ' ಚಿತ್ರ ನೋಡಿದ ಯಾರೂ ಕೂಡ ಬಂದು ನನ್ನನ್ನ ಕೇಳಿಲ್ಲ, ಹಾಗೆ ಗುರುತಿಸಿಯೂ ಇಲ್ಲ. ಕಾದಂಬರಿಯಲ್ಲಿ ಬರುವ ಬಹುಮುಖ್ಯ ವಾಕ್ಯವೊಂದಕ್ಕೆ ನ್ಯಾಯ ಒದಗಿಸಲು ಬಂದ ಪಾತ್ರ ಅದು. ಅಂತಹ ಪಾತ್ರ ಪರದೆ ಮೇಲೆ ಬರದಿದ್ದರೆ ಯಾವ ಅನಾಹುತವೂ ಆಗುತ್ತಿರಲಿಲ್ಲ. ಅದರಿಂದಲೋ ಏನೋ ಜನ ಇವನ್ಯಾರು, ಯಾಕೆ ಬಂದ ಅನ್ನವಷ್ಟರಲ್ಲಿ ಪಾತ್ರ ಹೋಗಿತ್ತು. ಥಿಯೇಟರಿಗೆ ಬಂದ ಜನಗಳೂ ಹಾಗೇ ಮರೆತಿದ್ದರು. ಆದರೆ ಕಾಲೇಜಿನ ಭಾಷಣಕ್ಕೆ ಬಂದಾಗ ನಾನೊಬ್ಬ ಮಹಾ ಜನಪ್ರಿಯ ವ್ಯಕ್ತಿ ಕಲಾವಿದ ಎಂದು ಕೂಗಿ ಜನರನ್ನು ಕರೆಯಲು 'ಅವ್ವ' ಚಿತ್ರನಟ ಎಂದು ಆಗಾಗ್ಗೆ ಕೂಗಿದ್ದರಿಂದ ಚಿತ್ರರಂಗ ಮತ್ತು ನನ್ನನ್ನೇ ನಾನು ಹಾಸ್ಯ ಮಾಡಿಕೊಳ್ಳದೆ ಬೇರೆ ವಿಧಿಯೇ ಇರಲಿಲ್ಲ.


ನಿಮ್ಮ ಯಾವುದೇ ಸಾಧನೆಯನ್ನು ಬದಿಗಿಟ್ಟು ಚಿತ್ರವೊಂದರಲ್ಲಿ ಮುಖ ತೋರಿದ್ದನ್ನೇ ಮಹಾ ಘಟನೆಯಾಗಿ ಪರಿಗಣಿಸಿ, ಅದನ್ನೇ ಹೇಳಬೇಕಾದರೆ ಇದೊಂದು ಅಸಾಮಾನ್ಯ ಕ್ಷೇತ್ರವೇ ಇರಬೇಕು ಅನ್ನಿಸಿತು. ಒಮ್ಮೆ ಮಂತ್ರಿಯಾಗಿದ್ದ ಚಲುವರಾಯಸ್ವಾಮಿಯನ್ನ ಊರಿಗೆ ಕರೆಯಲು ಬಂದಿದ್ದ ಜನ "ನಿನ್ನ ಜೊತೆ ಯಾರ್ನಾರ ಸಿನುಮ ಆಗುಟ್ರು ಕರಕಂಬಾರಣ್ಣ" ಎಂದು ದುಂಬಾಲು ಬಿದ್ದರು. "ಆಯ್ತು ಹೋಗರ್ಲ" ಎಂದು ಅವರನ್ನು ಸಮಾಧಾನಿಸಿ ಕಳುಹಿಸಿದ. ಅಷ್ಟು ದೂರ ಹೋದವರಲ್ಲೊಬ್ಬ "ಮತ್ತೆ ಅಂಗೆ ಬಂದಿಯ ಕಣಣ್ಣ, ಕುರಿನೊ ಕೋಳಿನೊ ಯಂತೆದ್ನೊ ಹಿಡಕಂಡೆ ಬರಬೇಕು. ನೀನೊಬ್ಬನೆ ಬರಬ್ಯಾಡ" ಎಂದು ಕೂಗಿದ.

ಸೈಡ್ ಆಕ್ಟರುಗಳನ್ನು ಕುರಿ ಕೋಳಿಗೆ ಹೋಲಿಸಿ ಅವ್ರು ಬಂದರೆ ಮಾತ್ರ ಊರ ಸಮಾರಂಭ ಕಳೆಗಟ್ಟುತ್ತದೆಂದು ಭಾವಿಸಿದ್ದ ಜನರ ಖುಷಿಗಾಗಿ ಕಾಸು ಕೊಟ್ಟು, ಸೈಡಾಕ್ಟರುಗಳನ್ನ ಕರೆತರುತ್ತಿದ್ದರು. ಶಿವರಾಮೇಗೌಡನೂ ಹಲವಾರು ಬಾರಿ ಅಂಬರೀಶ್‌ರನ್ನು ಕರೆತರುತ್ತಿದ್ದರು. ಇದು ಆತ ಎರಡು ಬಾರಿ ಗೆಲ್ಲಲು ಸಹಾಯ ಮಾಡಿತ್ತು. ಒಮ್ಮೆ ಚಲುವಣ್ಣನೂ ಅಂಬರೀಶ್ ಬಳಿ ಗೋಗರೆದು ತಾಲ್ಲೂಕಿಗೆ ಕರೆತಂದರು. ಆಗ ಅಭಿಮಾನಿಗಳು ಶಿವರಾಮನ ಕಡೆಯಿಂದ ಚಲುವರಾಯಸ್ವಾಮಿ ಕಡೆ ವಾಲಿದ್ದರಿಂದ ಚಲುವಣ್ಣ ಗೆದ್ದ. ಮುಂದೆ ಎಂ.ಪಿ. ಚುನಾವಣೆಯಲ್ಲಿ ಚಲುವಣ್ಣನ ಎದುರು ಅಂಬಿಯೇ ಸೋತುಹೋದರು. ಅಷ್ಟರಲ್ಲಾಗಲೇ ಅಂಬಿಯ ಹೀರೊ ಚಾರ್ಮ್ ಮುಗಿದುಹೋಗಿತ್ತು. ಅಂಬಿ ಎಂಪಿಯಾಗಿ ದೆಹಲಿಯ ಸಂಸತ್ ಭವನದ ಕಾರಿಡಾರಿನಲ್ಲಿ ಹೋಗುತ್ತಿರಬೇಕಾದರೆ, ಉತ್ತರ ಭಾರತದವರು ಕರ್ನಾಟಕದ ಹೀರೊ ನೋಡಿ ನಮ್ಮ ಅಭಿರುಚಿ ಬಗ್ಗೆ ನಗುತ್ತಿದ್ದರಂತೆ. ಹೀರೊ ಅಂದರೆ ರಾಜೇಶ್ ಖನ್ನಾ, ಧರ್ಮೇಂದ್ರ, ಅಮಿತಾಬಚ್ಚನ್ ಇಂತವರೇ ಕಣ್ಮುಂದೆ ಬರುತ್ತಿದ್ದರಿಂದ ಅಂಬಿ ನೋಡಿ ನಕ್ಕಿರಬಹುದು. ಆದರೆ ಆಕಾರಕ್ಕಿಂತ ನಮ್ಮ ಅಂಬಿ ಹೃದಯ [illegible] ಗೊತ್ತು.

ಆ ಸಮಯದಲ್ಲಿ ನಮ್ಮ ಕನ್ನಡ ಚಿತ್ರರಂಗ ಹಾಗೇ ಇತ್ತು. ಫುಟ್‌ಪಾತಿನಲ್ಲಿ ಚಪ್ಪಲಿ ಲುಂಗಿ ಮಾರುವವನಂತಿದ್ದ ಕಾಶೀನಾಥ್ 'ಅನುಭವ'ದ ಮೂಲಕ ಹೀರೊ ಆಗಿದ್ದರು. ಸೈಕಲ್‌ಶಾಪ್ ಓನರ್ ತರ ಇದ್ದ ಸಾ.ರಾ ಗೋವಿಂದೂ ಕೂಡ ಹೀರೊ. ರಾಕ್‌ಲೈನ್ ವೆಂಕಟೇಶ್, ಒಂದಿಷ್ಟು ನನ್ನಂತೆ ಕಾಣುವ ಓಂಪ್ರಕಾಶ್, ಥ್ರಿಲ್ಲರ್ ಮಂಜು, ಕೆ. ಶಿವರಾಂ, ರಘುವೀರ್- ಇವರೆಲ್ಲಾ ಹೀರೊಗಳಾಗಿ ಮೆರೆಯುತ್ತಿರಬೇಕಾದರೆ ಕನ್ನಡ ಸಿನಿಮಾ ಥಿಯೇಟರುಗಳಿಂದ ಕಲಾಭಿರುಚಿ ಹೊಂದಿದ್ದ ಜನ ಹೊರಟುಹೋದರು. ಅವರನ್ನು ಕರೆತರಲು ಈ ಕ್ಷಣದವರೆಗೂ ಸಾಧ್ಯವಾಗಿಲ್ಲ.

ಸಾಮಾನ್ಯವಾಗಿ ಸಿನಿಮಾ ನೋಡುವವರು ಯಾವುದೋ ಹಂತದಲ್ಲಿ ಬಿಟ್ಟುಬಿಡುತ್ತಾರೆ. ಅಣ್ಣನವರ ನಿರ್ಗಮನದ ನಂತರ ಭಾರಿ ಜನಸ್ತೋಮವೇ ಸಿನಿಮಾ ಥಿಯೇಟರ್ ಕಡೆ ಬೆನ್ನು ಹಾಕಿರುವ ಘಟನೆ ನಮ್ಮ ಮುಂದಿದೆ.

ತಮ್ಮ ಮನೆಯಲ್ಲಿ ಹಣವಿರುವುದರಿಂದ ತಮ್ಮ ಮಗನೆ ಹೀರೊ ಪಾತ್ರ ಮಾಡುತ್ತಾನೆಂಬ ಟ್ರೆಂಡ್ ಬಂದಾಗಲೂ ಜನ ಥಿಯೇಟರಿನಿಂದ ಹೋದರು. ಇಂತಹದೊಂದು ಅನಾಹುತಕಾರಿ ಬೆಳವಣಿಗೆ ಹಿಂದೆಯೇ ಬಂದಿದ್ದರೆ ಎಚ್.ಎಲ್.ಎನ್. ಸಿಂಹ ಡಾ. ರಾಜ್ ಬದಲು ತಮ್ಮ ಕುಟುಂಬದಲ್ಲೇ ಎಂತಹವನನ್ನೋ ಹುಡುಕಿ 'ಬೇಡರ



ಕಣ್ಣಪ್ಪ' ಮಾಡಿಸುತ್ತಿದ್ದರಲ್ಲವೆ. ಹಾಗೆಯೇ ಉದಯ ಕುಮಾರ್, ರಾಜೇಶ್ ಇವರೆಲ್ಲಾ ಸೂಕ್ತ ಪಾತ್ರಕ್ಕೆ ಹೀರೊ ಶೋಧನೆಯಿಂದ ಪತ್ತೆಯಾದ ಕಲಾವಿದರು.

ಆದರೀಗ ಹೀರೊ ಪಾತ್ರಕ್ಕೆ ಯಾರೂ ಯಾವ ಕಲಾವಿದನನ್ನೂ ಹುಡುಕುವ ಗೋಜಿಗೆ ಹೋಗದೆ ತಮ್ಮ ತಮ್ಮ ಹುಡುಗರನ್ನೇ ತಂದು ನೂಕುತ್ತಿದ್ದಾರೆ. ಇದಕ್ಕಿಂತ ಇನ್ನೂ ಅಪಾಯಕಾರಿ ಬೆಳವಣಿಗೆ ಯಾವುದೆಂದರೆ, ನಮ್ಮ ನಟೋರಿಯಸ್ ರಾಜಕಾರಣಿಗಳು ತಮ್ಮ ಮಕ್ಕಳನ್ನೇ ಅಪೂರ್ವ ಕಲಾನಿಧಿಗಳೆಂಬಂತೆ ಬೆಳ್ಳಿತೆರೆಗೆ ದಬ್ಬಲು ಹೊರಟಿರುವುದು. ಒಂದೇ ವಾರದಲ್ಲಿ ನಮಗೆ ಮೂವರು ಹೀರೊಗಳು ಅನಾಯಾಸವಾಗಿ ಸಿಕ್ಕಿದ್ದಾರೆ. ಇವರ‍್ಯಾಕೆ ತಮ್ಮ ಮಕ್ಕಳನ್ನ ಹೀರೋ ಮಾಡಿದ್ದಾರೆಂದರೆ, ಒಂದೆರಡು ಚಿತ್ರಗಳ ನಂತರ ರಾಜಕಾರಣಕ್ಕೆ ಬಂದು ಅಪ್ಪನ ಕ್ಷೇತ್ರಗಳನ್ನು ಆಕ್ರಮಿಸಿಕೊಳ್ಳಲಿದ್ದಾರೆ ಅಷ್ಟೆ.

ರಾಜಕಾರಣಿಯಾಗಬೇಕಾದರೆ ಆತ ಪ್ರತಿನಿಧಿಸುವ ಕ್ಷೇತ್ರದಲ್ಲಿ ಓಡಾಡಿ, ಮದುವೆ, ತಿಥಿ, ಸೋಬನ ಮತ್ತು ಗಣಪತಿ ಫಂಕ್ಷನ್‌ಗಳಿಗಾಗಿ ಅಲೆಯಬೇಕು. ಕಾಸು ಕೊಡಬೇಕು. ತಾಲ್ಲೂಕಾಫೀಸಿನ ಹತ್ತಿರ ಕಾಣಿಸಿಕೊಂಡು ಜನಗಳ ಕಷ್ಟ ಸುಖ ವಿಚಾರಿಸಿ, ಪೊಲೀಸ್ ಠಾಣೆಗೆ ಹೋಗಿ ಅಪರಾಧಿ, ನಿರಪರಾಧಿಗಳನ್ನೆಲ್ಲಾ ಬಿಡಿಸಿಕೊಳ್ಳಬೇಕು. ಇದು ತುಂಬ ಶ್ರಮದಾಯಕವಾದ ಮತ್ತು ದುಬಾರಿ

ಕೆಲಸ. ಅದರಬದಲು ಚಿತ್ರನಟನಾದರೆ ಅನಾಯಾಸವಾಗಿ ಜನಪ್ರಿಯತೆ ಬಂದುಬಿಡುತ್ತದೆ. ಜನ ಹುಚ್ಚೆದ್ದು ಕುಣಿದು ಓಟು ಮಾಡುತ್ತವೆ.

ಈ ಟ್ರೆಂಡ್ ಆರಂಭಿಸಿದವರು ಬಂಗಾರಪ್ಪ, ಅವರು ತಮ್ಮ ಮಗನನ್ನ ರಾಜಕಾರಣಕ್ಕೆ ತರುವ ಮುನ್ನ ಒಂದೆರಡು ಸಿನಿಮಾದ ಹೀರೋ ಮಾಡಿದರು. ಆ ನಂತರ ಕ್ಷೇತ್ರಕ್ಕೆ ಬಂದ ಕುಮಾರ್ ಬಂಗಾರಪ್ಪನನ್ನು ನೋಡಲು ಜನ ಬೀಳುವುದನ್ನು ಲೆಕ್ಕಿಸದೆ ಓಡುತ್ತಿದ್ದರು. ಕುಮಾರ್ ಶಾಸಕ ಆಗಿ ಮಂತ್ರಿಯೂ ಆಗಿ ತಂದೆ ವಿರುದ್ಧ ತಿರುಗಿಬಿದ್ದ ಮೇಲೆ ಎರಡನೇ ಮಗನನ್ನೂ ರಾಜಕಾರಣಕ್ಕೆ ತಂದರು. ಆದರೆ ಎಷ್ಟು ಬಾಲ ಮುರಿದರೂ ಆತನಿಂದ ರಾಜಕಾರಣ ಮಾಡಲಾಗುತ್ತಿರಲಿಲ್ಲ. ಕಡೆಗೆ ಅವನನ್ನೂ ಒಂದು ಚಿತ್ರದ ಹೀರೊ ಮಾಡಿಹೋದರು.

ಆನಂತರ ಒಬ್ಬ ಕೆಎಎಸ್ ಅಧಿಕಾರಿಗೂ ಮುಂದೆ ರಾಜಕಾರಣಕ್ಕೆ ಬರಬೇಕಾದರೆ, ಸಿನಿಮಾ ಗೇಟಿನಿಂದಲೇ ಹೋಗುವುದು ಒಳ್ಳೆಯದೆನ್ನಿಸಿತು. ಆತ ಅಧಿಕಾರಿಯಾಗಿ ಇಲಾಖೆಯಲ್ಲಿ ಹೊಡೆದ ದುಡ್ಡಿನಲ್ಲಿ 'ಬಾನಲ್ಲೇ ಮಧುಚಂದ್ರಕ್ಕೆ' ಆರಂಭಿಸಿಯೇ ಬಿಟ್ಟ. ಆತನ ಮುಸುಡಿ ಹೀರೊಗೆ ಸೆಟ್ಟಾಗುವುದಿಲ್ಲವೆಂದು ಗ್ರಹಿಸಿದ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ ಸೈಡಲ್ಲಿ ಪ್ರಕಾಶ್ ರೈಗೂ ಒಂದು ರೋಲು ಕೊಟ್ಟು ನಿಭಾಯಿಸಿದ. ಮುಂದೆ ಶಿವರಾಂ ಕೂಡ ರಾಜಕಾರಣಕ್ಕೆ ಬಂದರು. ಹಾಗೆಯೇ ನೋಡಿದ ಕೂಡಲೇ ದಫೇದಾರನಂತೆ ಕಾಣುವ ಬಿ.ಸಿ. ಪಾಟೀಲ್ ಕೂಡ ಮನೆ ದುಡ್ಡು ತಂದು ಅಥವ ಕೂಡಿಟ್ಟ ಲಂಚದ ಹಣದಿಂದ ಹೀರೊ ಆಗಿ, ವೈರಿಗಳನ್ನ ಚಚ್ಚಿ ಜೈಲಿಗಾಕಿ, ರಾಜಕಾರಣಕ್ಕೆ ಬಂದು ಎಮ್ಮೆಲ್ಲೆ ಆದರು.

ಚನ್ನಪಟ್ಟಣದ ಯೋಗೇಶ್ವರ್‌ಗೂ ರಾಜಕಾರಣಕ್ಕೆ ಹೋಗಬೇಕಾದರೆ ಸಿನಿಮಾ ರೂಟೇ ಸರಿ ಎನ್ನಿಸಿತು. ಲೇಔಟ್ ಮಾಡಿ ಸೈಟು ಮಾಡಿದ ದುಡ್ಡಿನಲ್ಲಿ ಆದ್ದೂರಿ ಸಿನಿಮಾ ತೆಗೆದರು. ಅವರಲ್ಲಿದ್ದ ಸೈಟು ಆರು ಸಾವಿರ. ಆದರೆ ಸಂಗ್ರಹಿಸಿದ್ದು ಹನ್ನೆರಡು ಸಾವಿರ ಸೈಟಿನ ಹಣ. ಸೈಟನ್ನೂ ಕೊಡಲಾಗದೆ, ವಾಪಸು ಹಣವನ್ನೂ ಕೊಡಲಾಗದೆ, ಬಿಜೆಪಿಗೆ ಹೋಗಿ ರಕ್ಷಣೆ ಪಡೆದು, ನಂತರ ಕಾಂಗ್ರೆಸ್‌ಗೆ ಬಂದು ಹೇಗೊ ಬಚಾವಾಗಿದ್ದಾರೆ. ಹೀರೊ ಆದ ಕಾರಣಕ್ಕೆ ಮೊದಲ ಚುನಾವಣೆಯಲ್ಲೇ ಗೆದ್ದಿದ್ದರು.

ಇವೆಲ್ಲಾ ಇತಿಹಾಸವನ್ನು ಗ್ರಹಿಸಿರುವ ನಮ್ಮ ಮೇಧಾವಿ ರಾಜಕಾರಣಿಗಳು, ದಿಢೀರನೆ ಒಂದೇ ವಾರಕ್ಕೆ ಮೂರು ಹೀರೋಗಳನ್ನು ಬೆಳ್ಳಿತೆರೆಗೆ ದಬ್ಬಿದ್ದಾರೆ. ಚಲುವರಾಯಸ್ವಾಮಿ ಮಗನ 'ಹ್ಯಾಪಿ ಬರ್ತ್‌ಡೆ' ಸೆಟ್ಟೇರಿದೆ. ಮುಖ ಮುಸುಡಿ ತುಂಬ ವಿಪರೀತ ಕೂದಲು ಬೆಳೆಸಿಕೊಂಡಿರುವ ಈ ಹುಡುಗ ಅಗಲವಾದ ಕೂಲಿಂಗ್ಲಾಸ್ ಹಾಕಿಕೊಂಡಿರುವ ಫ್ಲೆಕ್ಸ್‌ಗಳು ಬೆಂಗಳೂರಿನಿಂದ ಮೈಸೂರವರೆಗೂ ರಾರಾಜಿಸುತ್ತಿವೆ. 'ಹ್ಯಾಪಿ ಬರ್ತ್‌ಡೆ' ಹೆಸರಿನ ಕೆಳಗೆ, "ಮಗ್ಗೆ ಐತೆ ನಿಂಗೆ" ಎಂಬ ಎಚ್ಚರಿಕೆ ಮಾತೂ ಇದೆ. ಈ ಬೆದರಿಕೆ ಸುಮ್ಮಸುಮ್ಮನೆ ಹಾಕಿಲ್ಲ, ಅವರ ದೊಡ್ಡಪ್ಪ ಮತ್ತು ಅಪ್ಪ ತಮ್ಮ ರಾಜಕೀಯ ವೈರಿಗಳಿಗೆ ಹಾಕುವ ಧಮಕಿ ಇದೇ ರೀತಿಯದ್ದು, ಇದಕ್ಕಿಂತ ಮಕ್ಳೆ "ಐತೆ ನಿಮಗೆ" ಅಂತ ನಮಗೆ ಹೇಳಬಹುದಿತ್ತು, ಬಹುಶಃ ವಿಕಮಚನದಲ್ಲಿ ನಮಗೆ ಈ ಎಚ್ಚರಿಕೆ ಇರಬಹುದು!

ಇನ್ನ ಹೆಚ್.ಎಂ. ರೇವಣ್ಣನ ಮಗ ಮೊರದಿ ಉದ್ದದ ಲಾಂಗ್ ತೆಗೆದುಕೊಂಡು ರೋಷದಿಂದ ಬರುತ್ತಿರುವ ಚಿತ್ರ ನೋಡಿದರೆ ಗುಂಡಿಗೆ ಅದುರುತ್ತದೆ. ಇದೀಗ ತಾನೆ ಮಾರಿಹಬ್ಬದಲ್ಲಿ ಕೋಣನನ್ನು ಕಡಿದು ಬಂದವನಂತೆ ಕಾಣುವ ಈತನೂ ಕಲಾವಿದನಾಗುವ ಬದಲು ಅಪ್ಪನ ರಾಜಕಾರಣದ ಉತ್ತರಾಧಿಕಾರಿಯಾಗಬಹುದೆಂದೇ ಹೇಳಬಹುದು. ಇವರೆಲ್ಲಾ ಅಕಸ್ಮಾತ್ ಅದ್ಭುತ ಕಲಾವಿದರಾದರೆ ಸಂತೋಷ. ಆದರೆ ಅಂತಹ ಯಾವ ಸೂಚನೆಗಳೂ ಕಾಣುತ್ತಿಲ್ಲ.

ಕುಮಾರಸ್ವಾಮಿಯವರೂ ತಮ್ಮ ಪುತ್ರ ನಿಖಿಲ್ ಗೌಡನನ್ನು 'ಜಾಗ್ವಾರ್' ಮುಖಾಂತರ ರಾಜಕಾರಣದ ಅಖಾಡಕ್ಕಿಳಿಸಿದ್ದಾರೆ. ಮೊನ್ನೆ ತಾನೆ ಒಂದು ಜಾಗ್ವಾರ್ ನೆಲಕ್ಕಪ್ಪಳಿಸಿ ಪೈಲೆಟ್ ಪ್ರಾಣಾಪಾಯದಿಂದ ಪಾರಾಗಿದ್ದಾನೆ ಎಂಬ ಸುದ್ದಿ ಬಂದಿದೆ. ಖಂಡಿತ ಕುಮಾರಣ್ಣನವರು 'ಜಾಗ್ವಾರ್' ಪತನದಿಂದ ಪಾರಾಗುತ್ತಾರೆ. ಏಕೆಂದರೆ ಅವರು ಸುರಿಯುವ ಹಣ ಅವರ ಬೆವರಿನಿಂದ ಬಂದದ್ದಲ್ಲ.

ತಮ್ಮ ಮಕ್ಕಳನ್ನು ಹೀರೋ ಮಾಡಿ ಕೋಟಿಗಟ್ಟಲೆ ಹಣ ಸುರಿಯುತ್ತಿರುವ ಈ ರಾಜಕಾರಣಿಗಳು ಕೇವಲ ಎರಡು ದಶಕದ ಹಿಂದೆ ಹಣಕ್ಕಾಗಿ ಪರದಾಡುತ್ತಿದ್ದ ಸಾಮಾನ್ಯರಲ್ಲಿ ಸಾಮಾನ್ಯ ಜನ. ಅದರಲ್ಲೂ ಚಲುವರಾಯಸ್ವಾಮಿ ತುಂಬ ಬಡತನದಿಂದಲೇ ಬಂದವರು. ರೇವಣ್ಣನೂ ಅಷ್ಟೇ. ಆದರೆ ಕುಮಾರಣ್ಣನ ಸಾಧನೆ ಅವರ ಅಪ್ಪನಿಗೆ ಸಲ್ಲುತ್ತೆ.

ನನ್ನ ಗೆಳೆಯನೊಬ್ಬನ ಪೆಟ್ರೋಲ್ ಬಂಕ್ ಬಳಿ ಬಂದುಕೂತಿದ್ದು ಊಟದ ಟೈಮಿಗೆ ಮನೆಗೆ ಎದ್ದು ಹೋಗುತ್ತಿದ್ದ ಕುಮಾರಣ್ಣನನ್ನ ಆಗ ನೋಡಿದ ನಾವ್ಯಾರು ಈತ ಎಂ.ಪಿ, ಮುಖ್ಯಮಂತ್ರಿಯಾಗುತ್ತಾನೆಂದು ತಮಾಷೆಯ ಮಾತಿನಲ್ಲೂ ಹೇಳಲಾಗುತ್ತಿರಲಿಲ್ಲ, ಅದೆಲ್ಲಾ ಹಳೆಯ ಕತೆ. ಆದರೀಗ ಇವರೆಲ್ಲ ತಮ್ಮ ಉತ್ತರಾಧಿಕಾರಿಗಳನ್ನು ರಾಜಕೀಯ ಅಖಾಡಕ್ಕಿಳಿಸಲು ಅನಾಯಾಸವಾಗಿ ಸಿಕ್ಕುವ ಸಿನಿಮಾ ಜನಪ್ರಿಯತೆಯನ್ನು ಬಳಸಿಕೊಳ್ಳಲು ಹೊರಟಿರುವುದು ನಮ್ಮ ಸಿನಿಮಾಲೋಕದ ದುರಂತ.


ಇನ್ನು ಯಾವ್ಯಾವ ರಾಜಕಾರಣಿಗಳು ತಮ್ಮ ಮಕ್ಕಳನ್ನು ಹೀರೊ ಮಾಡಿ ಚಿತ್ರರಂಗವನ್ನು ಎಕ್ಕುಟ್ಟಿಸಲು ತಯಾರಿ ನಡೆಸಿದ್ದಾರೊ ಏನೊ. ಅಂತೂ ರಾಜಕಾರಣಕ್ಕೆ ಬರಲು, ಸಿನಿಮಾರಂಗಕ್ಕೆ ಬರಲು ಯಾವ ಪ್ರತಿಭೆ ಮತ್ತು ಯೋಗ್ಯತೆಯ ಅಗತ್ಯವಿಲ್ಲ ಎಂಬುದು ಸಾಬೀತಾಗುತ್ತಿದೆ. ಒಬ್ಬ ಸಂಗೀತಗಾರನಾಗಲು ಅಥವ ಯಾವುದಾದರೂ ವಾದ್ಯ ನುಡಿಸುವ ಕಲಾವಿದನಾಗಲು ಕನಿಷ್ಠ ಆರು ವರ್ಷದ ಸತತ ಅಭ್ಯಾಸವಿರಬೇಕು. ಅಂತಹ ತಾಳ್ಮೆ, ನಿಷ್ಠೆ ದುಡ್ಡಿರುವ ನಮ್ಮ ರಾಜಕಾರಣಿಗಳ ಮಕ್ಕಳಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅಪ್ಪಂದಿರು ಕೊಳ್ಳೆ ಹೊಡೆದ ಹಣದಲ್ಲಿ ಚಿತ್ರನಟರಾಗಿ ನಂತರ ರಾಜಕಾರಣಕ್ಕೆ ಬಂದು ಎಮ್ಮೆಲ್ಲೆ ಮಂತ್ರಿಗಳಾಗಿ ಮತ್ತೆ ಕೊಳ್ಳೆ ಹೊಡೆಯಬಹುದು.

ಯೋಚಿಸಿದರೆ ದಿಮಾಕು ಅಪಾಯದಲ್ಲಿದೆ. ಈ ನಾಡಿನ ಸಮಸ್ಯೆಗಳ ಬಗ್ಗೆ ಚಿಂತಿಸಿದವನು, ಅವುಗಳಿಗೆ ಪರಿಹಾರ ಕಂಡುಕೊಂಡಿರುವವನು ಮತ್ತು ನಮ್ಮ ಸಂಸ್ಕೃತಿ ಗ್ರಹಿಸಿದವನು ಮುಂದೆ ಈ ರಾಜಕಾರಣಿ ಮಕ್ಕಳ ಎದುರು ಗೆದ್ದು ಬರಲಾರ. ಅಂತಹ ರಾಜಕಾರಣದ ತೆವಲಿದ್ದರೆ ಪಂಚಾಯ್ತಿ ಚುನಾವಣೆಗೆ ಹೋಗಬೇಕು ಅಷ್ಟೆ.

■ ಬಿ. ಚಂದ್ರೇಗೌಡ


ರಾಯಚೂರು: ಎರಡನೇ ವಿಕೆಟ್ ಉರುಳಿತು

ಕುಡಿಯುವ ನೀರಿಗೆ ಹಾಹಾಕಾರವನ್ನು ನಿಯಂತ್ರಿಸುವಲ್ಲಿ ವಿಫಲರಾದ ಜಿಲ್ಲಾ ಪಂಚಾಯತ್ ಸಿಇಓ ವಿಜಯ ಜ್ಯೋತ್ಸ್ನಾ ಎತ್ತಂಗಡಿ



ನಿಮಗೆ ನೆನಪಿರಬಹುದು. ಕೆಲದಿನಗಳ ಹಿಂದೆ ನಮ್ಮ ಪತ್ರಿಕೆಯಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರಿನ ಬವಣೆಯ ಹಿಂದಿನ ಅಸಲಿ ಕಾರಣಗಳನ್ನು ಬಿಚ್ಚಿಡುವ ಒಂದು ವಿಶೇಷ ವರದಿ ಪ್ರಕಟವಾಗಿತ್ತು, ದಕ್ಷಿಣ ಭಾರತದ ಎರಡು ಪ್ರಮುಖ ನದಿಗಳಾದ ತುಂಗಭದ್ರಾ ಮತ್ತು ಕೃಷ್ಣಾ ನದಿಗಳು ಕ್ರಮವಾಗಿ ರಾಯಚೂರು ಜಿಲ್ಲೆಯ ದಕ್ಷಿಣ ಮತ್ತು ಉತ್ತರ ಗಡಿಗಳಾಗಿದ್ದರೂ, ಇಡೀ ಜಿಲ್ಲೆಯಾದ್ಯಂತ ತುಂಗಭದ್ರಾ ಎಡದಂಡೆ ಕಾಲುವೆ, ನಾರಾಯಣಪುರ ಬಲದಂಡೆ ಕಾಲುವೆ, ಅವುಗಳ ಉಪಕಾಲುವೆ ಮತ್ತು ಹೊಲಗಾಲುವೆಗಳು ನರನಾಡಿಗಳಂತೆ ಹಬ್ಬಿದ್ದರೂ, ಎಲ್ಲಿ ಬೋರ್‌ವೆಲ್ ಕೊರೆದರೂ ಇನ್ನೂರೈವತ್ತು ಅಡಿ ಮುಟ್ಟುವ ಮೊದಲೇ ನೀರು ಸಿಗುವಂತಹ ಅಪಾರ ಅಂತರ್ಜಲ ಸಂಪತ್ತಿದ್ದರೂ, ಜನರಿಗೆ ಕುಡಿಯುವ ನೀರು ಒದಗಿಸುವುದಕ್ಕಾಗಿಯೇ ಸರ್ಕಾರ ಜಿಲ್ಲೆಗೆ ಪ್ರತಿವರ್ಷ ನೂರಾರು ಕೋಟಿ ರೂಪಾಯಿಗಳನ್ನು ಕೊಟ್ಟರೂ ರಾಯಚೂರು ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ ತಪ್ಪಿಲ್ಲ, ಇದಕ್ಕೆ ಪ್ರಧಾನ ಕಾರಣವೇನೆಂದರೆ, ರಾಯಚೂರು ಜಿಲ್ಲೆಗೆ ಕುಡಿಯುವ ನೀರಿಗಾಗಿ ಬರುವ ಕೋಟಿ ಕೋಟಿ ರೂಪಾಯಿ ಕುಡಿಯುವ ನೀರಿನ ಯೋಜನೆಗಳಿಗಾಗಿ ಬಳಸದೇ ಕಂಟ್ರಾಕ್ಟರುಗಳು, ರಾಜಕಾರಣಿಗಳು ಮತ್ತು ಅಧಿಕಾರಿಗಳು ನುಂಗಿ ನೀರು ಕುಡಿಯುತ್ತಿರುವುದು.

ಅಂತಹ ಒಂದು ಹಗರಣವನ್ನು ನಮ್ಮ ಆ ವಿಶೇಷ ವರದಿಯಲ್ಲಿ ದಾಖಲೆ ಸಮೇತ ಬಹಿರಂಗಪಡಿಸಿದ್ದೆವು. ಸುಮಾರು 25 ಕೋಟಿ ರೂಪಾಯಿಗಳಷ್ಟು ದೊಡ್ಡ ಮಟ್ಟದ ಹಗರಣವದು. ರಾಯಚೂರು ಜಿಲ್ಲೆಯ ಐದು ತಾಲೂಕಿನ ನೂರಾರು ಹಳ್ಳಿಗಳಲ್ಲಿ 3,000 ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆಂದು ಹತ್ತಾರು ಬೋರ್‌ವೆಲ್ ಏಜೆನ್ಸಿಗಳ ಮಾಲಿಕನಾದ ಕೇಶವರೆಡ್ಡಿ ಮತ್ತು ಜಿಲ್ಲಾ ಪಂಚಾಯತ್ ಅಧಿಕಾರಿಗಳು ಸುಳ್ಳು ದಾಖಲೆ ಸೃಷ್ಟಿಸಿ ಬರೋಬ್ಬರಿ 25 ಕೋಟಿ ರೂಪಾಯಿಗಳನ್ನು ಗುಳುಂ ಮಾಡಿದ ಕತೆಯನ್ನು ಪತ್ರಿಕೆ ದಾಖಲೆ ಸಮೇತ ಬಿಚ್ಚಿಟ್ಟಿತ್ತು, ಹಗರಣ ಹೊರಬಿದ್ದಿದ್ದೇ ತಡ, ರಾಯಚೂರು ಜಿಲ್ಲಾಧಿಕಾರಿ ಎಸ್. ಸಸಿಕಾಂತ್ ಸೆಂಥಿಲ್ ಅವರು ಈ ಹಗರಣದ ಬಗ್ಗೆ ಆಳವಾಗಿ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಅಸಿಸ್ಟೆಂಟ್ ಕಮೀಷನರ್ ಎಂ.ಪಿ.ಮಾರುತಿಯವರಿಗೆ ಮೌಖಿಕ ಸೂಚನೆ ಕೊಟ್ಟಿದ್ದರು. ಅದರಂತೆ ಮಾರುತಿಯವರು ತನಿಖೆಯನ್ನು ಕೈಗೆತ್ತಿಕೊಂಡರು.



ಎಚ್.ಕೆ. ಪಾಟೀಲ್

ನಮ್ಮ ಪತ್ರಿಕೆಯಂತೆಯೇ ಜಿಲ್ಲೆಯ ಹಲವು ಪತ್ರಿಕೆಗಳು ಮತ್ತು ನ್ಯೂಸ್ ಚಾನಲ್‌ಗಳು ಈ ಹಗರಣ ಕುರಿತು ನಿತ್ಯ ಒಂದಿಲ್ಲೊಂದು ವರದಿಯನ್ನು ಪ್ರಕಟಿಸುತ್ತಾ, ಪ್ರಸಾರ ಮಾಡುತ್ತಾ ಜಿಲ್ಲಾ ಪಂಚಾಯತ್‌ಗೆ ಬೇತಾಳನಂತೆ ಬೆನ್ನುಬಿದ್ದಿದ್ದವು. ಇನ್ನೊಂದೆಡೆ ಎಪಿಎಂಸಿ ಡೈರೆಕ್ಟರ್ ಬಾಬುರಾವ್‌ನಂತಹ ಕೆಲವು ನಾಯಕರು ನೇರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ ಪಾಟೀಲ್ ಅವರನ್ನು ಖುದ್ದಾಗಿ ಭೇಟಿ ಮಾಡಿ ಈ ಹಗರಣದ ಕುರಿತು ತನಿಖೆ ಮಾಡಿಸಿ, ತಪ್ಪಿತಸ್ಥ ಅಧಿಕಾರಿ-ಕಂಟ್ರಾಕ್ಟರ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಲಿಖಿತ ಮನವಿ ಸಲ್ಲಿಸಿ ಬಂದಿದ್ದರು.

ಅಂತೂ ಮಾಧ್ಯಮಗಳ ಒಕ್ಕೊರಲ ಕೂಗು, ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಕಾಳಜಿಯಿರುವ ನಾಯಕರ ದನಿ ವಿಧಾನಸೌಧದ ಕಲ್ಲುಗೋಡೆಗಳನ್ನು ದಾಟಿ ಅಧಿಕಾರ ಕೇಂದ್ರದ ಕಿವಿಗೆ ಅಪ್ಪಳಿಸಿತು. ಪರಿಣಾಮವಾಗಿ, ಈ ಹಗರಣದ ಕುರಿತು ವಸ್ತುಸ್ಥಿತಿ ವರದಿ ನೀಡುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರಾಯಚೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಜಯ ಜ್ಯೋತ್ಸ್ನಾ ಅವರಿಗೆ ಪತ್ರವೊಂದು ಬಂತು. ಇನ್ನೊಂದೆಡೆ, ಜನ ಕುಡಿಯುವ ನೀರಿಗಾಗಿ ಪರದಾಡುತ್ತಿದ್ದರೆ, ನೀರು ಕೊಡುವುದಕ್ಕಾಗಿ ಬಂದ ಹಣವನ್ನೂ ಅಧಿಕಾರಿಗಳು, ಕಾಂಟ್ರಾಕ್ಟರ್‌ಗಳು ತಿಂದು ತೇಗುತ್ತಿದ್ದರೂ ತೆಪ್ಪಗೆ ಕುಳಿತಿದ್ದ ಸಿಇಓ ಜ್ಯೋತ್ಸ್ನಾ ಅವರ ವರ್ತನೆಯಿಂದ ಅವರೂ ಈ ಹಗರಣದಲ್ಲಿ ಭಾಗಿಯಾಗಿದ್ದಾರೆಂಬ ಅನುಮಾನ ಕೂಡ ದಟ್ಟವಾಗಿತ್ತು. ಈ ಹಿನ್ನೆಲೆಯಲ್ಲಿ ಅವರನ್ನು ಜಿಲ್ಲೆಯಿಂದ ಎತ್ತ... ಮಾಡುವುದಕ್ಕೂ ಸಿದ್ಧತೆ ನಡೆದಿದ್ದವು. ಆದರೆ, ಅ... ಗ್ರಾಮ ಪಂಚಾಯತ್ ಚುನಾವಣೆಗಳು ಬಂದಿದ್ದ... ಅವರ ವರ್ಗಾವಣೆಯನ್ನು ಸ್ವಲ್ಪ ಮುಂದೂಡಲಾ... ಈಗ ಚುನಾವಣೆಗಳು ಮುಗಿದತಕ್ಷಣ ಅವರನ್ನು ಜಿಲ್ಲೆಯಿ... ಎತ್ತಿ, ಕರ್ನಾಟಕ ಲೋಕಸೇವಾ ಆಯೋಗದ ಪ... ನಿಯಂತ್ರಕ ಹುದ್ದೆಗೆ ಎಸೆಯಲಾಗಿದೆ.

ವಾಸ್ತವದಲ್ಲಿ ಇದು ಬೋರ್‌ವೆಲ್ ಹಗರಣ... ಜ್ಯೋತ್ಸ್ನಾ ಅವರ ಪಾತ್ರವನ್ನು ಕುರಿತಂತೆ ಪ್ರತಿನಿತ್ಯ ... ಮಾಡಿದ ಮಾಧ್ಯಮಗಳಿಗೆ ಸಿಕ್ಕ ಜಯ ಎಂತಲೇ ಹೇಳ... ಒಂದೆರಡು ತಿಂಗಳ ಹಿಂದಷ್ಟೇ ಜಿಲ್ಲಾಧಿಕಾರಿ ಸಸಿಕಾ... ಸೆಂಥಿಲ್ ಡಿವಿಆರ್ ರಿಕ್ರಿಯೇಷನ್ ಕ್ಲಬ್ ಎಂಬ ಜೂ... ವೇಶ್ಯಾವಾಟಿಕೆಯ ಹೈಟೆಕ್ ಅಡ್ಡೆಯ ಮೇಲೆ ಪೊಲೀ... ತಿಳಿಸದೇ ದಾಳಿ ಮಾಡಿದ ನಂತರ ಆ ಕ್ಲಬ್ಬು ಪೊಲಿ... ಕಣ್ಗಾವಲಿನಲ್ಲೇ ನಡೆಯುತ್ತಿದ್ದುದರ ಬಗ್ಗೆ, ಪೊ... ವರಿಷ್ಠಾಧಿಕಾರಿ ಎಂ.ಎನ್. ನಾಗರಾಜ್ ಅವರೇ ... ಒಂದು ಲಕ್ಷ ರೂಪಾಯಿಯಂತೆ ಲಂಚ ತಿಂದು ... ಬೆನ್ನಿಗೆ ನಿಂತಿದ್ದರ ಬಗ್ಗೆ ನಮ್ಮ ಪತ್ರಿಕೆಯನ್ನೂ ಒಳಗೊಂ... ರಾಯಚೂರಿನ ಮಾಧ್ಯಮಗಳು ನಿರಂತರವಾಗಿ ... ಮಾಡಿದ್ದವು. ಅದರ ಪರಿಣಾಮವಾಗಿ, ಸರ್ಕಾರ ಆತ... ಎತ್ತಂಗಡಿ ಮಾಡಿ ಕಾಸು ಹುಟ್ಟದ ಆಯಕಟ್ಟಿನ ಜ... ಎಸೆದಿತ್ತು. ಈಗ ವಿಜಯ ಜ್ಯೋತ್ಸ್ನಾ ಅವರದ್ದು ಮೀಡಿ... ಬೌಲಿಂಗ್‌ಗೆ ಉರುಳಿದ ಎರಡನೆಯ ವಿಕೆಟ್.

ಮಾಧ್ಯಮಗಳ ನೈತಿಕತೆ

ನಮ್ಮ ಪತ್ರಿಕೆಯಲ್ಲಿ ಬೋರ್‌ವೆಲ್ ಹಗರಣ ... ಅದರಲ್ಲಿ ವಿಜಯ ಜ್ಯೋತ್ಸ್ನಾ ಅವರ ಪಾತ್ರದ ... ವಿಸ್ತೃತವಾಗಿ ಪ್ರಕಟಿಸಿದ ವಿಶೇಷ ವರದಿಯನ್ನು ... ವಿಜಯ ಜ್ಯೋತ್ಸ್ನಾ ಅವರು "ಆ ವರದಿಯಲ್ಲಿ ಮಾಧ್ಯ... ನೈತಿಕತೆಯೇ ಇಲ್ಲ" ಎಂದು ಕೆಲವು ಪತ್ರಕರ್ತರ ಎದ...



ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕ

ನಿಮಗೆ ನೆನಪಿರಬಹುದು, ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳಲ್ಲಿ ಅವ್ಯವಹಾರಗಳು ಜಾಸ್ತಿ ಆಗಿವೆ ಎಂಬ ದೂರುಗಳು ಬಹಳಷ್ಟಿವೆ. ಇದರಿಂದ ದುಡ್ಡಿದ್ದವರು, ಪ್ರಬಲರು, ಪ್ರಭಾವಿಗಳು ದಡ್ಡರಾಗಿದ್ದರೂ ಉನ್ನತ ಸರ್ಕಾರಿ ಹುದ್ದೆಗಳನ್ನು ಪಡೆದುಬಿಡುತ್ತಿದ್ದಾರೆ ಹಾಗೂ ಬಡವರು, ಅಬಲರು ಮತ್ತು ಪ್ರಭಾವಿಗಳಲ್ಲದವರು ಜಾಣರಿದ್ದರೂ, ಅರ್ಹತೆಯಿದ್ದರೂ ಸರ್ಕಾರಿ ಉದ್ಯೋಗಗಳಿಂದ ವಂಚಿತರಾಗುತ್ತಿದ್ದಾರೆ ಎಂಬ ದೂರುಗಳು ಆಗಾಗ ಕೇಳಿ ಬರುತ್ತಲೇ ಇದ್ದವು. ಈ ಅವ್ಯವಹಾರ, ಅಕ್ರಮಗಳನ್ನು ತಡೆಯುವುದಕ್ಕಾಗಿ ಏನೇನು ಕ್ರಮಗಳನ್ನು ಕೈಗೊಳ್ಳಬಹುದು ಎಂಬುದನ್ನು ಅಧ್ಯಯನ ಮಾಡುವುದಕ್ಕಾಗಿಯೇ ಸರ್ಕಾರ ಪಿ.ಸಿ.ಹೋಟಾ ಸಮಿತಿಯನ್ನು ನೇಮಿಸಿತ್ತು, ಈ ವಿಷಯವನ್ನು ವಿಸ್ತೃತವಾಗಿ ಅಧ್ಯಯನ ಮಾಡಿದ ಸಮಿತಿಯು ಅವ್ಯವಹಾರ, ಅಕ್ರಮಗಳನ್ನು ತಡೆಯುವುದಕ್ಕಾಗಿ ಹಲವಾರು ಶಿಫಾರಸ್ಸುಗಳನ್ನು ಮಾಡಿತ್ತು ಅದರಲ್ಲಿ ಒಂದು, ಹೊಸದಾಗಿ ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕ ಹುದ್ದೆಯನ್ನು ಸೃಷ್ಟಿಸಿ ಅದಕ್ಕೊಬ್ಬ ಐಎಎಸ್ ಅಧಿಕಾರಿಯನ್ನು ನೇಮಿಸುವುದು. ಈ ಶಿಫಾರಸ್ಸುಗಳನ್ನು ಅಂಗೀಕರಿಸಿದ ಸರ್ಕಾರ ಈ ಹುದ್ದೆಯನ್ನು ಸೃಷ್ಟಿಸಿ ಅದಕ್ಕೆ ಆರ್.ವೆಂಕಟೇಶ್ ಕುಮಾರ್ ಎಂಬ ದಕ್ಷ ಅಧಿಕಾರಿಯನ್ನು ನೇಮಿಸಿತ್ತು, ಇತ್ತೀಚೆಗೆ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಹುದ್ದೆಗಳ ಆಯ್ಕೆಯ ಪೂರ್ವಭಾವಿ ಪರೀಕ್ಷೆಯನ್ನು ಅವರು ಬಹಳ ಅಚ್ಚುಕಟ್ಟಾಗಿ ನಡೆಸಿ ಸೈ ಎನಿಸಿಕೊಂಡಿದ್ದರು. ಈಗ ಅವರನ್ನು ಹಾಸನ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ. ಅವರ ಜಾಗಕ್ಕೆ ರಾಯಚೂರು ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ ವಿಜಯ ಜ್ಯೋತ್ಸ್ನಾ ಅವರನ್ನು ನೇಮಿಸಲಾಗಿದೆ. ಇಲ್ಲಿ ರಾಯಚೂರಿನಲ್ಲಿ ಸಿಇಒ ಆಗಿ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ತಮ್ಮ ಕೈಕೆಳಗಿನ ಅಧಿಕಾರಿಗಳು ನಡೆಸುವ ಯಾವ ಅಕ್ರಮಗಳನ್ನೂ ಅವರು ನಿಲ್ಲಿಸಲಿಲ್ಲ, ಅದಕ್ಕೆ ಪ್ರಯತ್ನಿಸಲೂ ಇಲ್ಲ, ಬದಲಿಗೆ ಅಕ್ರಮಗಳು, ಅವ್ಯವಹಾರಗಳು ಇನ್ನಷ್ಟು ಜೋರಾಗಿ ಆಗುವುದಕ್ಕೆ ಏನೇನು ಬೇಕೋ ಅದನ್ನೆಲ್ಲಾ ಮಾಡಿವ ಮೂಲಕ ಭ್ರಷ್ಟ ಅಧಿಕಾರಿಗಳು, ಕಾಂಟ್ರಾಕ್ಟರುಗಳು, ಬೋರ್‌ವೆಲ್ ಏಜೆನ್ಸಿಗಳು ಮುಂತಾದವರು ಚೆನ್ನಾಗಿ ಮೇಯುವುದಕ್ಕೆ ಅನುಕೂಲವಾಗುವ ಹಾಗೆ ರಾಯಚೂರು ಜಿಲ್ಲಾ ಪಂಚಾಯತ್ ಅನ್ನು ಹುಲುಸಾದ ಹುಲ್ಲುಗಾವಲನ್ನಾಗಿ ಪರಿವರ್ತಿಸಿದ್ದಾರೆ. ಈಗ ಅವರು ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕರಾಗಿ ನೇಮಕಗೊಂಡಿದ್ದಾರೆಂದರೆ ಇನ್ನು ಕೆಪಿಎಸ್‌ಸಿ ಉದ್ಧಾರವಾದಂತೆಯೇ. ಸರ್ಕಾರಿ ಅಧಿಕಾರಿಗಳಾಗಬೇಕೆಂಬ ಆಸೆಯಿಂದ ಹಗಲಿರುಳೂ ಶ್ರಮಪಟ್ಟ ಅದೆಷ್ಟು ವಿದ್ಯಾರ್ಥಿಗಳ ಕನಸು ಕಮರುತ್ತದೆಯೋ ಗೊತ್ತಿಲ್ಲ, ಇವರ ಕಾರಣದಿಂದಲೇ ಸದ್ಯದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರಕ್ಕೆ ಭ್ರಷ್ಟಾಚಾರದ ಕಳಂಕ ಹತ್ತಿದರೂ ಆಶ್ಚರ್ಯವಿಲ್ಲ, ಜ್ಯೋತ್ಸ್ನಾ ಅವರು ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕರಾಗಿ ಅದೇನು ಕಡಿದು ಗುಡ್ಡೆ ಹಾಕುತ್ತಾರೆ ಎಂಬುದರ ಮೇಲೆ ನಮ್ಮ ಪತ್ರಿಕೆ ಒಂದು ಕಣ್ಣಿಟ್ಟಿರುತ್ತದೆ.

ಗಪ್‌ಚುಪ್ ತನಿಖೆ!


ಬೋರ್‌ವೆಲ್ ಹಗರಣ ಹೊರಬಿದ್ದ ತಕ್ಷಣ ಬಹಳ ಗರಂ ಆಗಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ. ಪಾಟೀಲ್ ಕೂಡಲೇ ಹಗರಣದ ಕುರಿತು ವರದಿ ತರಿಸಿಕೊಳ್ಳುವಂತೆ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಸೂಚಿಸಿದ್ದರು. ಅದರಂತೆ ಒಂದು ಪತ್ರ ಇಲಾಖೆಯ ಕಾರ್ಯದರ್ಶಿಯಿಂದ ಜ್ಯೋತ್ಸ್ನಾ ಅವರ ಕೈಗೆ ಬಂತು. ಇಲ್ಲಿ ಒಂದು ವಿಷಯ ಗಮನಿಸಿ. ಜೂನಿಯರ್ ಎಂಜಿನಿಯರ್‌ನಿಂದ ಹಿಡಿದು ಸಿಇಒ ಜ್ಯೋತ್ಸ್ನಾ ತನಕ ಎಲ್ಲರೂ ಈ ಹಗರಣದಲ್ಲಿ ಭಾಗಿಯಾಗಿದ್ದಾರೆ. ಎಲ್ಲರೂ ಬೋರ್‌ವೆಲ್ ಹಣವನ್ನು ತಿಂದು ನೀರುಕುಡಿದವರೆ. ಹಾಗಿದ್ದಮೇಲೆ ಯಾರು ತನಿಖೆ ಮಾಡಬೇಕು? ಯಾರು ವರದಿ ಕೊಡಬೇಕು. ಕಳ್ಳನೊಬ್ಬನಿಗೆ ತನ್ನ ಮೇಲಿರುವ ಕಳ್ಳತನದ ಆರೋಪದ ಕುರಿತು ತನಿಖೆ ಮಾಡಿ ವರದಿ ಸಲ್ಲಿಸುವ ಭಾಗ್ಯ ಸಿಕ್ಕರೆ ಹೇಗಿರುತ್ತೆ?

ಈ ವಿಷಯದಲ್ಲೂ ಅದೇ ಆಗಿದೆ. ಯಾರ್‍ಯಾರು ಬೋರ್‌ವೆಲ್ ಕೊರೆಯದೇ ದುಡ್ಡು ಎತ್ತಿದ್ದಾರೋ ಅವರೇ ಈಗ ಹಳ್ಳಿಗಳಲ್ಲಿ ಆ ಬೋರ್‌ವೆಲ್‌ಗಳು ಇವೆಯೋ, ಇಲ್ಲವೋ, ಇದ್ದರೆ ನೀರು ಕೊಡುತ್ತಿವೆಯೋ, ಎಷ್ಟು ಆಳ ಕೊರೆಯಲಾಗಿದೆ - ಇತ್ಯಾದಿಗಳ ಬಗ್ಗೆ ವರದಿ ಕೊಡಬೇಕು. ಈಗಾಗಲೇ ವರದಿ ಸಿದ್ಧವಾಗಿದೆಯಂತೆ. ಆದರೆ, ಮಾಧ್ಯಮಗಳ ಕೈಗೆ ಇನ್ನೂ ಸಿಕ್ಕಿಲ್ಲ, ಸಿಕ್ಕಮೇಲೆ ನೋಡಬೇಕು ... ವರದಿ ರೆಡಿಯಾಗಿದೆ ಅಂತ.

ಜ್ಯೋತ್ಸ್ನಾ ಅವರೇ ಹೇಳುವಂತೆ ಇದು ಪೂ... ತನಿಖಾ ವರದಿ ಅಲ್ಲವಂತೆ. ಕಳೆದ ಐದು ವರ್ಷಗ... ದಾಖಲೆ ಪ್ರಕಾರ ಎಷ್ಟು ಬೋರ್‌ವೆಲ್ ಕೊರೆಯಲಾ... ಎಲ್ಲೆಲ್ಲಿ ಕೊರೆಯಲಾಗಿದೆ, ಎಷ್ಟು ಆಳ ಕೊರೆಯಲಾ... ಎಂಬಿತ್ಯಾದಿ ವಿವರಗಳನ್ನು ಪೂರ್ಣವಾಗಿ ತ... ಮಾಡುವುದಕ್ಕೆ ಜಿಲ್ಲಾ ಪಂಚಾಯತ್‌ನಿಂದ ಸಾಧ್ಯವಿಲ್ಲವ... ಅಷ್ಟೆಲ್ಲಾ ಮಾಡುವುದಕ್ಕೆ ಜಿಲ್ಲಾ ಪಂಚಾಯತ್ ಬಳಿ ಮಾ... ಸಂಪನ್ಮೂಲವೂ ಇಲ್ಲವಂತೆ. ಹಾಗಾಗಿ, ಪ್ರತೀ ತಾಲೂ... ಅಲ್ಲಲ್ಲಿ ಕೆಲ ಹಳ್ಳಿಗಳಲ್ಲಿ ರ್‍ಯಾಂಡಮ್ ಆಗಿ ... ಮಾಡಿದ್ದಾರಂತೆ. ಈಗ ಬೋರ್‌ವೆಲ್ ಹಗರ... ಫಲಾನುಭವಿಗಳೇ ತನಿಖೆ ಮಾಡುವ ಭ... ಪಡೆದಿರುವುದರಿಂದ ರ್‍ಯಾಂಡಮ್ ಆಗಿ ಚೆಕ್ ಮಾಡಿದ್ದಾ... ಅಥವಾ ಆಯ್ದ ಹಳ್ಳಿಗಳನ್ನು ಚೆಕ್ ಮಾಡಿದ್ದಾ... ನೋಡಬೇಕು. ಏಕೆಂದರೆ, ಯಾವ ಹಳ್ಳಿಗ... ಬೋರ್‌ವೆಲ್‌ಗಳನ್ನು ನಿಜವಾಗಿಯೂ ಕೊರೆಯಲಾಗಿದೆ... ಆ ಹಳ್ಳಿಗಳನ್ನೇ ಆಯ್ದುಕೊಂಡು ವರದಿ ಸಿದ್ಧಪಡಿಸಿ... ಸಾಧ್ಯತೆಯೇ ಹೆಚ್ಚಿದೆ. ಈ ಅನುಮಾನವನ್ನು ವರದಿ ... ಸ್ಪಷ್ಟಪಡಿಸಬೇಕಷ್ಟೆ.

ಲಾರಿ ಕ್ಲೀನರ್ ಅಲ್ಲವಂತೆ!

ಬೋರ್‌ವೆಲ್ ಹಗರಣದಲ್ಲಿ ಮೇಯ್ದು ಮಂದಿಯಲ್ಲಿ ಸಿಂಹಪಾಲು ಮುಕ್ಕಿದವನು ಎಂದರೆ ನಿಸ್ಸಂದೇಹವಾಗಿ ...ಶವರೆಡ್ಡಿ. ಬೋರ್‌ವೆಲ್ ಕೊರೆಯದೇ ಸುಮಾರು ಏಳೆಂಟು ಬೋರ್‌ವೆಲ್ ಏಜೆನ್ಸಿಗಳ ಹೆಸರಿನಲ್ಲಿ ಭಾರಿ ದುಡ್ಡು ...ತ್ತಲಾಗಿದ್ದು ಎಲ್ಲಾ ಬೋರ್‌ವೆಲ್‌ಗಳಿಗೂ ಕೇಶವರೆಡ್ಡಿಯೇ ಮಾಲಿಕ. ಒಂದೇ ಬೋರ್‌ವೆಲ್ ಏಜೆನ್ಸಿಗೆ ಗುತ್ತಿಗೆ ...ಟ್ಟರೆ ಅನುಮಾನ ಬರಬಹುದೆಂಬ ಕಾರಣಕ್ಕೆ ಹೀಗೆ ವಿಭಿನ್ನ ಹೆಸರುಗಳಲ್ಲಿ ಬಿಲ್ ಎತ್ತಲಾಗಿದೆ. ಈ ಬಗ್ಗೆ ನಮ್ಮ ...ತ್ರಿಕೆಯಲ್ಲಿ ಪ್ರಕಟವಾದ ವರದಿಯಲ್ಲಿ ಈ ಬೋರ್‌ವೆಲ್ ಹಗರಣದ ಮೂಲಕವೇ ...ರಿ ಕ್ಲೀನರ್ ಆಗಿದ್ದ ಕೇಶವರೆಡ್ಡಿ ರಾಯಚೂರಿನ ಆಗರ್ಭ ಶ್ರೀಮಂತರ ಪೈಕಿ ...ಬ್ಬನಾಗಿ ಮಾರ್ಪಟ್ಟ ಎಂದು ಬರೆಯಲಾಗಿತ್ತು, ಲಾರಿ ಕ್ಲೀನರ್ ಎಂದಿದ್ದು ...ನಿಗೆ ಬಹಳ ನೋವಾಗಿದೆಯಂತೆ. ಚಿತ್ರದುರ್ಗ ಮೂಲದ ಕೇಶವರೆಡ್ಡಿ ನೂರಾರು ...ಕರೆ ಜಮೀನಿರುವ ಕುಟುಂಬದಿಂದ ಬಂದಿದ್ದು ಮೊದಲಿನಿಂದಲೂ ...ಶ್ರೀಮಂತನಂತೆ. ಹಾಗೆಂದು ಅವನೇ ಕಂಡಕಂಡವರ ಬಳಿ ಹೇಳಿಕೊಂಡು ...ರುಗಾಡುತ್ತಿದ್ದಾನೆ.




ಕೇಶವರೆಡ್ಡಿ

...ಅಷ್ಟೊಂದು ಶ್ರೀಮಂತ ಕುಟುಂಬದಿಂದ ಬಂದಿರುವ ಕೇಶವರೆಡ್ಡಿ ಹಳ್ಳಿ ...ರ ನೀರನ್ನೂ ಕಿತ್ತುಕೊಂಡು ಕುಡಿಯುವ ನೀಚ ಕೆಲಸವನ್ನು ಏಕೆ ಮಾಡಿದ? ...ಡಿಯುವ ನೀರಿಗಾಗಿ ಜನ ಪರಿತಪಿಸುತ್ತಿದ್ದರೂ ಆತನ ಮನಸ್ಸೂ ಏಕೆ ಕರಗಲಿಲ್ಲ?


"ನಾನು ದುಡ್ಡು ತಿಂದಿರುವುದು ನಿಜ. ಆದರೆ ನಾನೊಬ್ಬನೇ ತಿಂದಿಲ್ಲ, ಜಿಲ್ಲಾ ಪಂಚಾಯತ್‌ನಲ್ಲಿ ಮೇಲಿಂದ ...ಗಿನ ತನಕ ಎಲ್ಲಾ ಅಧಿಕಾರಿಗಳೂ ನನ್ನ ಜೊತೆ ಶಾಮೀಲಾಗಿ ತಿಂದಿದ್ದಾರೆ. ಎಮ್ಮೆಲ್ಲೆಗಳ ಫಂಡಿನಲ್ಲೂ ಬೋರ್‌ವೆಲ್ ...ರೆಯಲಾಗಿದೆ ಎಂದು ದಾಖಲೆಗಳಲ್ಲಷ್ಟೇ ತೋರಿಸಿ ದುಡ್ಡು ತಿಂದಿದ್ದೇವೆ. ಅದರಲ್ಲಿ ಎಲ್ಲಾ ಎಮ್ಮೆಲ್ಲೆಗಳಿಗೂ ...ಲುಹೋಗಿದೆ" ಎಂದು ಇದೇ ಕೇಶವರೆಡ್ಡಿ ತಾನು ಮಾಡಿದ ಘನಂದಾರಿ ಕೆಲಸವನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ...ತಹ ನೀಚ ಕ್ರಿಮಿಗಳಿರುವತನಕ ರಾಯಚೂರು ಹೇಗೆ ಉದ್ಧಾರವಾಗುತ್ತೆ? ಇಂದಲ್ಲ ನಾಳೆ ಜನ ಇಂಥವರನ್ನು ...ದಿಬೀದಿಯಲ್ಲಿ ಅಟ್ಟಾಡಿಸಿಕೊಂಡು ಬಡಿದು ಜಿಲ್ಲೆಯಿಂದಲೇ ಹೊರದಬ್ಬುತ್ತಾರಷ್ಟೆ.

ಹೈದರಾಬಾದ್-ಕರ್ನಾಟಕದ ಅಭಿವೃದ್ಧಿ

ಹೈದರಾಬಾದ್-ಕರ್ನಾಟಕದ ಅಭಿವೃದ್ಧಿಗಾಗಿ ಹೋರಾಡುತ್ತಿರುವ ಹೈದರಾಬಾದ್ ಕರ್ನಾಟಕ ವಿಮೋಚನಾ ವೇದಿಕೆ, ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿಗಳಂತಹ ಅನೇಕ ಸಂಘಸಂಸ್ಥೆಗಳು, ಬಿಡಿ ಬಿಡಿ ವ್ಯಕ್ತಿಗಳು, ನಾಯಕರು ಇದ್ದಾರೆ. ಇದುವರೆಗೂ ರಾಜ್ಯವನ್ನಾಳಿದ ಎಲ್ಲಾ ವ್ಯಕ್ತಿಗಳೂ, ಪಕ್ಷಗಳು ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ಗಮನ ಕೊಡದೇ ಅವುಗಳು ಹಿಂದುಳಿದಿರುವಿಕೆಗೆ ಕಾರಣವಾಗಿರುವುದನ್ನು ಇವು ಖಂಡತುಂಡವಾಗಿ ಖಂಡಿಸುತ್ತವೆ. ಅವರ ಆಕ್ಷೇಪ, ಆಕ್ರೋಶಗಳು ನ್ಯಾಯಸಮ್ಮತವಾದವುಗಳೇ. ಆದರೆ, ಈ ಯಾವ ಸಂಘಟನೆಗಳೂ ಅಥವಾ ನಾಯಕರೂ ರಾಯಚೂರು ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಬಹುಕೋಟಿ ಬೋರ್‌ವೆಲ್ ಹಗರಣದ ಬಗ್ಗೆ ಬಾಯಿ ಬಿಡುತ್ತಿಲ್ಲ, ಮುಂದೊಂದು ದಿನ ಇವೇ ಸಂಘಟನೆಗಳು, ಇವೇ ನಾಯಕರುಗಳು "ದಕ್ಷಿಣ ಕರ್ನಾಟಕದ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯೇ ಇಲ್ಲ, ಆದರೆ ಹೈದರಾಬಾದ್ ಕರ್ನಾಟಕದ ರಾಯಚೂರು ಜಿಲ್ಲೆಯ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಬಂದು 70 ವರ್ಷವಾದರೂ ಜನರಿಗೆ ಕುಡಿಯುವ ನೀರೂ ಸಿಗುತ್ತಿಲ್ಲ. ಈ ಭಾಗದ ಹಳ್ಳಿಗಳನ್ನು ಸರ್ಕಾರ ಬೇಕಂತಲೇ ಕಡೆಗಣಿಸಿದೆ. ಹೈದರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಭಾಗಗಳು ಅಭಿವೃದ್ಧಿಯಾಗಬೇಕಾದರೆ ಅವು ಪ್ರತ್ಯೇಕ ರಾಜ್ಯಗಳಾಗಬೇಕು" ಎಂದು ಹುಯಿಲೆಬ್ಬಿಸುತ್ತಾರೆ. ಆದರೆ, ಈ ಭಾಗಗಳ ಅಭಿವೃದ್ಧಿಗಾಗಿ ಸರ್ಕಾರ ಸುರಿಯುತ್ತಿರುವ ಹಣ ವಾಸ್ತವದಲ್ಲಿ ಅಭಿವೃದ್ಧಿಗೆ ಬಳಕೆಯಾಗದೇ ಕೆಲವೇ ಭ್ರಷ್ಟ ಅಧಿಕಾರಿಗಳ, ರಾಜಕಾರಣಿಗಳ ಮತ್ತು ಕಾಂಟ್ರ್ಯಾಕ್ಟರುಗಳ ಪಾಲಾಗುತ್ತಿರುವುದನ್ನು ಕಂಡೂ ಸುಮ್ಮನಿದ್ದಾರೆಂದರೆ ಏನರ್ಥ? ವಾಸ್ತವದಲ್ಲಿ ಈ ಸಂಘಟನೆಗಳ ಹೋರಾಟದ ಫಲವಾಗಿಯೇ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಸಾಕಷ್ಟು ಹಣ ಹರಿದುಬರುತ್ತಿದೆ. ಆದರೆ, ಅದು ನೇರವಾಗಿ ಕೆಲವೇ ವ್ಯಕ್ತಿಗಳ ಜೇಬು ಸೇರುತ್ತಿದೆ. ಅದಕ್ಕೆ ರಾಯಚೂರು ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಬಹುಕೋಟಿ ಬೋರ್‌ವೆಲ್ ಹಗರಣವೇ ಸಾಕ್ಷಿ. ಅದರರ್ಥ ಈ ಸಂಘಟನೆಗಳು ಹೋರಾಟದಿಂದ ವಾಸ್ತವದಲ್ಲಿ ಅನುಕೂಲವಾಗುತ್ತಿರುವುದು ಇಡೀ ಹೈದರಾಬಾದ್ ಕರ್ನಾಟಕದ ಜನತೆಗಲ್ಲ, ಬದಲಿಗೆ ಕೆಲವೇ ಕೆಲವು ಪ್ರಭಾವಿ ವ್ಯಕ್ತಿಗಳಿಗೆ!



ಅಂಬಣ್ಣ



ರಜಾಕ್ ಉಸ್ತಾದ್

...ಮಾಧಾನ ವ್ಯಕ್ತಪಡಿಸಿದ್ದರಂತೆ. ಅವರ ತಕರಾರು ಏನೆಂದರೆ ...ಕೆಯಲ್ಲಿ 25 ಕೋಟಿ ರೂಪಾಯಿಗಳನ್ನು ಬೋರ್‌ವೆಲ್ ...ನ್ಸಿಗಳು ಮತ್ತು ಅಧಿಕಾರಿಗಳು ತಿಂದು ತೇಗಿದ್ದಾರೆಂದು ...ದದ್ದು. ಜ್ಯೋತ್ಸ್ನಾ ಪ್ರಕಾರ ಹಗರಣದ ಮೊತ್ತ ...ಲ್ಲವಂತೆ. ಇರಲಿ, ಒಟ್ಟು ನಿಜವಾಗಿಯೂ ಕೊರೆದ ...ರ್‌ವೆಲ್‌ಗಳು, ದಾಖಲೆಗಾಗಿ ಹಾಳೆಯ ಮೇಲಷ್ಟೇ ...ದ ಬೋರ್‌ವೆಲ್‌ಗಳು, ಒಟ್ಟು ಬಿಡುಗಡೆಯಾದ ...ದ, ನಿಜವಾಗಿ ಖರ್ಚಾದ ಹಣ, ಹಾಳೆಯ ಮೇಲೆ ...ದ ಬೋರ್‌ವೆಲ್‌ಗಳ ಹೆಸರಿನಲ್ಲಿ ನುಂಗಿದ ಹಣ ...ನ್ನೆಲ್ಲಾ ಲೆಕ್ಕ ಹಾಕುವಾಗ ಸ್ವಲ್ಪ ಅಂಕಿಅಂಶಗಳು ಹೆಚ್ಚು ...ಮೆ ಆಗುವ ಸಾಧ್ಯತೆ ಇದ್ದೇ ಇರುತ್ತದೆ.

...ಅಷ್ಟಕ್ಕೂ ಮಾಧ್ಯಮಗಳು ತನಿಖಾ ಸಂಸ್ಥೆಗಳಲ್ಲ. ...ಯಚೂರು ಜಿಲ್ಲೆಯಲ್ಲಿ ಹತ್ತಿರತ್ತಿರ 900 ಹಳ್ಳಿಗಳಿವೆ. ...ನ ಐದು ವರ್ಷಗಳಲ್ಲಿ ಯಾವ್ಯಾವ ಹಳ್ಳಿಯಲ್ಲಿ ಎಷ್ಟೆಷ್ಟು ...ರ್‌ವೆಲ್‌ಗಳನ್ನು ನಿಜವಾಗಿ ಕೊರೆಯಲಾಗಿದೆ, ಎಷ್ಟು ...ರ್‌ವೆಲ್‌ಗಳನ್ನು ದಾಖಲೆಗಳಲ್ಲಷ್ಟೇ ಕೊರೆದು ದುಡ್ಡು ...ಲಾಗಿದೆ ಎಂಬ ವಿಷಯವನ್ನು ತನಿಖೆ ಮಾಡುವುದಕ್ಕೆ ...ಧ್ಯಮಗಳಿಗೆ ಸಾಧ್ಯವಾಗುವುದೂ ಇಲ್ಲ, ಅದು ಅವುಗಳ ...ಸವೂ ಅಲ್ಲ. ಒಂದೆಡೆ ಜಿಲ್ಲಾ ಪಂಚಾಯತ್, ಇನ್ನೊಂದೆಡೆ ...ಲ್ಲಾಧಿಕಾರಿ ನೇತೃತ್ವದ ಜಿಲ್ಲಾಡಳಿತ ಈ ಹಗರಣವನ್ನು ...ದ ಎರಡು ತಿಂಗಳಿಂದ ತನಿಖೆ ಮಾಡುತ್ತಿದ್ದರೂ ...ತ್ತಿಗೂ ಅದನ್ನು ಪೂರ್ಣ ಮಾಡುವುದಕ್ಕೆ ಆಗಿಲ್ಲ. ...ಲ್ಲೆಯ ಯಾವುದೋ ಮೂಲೆಯಲ್ಲಿರುವ ಹಳ್ಳಿಯಿಂದ ಹಿಡಿದು ಜಿಲ್ಲಾ ಕೇಂದ್ರದ ತನಕ ಹತ್ತು ಹಲವು ಹಂತಗಳಲ್ಲಿ ಅಧಿಕಾರಿಗಳ ಜಾಲವನ್ನು ಹೊಂದಿರುವ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್‌ಗೇ ಇಷ್ಟೊಂದು ದೊಡ್ಡ ಪ್ರಮಾಣದ ಹಗರಣವನ್ನು ಪೂರ್ಣವಾಗಿ ತನಿಖೆ ಮಾಡುವುದಕ್ಕೆ ಇಂದಿಗೂ ಸಾಧ್ಯವಾಗಿಲ್ಲ ಎಂದರೆ ಮಾಧ್ಯಮಗಳಿಂದ ಅದನ್ನು ನಿರೀಕ್ಷಿಸುವುದು ಎಷ್ಟರಮಟ್ಟಿಗೆ ಸರಿ? ಮಾಧ್ಯಮಗಳು ತಮಗೆ ಸಿಕ್ಕ ದಾಖಲೆಗಳನ್ನು ಆಧರಿಸಿ, ಕಣ್ಣಿಗೆ ಕಾಣುವ ಸತ್ಯಾಂಶಗಳನ್ನು ಆಧರಿಸಿ ಅಕ್ರಮಗಳನ್ನು, ಅವ್ಯವಹಾರಗಳನ್ನು ಬಯಲಿಗೆ ಎಳೆಯುತ್ತವೆ. ತನಿಖೆ ಮಾಡುವುದರಲ್ಲೇ ಪರಿಣಿತಿ ಹೊಂದಿರುವ ಮತ್ತು ಅದೇ ಕೆಲಸಕ್ಕಾಗಿಯೇ ಇರುವ ಸಿಬಿಐ, ಲೋಕಾಯುಕ್ತ ಅಥವಾ ಸಿಐಡಿಗಳಂತಹ ತನಿಖಾ ಸಂಸ್ಥೆಗಳಿಗೆ ಆಳವಾದ ತನಿಖೆ ಮಾಡಿ ಸತ್ಯಾಂಶವನ್ನು ಹೊರಗೆಳೆಯುವ ಕೆಲಸವನ್ನು ವಹಿಸಬೇಕೇ ವಿನಃ ಅದನ್ನು ಮಾಧ್ಯಮಗಳ ವರದಿಯಲ್ಲಿ ಅಂಕಿಅಂಶಗಳು ಸರಿಯಿಲ್ಲ, ಅತಿರಂಜಿತವಾಗಿ ವರದಿ ಮಾಡಿವೆ ಹಾಗೇಹೀಗೆ ಅಂತ ಮಾಧ್ಯಮಗಳ ಮೇಲೆಯೇ ಆರೋಪ ಹೊರಿಸುವುದು ತಮ್ಮ ಹೊಣೆಗಾರಿಕೆಯನ್ನು ಮರೆಮಾಚುವ ಕೆಲಸವಲ್ಲದೇ ಮತ್ತೇನಲ್ಲ.

ಇರಲಿ, ಮಾಧ್ಯಮಗಳಲ್ಲಿ ವರದಿಯಾದಂತೆ ಬೋರ್‌ವೆಲ್ ಹಗರಣದ ಮೊತ್ತ 25 ಕೋಟಿ ಅಲ್ಲ ಎಂದೇ ಇಟ್ಟುಕೊಂಡರೂ ಈ ಹಗರಣದಲ್ಲಿ ಕನಿಷ್ಠ 15 ಕೋಟಿ ಅಥವಾ 10 ಕೋಟಿ ರೂಪಾಯಿ ಆದರೂ ಸಾರ್ವಜನಿಕರ ತೆರಿಗೆ ಹಣ ಕಳ್ಳಕಾಕರ ಪಾಲಾಗಿದ್ದು ನಿಜ ತಾನೆ? 25 ಕೋಟಿ ರೂಪಾಯಿ ಇರಲಿ, 25 ಪೈಸೆ ಇರಲಿ, ಸಾರ್ವಜನಿಕ ಹಣ ಎಷ್ಟು ದುರ್ಬಳಕೆಯಾದರೂ ಅದನ್ನು ಸಹಿಸುವುದಿಲ್ಲ ಎಂದು ಜ್ಯೋತ್ಸ್ನಾ ಅವರೇ ಬಹಳ ಕಾಳಜಿಯ ದನಿಯಲ್ಲಿ ನಾಟಕವಾಡಿದ್ದುಂಟು. ಹಾಗಿದ್ದಮೇಲೆ, ಮಾಧ್ಯಮಗಳಲ್ಲಿ ವರದಿಯಾದ ಈ ನಂಬರಿಗೆ ಹೆಚ್ಚು ಒತ್ತು ಕೊಡದೇ ಕೂಡಲೇ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಯಾಕೆ ಕ್ರಮಕೈಗೊಳ್ಳುವ ಕೆಲಸಕ್ಕೆ ಜ್ಯೋತ್ಸ್ನಾ ಯಾಕೆ ಮುಂದಾಗಲಿಲ್ಲ?

ಐಎಎಸ್ ಅಧಿಕಾರಿಯ ನೈತಿಕತೆ?


ಹೋಗಲಿ, ಮೀಡಿಯಾ ಎಥಿಕ್ಸ್ ಬಗ್ಗೆ ಮಾತಾಡುವುದಕ್ಕೆ ಭಾರತದ ಒಬ್ಬ ಪ್ರಜೆಯಾಗಿ, ಐಎಎಸ್ ಅಧಿಕಾರಿಯಾಗಿ ಜ್ಯೋತ್ಸ್ನಾ ಅವರಿಗೆ ಎಲ್ಲಾ ಹಕ್ಕು ಇದೆ. ಆದರೆ, ಮೀಡಿಯಾ ಎಥಿಕ್ಸ್ ಬಗ್ಗೆ ಪ್ರಶ್ನೆ ಮಾಡುವ ಮೊದಲು ತಾವು ಒಬ್ಬ ಐಎಎಸ್ ಅಧಿಕಾರಿಯಾಗಿ ಐಎಎಸ್ ಎಥಿಕ್ಸ್ ಅನ್ನು ಅನುಸರಿಸುತ್ತಿದ್ದಾರೆಯೇ ಎಂಬ ಕನಿಷ್ಠ ಆತ್ಮಾವಲೋಕನ ಬೇಡವೆ? ಬೋರ್‌ವೆಲ್ ಕೊರೆದು ಜನರ ನೀರಿನ ಬವಣೆಯನ್ನು ತೀರಿಸುವುದಕ್ಕಾಗಿ ಸರ್ಕಾರ ಕೊಟ್ಟ ಹಣವನ್ನು ಖಾಸಗಿ ಬೋರ್‌ವೆಲ್ ಏಜೆನ್ಸಿಯ ಮಾಲೀಕರು, ಭ್ರಷ್ಟ ಅಧಿಕಾರಿಗಳು ತಮ್ಮ ಮೂಗಿನ ಕೆಳಗೇ ಕುಳಿತುಕೊಂಡು ತಿನ್ನುತ್ತಿದ್ದರೆ ಅದು ಗೊತ್ತಿದ್ದೂ ಗೊತ್ತಿದ್ದೂ ಸುಮ್ಮನೇ ಕುಳಿತುಕೊಳ್ಳುವ ಮೂಲಕ ಜ್ಯೋತ್ಸ್ನಾ ಆ ಅಪರಾಧಕ್ಕೆ ಮೌನ ಸಮ್ಮತಿ ಸೂಚಿಸುವುದು ಯಾವ ಸೀಮೆಯ ಐಎಎಸ್ ಎಥಿಕ್ಸ್? ಹಳ್ಳಿಗೆ ಒಂದೇ ವರ್ಷದಲ್ಲಿ, ಒಂದೇ ಅನುದಾನದಲ್ಲಿ ಎಕ್ಸ್ ಹಳ್ಳಿಯಿಂದ ವೈ ಹಳ್ಳಿಗೆ ರೋಡು ಮಾಡಿದ್ದೇವೆಂದು ಒಂದು ದಾಖಲೆ, ಮತ್ತೆ ವೈ ಹಳ್ಳಿಯಿಂದ ಎಕ್ಸ್ ಹಳ್ಳಿಗೆ ರೋಡು ಮಾಡಿದ್ದೇವೆಂದು ಇನ್ನೊಂದು ದಾಖಲೆ - ಹೀಗೆ ಒಂದೇ ರೋಡಿಗೆ ಒಂದೇ ವರ್ಷದಲ್ಲಿ ಎರಡು ದಾಖಲೆಗಳನ್ನು ಸೃಷ್ಟಿಸಿ ಕಂಟ್ರಾಕ್ಟರುಗಳು, ಅಧಿಕಾರಿಗಳು ದುಡ್ಡು ಎತ್ತಿಕೊಂಡು ತಿನ್ನುತ್ತಿದ್ದರೆ ಅದನ್ನು ನೋಡುತ್ತಾ ಸುಮ್ಮನೇ ಕುಳಿತುಕೊಳ್ಳುವುದು ಯಾವ ಸೀಮೆಯ ಐಎಎಸ್ ಎಥಿಕ್ಸ್? ಸಾರ್ವಜನಿಕರ ದುಡ್ಡು ಮೇಯುವುದರಲ್ಲಿ ಪಳಗಿದ ಭ್ರಷ್ಟಾತಿಭ್ರಷ್ಟ ಪ್ರಕಾಶ್‌ನಂತಹ ಎಂಜಿನಿಯರ್‌ನನ್ನು ತಮ್ಮ ಮನೆಗೆ ಕರೆಸಿ ಬಗಲಲ್ಲಿ ಕೂರಿಸಿಕೊಂಡು ಜನರ ದುಡ್ಡನ್ನು ಹಂಚಿಕೊಂಡು ತಿನ್ನುವುದು ಅದ್ಯಾವ ಸೀಮೆಯ ಐಎಎಸ್ ಎಥಿಕ್ಸ್? ಹಳ್ಳಿಗಾಡಿನಲ್ಲಿ ಜನ ನೀರಿಲ್ಲದೇ, ರಸ್ತೆಗಳಿಲ್ಲದೇ, ಸರಿಯಾಗಿ ಶಿಕ್ಷಣವಿಲ್ಲದೇ, ಉದ್ಯೋಗವಿಲ್ಲದೇ ಪರದಾಡುತ್ತಿದ್ದರೆ ಅವರ ಸಮಸ್ಯೆಗೆ ಸ್ಪಂದಿಸುವುದನ್ನು ಬಿಟ್ಟು, ಕನಿಷ್ಠ ಆಫೀಸಿಗೂ ಸರಿಯಾಗಿ ಬಾರದೆ ಬಹುತೇಕ ಸಮಯ ಮನೆಯಲ್ಲೋ ಅಥವಾ ಸರ್ಕಾರಿ ಗೆಸ್ಟ್‌ಹೌಸ್‌ನಲ್ಲೋ ಅಥವಾ ಪಿಕ್ನಿಕ್‌ನಲ್ಲೋ ಕಳೆಯುವುದು ಯಾವ ಸೀಮೆಯ ಐಎಎಸ್ ಎಥಿಕ್ಸ್? ಬೋರ್‌ವೆಲ್ ಹಗರಣ ಆಳ-ಅಗಲಗಳು ಮಾಧ್ಯಮದಲ್ಲಿ ನಿರಂತರವಾಗಿ ಬರಲಾರಂಭಿಸಿದ ಮೇಲೂ, ತನಿಖೆ ಮಾಡಿಸುತ್ತೇನೆ ಎಂದು ಹೇಳಿ ತಿಂಗಳು ಕಳೆದರೂ ತನಿಖೆ ಕೈಗೆತ್ತಿಕೊಳ್ಳದೆ ಗಪ್‌ಚುಪ್ ಕುಳಿತುಕೊಂಡು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯಿಂದ ಪತ್ರ ಬಂದ ಮೇಲೆ ಬೇರೆ ವಿಧಿಯಿಲ್ಲದೇ ತನಿಖೆಗೆ ಮುಂದಾಗುವುದು ಯಾವ ಸೀಮೆಯ ಐಎಎಸ್ ಎಥಿಕ್ಸ್?

ನಮ್ಮಲ್ಲಿ ಒಂದು ಗಾದೆಯಿದೆ. ತಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದರೂ ಬೇರೆಯವರ ತಟ್ಟೆಯಲ್ಲಿ ನೊಣ ಹುಡುಕೋದು ಅಂತ. ಕೆಲವರಿಗೆ ಅದು ಬಿಡಿಸಲಾಗದ ಚಟ. ಜ್ಯೋತ್ಸ್ನಾ ಅವರು ಐಎಎಸ್ ಎಥಿಕ್ಸ್ ಅನ್ನು ತಾನೆಷ್ಟು ಪ್ರಾಮಾಣಿಕವಾಗಿ ಪಾಲಿಸುತ್ತಿದ್ದೇನೆಂಬ ಕನಿಷ್ಠ ಆತ್ಮಾವಲೋಕನವನ್ನೂ ಮಾಡಿಕೊಳ್ಳದೇ ಮೀಡಿಯಾ ಎಥಿಕ್ಸ್ ಬಗ್ಗೆ ಮಾತಾಡುತ್ತಾರೆಂದರೆ ಏನೆನ್ನಬೇಕು? ಹಳ್ಳಿಗಾಡಿನಲ್ಲಿ ಜನ ನೀರಿಲ್ಲದೇ ಸಾಯುತ್ತಿರುವಾಗ ಅವರಿಗೆ ನೀರಿನ ವ್ಯವಸ್ಥೆ ಮಾಡಿ ಅವರ ದಾಹ ಇಂಗಿಸಿ ಎಂದು ಸರ್ಕಾರ ಕೊಟ್ಟ ಹಣವನ್ನೂ ಬಿಡದೇ ತಿನ್ನುವ, ಕನಿಷ್ಠ ಮಾನವೀಯತೆಯೂ ಇಲ್ಲದ ಜ್ಯೋತ್ಸ್ನಾ ಅಂಥವರಿಂದ ಮೀಡಿಯಾ ಎಥಿಕ್ಸ್ ಬಗ್ಗೆ ಪಾಠ ಹೇಳಿಸಿಕೊಳ್ಳುವಷ್ಟು ಅಧಃಪತನಕ್ಕೆ ಪತ್ರಿಕೆಯಿನ್ನೂ ಇಳಿದಿಲ್ಲ ಎಂಬುದು ಅವರಿಗೆ ತಿಳಿದಿರಲಿ.

■ ವರದಿಗಾರ

ಕೇಸು ಹಾಕುವಾಗ ಕನಿಷ್ಠ ಬುದ್ಧಿ ಇಲ್ಲವೆ ಅಥವಾ?

ಬೋರ್‌ವೆಲ್ ಹಗರಣ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿ, ಒಂದೆಡೆ ...ಲ್ಲಾಡಳಿತದಿಂದ ಇನ್ನೊಂದೆಡೆ ಜಿಲ್ಲಾ ಪಂಚಾಯತ್‌ನಿಂದ ಎರಡು ಪ್ರತ್ಯೇಕ ತನಿಖೆ ...ರಂಭವಾದ ಮೇಲೆ ದಲಿತ ನಾಯಕರಾದ ಜೆ.ಬಿ. ರಾಜು, ...ಜೆಎಸ್ ಪಕ್ಷದ ಜಿಲ್ಲಾ ವಕ್ತಾರ ಹಾಗೂ ವೃತ್ತಿಯಲ್ಲಿ ವಕೀಲರೂ ...ದ ಎನ್.ಶಿವಶಂಕರ್ ಮೂಲಕ ರಾಯಚೂರಿನ ಜೆಎಂಎಫ್‌ಸಿ ...ನ್ಯಾಯಾಲಯದಲ್ಲಿ ಒಂದು ಖಾಸಗಿ ದೂರನ್ನು ಸಲ್ಲಿಸಿದರು. ದೂರಿನ ...ಜೊತೆಗೆ ಲಂಕೇಶ್ ಪತ್ರಿಕೆಯ ವರದಿಯನ್ನೂ ಲಗತ್ತಿಸಿದ್ದಾರೆ. ...ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಾಲಯ ಈ ...ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡುವಂತೆ ...ರ್ ಬಜಾರ್ ಪೊಲೀಸರಿಗೆ ನಿರ್ದೇಶನ ನೀಡಿದೆ.



ಜೆ.ಬಿ. ರಾಜು

...ವಿಷಯ ವಿಸಷ್ಟ ಅಂದ್ರೆ, ಖಾಸಗಿ ದೂರು ದಾಖಲಿಸುವಾಗ ...ಸಲ ಏಳು ಬೋರ್‌ವೆಲ್ ಏಜೆನ್ಸಿಗಳನ್ನು ಆರೋಪಿಗಳನ್ನಾಗಿ ...ಮಾಡಲಾಗಿದೆಯೇ ಹೊರತು ಆ ಏಜೆನ್ಸಿಗಳ ಜೊತೆ ...ಶಾಮೀಲಾಗಿರುವ ಯಾವ ಅಧಿಕಾರಿಯ ಹೆಸರನ್ನೂ ಸೇರಿಸಿಲ್ಲ. ...ಕೇಶವರೆಡ್ಡಿಯೇ ಮನಸ್ಸಿಗೆ ಬಂದಂತೆ ಸರ್ಕಾರಿ ದುಡ್ಡನ್ನು ...ತ್ತಿಕೊಂಡು ಹೋಗಿಲ್ಲ, ಅವನಿಗೆ ಅಧಿಕಾರಿಗಳೇ ಚೆಕ್ ಮೂಲಕ ಕೊಟ್ಟಿದ್ದಾರೆ. ...ಕೇಶವರೆಡ್ಡಿಯೋ ಅಥವಾ ಇನ್ಯಾವುದೋ ಕಾಂಟ್ರಾಕ್ಟರ್‌ನೋ ಬೇಕಾದಾಗ ಬಂದು ...ರ್ಕಾರಿ ಹಣವನ್ನು ತೆಗೆದುಕೊಂಡು ಹೋಗುವುದಕ್ಕೆ ಬರುವುದೂ ಇಲ್ಲ, ಏಕೆಂದರೆ, ...ರ್ಕಾರಿ ಖಜಾನೆಯ ಕೀಲಿಕೈ ಅವರ ಹತ್ತಿರ ಇರುವುದಿಲ್ಲ, ಅದು ಸರ್ಕಾರಿ ಅಧಿಕಾರಿಗಳ ...ಬಳಿ ಇರುತ್ತದೆ. ವಹಿಸಿಕೊಟ್ಟ ಕೆಲಸ ಸರಿಯಾಗಿ, ಕ್ರಮಬದ್ಧವಾಗಿ ಆಗಿದೆಯೇ ಎಂಬುದನ್ನು ...ಖಚಿತಪಡಿಸಿಕೊಂಡ ಮೇಲಷ್ಟೇ ಕಾಂಟ್ರಾಕ್ಟರುಗಳಿಗೆ ಹಣ ಕೊಡಬೇಕು.

...ಜಿಲ್ಲಾ ಪಂಚಾಯತ್‌ನಲ್ಲಿ ಒಂದು ಬೋರ್‌ವೆಲ್ ತೋಡಿ ಹ್ಯಾಂಡ್‌ಪಂಪ್ ...ಕೂರಿಸಬೇಕೆಂದರೆ ಹಲವಾರು ನೀತಿನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಮೊದಲು ...ಯೋಜನೆ ರೂಪುಗೊಳ್ಳಬೇಕು, ಖರ್ಚಾಗಲಿರುವ ಅಂದಾಜುಪಟ್ಟಿ ಸಲ್ಲಿಸಬೇಕು, ...ಎಂಜಿನಿಯರಿಂಗ್ ವಿಭಾಗದಿಂದ ತಾಂತ್ರಿಕ ಅನುಮೋದನೆ ಸಿಗಬೇಕು, ಜಿಲ್ಲಾ ಪಂಚಾಯತ್ ...ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿಂದ ಆಡಳಿತಾತ್ಮಕ ಮಂಜೂರಾತಿ ಸಿಗಬೇಕು. ...ರ್‌ವೆಲ್ ಕೊರೆಯುವ ಏಜೆನ್ಸಿ ಮತ್ತು ಜಿಲ್ಲಾ ಪಂಚಾಯತಿ ನಡುವೆ ಲಿಖಿತ ಒಪ್ಪಂದವಾಗಬೇಕು, ಆಮೇಲೆ ವರ್ಕ್ ಆರ್ಡರ್ ಇಶ್ಯೂ ಮಾಡಬೇಕು, ಬೋರ್‌ವೆಲ್ ಎಲ್ಲಿ ಕೊರೆಯಬೇಕು ಎಂಬುದನ್ನು ನಿರ್ಧರಿಸುವುದಕ್ಕಾಗಿ ಅಧಿಕೃತ ಭೂಗರ್ಭಶಾಸ್ತ್ರಜ್ಞ ಸ್ಥಳ ಅಧ್ಯಯನ ಮಾಡಿ ನೀರಿನ ಲಭ್ಯತೆಯ ವರದಿ ನೀಡಬೇಕು, ಬೋರ್‌ವೆಲ್ ಕೊರೆಯುವ ಏಜೆನ್ಸಿ ಪ್ರತಿನಿತ್ಯ ಜಿಲ್ಲಾ ಪಂಚಾಯತ್‌ಗೆ ಕೆಲಸದ ಪ್ರಗತಿ ವರದಿ ನೀಡಬೇಕು, ಕೆಲಸ ಪೂರ್ಣವಾಗಿರುವ ಬಗ್ಗೆ ಸರ್ಕಾರ ಮತ್ತು ಬೋರ್‌ವೆಲ್ ಕೊರೆದ ಏಜೆನ್ಸಿ ಹೊರತಾಗಿ ಮೂರನೇ ಪಕ್ಷ (ಥರ್ಡ್ ಪಾರ್ಟಿ) ವರದಿ ನೀಡಬೇಕು, ಕೆಲಸ ಪೂರ್ಣವಾಗಿರುವುದನ್ನು ಖಚಿತಪಡಿಸಿಕೊಂಡು ಜೂನಿಯರ್ ಎಂಜಿನಿಯರ್ ಬಿಲ್ ಸಿದ್ಧಗೊಳಿಸಬೇಕು, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆ ಬಿಲ್ಲನ್ನು ಪುನರ್‌ಪರಿಶೀಲನೆ ಮಾಡಬೇಕು, ಎಲ್ಲಾ ಸರಿಯಾಗಿದೆ ಎಂದು ಖಾತ್ರಿಯಾದ ಮೇಲಷ್ಟೇ ಚೆಕ್ ಮೂಲಕ ಬಿಲ್ ಪಾವತಿಸಬೇಕು.


ಕೊನೆಯ ಕೆಲಸವೊಂದನ್ನು ಬಿಟ್ಟು (ಚೆಕ್ ಕೊಡುವ ಕೆಲಸ) ಈ ಯಾವ ಪ್ರಕ್ರಿಯೆಯೂ ಇಲ್ಲಿ ನಡೆದಿಲ್ಲ. ಅಂದರೆ, ಈ ಎಲ್ಲಾ ಹಂತಗಳಲ್ಲೂ ಅಧಿಕಾರಿಗಳು ಶಾಮೀಲಾಗಿ ತಮ್ಮ ಪಾಲಿನ ಕಮೀಷನ್ ನುಂಗಿರುವುದು ಸ್ಪಷ್ಟ. ಸರ್ಕಾರಿ ದುಡ್ಡನ್ನು ಮನಸ್ಸಿಗೆ ಬಂದಹಾಗೆ ಹಾಳು ಮಾಡಿದ ಈ ಅಧಿಕಾರಿಗಳೇ ಮೊದಲ ಆರೋಪಿಗಳಾಗಬೇಕು. ಹಾಗಿದ್ದರೂ ಅಧಿಕಾರಿಗಳನ್ನು ಯಾಕೆ ಆರೋಪಿ ಸ್ಥಾನದಲ್ಲಿ ನಿಲ್ಲಿಸಲಿಲ್ಲ? ಇಷ್ಟೊಂದು ದೊಡ್ಡ ಪ್ರಮಾದ ಕೇವಲ ಕಣ್ತಪ್ಪಿನಿಂದ ಆಗಿದೆ ಎಂದು ನಂಬಬೇಕಾ ಅಥವಾ ಜೆ.ಬಿ.ರಾಜು ಮತ್ತು ಶಿವಶಂಕರ್‌ಗೆ ಬೇರೆ ಏನಾದರೂ ಉದ್ದೇಶಗಳಿವೆಯೆ?

ದೂರುದಾರರು ಮಾಡದಿರುವ ಕೆಲಸವನ್ನು ಈಗ ಬೋರ್‌ವೆಲ್ ಹಗರಣವನ್ನು ತನಿಖೆ ನಡೆಸುತ್ತಿರುವ ಸದರ್ ಬಜಾರ್ ಪೊಲೀಸರು ಮಾಡಬೇಕಿದೆ. ಪ್ರಕರಣವನ್ನು ತಳಮಟ್ಟದಿಂದ ತನಿಖೆ ಮಾಡಿ ಆರೋಪ ಪಟ್ಟಿಯನ್ನು ಸಲ್ಲಿಸುವ ಮಹತ್ತರ ಹೊಣೆಗಾರಿಕೆ ಸಬ್‌ಇನ್ಸ್‌ಪೆಕ್ಟರ್ ದಾದಾವಲಿ ಮತ್ತು ಇನ್ಸ್‌ಪೆಕ್ಟರ್ ಹಮೀದ್ ಪಾಟೀಲ್ ಮೇಲಿದೆ. ಅದನ್ನವರು ಎಷ್ಟು ಚೆನ್ನಾಗಿ ಮಾಡುತ್ತಾರೋ ಅಥವಾ ಅಧಿಕಾರಿಗಳೊಂದಿಗೆ ಕೈಜೋಡಿಸಿ ತನಿಖೆಯ ಹಾದಿತಪ್ಪಿಸುತ್ತಾರೋ ಕಾದು ನೋಡಬೇಕು. ಯಾವುದಕ್ಕೂ ಎಸ್ಪಿ ಚೇತನ್ ಸಿಂಗ್ ರಾಥೋಡ್ ಈ ವಿಷಯಕ್ಕೆ ಸ್ವಲ್ಪ ಗಮನ ಕೊಟ್ಟರೆ ಒಳ್ಳೆಯದು.

ಬನಶಂಕರಿಯ ಬಾಡಿಗೆ ಮನೆ



ಯಶ್ ತಾಯಿ ತಂದಿಟ್ಟ ಯಡವಟ್ಟು




'ಇಲ್ಲಾ... ಇದೆಲ್ಲಾ ಯಶ್ ವರ್ಚಸ್ಸಿಗೆ ಮಸಿ ಬಳಿಯೋರೇ ಮಾಡಿರೋ ಕುತಂತ್ರ. ಪಾಪ ಯಶ್ ಅಂಥವನಲ್ಲ, ಈ ಬಗ್ಗೆ ಅವನಿಗೆ ಏನೂ ಗೊತ್ತಿಲ್ಲ. ಹೇಗಾದರೂ ಮಾಡಿ ಆತನ ಇಮೇಜ್ ಹಾಳು ಮಾಡಬೇಕು ಅಂತಾನೇ ಬಾಡಿಗೆ ಮನೆ ವಿಷಯಾನ ಬೀದಿಗೆ ತಂದು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಇದರ ಹಿಂದೆ ದೊಡ್ಡ ಪಿತೂರಿಯೇ ಇದೆ. ಕಾಣದ ಕೈಗಳು ತೆರೆಮರೆಯಲ್ಲಿ ನಿಂತು ಷಡ್ಯಂತ್ರ ಮಾಡುತ್ತಿವೆ....!'


ಹೀಗಂತ ಗಾಂಧಿನಗರದ ದೈತ್ಯ ನಿರ್ಮಾಪಕ ಕೆ. ಮಂಜು ಟೀವಿ ಪರದೆಗೆ ಬಂದು ಹಾಕಿದ ಬೊಬ್ಬೆ ಯಶ್ ಗೋಳಿಟ್ಟ ರೀತಿ ಮತ್ತು ಮನೆ ಮಾಲಿಕರೆಂದು ನಡೆಸಿದ ಪತ್ರಿಕಾಗೋಷ್ಠಿಗಳೆಲ್ಲವನ್ನೂ ಜನ ಬಿಟ್ಟಿಗೆ ಸಿಕ್ಕ ಮನರಂಜನೆಯಂತೆ ಚಪ್ಪರಿಸಿದ್ದಾಗಿದೆ. ಪತ್ರಿಕೆಗಳಿಗೆ ಸುದ್ದಿಯೋ ಸುಗ್ಗಿ. ನ್ಯೂಸ್ ಚಾನಲ್ಲುಗಳ ಮಟ್ಟಿಗಂತೂ ಟಿಆರ್‌ಪಿ ಫಸಲು. ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲೆಂಬಂತೆ ಪ್ರತಿಯೊಬ್ಬರಿಗೂ ಯಶ್ ಮೇಲೆಯೇ ಕಣ್ಣು. ಏಕೆಂದರೆ ಯಶ್ ಸದ್ಯ ಗಾಂಧಿನಗರದ ಡಾರ್ಕ್‌ಹಾರ್ಸ್, ಅಂದರೆ ಯಾಗದ ಕುದುರೆ!

ಮನೆ ಬಾಡಿಗೆ ವಿವಾದವೊಂದು ಹೇಗೆ ಸ್ಟಾರ್ ಒಬ್ಬನ ಪಾಲಿಗೆ ಉರುಳಾಗಿ ಪರಿಣಮಿಸುತ್ತದೆ ಮತ್ತು ಅದನ್ನು

ಯಶ್ ಜೊತೆ ತಾಯಿ ಪುಷ್ಪಾ



ಡಾ. ಮುನಿಪ್ರಸಾದ್ ಮತ್ತು ಪುಷ್ಪಾ





ಟಿಆರ್‌ಪಿ ದಾಹಿ ಚಾನಲ್ಲುಗಳು ಹೇಗೆಲ್ಲಾ ಜಗ್ಗಾಡಿ ರಾಡಿಯೆಬ್ಬಿಸುತ್ತವೆ ಎಂಬುದರ ಕಿಂಚಿತ್ತಾದರೂ ಪರಿವೆಯಿದ್ದರೆ ಯಶ್ ಯಾಮಾರುತ್ತಿರಲಿಲ್ಲವೋ ಏನೋ. ಆದರೆ ಯಶಸ್ಸಿನ ಪಿತ್ಥ ನೆತ್ತಿಗೇರಿಬಿಟ್ಟರೆ ನೆಲ ಕಾಣಿಸುವುದಿಲ್ಲ, ತಾಯಿ ಮಾಡಿದ ಸಣ್ಣ ಯಡವಟ್ಟೊಂದು ತನ್ನನ್ನು ಈ ರೀತಿ ಬೀದಿಗೆ ತಂದು ನಿಲ್ಲಿಸಲಿದೆಯೆಂಬ ಲೆಕ್ಕಾಚಾರ ತಾನೇ ಯಶ್‌ಗೆಲ್ಲಿತ್ತು? ಆತ ಗಾಂಧಿನಗರದ ಬಾಕ್ಸ್ ಆಫೀಸ್ ಸುಲ್ತಾನ. ದರ್ಶನ್ ಹೆಗಲೇರಿದ್ದ ಶುಕ್ರದೆಸೆಯೀಗ ಯಶ್ ಬೆನ್ನಿಗೇರಿದ ಬೇತಾಳ. ತನ್ನ ಸುತ್ತ ಏನೇನು ಸಂಭವಿಸುತ್ತಿದೆ, ಯಾವ ತಪ್ಪಲೆಯೊಳಗೆ ತನ್ನ ಪಾಲಿನ ಕೆಡುಕು ಕುದಿಯಲಾರಂಭಿಸಿದೆ ಎಂಬುದರ ಪರಿವೆಯಿದ್ದಿದ್ದರೆ ಹೀಗಾಗುತ್ತಿರಲಿಲ್ಲ.

ಅದೇನೋ; ಶುರುವಿನಿಂದಲೂ ತಾಯಿ ತಂದಿಟ್ಟ ತಾಪತ್ರಯಗಳೇ ಯಶ್ ಪಾಲಿಗೆ ತಲೆನೋವಾಗುತ್ತಲೇ ಬಂದವು. ಶುರುವಿನಲ್ಲಿ ಚೀಟಿ ದುಡ್ಡು ಕೊಡದೆ ಮೈಸೂರಿನಿಂದ ಪರಾರಿಯಾಗಿದ್ದು ಯಶ್ ತಾಯಿಯೆಂದು ಟೀವಿಗಳು 'ಬ್ರೇಕಿಂಗ್ ನ್ಯೂಸ್' ಉಡಾಯಿಸಿದವು. ಆನಂತರ ತಂಗಿ ವಿಷಯಕ್ಕೆ ದರ್ಶನ್ ಹೆಸರನ್ನು ಎಳೆದುತಂದರು ತದನಂತರ ನಟಿ ರಾಧಿಕಾ ಪಂಡಿತ್ ಬರ್ತ್‌ಡೇ ದಿ ಯಶ್ ಅತಿರೇಕದ ಸುದ್ದಿ ಹಬ್ಬಿತು. ಬೆನ್ನಲ್ಲೇ ದರ್ಶನ ಭಕ್ತರ ಗ್ಯಾಂಗ್ ಯಶ್ ಹತ್ಯೆಗೆ ಸುಪಾರಿಯಿತ್ತ ವದಂ ಹಬ್ಬಿತು. ತನಗೆ ಪ್ರಾಣಾಪಾಯವಿದೆ, ರಕ್ಷಣೆ ಬೇಕೆಂದ ಯಶ್ ಪೊಲೀಸ್ ಕಮೀಷನರ್ ಎಂ.ಎನ್. ರೆಡ್ಡಿಯವರಿ ಮನವಿ ಕೊಟ್ಟ ವರದಿಗಳೂ ಬಂದವು. ಈಗ ಮ ಮಾಲಿಕರಿಗೆ ಧಮಕಿ ಹಾಕಿದ ಆರೋಪ. ಕೋಟು ಸಮನ್ಸ್ ಕೊಟ್ಟಿದ್ದು ಪುಷ್ಪಾ ಎಂಬ ಗೃಹಿಣಿಗಾದರೂ ಅ ನಟ ಯಶ್ ತಾಯಿ ಎಂಬುದೇ ದೊಡ್ಡ ಸುದ್ದಿ!

ನಗರದ ಸೆಷನ್ಸ್‌ಕೋರ್ಟ್ ಯಶ್ ತಾಯಿ ಪುಷ್ಪಾರಿ ಹೊರಡಿಸಿರುವುದು ಕೇವಲ ನೋಟಿಸು ಮಾತ ಸಾಮಾನ್ಯವಾಗಿ ಯಾರೇ ಯಾವುದೇ ವಿಷಯಕ್ಕೆ ಕೋರ್ಟ್ ಮೊರೆ ಹೊಕ್ಕರೂ ಪ್ರತಿವಾದಿಗೆ ನೋಟಿಸ ಜಾರಿಗೊಳಿಸುವುದುಂಟು. ಯಶ್ ಕುಟುಂಬ ನಂ. 75 5ನೇ ಅಡ್ಡರಸ್ತೆ, 3ನೇ ಬ್ಲಾಕ್, ಬನಶಂಕರಿ 3ನೇ ಹಂತ

ಯಶ್ ಸ್ವಂತ ಮನೆ



ಮನೆ ಕೊಟ್ಟ ತಪ್ಪಿಗೆ ಎಂಟ್ರಿ ಕೊಟ್ಟ ಮಂಜು

ನಿಜಕ್ಕೂ ಬನಶಂಕರಿಯ ಮನೆಯನ್ನು ಖರೀದಿಸುವ ಯೋಚನೆ ಯಶ್‌ಗಿತ್ತೆ ಅಥವಾ ಇದೊಂದು ಬಾಡಿಗೆ ಲೆಕ್ಕಾಚಾರದಲ್ಲಾದ ಕ್ಷುಲ್ಲಕ ಜಗಳವೆ?

ಈ ಪ್ರಶ್ನೆಗೆ ಉತ್ತರವೋ ಎಂಬಂತೆ ಇಲ್ಲಿಗೆ ವರ್ಷದ ಹಿಂದೆ ಯಶ್ ತಾಯಿ 50x 80 ಅಳತೆಯ ಭರ್ಜರಿ ಮನೆಯೊಂದನ್ನು ಖರೀದಿಸುತ್ತಾರೆ. ಅದು ಗಾಂಧಿನಗರದ ಸಿನಿಮಾ ದೈತ್ಯ ಕೆ. ಮಂಜು ಮನೆ. ಹೊಸಕೆರೆಹಳ್ಳಿ ರಿಂಗ್ ರಸ್ತೆಯಲ್ಲಿ ಮಂಜು ಕಟ್ಟಿಸಿದ್ದ ಮನೆ ಕಮ್ಮಿಯೆಂದರೂ ಐದು ಕೋಟಿಗೆ ಬೆಲೆಬಾಳುತ್ತದೆ. ಸದ್ಯ ಬಾಡಿಗೆಗಿರುವ ಮುನಿಪ್ರಸಾದ್‌ರ 30x40 ಮನೆಗೆ



ಕೆ.ಮಂಜು

ಹೋಲಿಸಿದರೆ ಮಂಜು ಮನೆ ಅದರ ದುಪ್ಪಟ್ಟು ವಿಶಾಲವಾಗಿದೆ ಮತ್ತು ಪ್ರಶಸ್ತವಾಗಿದೆ. ಮುನಿಪ್ರಸಾದ್‌ರ ಮನೆಯನ್ನು ಜಬರ್‌ದಸ್ತಿನಿಂದಾದರೂ ಖರೀದಿಸುವ ಉದ್ದೇಶ ಯಶ್‌ಗಿದ್ದದ್ದೇ ಆಗಿದ್ದರೆ ವರ್ಷದ ಹಿಂದೆಯೇ ಮಂಜು ಮನೆಯನ್ನೇಕೆ ಖರೀದಿಸುತ್ತಿದ್ದರು?

ಅಷ್ಟಕ್ಕೂ, ಪೊಲೀಸ್ ಠಾಣೆ, ಕೋರ್ಟು ಕಂಡ ಮುನಿಪ್ರಸಾದ್‌ರ ಮನೆಯಲ್ಲಿ ಸದ್ಯ ಯಾರೂ ವಾಸಿಸುತ್ತಿಲ್ಲ, ಇಡೀ ಕುಟುಂಬ ಮಂಜು ಮನೆಗೆ ಬಂದು ವರ್ಗವಾಗಿದೆ. ಕೊಡಬೇಕಾದ ಬಾಡಿಗೆಯ ಲೆಕ್ಕಾಚಾರದಲ್ಲಿ ಮುನಿಪ್ರಸಾದ್ ಹೇಳುವುದಕ್ಕೂ, ಯಶ್ ತಾಯಿಯ ಲೆಕ್ಕಕ್ಕೂ ವ್ಯತ್ಯಾಸವಿರುವುದೇ ವಿವಾದಕ್ಕೆ ಕಾರಣವಾಯಿತೆ? ಆದರೂ ವಿಷಯ ಕೋರ್ಟ್ ಮೆಟ್ಟಿಲೇರುವ ತನಕ ಯಶ್ ಫ್ಯಾಮಿಲಿ ಬಿಡಬಾರದಿತ್ತು.

ಈಗ ರಾದ್ಧಾಂತವಾಗಿದ್ದೇ ಎಂಟ್ರಿ ಕೊಟ್ಟ ಮಂಜು ಟೀವಿ ಹರಟೆಯ ಮೂಲಕವೇ ವಿವಾದಕ್ಕೊಂದು ಅಂತ್ಯ ಕಾಣಿಸಿದ್ದಾರೆ. ಮಂಜು ಪ್ರಕಾರ ಇನ್ನು 8 ಲಕ್ಷ ಮಾತ್ರವೇ ಬಾಕಿಯಿದೆ. ಈಗಾಗಲೇ 8 ಲಕ್ಷದಷ್ಟು ಬಾಡಿಗೆ ಕಟ್ಟಾಗಿದೆ. ಆದಕ್ಕೆ ಅಡ್ವಾನ್ಸ್ ಎಂದು ನೀಡಿದ ನಾಲ್ಕು ಲಕ್ಷ ಕಳೆದರೆ ಕೊಡಬೇಕಿರುವುದು ಇನ್ನು 8 ಲಕ್ಷ ಮಾತ್ರ!

ಆದರೆ ಮನೆ ಮಾಲೀಕರು ವರ್ಷಕ್ಕೆ ಐದು ಪರ್ಸೆಂಟ್ ಹೆಚ್ಚಿಸಿ ಲೆಕ್ಕ ಹಾಕಿದ್ದಾರೆ. ಕೂತು ಇತ್ಯರ್ಥಪಡಿಸಿಕೊಳ್ಳಬೇಕಾದ ಸಣ್ಣ ಸಂಗತಿಯೊಂದು ನಟನ ಒಬ್ಬನ ಜನಪ್ರಿಯತೆಯಿಂದಾಗಿ ಈಪಾಟ ರಂಪಾಟಕ್ಕಿಟ್ಟುಕೊಳ್ಳುತ್ತದೆ ಎಂದು 'ಯಾರಿಗೆ ತಾನೇ ಗೊತ್ತಿತ್ತು? ಯಶ್ ತಲೆ ಚಚ್ಚಿಕೊಳ್ಳುತ್ತಿದ್ದಾನೆ.

ಮನೆಗೆ ಬಾಡಿಗೆಗೆ ಬಂದಿದ್ದು 2010ರ ಅಕ್ಟೋಬರ್ ತಿಂಗಳಿನಲ್ಲಿ. ಅದು 30x40 ನಿವೇಶನದಲ್ಲಿರುವ ಇಂಡಿಪೆಂಡೆಂಟ್ ಮನೆ. ಯಶ್ ಆಗಷ್ಟೇ ಗಾಂಧಿನಗರದಲ್ಲಿ ಕಾಲೂರಲು ಹೆಣಗಾಡುತ್ತಿದ್ದ ಕಾಲವದು. 'ಹೀರೋ' ಅಂತಸ್ತಿಗೆ ತಕ್ಕಂತೆ ವಿಶಾಲವಾದ ಮ್ಯಾನ್ಷನ್ ಮನೆಯಿರಬೇಕೆಂದು ಲೆಕ್ಕ ಹಾಕಿಯೇ ತಾಯಿ ಪುಷ್ಪಾ ಹಿಡಿದ ಈ ಮನೆಗೆ ಮಾಲೀಕರಾಗಿದ್ದದ್ದು ಡಾ. ಮುನಿಪ್ರಸಾದ್.

ತೆಲಂಗಾಣದ ಹೆಸರಾಂತ ವೈದ್ಯರಾದ ಮುನಿಪ್ರಸಾದ್‌ಗೆ ಹೈದರಾಬಾದಿನಲ್ಲಿ ಸ್ವಂತ ಆಸ್ಪತ್ರೆಯಿದೆ. ಅವರ ಪತ್ನಿ ವನಜಾ ಕೂಡ ವೈದ್ಯರೆ. ವನಜಾರ ತಮ್ಮ ಡಾ. ಕೆ. ಉಪೇಂದ್ರಕುಮಾರ್ ಬೆಂಗಳೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಪ್ರಾಕ್ಟೀಸು ಮಾಡುತ್ತಿದ್ದಾರೆ. ಹನುಮಂತನಗರದ ಪಿಇಎಸ್ ಕಾಲೇಜು ಎದುರಿನ ಮೀನಾಕ್ಷಿ ಆಸ್ಪತ್ರೆಗೂ ಉಪೇಂದ್ರ ಪಾಲುದಾರರು. ವೈದ್ಯ ವೃತ್ತಿಯಿಂದಲೇ ಬೆಂಗಳೂರು ಸುತ್ತಮುತ್ತ 50 ಕೋಟಿಯಷ್ಟು ಆಸ್ತಿಪಾಸ್ತಿ ಖರೀದಿಸಿದ ಡಾ. ಮುನಿಪ್ರಸಾದ್‌ಗೆ ಬಾಡಿಗೆಯಿಂದಲೇ ಬದುಕಬೇಕಾದ ದರಕತ್ತೇನಿಲ್ಲ.

ತಿಂಗಳಿಗೆ 40 ಸಾವಿರ ಬಾಡಿಗೆ 4 ಲಕ್ಷದ ಅಡ್ವಾನ್ಸು ಕೊಟ್ಟು ತನ್ನ ಹೆಸರಿಗೇ ಅಗ್ರಿಮೆಂಟ್ ಮಾಡಿಸಿಕೊಂಡ ಪುಷ್ಪಾ ಕನ್ನಡದ ಖ್ಯಾತ ನಟನ ತಾಯಿ ಎಂಬುದಾಗಲಿ, ಯಶ್ ಕನ್ನಡದ ಸ್ಟಾರ್ ನಟ ಎಂಬುದಾಗಲಿ ತೆಲಂಗಾಣ ಮೂಲದ ಮನೆ ಮಾಲೀಕರಿಗೆ ಗೊತ್ತಿರಲಿಲ್ಲ. ಮನೆಗೆ ಬಂದು ವರ್ಷ ತುಂಬುವ ಹೊತ್ತಿಗೆ ಯಶ್ ಅದೃಷ್ಟ ಖುಲಾಯಿಸಿತು. ದೀಪಾ ಸನ್ನಿಧಿ ಹೀರೋಯಿನ್ನಾಗಿದ್ದ 'ಜಾನು' ಹಿಟ್ಟಾಯಿತು. ಬೆನ್ನಲ್ಲೇ ರಾಧಿಕಾ ಕುಮಾರಸ್ವಾಮಿ ನಿರ್ಮಿಸಿದ ರಮ್ಯಾ-ಯಶ್ ಜೋಡಿಯ 'ಲಕ್ಕಿ'ಯೂ ಮಿಂಚಿತು. ನಂತರ ಒಂದರ ಮೇಲೊಂದರಂತೆ 'ಗೂಗ್ಲಿ', 'ಕಿರಾತಕ', 'ಡ್ರಾಮಾ', 'ರಾಜಾಹುಲಿ' ಚಿತ್ರಗಳು ಹಿಟ್ಟು ಕೊಡೆದವು.

ದರ್ಪ ದೌಲತ್ತಿಗೆ ತಲೆಕೊಟ್ಟು ದರ್ಶನ್ ರಾದ್ಧಾಂತ ಮಾಡಿಕೊಳ್ಳುತ್ತಿದ್ದರೆ ಮತ್ತೊಂದೆಡೆ ದರ್ಶನ್ ಕಾಲ್‌ಶೀಟ್ ಸಿಗದೆ ಲಟಕೆ ಮುರಿದವರೆಲ್ಲ ಯಶ್‌ಗೆ ಗಂಟುಬಿದ್ದರು. ಗಜಕೇಸರಿ ಸೆಂಚುರಿ ಬಾರಿಸಿದ್ದೇ ತಡ ಯಶ್ ದರ್ಶನ್‌ಗೆ ಪರ್ಯಾಯ ತಾರೆಯಾಗಿ ಬೆಳೆದುಬಿಟ್ಟ. ಅದೇನೋ ಬನಶಂಕರಿಯ ಮನೆಗೆ ಕಾಲಿಟ್ಟಿದ್ದೇ ಯಶ್ ಶುಕ್ರದೆಸೆ ಶುರುವಾಯಿತೆಂಬ ನಂಬಿಕೆ ತಾಯಿ ಪುಷ್ಪಾ ತಲೆಹೊಕ್ಕಿದೆ. ಖುದ್ದು ಯಶ್ ತನ್ನ ಮನೆಯ ವಾಸ್ತುವೇ ತನ್ನ ಅದೃಷ್ಟಕ್ಕೆ ಕಾರಣವೆಂದು ಹೇಳಿಕೊಂಡಿದ್ದ. ಅದೃಷ್ಟದ ಮನೆಯನ್ನು ಹೇಗಾದರೂ ಮಾಡಿ ತನ್ನ ಸ್ವಂತಕ್ಕಿಟ್ಟುಕೊಳ್ಳಬೇಕೆಂಬ ಆಸೆ ಯಶ್ ತಾಯಿಯದ್ದು.

ಮೊದಲನೇ ವರ್ಷ ನಿಯತ್ತಾಗಿಯೇ ಬಾಡಿಗೆ ಕಟ್ಟಿದ್ದಾರೆ. ಆದರೆ ಎರಡನೇ ವರ್ಷಕ್ಕೆ ಸಂಬಂಧ ಹಳಸಿದೆ. ಎಲ್ಲಿ ಮನೆ ಖಾಲಿ ಮಾಡಲು ಹೇಳುತ್ತಾರೋ ಎಂಬ ಅಳುಕು ತಾಯಿಗಾದರೆ ಇನ್ನೆಲ್ಲಿ ಮನೆ ಖಾಲಿ ಮಾಡದೇ ಸತಾಯಿಸುತ್ತಾರೋ ಎಂಬ ಅಪನಂಬಿಕೆ ಮಾಲೀಕರದ್ದು. ಆ ಹೊತ್ತಿಗೆ ಯಶ್ ಓರ್ವ ಸ್ಟಾರ್ ಎಂಬುದು ಮನೆಮಾಲೀಕರಿಗೆ ಗೊತ್ತಾಗಿಹೋಗಿತ್ತು. ಒಪ್ಪಂದದ ಪ್ರಕಾರ ಪ್ರತಿ ವರ್ಷ ಶೇ. 5ರಷ್ಟು ಬಾಡಿಗೆ ಹೆಚ್ಚಿಸಬೇಕು. ಹಾಗೇ ಐದು ಪರ್ಸೆಂಟು ಬಾಡಿಗೆ ಹೆಚ್ಚಿಗೆ ಕೊಡುತ್ತಾ ಹೋಗಿದ್ದರೆ ಯಾವುದೇ ತಾಪತ್ರಯವಿರಲಿಲ್ಲ. ಆದರೆ ಯಶ್ ತಾಯಿಗೆ ಕಾನೂನಿನ ಜ್ಞಾನವಿಲ್ಲ. ಸಾಲದ್ದಕ್ಕೆ ಎಲ್ಲಾ ಯಶಸ್ವಿ ಮಕ್ಕಳ ತಾಯಂದಿರ ಹಾಗೆ ಜಗಳಗಂಟಿತನ.

ಹೊಸ ಅಗ್ರಿಮೆಂಟ್ ಮಾಡಿಕೊಟ್ಟರೇನೇ ಬಾಡಿಗೆ ಕೊಡೋದು ಎಂದು ಯಶ್ ತಾಯಿ ಹಠಕ್ಕೆ ಬಿದ್ದರೆ ಹಳೇ ಅಗ್ರಿಮೆಂಟೇ ಸಾಕು ಎಂದು ಮನೆ ಮಾಲೀಕರ ಪಟ್ಟು. 30x40 ಸೈಟಿಗೆ ತಿಂಗಳಿಗೆ 40 ಸಾವಿರದ ಬಾಡಿಗೆಯೇ ದೊಡ್ಡ ಮಾತು. ಹೇಗೂ ಮಗ ಬೆಳೆದು ನಿಂತಿದ್ದಾನಲ್ಲ, ಮನೆ ಮಾಲೀಕರನ್ನು ಜಗ್ಗಿಸಬಹುದು ಎಂದು ತಾಯಿ ಲೆಕ್ಕ ಹಾಕಿರಬೇಕು. ಹಾಗೇ ಸತಾಯಿಸಿ ಮನೆಯನ್ನೇ ಖರೀದಿಸಿದರಾಯಿತು ಎಂಬ ನಿರೀಕ್ಷೆಯೂ ಇದ್ದೀತು. ಯಾವತ್ತು ಒಂದೆರಡು ತಿಂಗಳ ಬಾಡಿಗೆ ಕೊಡಲಿಲ್ಲವೋ ಮನೆ ಮಾಲೀಕರ ಆತಂಕ ಉಲ್ಬಣಿಸಿದೆ. ಅಗ್ರಿಮೆಂಟ್ ಮಾಡೋದಾದ್ರೆ ಕೋರ್ಟಿನಲ್ಲೇ ಮಾಡಿಕೊಳ್ಳೋಣವಂತೆ ಎಂದು ಮನೆ ಮಾಲೀಕರು ಮೊಂಡಾಟಕ್ಕಿಳಿದಿದ್ದಾರೆ.

ಮನೆ ಮಾಲೀಕ ಎಷ್ಟೆಂದರೂ ಹೈದರಾಬಾದಿನ [illegible] ಲೋಕಲ್ ಬೆಂಬಲವಿಲ್ಲ, ಕೊಂಚ [illegible] ಮನೆಯನ್ನು ಖರೀದಿಸಿ [illegible]ಕೊಂಡರಾಯ್ತು ಎಂಬ ಎಣಿಕೆ ತಾಯಿಯದ್ದು. [illegible] ನೆಪವೊಡ್ಡಿಕೊಂಡೇ ಬಾಡಿಗೆ ಕಟ್ಟುವುದನ್ನು [illegible]ದ್ದಾರೆ. ಅದೇನು ಸಮಸ್ಯೆಯಿತ್ತೋ ಕೊಟ್ಟ ಒಂದೆರಡು [illegible] ಬೌನ್ಸಾಗಿವೆ. ಲೆಕ್ಕಕ್ಕೆ ಡಾ. ಮುನಿಪ್ರಸಾದ್ ಮತ್ತವರ ಪತ್ನಿ ವನಜಾ ಮನೆ ಮಾಲೀಕರಾದರೂ [illegible] ಬಾಡಿಗೆ ಉಸ್ತುವಾರಿ ನೋಡಿಕೊಳ್ಳುವುದು [illegible] ತಮ್ಮ ಡಾ. ಕೆ. ಉಪೇಂದ್ರಕುಮಾರ್.

ಮನೆ ಬಾಡಿಗೆಗೆ ಸತಾಯಿಸಿದಂತೆ ಮಾಡಿ [illegible] ತಮಗೇ ಮನೆಯನ್ನು ಮಾರಿಬಿಡಿ ಎಂದು ಒತ್ತಾಯಿಸುವುದು ಯಶ್ ತಾಯಿಯ ಲೆಕ್ಕಾಚಾರವಾಗಿತ್ತೇನೊ. ಹೀಗೆ ನೀ ಕೊಡೆ ನಾ ಬಿಡೆ ಎಂದೇ ನಾಲ್ಕು ವರ್ಷಗಳು ಕಳೆದುಹೋಗಿವೆ. ಬಹುಶಃ ಇದೇ ಮುಂದುವರಿದಿದ್ದರೆ ಡಾ. ಮುನಿಪ್ರಸಾದ್ ತಲೆನೋವು ತಪ್ಪಲೆಂದು ಮನೆ ಮಾರಿಬಿಡುತ್ತಿದ್ದರೇನೊ. ಕೇಳಿದಷ್ಟು ಕೊಡಲು ಯಶ್ ತಾಯಿಯೂ ಅಣಿಯಾಗಿದ್ದರು. ಆದರೆ ಯಾವತ್ತು 'ಗಜಕೇಸರಿ' ಹಿಟ್ಟಾಗಿ ಬೆನ್ನಲ್ಲೇ 'ರಾಮಾಚಾರಿ'ಯೂ ಸೂಪರ್ ಡೂಪರ್ ಕ್ಲಿಕ್ಕಾಯಿತೋ ಮನೆ ಮಾಲೀಕರ ತಲೆಯಲ್ಲಿ ಬೇರೆಯದೇ ಯೋಚನೆ ಹೊಳೆದಿದೆ.

ತಾಯಿಗಿಂತಲೂ ಆಕೆಯ ಸ್ಟಾರ್ ಮಗನ ಮೇಲೆ ಗುರಿಯಿಟ್ಟರೆ ಕೆಲಸ ಸಲೀಸೆಂದು 2015ರ ಮಾರ್ಚ್ 30ರಂದು ಗಿರಿನಗರ ಪೊಲೀಸ್ ಠಾಣೆಯಲ್ಲೊಂದು ದೂರು ದಾಖಲಿಸಿದ್ದಾರೆ.

ಇಲ್ಲಿ ಗಮನಿಸಬೇಕಾದ ಸೂಕ್ಷ್ಮವೆಂದರೆ ಸಾಮಾನ್ಯವಾಗಿ ಯಾರೇ ಮನೆ ಮಾಲೀಕರು ಬಾಡಿಗೆ ಕೊಡದೆ ಮೂರೋ ನಾಲ್ಕೋ ತಿಂಗಳಷ್ಟೇ ಕಾದು ಪೊಲೀಸರಿಗೋ ನ್ಯಾಯಾಲಯಕ್ಕೋ ದೂರು ಸಲ್ಲಿಸುವುದುಂಟು. ಆದರೆ ಮುನಿಪ್ರಸಾದ್ ನಾಲ್ಕು ವರ್ಷ ಕಾದಿದ್ದು ಯಶ್ ಸ್ಟಾರ್‌ಗಿರಿ ಬೆಳೆದಂತೆಲ್ಲ ಬಾಡಿಗೆ ಕೇಳದೇ ಟೈಂಪಾಸ್ ಮಾಡುತ್ತಾರೆ. ಕೊಟ್ಟ ದೂರಾದರೂ ಎಂಥಾದ್ದೆಂದರೆ; ಪುಷ್ಪಾ ನಟ ಯಶ್ ತಾಯಿ ಎಂದೂ, ಬಾಡಿಗೆ ಕೇಳಲು ಹೋದರೆ ಅವಾಚ್ಯವಾಗಿ ಬಯ್ಯುತ್ತಾರೆ ಎಂದೂ, ಆದ್ದರಿಂದ ಠಾಣೆಗೆ ಕರೆಸಿ ತಿಳಿವಳಿಕೆ ನೀಡಿ...!

ಆ ಪ್ರಕಾರ ಗಿರಿನಗರ ಪೊಲೀಸರು ಯಶ್ ತಾಯಿ ಪುಷ್ಪಾರನ್ನು ಇದಾಗಿ ವಾರಕ್ಕೇ ಠಾಣೆಗೆ ಕರೆಸುತ್ತಾರೆ. ಪುಷ್ಪಾ ಪೊಲೀಸರಿಗೆ ಕೊಟ್ಟ ಹೇಳಿಕೆಯ ಪ್ರಕಾರ 11 ತಿಂಗಳು ಮುಗಿದ ಬಳಿಕ ಮಾಲೀಕರು ನೀವೇ ಮುಂದುವರಿಯುವಂತೆ ಕೋರಿದ್ದಾರೆ. ಆದರೆ ಹೊಸ ಅಗ್ರಿಮೆಂಟ್ ಮಾಡಿಕೊಟ್ಟಿಲ್ಲ, ಇಷ್ಟು ದಿನ ಬಾಡಿಗೆಗೂ ಬರದೆ ಹೊಸ ಅಗ್ರಿಮೆಂಟೂ ಮಾಡಿಕೊಡದೆ ಈಗ ಏಕಾಏಕಿ ಖಾಲಿ ಮಾಡಿಕೊಡಿ ಎನ್ನುತ್ತಿದ್ದಾರೆ. ನಮಗೆ ತಕ್ಷಣಕ್ಕೆ ಮನೆ ಸಿಗುತ್ತಿಲ್ಲವಾದ್ದರಿಂದ ಸಿಕ್ಕ ನಂತರ ಖಾಲಿ ಮಾಡಿಕೊಡುತ್ತೇವೆ....

ಯಶ್ ತಾಯಿ ಗಿರಿನಗರ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲೇ ವಿರೋಧಾಭಾಸವಿದೆ ನಿಜ. ಇದಾದನಂತರ ಮಾಲೀಕರು ಸೆಷನ್ಸ್ ಕೋರ್ಟಿನಲ್ಲಿ ದಾವೆ ಹೂಡಿದ್ದೂ ಅತಿಶಯವೇನಲ್ಲ, ಕೋರ್ಟು ಯಥಾವತ್ತು ನೋಟಿಸು ನೀಡಿದ್ದೂ ಸತ್ಯ. ಯಾವತ್ತು ಕೋರ್ಟು ನೋಟಿಸು ಕೊಟ್ಟಿತೋ ಅದು ಕೋರ್ಟಿಗಷ್ಟೇ ಸೀಮಿತವಾಗಬೇಕಿತ್ತಲ್ಲವೆ?

ಈ ಹಂತದಲ್ಲೇ ನ್ಯೂಸ್ ಚಾನಲ್ಲುಗಳ ಕಾರ್ಯಾಚರಣೆ ಶುರುವಾಗಿದೆ. ಮನೆ ಮಾಲೀಕರು ಮತ್ತು ಬಾಡಿಗೆದಾರರ ನಡುವಿನ ವ್ಯಾಜ್ಯ ಎನ್ನುವುದಕ್ಕಿಂತಲೂ ಇದು ನಟ ಯಶ್ ತಾಯಿಯ ಲಫಡಾ ಎನ್ನುವಂತೆ ಸುದ್ದಿ ಹರಿದಾಡಿದೆ. ಯಶ್ ತಾಯಿಗೆ ಕೋರ್ಟ್ ನೋಟಿಸು ನೀಡಿದ್ದು 2015ರ ಜೂನ್ 15ರ ಸೋಮವಾರದಂದು. ಅವತ್ತೇ ಹೈದರಾಬಾದಿನಿಂದ ಡಾ. ಮುನಿಪ್ರಸಾದ್ ಮತ್ತವರ ಪತ್ನಿ ರಾತ್ರೋರಾತ್ರಿ ಬೆಂಗಳೂರಿಗೆ ಬರುತ್ತಾರೆ. ಮರುದಿನ ಬೆಳಗ್ಗೆಯೇ ಪ್ರೆಸ್‌ಕ್ಲಬ್‌ನಲ್ಲಿ ಪತಿ-ಪತ್ನಿ ಸೇರಿಕೊಂಡು ಯಶ್ ವಿರುದ್ಧ ಪತ್ರಿಕಾಗೋಷ್ಠಿ ನಡೆಸುತ್ತಾರೆ. ನಡೆದ ಪತ್ರಿಕಾಗೋಷ್ಠಿಗೆ ಬಹುತೇಕ ನ್ಯೂಸ್ ಚಾನಲ್ಲುಗಳ ರಿಪೋರ್ಟರ್‌ಗಳು ಕಿಕ್ಕಿರಿದರೆ ಪತ್ರಿಕಾಗೋಷ್ಠಿ ನಡೆದ ಕೆಲವೇ ಗಂಟೆಗಳಲ್ಲಿ ಡಾ. ಮುನಿಪ್ರಸಾದ್ ಮತ್ತವರ ಪತ್ನಿ ಟೀವಿಯೊಂದರ ಪ್ಯಾನಲ್ ಹರಟೆಗೆ ಹಾಜರಾಗುತ್ತಾರೆ. ಪೊಲೀಸರಿಗೆ ನೀಡಿದ ದೂರು ಮತ್ತು ಕೋರ್ಟಿನಲ್ಲಿ ಹೂಡಿದ ಕೇಸಿಗೆ ತಾಯಿ ಪುಷ್ಪಾ ಹೆಸರಷ್ಟೇ ಇದ್ದರೆ ಪತ್ರಿಕಾಗೋಷ್ಠಿ ಮತ್ತು ಟೀವಿ ಹರಟೆಯ ಹಂತ ಮುಟ್ಟುವ ಹೊತ್ತಿಗದು ನಟ ಯಶ್ ಗೂಂಡಾಗಿರಿಯೆಂಬಂತೆ ಬಿಂಬಿತವಾಗುತ್ತದೆ.

ತಮಾಷೆಯೆಂದರೆ ಡಾ. ಮುನಿಪ್ರಸಾದ್ ಮತ್ತವರ ಪತ್ನಿ ವನಜಾ ತಮಗೆ ಯಶ್ ಜೊತೆ ಸಂಪರ್ಕವಿಲ್ಲ, ಈ ತನಕ ತಾವು ಯಶ್ ಭೇಟಿ ಮಾಡಿದ್ದಾಗಲಿ, ಫೋನಿನಲ್ಲಿ ಮಾತಾಡಿದ್ದಾಗಲಿ ಇಲ್ಲ ಎನ್ನುತ್ತಾರೆ. ಯಶ್ ತಾಯಿ ಪುಷ್ಪಾ ಜೊತೆಗಷ್ಟೇ ತಮ್ಮ ವ್ಯವಹಾರ ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ಆರೋಪಿಸುವಾಗ ಯಶ್ ಹೆಸರು ತೂರಿಸುತ್ತಾರೆ. ಇದರರ್ಥ ಮನೆ ಮಾಲೀಕರಿಗೂ ಯಶ್‌ಗೂ ಪ್ರತ್ಯಕ್ಷವಾಗಲಿ ಪರೋಕ್ಷವಾಗಲಿ ಯಾವ ವ್ಯವಹಾರವೂ ಇಲ್ಲ.


ಕೋರ್ಟಿನಲ್ಲಿ ವಿಚಾರಣೆ ಬಾಕಿ ಇದೆ ಎಂದು ಗೊತ್ತಿದ್ದೂ ಕೋರ್ಟು ನೋಟಿಸು ನೀಡಿದ ರಾತ್ರಿಯೇ ಬೆಂಗಳೂರಿಗೆ ಬರುತ್ತಾರೆ. ಪ್ರೆಸ್‌ಕ್ಲಬ್‌ನ ನಿಯಮಾವಳಿ ಪ್ರಕಾರ ಆ ಕ್ಷಣಕ್ಕೇ ಬಂದವರ್‍ಯಾರಿಗೂ ಪತ್ರಿಕಾಗೋಷ್ಠಿಗೆ ಅವಕಾಶವಿಲ್ಲ. ಮೂರ್‍ನಾಲ್ಕು ದಿನಗಳ ಮೊದಲೇ ಪ್ರೆಸ್‌ಕ್ಲಬ್ ಕಾಯ್ದಿರಿಸಬೇಕು. ಎರಡು ದಿನಗಳ ಮೊದಲೇ ಮೀಡಿಯಾ ಕಚೇರಿಗಳಿಗೆ ಆಹ್ವಾನ ಪತ್ರ ಕಳಿಸಬೇಕು. ಆದರೆ ಯಶ್ ವಿಷಯದಲ್ಲಿ ತತ್‌ಕ್ಷಣಕ್ಕೇ ಎಲ್ಲವೂ ಸಿದ್ಧವಾಗುತ್ತದೆ. ನೋಟಿಸು ಕೊಟ್ಟ ದಿನವೇ ಪತ್ರಿಕೆಗಳಲ್ಲಿ ಸುದ್ದಿ. ಬೆಳಗ್ಗೆ ಸುದ್ದಿ ಪ್ರಕಟಗೊಂಡರೆ ಇದಾಗಿ ಕೇವಲ ಎರಡೇ ಗಂಟೆಯಲ್ಲಿ ಪತ್ರಿಕಾಗೋಷ್ಠಿ!

ಕೋರ್ಟಿನಲ್ಲಿ ವಿಚಾರಣೆ ಬಾಕಿಯಿದ್ದರೂ ಕೋರ್ಟ್ ತೀರ್ಪಿಗಿಂತಲೂ ಮನೆ ಮಾಲೀಕರ ಆಸಕ್ತಿಯಿರುವುದು ಯಶ್ ಹೆಸರಲ್ಲಿ ಸಿಗುವ ಪ್ರಚಾರದತ್ತ. ಯಶ್ ತಾಯಿ ತಮಗೆ ಬೆದರಿಕೆ ಹಾಕಿದ್ದಾರೆ ಎನ್ನುವ ಮನೆ ಮಾಲೀಕನಿಗೆ ಬೆದರಿಕೆ ಹಾಕಿದ ಬಗ್ಗೆ ಸಣ್ಣ ಸಾಕ್ಷ್ಯವಾದರೂ ನೀಡಬೇಕೆಂಬ ಪ್ರಜ್ಞೆಯಿಲ್ಲ. ವನಜಾರ ತಮ್ಮ ಉಪೇಂದ್ರ ತನಗೆ ಅನಾಮಧೇಯ ಕರೆ ಬಂತು ಎನ್ನುತ್ತಾರೆ. ಆದರೆ ಕರೆ ಬಂದ ಮೊಬೈಲ್ ನಂಬರ್ ಅವರದ್ದೇ ಆಪ್ತರೊಬ್ಬರ ಬೇನಾಮಿ ನಂಬರ್. ಅಷ್ಟಕ್ಕೂ 5 ವರ್ಷ ಕಾದಿದ್ದು ಪತ್ರಿಕಾಗೋಷ್ಠಿಯ ಹಿಂದಿನ ದಿನವೇ ಯಶ್ ರೌಡಿಗಳನ್ನು ಬಿಟ್ಟು ಕರೆ ಮಾಡಿಸುತ್ತಾರಾ?

ಎತ್ತಿಂದೆತ್ತ ಲೆಕ್ಕ ಹಾಕಿದರೂ ಈ ಪ್ರಕರಣದಲ್ಲಿ ತಪ್ಪು ನೆಪ್ಪು, ರೀತಿ ಅನೀತಿಗಿಂತಲೂ ಯಶ್ ಓರ್ವ ಹೀರೋ ಮತ್ತು ಸದ್ಯ ಆತ ಉತ್ತುಂಗದಲ್ಲಿರುವುದೇ ಹೆಚ್ಚು ಪ್ರಾಮುಖ್ಯತೆ ಗಳಿಸಿದೆ. ಯಶ್ ಅಲ್ಲದೆ ಬೇರೆ ಯಾರೋ ಜನಸಾಮಾನ್ಯರ ತಾಯಿಯಾಗಿದ್ದರೆ ಸುದ್ದಿಗೆ ಇಷ್ಟೊಂದು ಬೆಲೆಯಿರುತ್ತಿತ್ತಾ? ಯಶ್ ಆಗಲಿ ಅವರ ತಾಯಿಯಾಗಲಿ ಮುಗ್ಧರೆಂದೇನಲ್ಲ. ಆದರೆ ಕ್ಷುಲ್ಲಕ ಸಂಗತಿಯೊಂದಕ್ಕೆ ಸಿಕ್ಕ ಪ್ರಚಾರವಿದೆಯಲ್ಲ; ಅದು ಯಶ್ ಕಾರಣಕ್ಕಲ್ಲದೇ ಮತ್ತೇನಲ್ಲ.

ತಾಯಿ ಯಾರಿಗೆ ತಾಯಿಯಾದರೂ ಅಷ್ಟೇ. ಅದೇ ಒರಟು ಬುದ್ಧಿ, ಜಗಳಗಂಟ ಮನಸ್ಥಿತಿ ಮತ್ತು ಮಗನ ಸಾಧನೆಯ ಬಗೆಗಿನ ಮಾತೃ ಸಹಜ ಗರ್ವ. ಅದಕ್ಕೀಗ ಯಶ್ ತಲೆಕೊಡುತ್ತಿದ್ದಾನೆ. ಕೀರ್ತಿ, ಯಶಸ್ಸೇ ಕೆಲವೊಮ್ಮೆ ಮುಳುವಾಗುತ್ತದೆಯಂತೆ. ಅದಕ್ಕೆ ದರ್ಶನ್ ಹೊರತಲ್ಲ, ಯಶ್ ಕೂಡ ಕೀರ್ತಿ ಶನಿಯಿಂದ ಬಚಾವಾಗಲು ಸಾಧ್ಯವಿಲ್ಲ.

■ ರಾ.ಸೋಮನಾಥ್



ಕುಮಾರಣ್ಣ ಕಪಾಳಕ್ಕೆ ರಾಧಿಕಾ ಪಂಡಿತ್ ಪಾಠಾಳ್ಕೆ

ದರ್ಶನ್ ದೌಲತ್ತಿನ ಹಾದಿಯಲ್ಲೇ ಯಶ್...!

ಪುನೀತ್, ದರ್ಶನ್, ಸುದೀಪ್, ವಿಜಿ ಇತ್ಯಾದಿ ಹೀರೋಗಳಿಗೆ ಹೋಲಿಸಿದರೆ ಯಶ್ ಕೊಂಚ ಅತಿಯಾಗೇ ರಂಪಕ್ಕೆ ಬಿದ್ದರು ಮತ್ತು ಮೀಡಿಯಾಗಳ ಕೆಂಗಣ್ಣಿಗೂ ಬಲಿಯಾದರು. ಅದಕ್ಕೆ ಕಾರಣವಾಗಿದ್ದು ಯಶ್ ತಾಯಿಯ ಚೀಟಿ ರಾದ್ಧಾಂತ. ಮೈಸೂರು ಲೋಕೇಶ್ ಪತ್ನಿ ಯಶ್ ತಾಯಿಯಿಂದ ಚೀಟಿ ದುಡ್ಡಿನ ಮೋಸವಾಯಿತೆಂದು ದಿನವಿಡೀ ಬ್ರೇಕಿಂಗ್ ನ್ಯೂಸ್ ಮಾಡಿದ್ದು ಸುವರ್ಣ ಟೀವಿ.


ಜಿದ್ದಿಗೆ ಬಿದ್ದ ಯಶ್ ತನ್ನ ಯಾವುದೇ ಚಿತ್ರದ ದೃಶ್ಯಾವಳಿಯನ್ನೂ ಸುವರ್ಣ ಚಾನೆಲ್ಗೆ ನೀಡಕೂಡದೆಂದು ನಿರ್ಮಾಪಕರಿಗೆ ಷರತ್ತಿಡಲಾರಂಭಿಸಿದ. ಸುವರ್ಣದ ಅಕ್ಷರ ಸಂಬಂಧಿಯೆಂದು ಕನ್ನಡ ಪ್ರಭಕ್ಕೆ ತನ್ನ ಚಿತ್ರದ ಯಾವುದೇ ಜಾಹೀರಾತು ನೀಡಕೂಡದೆಂದು ನಿರ್ಬಂಧವನ್ನೂ ವಿಧಿಸಿಬಿಟ್ಟ. ಬರುಬರುತ್ತ ಯಶ್ ಸುತ್ತಣ ತರಲೆ ತಾಪತ್ರಯಗಳೂ ವೃದ್ಧಿಸತೊಡಗಿದವು. ಜಾತಿಯಲ್ಲಿ ಒಕ್ಕಲಿಗನೆಂಬ ಅಕ್ಕರೆಯಿಂದ ಮೈಸೂರಿನ ಸತ್ಯನ್ ಕೋಟಿಗಟ್ಟಲೆ ಸುರಿದು 'ರಾಜಧಾನಿ' ಚಿತ್ರ ನಿರ್ಮಿಸ ಹೊರಟು ಗುಣಮಟ್ಟದ ಉದ್ದೇಶಕ್ಕೆಂದು ಹಳೇ ಡೈರೆಕ್ಟರ್‌ನನ್ನು ಕಿತ್ತು ಆ ಜಾಗಕ್ಕೆ ಪರಿಣಿತ ಕೆ.ವಿ. ರಾಜುರನ್ನು ತಂದರು.

ಕೆ.ವಿ. ರಾಜು ಅಂದರೆ ಇಡೀ ಗಾಂಧಿನಗರವೇ ಎದ್ದು ನಿಂತು ನಮಸ್ಕರಿಸುತ್ತದೆ. ಆದರೆ ಯಶ್ ರಾಜು ಬುದ್ಧಿಮಾತಿಗೇ ತಿರುಗಿಬಿದ್ದ. ತಾನು ಹೇಳಿದ ಹಾಗೆ ನಿರ್ಮಾಪಕರು ಕೇಳುತ್ತಿಲ್ಲ ಎಂದು 'ರಾಜಧಾನಿ'ಗಿಂತ ಮೊದಲು 'ಕಿರಾತಕ' ಬಿಡುಗಡೆಗೆ ಕುಮ್ಮಕ್ಕು ಕೊಟ್ಟ. ರೋಸತ್ತ ಸತ್ಯನ್ ಭರ್ಜರಿಯಾಗೇ ಬಿಡುಗಡೆಯಾಗಿದ್ದ 'ರಾಜಧಾನಿ'ಯನ್ನು ಅರ್ಧದಲ್ಲೇ ಕಿತ್ತು ಡಬ್ಬಾಕ್ಕೆ ತುರುಕಿಟ್ಟರು. 'ಕಿರಾತಕ' ಬಿತ್ತು 'ರಾಜಧಾನಿ' ಹುಟ್ಟುತ್ತಲೇ ಸತ್ತು ಹೋಗಿತ್ತು. ನಂತರ ರಾಧಿಕಾ ಕುಮಾರಸ್ವಾಮಿಗೆ ಕಾಟ ಕೊಟ್ಟು 'ಲಕ್ಕಿ' ಚಿತ್ರಕ್ಕೆ ತೊಂದರೆ ಕೊಡುತ್ತಿದ್ದಾನೆಂಬ ಸುದ್ದಿ ಬಂತು. ಸಿಟ್ಟಿಗೆದ್ದ ಜೆಡಿಎಸ್ ನಾಯಕ ಕುಮಾರಣ್ಣ ಯಶ್‌ನನ್ನು ಎತ್ತಾಕಿಸಿ ತರಿಸಿ ಕಪಾಳಕ್ಕೆ ಬಿಗಿದರೆಂದು ಗುಲ್ಲೆದ್ದಿತು. ಅಂಬರೀಶ್ ವಿರುದ್ಧ ಯಶ್ ಮಾಡಿದ ಗೇಲಿಯನ್ನು ನಟನೊಬ್ಬ ವೀಡಿಯೋ ಮಾಡಿಕೊಂಡು ಅಂಬಿಗೆ ತೋರಿಸಿದ್ದು, ಮಂಡ್ಯ ಕುರಿತಂತೆ ಸಿನಿಮಾ ಮಾಡಲು ಬಂದವರಿಗೆ ಅವಮಾನವಾಗಿ ಮಂಡ್ಯದ ತಂಡ ಯಶ್ ಮನೆಯೆದುರು ಪ್ರತಿಭಟನೆ ನಡೆಸಿದ್ದು, ತನ್ನ ಕಾಲ್‌ಶೀಟ್ ಕೇಳುವ ಯಾರೇ ನಿರ್ಮಾಪಕರಿಗೆ ಗೋವಾದಲ್ಲಿ ಶೂಟಿಂಗ್ ಮಾಡುವಂತೆ ಷರತ್ತು ಹಾಕುವುದು, ಗೋವಾ ಶೂಟಿಂಗ್‌ಗೆ ಕೈಕೊಟ್ಟು ರಾಧಿಕಾ ಪಂಡಿತ್‌ರನ್ನು ಗೋವಾದ ಆಕೆಯ ಅಜ್ಜಿ ಮನೆಗೆ ಕರೆಸಿಕೊಳ್ಳುವುದು, ಪತ್ರಿಕೆ, ಮೀಡಿಯಾಗಳೆಂದರೇನೇ ಕಿಡಿ ಕಾರುವುದು ಎಲ್ಲವೂ ಈಗ ಯಶ್ ಪಾಲಿಗೆ ಕೀರ್ತಿ ಶನಿಯಾಗಿ ವಕ್ಕರಿಸುತ್ತಿವೆ.

ದರ್ಶನ್‌ನ ಗತ್ತು ದೌಲತ್ತು ದುರಹಂಕಾರವನ್ನು ಯಶ್ ಕೂಡ ಮೈಗೂಡಿಸಿಕೊಂಡಿದ್ದಾನೆಂದು ಗಾಂಧಿನಗರ ಕಿಡಿಕಾರುತ್ತಿರುವುದಕ್ಕೂ ಕಾರಣವಿರಬೇಕಲ್ಲವೆ?

ರಾಮಾಚಾರಿಯಲ್ಲಿ ಯಶ್






ಮಂಡ್ಯ ನಗರಸಭೆ ಅಧ್ಯಕ್ಷ ಚುನಾವಣೆ

ಗೆದ್ದ ಮೇಲೆ ಮತ್ತೆ ಬಿದ್ದ ಅಂಬಿ!

ಇದ್ಯಾಕೋ ಮಂಡ್ಯ ನಗರಸಭೆ ಉಸಾಬರಿಗೆ ಕೈಯಿಟ್ಟ ಘಳಿಗೆಯೇ ಅಂಬಿಗೆ ಮತ್ತೆಮತ್ತೆ ಮುಖಭಂಗ ಆಗುತ್ತಲೇ ಇದೆ. ಅಸಲಿಗೆ ಅದು ಅಂಬಿಯ ಸ್ವಯಂಕೃತ ಅಪರಾಧ ಎಂದರೂ ತಪ್ಪಾಗಲಿಕ್ಕಿಲ್ಲ. ಬೆನ್ನಿಗೆ ನಿಂತ ಕಾರ್ಯಕರ್ತರು, ನಿಯತ್ತಿನ ಹಿಂಬಾಲಕರ ಹಿತ ಕಾಯುವುದು ಬಿಟ್ಟು ಪಾಳೆಗಾರಿಕೆಯ ಗತ್ತಿನಲ್ಲಿ ಉಡಾಫೆಯ ಮಾತುಗಳಲ್ಲಿ ರಾಜಕಾರಣ ಮಾಡುತ್ತಿರುವ ಅಂಬಿ ಪೊಲಿಟಿಕಲ್ ವರ್ಚಸ್ಸು ಜಿಲ್ಲೆಯಲ್ಲಿ ಅದಾಗಲೇ ಪಾತಾಳಕ್ಕೆ ಕುಸಿದಿದೆ. ಮೊದಲೇ ಜನರ ಕೈಗೆ ಸಿಗದ, ಸೋಮಾರಿತನದ ಸಚಿವ ಅಂತ ಅಪಖ್ಯಾತಿಗೆ ಈಡಾಗಿರುವ ಅಂಬಿಗೆ ಮೊನ್ನೆ ನಡೆದ ನಗರಸಭೆ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆ ಮತ್ತೊಂದು ಶಾಕ್ ನೀಡಿದೆ.



ಸಿದ್ದರಾಜು ತೊಲಗಿದ ನಂತರ ಆ ಸ್ಥಾನಕ್ಕೆ ಕಾಂಗ್ರೆಸ್‌ನ ಹಿರಿಯ ಸದಸ್ಯ ಹೊಸಹಳ್ಳಿ ಬೋರೇಗೌಡ ಆಯ್ಕೆಯಾಗುತ್ತಾರೆಂದು ಮಂಡ್ಯದ ಜನ ಭಾವಿಸಿದ್ದು ಸುಳ್ಳಾಗಿದೆ. ಆ ಮೂಲಕ ಅಂಬಿ ನೀಡಿದ್ದ ವಿಪ್ ಕವಡೆ ಕಾಸಿನ ಕಿಮ್ಮತ್ತೂ ಇಲ್ಲದೆ ನೆಲಕಚ್ಚಿದೆ. ಹಲವು ದಶಕಗಳಿಂದ ಕಾಂಗ್ರೆಸ್‌ನಲ್ಲಿದ್ದುಕೊಂಡು ಅಂಬಿಯನ್ನೇ ನಂಬಿದ್ದ ಹೊಸಹಳ್ಳಿ ಬೋರೇಗೌಡನಂತವರಿಗೆ ಅಧಿಕಾರ ಕೊಡಿಸಲು ತಾಕತ್ತಿಲ್ಲದ ಅಂಬರೀಶ್ ನಂಬಿಕೊಂಡರೆ ಗ್ರಾ.ಪಂ. ಅಧಿಕಾರವೂ ಸಿಗುವುದಿಲ್ಲ ಎಂಬ ವಾಸ್ತವ ಮಂಡ್ಯ ಕಾಂಗ್ರೆಸ್ ಕಾರ್ಯಕರ್ತರಿಗೆ ಈ ಚುನಾವಣೆಯಿಂದ ಅರ್ಥವಾದಂತಾಗಿದೆ.

ಮೊದಲನೇ ಅವಧಿಯಲ್ಲೇ ಪಕ್ಷೇತರ ಸದಸ್ಯ ಸಿದ್ದರಾಜುಗಿಂತ 3 ಬಾರಿ ಆಯ್ಕೆಯಾಗಿದ್ದ ಹೊಸಹಳ್ಳಿ ಬೋರೇಗೌಡ ಅಧ್ಯಕ್ಷರಾಗಬೇಕಿತ್ತು. ಆದರೆ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಸಾಕಷ್ಟು ಬಾಚಿರುವ ದುಡ್ಡಿನ ಕುಳ ಸಿದ್ದರಾಜು ಅಂಬಿ ಶಿಷ್ಯ ಅಮರಾವತಿ ಚಂದ್ರನಿಗೆ ಭರ್ತಿ ಇಡಗಂಟು ಅರ್ಪಿಸಿ ಅಧ್ಯಕ್ಷ ಸ್ಥಾನಕ್ಕೇರಿದ್ದ. ಮಾಡಿಕೊಂಡ ಒಪ್ಪಂದದಂತೆ 15 ತಿಂಗಳ ನಂತರ ಅಧಿಕಾರ ಬಿಟ್ಟುಕೊಡದೆ ಸಾಕಷ್ಟು ಸತಾಯಿಸಿದ ಸಿದ್ದರಾಜು, ಅಂಬಿ ಹಾಗೂ ಅಮರಾವತಿ ಚಂದ್ರನ ಮರ್ಯಾದೆಯನ್ನು ಮೂರು ಕಾಸಿಗೆ ಹರಾಜಾಕಿದ್ದ. ಕೊನೆಗೆ ಜೆಡಿಎಸ್, ಪಕ್ಷೇತರರ ನೆರವಿನಿಂದ ಲಕ್ಷಲಕ್ಷ ಖರ್ಚು ಮಾಡಿ ಸಿದ್ದರಾಜುನನ್ನು ಕೆಳಗಿಳಿಸಬೇಕಾಯ್ತು. ಕೊನೇಪಕ್ಷ ಆಗಲಾದರೂ ಅಂಬಿ ಬುದ್ಧಿ ಕಲಿಯಬಹುದಿತ್ತು, ಆದರೆ ಆಗಾಗಲಿಲ್ಲ.

ಜೂನ್ 12ರ ಹೈಡ್ರಾಮಾ

ಮಂಡ್ಯ ನಗರಸಭೆ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯನ್ನು ಜೂನ್ 12ರಂದು ನಡೆಸಲು ಡಿಸಿ ಅಜಯ್ ನಾಗಭೂಷಣ್ ಡೇಟ್ ಫಿಕ್ಸ್ ಮಾಡಿದ್ದರು. ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನಿಂದ ಹೊಸಹಳ್ಳಿ ಬೋರೇಗೌಡ ಹಾಗೂ ಲೋಕೇಶ್ ಇಬ್ಬರು ಪ್ರಬಲ ಆಕಾಂಕ್ಷಿಗಳಾಗಿ ಸ್ಪರ್ಧಿಸಿದ್ದರು.. ಉಳಿದಿರುವ 9 ತಿಂಗಳ ಅಧಿಕಾರಾವಧಿಯಲ್ಲಿ ಈ ಇಬ್ಬರಿಗೂ ತಲಾ ನಾಲ್ಕೂವರೆ ತಿಂಗಳ ಅವಧಿಯನ್ನು ಹಂಚಲಾಗುವುದೆಂಬ ಮಾಹಿತಿ ಹರಿದಾಡುತ್ತಿತ್ತು. ಅಂಬಿ ಶಿಷ್ಯ ಅಮರಾವತಿ ಚಂದ್ರಶೇಖರನೇ ಇವೆಲ್ಲದರ ದೇಖಾರೇಖಿ ವಹಿಸಿದ್ದ. ಹೊಸಹಳ್ಳಿ ಬೋರೇಗೌಡ 10 ಗುಂಟೆ ಜಮೀನನ್ನು ಮಾರಿ ಭರ್ತಿ 40 ಲಕ್ಷ ರೂಪಾಯಿಯನ್ನು ಅಮರಾವತಿ ಚಂದ್ರನ ಉಡಿಗೆ ಸುರಿದಿದ್ದ. ಅದನ್ನೆಲ್ಲ ಸದಸ್ಯರಿಗೆ ಹಂಚದ ಚಂದ್ರ ತನ್ನಲ್ಲಿಯೇ ಇಟ್ಟುಕೊಂಡುಬಿಟ್ಟ. 'ಸಿದ್ದರಾಜು ಕೆಳಗಿಳಿಸಲು 64 ಲಕ್ಷ ರೂ. ಖರ್ಚಾಗಿದೆ, ನೀನು ಕೊಟ್ಟ ಹಣವನ್ನು ಅಲ್ಲಿಗೆ ಜಮಾ ಮಾಡುತ್ತೇನೆ, ನೀನೇನೂ ಭಯ ಪಡಬೇಡ ಬಹುತೇಕ ಎಲ್ಲಾ ಸದಸ್ಯರಿಗೂ ಸಿದ್ದರಾಜು ಕೆಳಗಿಸುವ ಸಂದರ್ಭದಲ್ಲಿ 2 ಲಕ್ಷ ರೂ. ನೀಡಿದ್ದೇನೆ, ಅದನ್ನೇ ಮುಂದಿರಿಸಿಕೊಂಡು ನಿನ್ನನ್ನೇ ಅಧ್ಯಕ್ಷನನ್ನಾಗಿ ಮಾಡಿಸುತ್ತೇನೆ. ಅಂಬರೀಶ್ ಅಣ್ಣನ ಆಶೀರ್ವಾದವೂ ನಿನ್ನ ಮೇಲೆ ಇದೆ. ಹಿರಿಯ ಸದಸ್ಯನಾದ ನೀನಲ್ಲದೆ ಮತ್ತಿನ್ಯಾರು ಅಧ್ಯಕ್ಷರಾಗುತ್ತಾರೆ' ಅಂತೆಲ್ಲಾ ಚಂದ್ರ ನೀಡಿದ ಭರವಸೆಗಳನ್ನೇ ನಂಬಿದ್ದ ಹೊಸಹಳ್ಳಿ ಬೋರೇಗೌಡ ತಾನೇ ಅಧ್ಯಕ್ಷ ಅಂತ ಗಾದಿಯೇರಲು ತಯ್ಯಾರಿ ನಡೆಸಿದ್ದ.

ಯಾವಾಗ ಅಮರಾವತಿ ಚಂದ್ರನಿಗೆ ಬೋರೇಗೌಡ 40 ಲಕ್ಷ ರೂಪಾಯಿ ಕೊಟ್ಟ ಸಂಗತಿ ಕಿವಿಗೆ ಬಿತ್ತೋ, ಇತ್ತ ಲೋಕೇಶ್ ಕೂಡ ಸದ್ದಿಲ್ಲದೆ ಪಕ್ಷೇತರ ಹಾಗೂ ಕಾಂಗ್ರೆಸ್ ಸದಸ್ಯರನ್ನು ಸಂಪರ್ಕಿಸಿ ಮೊದಲ ಕಂತಾಗಿ 50 ಸಾವಿರ ಹಣವನ್ನು ಅವರ ಜೇಬಿಗೆ ಹಾಕಿದ್ದ. ಚುನಾವಣೆಯ ಹಿಂದಿನ ದಿನ ಸದಸ್ಯರಿಗೆ ಉಳಿದ ಒಂದೂವರೆ ಲಕ್ಷ ತಲುಪಿಸಿ ಒಬ್ಬೊಬ್ಬರಿಗೆ ಎರಡು ಲಕ್ಷ ತಲುಪುವಂತೆ ನೋಡಿಕೊಂಡಿದ್ದ. ಹಣ ಜೇಬಿಗೆ ಬೀಳುತ್ತಿದ್ದಂತೆಯೇ ಅಂಬಿಯನ್ನೇ ಧಿಕ್ಕರಿಸಿ ಲೋಕೇಶ್‌ಗೆ ಜೈ ಅನ್ನಲು ಅವರೆಲ್ಲ ಸಜ್ಜಾಗಿದ್ದರು.

ಲೋಕೇಶ್ ಒಳಗಿಂದೊಳಗೇ ಹಣ ಕೊಟ್ಟು ಸರಿಮಾಡಿಕೊಂಡ ಸುದ್ದಿ ಅಮರಾವತಿ ಚಂದ್ರನಿಗೆ ತಿಳಿಯುತ್ತಿದ್ದಂತೆಯೇ ಮಂಡ್ಯದ ಅಂಬರೀಶ್ ನಿವಾಸದಲ್ಲಿ ಕಾಂಗ್ರೆಸ್, ಪಕ್ಷೇತರ ಅಭ್ಯರ್ಥಿಗಳ ಸಭೆ ಕರೆದಿದ್ದ. ಆ ಸಭೆಯಲ್ಲಿ ನಮಗೆ ಬೋರೇಗೌಡ ಬೇಡ, ನಾವು ಲೋಕೇಶ್‌ಗೆ ಬೆಂಬಲ ನೀಡ್ತೀವಿ ಅಂತ ರಾಜಾರೋಷವಾಗಿ ಅಮರಾವತಿ ಚಂದ್ರನ ಮುಖಕ್ಕೆ ಹೊಡೆದಂತೆ ಸದಸ್ಯರು ತಮ್ಮ ಅಭಿಪ್ರಾಯ ಹೊರಹಾಕಿದ್ದರು. ಅಮರಾವತಿ ಚಂದ್ರ ಸದಸ್ಯರನ್ನು ಒಪ್ಪಿಸಲು ಏನೆಲ್ಲ ತಿಪ್ಪರಲಾಗ ಹಾಕಿದರೂ ಲೋಕೇಶ್ ಕಾಸಿಗೆ ಬಕರಿಯಾಗಿದ್ದ ಸದಸ್ಯರ್‍ಯಾರೂ ಕ್ಯಾರೇ ಎನ್ನಲಿಲ್ಲ. 'ತಮ್ಮ ಶಿಷ್ಯ ಬೋರೇಗೌಡರನ್ನೇ ಅಂಬಿ ಅಧ್ಯಕ್ಷರನ್ನಾಗಿ ಮಾಡ್ತಾರೆ ಅಂತ ಜನ ಮಾತಾಡಿಕೊಳ್ಳುತ್ತಿದ್ದಾರೆ. ಈಗ ಅದು ಸಾಧ್ಯವಾಗದಿದ್ದರೆ ಅಂಬಿಯಣ್ಣನಿಗೆ ಭರ್ಜರಿ ಮುಖಭಂಗ ಆಗುತ್ತೆ, ದಯವಿಟ್ಟು ಸ್ಪರ್ಧೆಯಿಂದ ಹಿಂದೆ ಸರಿ' ಅಂತ ಖುದ್ದ ಲೋಕೇಶನನ್ನೇ ಅಂಗಲಾಚಿದರೂ ಆತನೂ ಅಧ್ಯಕ್ಷನಾಗುವ ತನ್ನ ಪಟ್ಟು ಸಡಿಸಲಿಲ್ಲ. ಕೊನೆಗೆ



ಬೋರೇಗೌಡ



ಲೋಕೇಶ್

ಅಮರಾವತಿ ಚಂದ್ರ ಮತ್ತು ಬೋರೇಗೌಡ ಇಬ್ಬರೂ ಲೋಕೇಶ್‌ನ ಕಾಲಿಗೆ ಬಿದ್ದು ದೈನೇಸಿಗಳಂತೆ ಬೇಡಿಕೊಂಡರೂ ಆತ ಮುಲಾಜಿಲ್ಲದೆ ಅಂಬಿ ಮನೆಯಿಂದ ಹೊರನಡೆದಿದ್ದ. ಹೋಗಲಿ ಉಳಿದಿರುವ 9 ತಿಂಗಳ ಅಧಿಕಾರಾವಧಿಯಲ್ಲಿ ತಲಾ ನಾಲ್ಕೂವರೆ ತಿಂಗಳ ಅಧಿಕಾರವನ್ನು ಇಬ್ಬರೂ ಹಂಚಿಕೊಳ್ಳಿ ಎಂಬ ಆಫರ್ ಚಂದ್ರನ ಕಡೆಯಿಂದ ಲೋಕೇಶ್‌ಗೆ ರವಾನೆ ಆಯಿತಾದರೂ ಅದಾಗಲೇ ಲಕ್ಷಾಂತರ ಖರ್ಚು ಮಾಡಿದ್ದ ಲೋಕೇಶ್ ಸುತಾರಾಂ ಒಪ್ಪದೇ ತಾನೇ ಒಂಬತ್ತು ತಿಂಗಳ ಅಧಿಕಾರ ಅನುಭವಿಸ್ತೇನೆ ಅಂತ ಬಂಡಾಯದ ಬಾವುಟ ಹಾರಿಸಿದ್ದ.

ಜೂನ್ 12ರ ಬೆಳಗ್ಗೆ 9 ಗಂಟೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆಯೇ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಹೊಸಹಳ್ಳಿ ಬೋರೇಗೌಡ ಮತ್ತು ಬಂಡಾಯ ಅಭ್ಯರ್ಥಿ ಲೋಕೇಶ್ ಹಾಗೂ ಸೋಗಲಾಡಿ ಸಿದ್ದರಾಜು ಬೆಂಬಲಿಗ ಅನಿಲ್‌ಕುಮಾರ್ ಮೂವರು ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಇನ್ನು ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನ ಕೆ.ಎಸ್.ಸುಮಾರಾಣಿ ಹಾಗೂ ಜೆಡಿಎಸ್‌ನ ಸುನಿತಾ ರವೀಂದ್ರ ಅವರಿಂದ ನಾಮಪತ್ರ ಸಲ್ಲಿಕೆಯಾಗಿದ್ದವು. ಇತ್ತ ಬೋರೇಗೌಡರೆ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ, ಅವರಿಗೇ ಮತ ಹಾಕಬೇಕು ಎಂಬ ವಿಪ್ ಕೂಡಾ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಬೇಲೂರು ಸೋಮಶೇಖರನ ಮೂಲಕ ತಲುಪಿತ್ತು. ನಾಮಪತ್ರ ವಾಪಸ್ ಪಡೆಯಲು 12 ಗಂಟೆವರೆಗೂ ಸಮಯ ನೀಡಲಾಗಿತ್ತು. ಈ ಹಂತದಲ್ಲಿ ಕೊನೆಯ ಬಾರಿ ಲೋಕೇಶ್ ಮನವೊಲಿಸಲು ಅಮರಾವತಿ ಚಂದ್ರ ಸಾಕಷ್ಟು ಪ್ರಯತ್ನಪಟ್ಟರೂ ಲೋಕೇಶ್ ನಾಮಪತ್ರ ವಾಪಸ್ ಪಡೆಯಲಿಲ್ಲ. ವಿಪ್‌ಗೆ ವಿರುದ್ಧವಾಗಿ ಕೆಲವು ಸದಸ್ಯರು ನಾವು ಲೋಕೇಶ್‌ರವರಿಗೆ ಮತ ಹಾಕಿಯೇ ಸಿದ್ಧ ಅಂತ ಬಹಿರಂಗವಾಗಿಯೇ ಘೋಷಿಸಿದ್ದರು. ಚುನಾವಣೆ ನಡೆದರೆ ಬೋರೇಗೌಡರಿಗೆ ಸೋಲು ಕಟ್ಟಿಟ್ಟ ಬುತ್ತಿ ಎಂಬುದು ಅಮರಾವತಿ ಚಂದ್ರನಿಗೆ ಅರ್ಥವಾಗಿ ಹೋಗಿತ್ತು. ಅದಕ್ಕಿಂತಲೂ ಮುಖ್ಯವಾಗಿ ಪಕ್ಷದ ಅರ್ಥಾತ್ ಅಂಬಿಯ ಅಧಿಕೃತ ಅಭ್ಯರ್ಥಿ ಸೋತರೆ ಅದು ಅಂಬಿಗೆ ಆಗುವ ಮುಖಭಂಗ ಎಂಬುದೂ ಆತನಿಗೆ ಮನದಟ್ಟಾಗಿತ್ತು. ಹಾಗಾಗಿ ವಿಧಿಯಿಲ್ಲದೆ ಅಂಬಿ ಮಾನ ಉಳಿಸಲು ನಾಮಪತ್ರ ವಾಪಸ್ ಪಡೆಯುವಂತೆ ಬೋರೇಗೌಡನಿಗೇ ಸೂಚನೆ ನೀಡಿದ್ದ. ಕೊನೆಗೆ ಅಂಬರೀಶ್ ಮಾನ ಕಾಪಾಡಲು ಹೊಸಹಳ್ಳಿ ಬೋರೇಗೌಡ ತನ್ನನ್ನೇ ಬಲಿಕೊಟ್ಟುಕೊಳ್ಳುವಂತಾಯಿತು. ಸದಸ್ಯರನ್ನು ಖರೀದಿಸಿದ್ದ ಲೋಕೇಶ್ ಅವಿರೋಧವಾಗಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದ. ಅತ್ತ ಜಮೀನೂ ಹೋಯ್ತು, ಇತ್ತ ಕಾಸೂ ಹೋಯ್ತು ಕಡೆಗೆ ಅಧ್ಯಕ್ಷಗಿರಿಯೂ ದಕ್ಕಲಿಲ್ಲ ಎಂಬ ಕೊರಗಿನಲ್ಲೇ ಬೋರೇಗೌಡ ಹೃದಯಾಘಾತಕ್ಕೆ ತುತ್ತಾಗಿ ಬೆಂಗಳೂರಿನ ಜಯದೇವ ಆಸ್ಪತ್ರೆಗೆ ದಾಖಲಾಗಬೇಕಾಗಿ ಬಂತು. ಅಂಬಿ ನಂಬಿದ್ದಕ್ಕೆ ಬಡ ಬೋರೇಗೌಡನಿಗೆ ಸಿಕ್ಕ ಗಿಫ್ಟು ಅದು.

ಮನಸ್ಸು ಮಾಡದ ಅಂಬಿ

ಅಂಬಿ ಮನಸ್ಸು ಮಾಡಿದ್ದರೆ 'ಬೋರೇಗೌಡರನ್ನು ಗೆಲ್ಲಿಸುವುದು ಕಷ್ಟವೇನೂ ಆಗುತ್ತಿರಲಿಲ್ಲ. ಬಂಡಾಯದ ವಿದ್ಯಮಾನಗಳು ನಡೆಯುತ್ತಿರುವುದು ತಿಳಿದ ಕೂಡಲೇ ಮಂಡ್ಯಕ್ಕೆ ಆಗಮಿಸಿ ಸದಸ್ಯರನ್ನೆಲ್ಲಾ ಕರೆದು, ಮಾತಾಡಿ, ವಿಶ್ವಾಸಕ್ಕೆ ತಂದುಕೊಂಡಿದ್ದರೆ ಅಂಬಿ ಮೇಲಿನ ಗೌರವಕ್ಕೊ, ಭಯಕ್ಕೊ ಅವರೆಲ್ಲ ಬೋರೇಗೌಡನ ಪರ ನಿಲ್ಲುತ್ತಿದ್ದರು. ಆದರೆ ಉಡಾಫೆಯ ಅಂಬಿ ಮಂಡ್ಯದ ಗಂಡಿನಂತೆ ನಡೆದುಕೊಳ್ಳಲೇ ಇಲ್ಲ. ಕಡೇಪಕ್ಷ ಕಾಂಗ್ರೆಸ್‌ನ ಎಲ್ಲಾ ಸದಸ್ಯರಿಗೂ ಚುನಾವಣೆ ನಡೆಯುವ ಮೂರ್‍ನಾಲ್ಕು ದಿನ ಮೊದಲು ವಿಪ್ ಕೊಟ್ಟು ಮತ ಚಲಾಯಿಸುವಂತೆ ತಾಕೀತು ಮಾಡಿದ್ದರೂ ಸದಸ್ಯರು ಕೊಂಚ ಹೆದರಿಕೊಳ್ಳುತ್ತಿದ್ದರೇನೊ. ಆದರೆ ಚುನಾವಣೆಯ ದಿನ ವಿಪ್ ಕೊಡಲು ಹೋದರೆ ಹಣಕ್ಕೆ ಬಕರಿಯಾಗಿದ್ದ ಸದಸ್ಯರು ಅಂಕೆಗೆ ಸಿಕ್ಕಾರೆಯೇ? ಒಂದಿಬ್ಬರು ಸದಸ್ಯರು ಬಿಟ್ಟರೆ ಉಳಿದವರ್‍ಯಾರು ವಿಪ್ ಸ್ವೀಕರಿಸಲೇ ಇಲ್ಲ.

ಕನಿಷ್ಠ ತನ್ನ ನಂಬಿರುವವರ ಕೈ ಹಿಡಿಯಲಾಗದ ಅಂಬಿಯಂತಹ ಕುಂಟು ಕುದುರೆಯನ್ನು ಎಷ್ಟು ದಿನಗಳವರೆಗೆ ಸಹಿಸಿಕೊಂಡಿರಲು ಸಾಧ್ಯ. ಹಾಗಾಗಿ ಅಂಬಿ ವಿರುದ್ಧ ಜಿಲ್ಲೆಯಾದ್ಯಂತ ಕಾಂಗ್ರೆಸ್ ಮುಖಂಡರ ಅಸಹನೆ ತಾರಕಕ್ಕೇರಿರುವುದು, ಈಗಾಗಲೇ ಕಾಂಗ್ರೆಸ್ ಹೈಕಮಾಂಡ್ ಹಾಗೂ ರಾಜ್ಯ ವರಿಷ್ಠರ ಗಮನಕ್ಕೂ ತಲುಪಿದೆ. ಸಚಿವ ಸಂಪುಟ ವಿಸ್ತರಣೆ ಮಾಡುವ ಸಂದರ್ಭದಲ್ಲಿ ಅಸಮರ್ಥ ಸಚಿವರನ್ನು ಕೈಬಿಡಲಾಗುವುದೆಂಬ ಮಾತಿನ ಹಿನ್ನೆಲೆಯಲ್ಲಿ ಹೇಳುವುದಾದರೆ ಮೊದಲು ಅಂಬರೀಶ್‌ರನ್ನೇ ಸಚಿವ ಸ್ಥಾನದಿಂದ ಕೈಬಿಡಬೇಕೆಂಬ ಮಾತುಗಳು ಅಂಬಿಯ ನಿಷ್ಠಾವಂತರಿಂದಲೇ ಕೇಳಿಬರುತ್ತಿರೋದು ಅಂಬಿ ವರ್ಚಸ್ಸಿನ ದುಸ್ಥಿತಿಯನ್ನು ತೆರೆದಿಡುತ್ತಿದೆ.

ನಾಲ್ಕೂವರೆ ತಿಂಗಳ ನಂತರ ಲೋಕೇಶ್ ಅಧಿಕಾರವನ್ನು ಬೋರೇಗೌಡರಿಗೆ ಬಿಟ್ಟು ಕೊಡುತ್ತಾರೆಂಬ ವಾದವನ್ನು ಅಮರಾವತಿ ಚಂದ್ರನ ಬೆಂಬಲಿಗರು ಮಾಡುತ್ತಾರಾದರೂ, ಅಜಮಾಸು 40-50 ಲಕ್ಷ ಬಂಡವಾಳ ಸುರಿದಿರುವ ಲೋಕೇಶ್ ಕೇವಲ ನಾಲ್ಕೂವರೆ ತಿಂಗಳಿಗೆ ಅಧಿಕಾರ ಬಿಟ್ಟುಕೊಡುವ ಸಾಧ್ಯತೆ ತುಂಬಾ ಕಡಿಮೆ. ಮತ್ತೆ ತನ್ನದೇ ಪಕ್ಷದ ಸದಸ್ಯರ ವಿರುದ್ಧ ಅವಿಶ್ವಾಸ ಅಂತೆಲ್ಲಾ ಹೋದರೆ ಸಮಯವೂ ಇರೋಲ್ಲ; ಪಕ್ಷಕ್ಕೆ ಮರ್ಯಾದೆಯೂ ಸಿಕ್ಕೋಲ್ಲ. ಹಾಗಾಗಿ ಬೋರೇಗೌಡರಿಗೆ ನಗರಸಭೆಯ ಅಧ್ಯಕ್ಷ ಸ್ಥಾನ ಕನಸಿನ ಮಾತೇ ಸರಿ.

ಅತ್ತ ಕಾಂಗ್ರೆಸ್ ಪಾಳೆಯ ಅಂಬಿ ಮೇಲಿನ ಆರೋಪದಲ್ಲಿ ಗಿರಕಿ ಹೊಡೆಯುತ್ತಿದ್ದರೆ, ಇತ್ತ ಸಿದ್ದರಾಜು 'ನನ್ನನ್ನು ಕೆಳಗಿಳಿಸಿದ್ದರಿಂದ ನನ್ನ ಬೆಂಬಲಿಗರ ಜೊತೆ ಸೇರಿ ಲೋಕೇಶ್ ಬೆಂಬಲಿಸಿ ಅಂಬಿಗೆ ಮುಖಭಂಗ ಮಾಡಿದ್ದು ನಾನೇ' ಅಂತ ಹೇಳಿಕೊಂಡು ತಿರುಗುತ್ತಿದ್ದಾನೆ. ಒಟ್ಟಿನಲ್ಲಿ ಮಂಡ್ಯ ನಗರಸಭೆ ಮತ್ತೊಮ್ಮೆ ಕಾಂಚಾಣದ ಕುಣಿತಕ್ಕೆ ಸಿಲುಕಿ ನಲುಗಿಹೋಗಿದೆ. ಜೊತೆಗೆ ಅಂಬಿಯ ವರ್ಚಸ್ಸನ್ನೂ ಧರೆಗಿಳಿಸಿ ಹಾಕಿದೆ.

■ ವರದಿಗಾರ



ಪ್ರಯೋಜನಕ್ಕೆ ಬಾರದ ವಿಪ್



ಸದಸ್ಯರನ್ನು ಖರೀದಿಸಿ ಅಧ್ಯಕ್ಷನಾದ ಲೋಕೇಶ್

ಮಂಡ್ಯ ನಗರಸಭೆ ಸದಸ್ಯರು ಮಾರಾಟಕ್ಕಿದ್ದಾರೆ!

ಹಣ ಕೊಟ್ಟರೆ ಪಕ್ಷ, ತತ್ವ, ಸಿದ್ಧಾಂತವನ್ನೇ ಮಾರಿಕೊಳ್ಳುವ ಸದಸ್ಯರನ್ನು ನೋಡಬೇಕಾದರೆ ಮಂಡ್ಯ ನಗರಸಭೆಗೆ ಬರಬೇಕು. ಮೊದಲ ಅವಧಿಗೆ ಸಿದ್ದರಾಜುನನ್ನು ಅಧ್ಯಕ್ಷ ಸ್ಥಾನಕ್ಕೆ ಏರಿಸಲು ಕಾಂಗ್ರೆಸ್ ಹಾಗೂ ಪಕ್ಷೇತರ ಸದಸ್ಯರಿಗೆ ತಲಾ 2 ಲಕ್ಷ ಹಣವನ್ನು ನೀಡಲಾಗಿತ್ತು. ಸಿದ್ದರಾಜು ನಡೆಸಿದ ಬಜೆಟ್ ಸಭೆಗೆ ಕೋರಂ ಕೊಟ್ಟ ಜೆಡಿಎಸ್‌ನ ಐವರು ಸದಸ್ಯರಿಗೆ ತಲಾ 1 ಲಕ್ಷ ಹಣವನ್ನು ನೀಡಲಾಗಿತ್ತು. ಆಮೇಲೆ ಅದೇ ಸಿದ್ದರಾಜುನನ್ನು ಕೆಳಗಿಳಿಸಲು ಕಾಂಗ್ರೆಸ್, ಜೆಡಿಎಸ್, ಪಕ್ಷೇತರ ಸದಸ್ಯರಿಗೆ ತಲಾ 2 ಲಕ್ಷ ಹಣ ಸಂದಾಯವಾಗಿತ್ತು. ಈಗ ಲೋಕೇಶ್, ಪ್ರತಿ ಸದಸ್ಯನ ತಲೆಗೆ 2 ಲಕ್ಷ ಕಟ್ಟಿ ಅಧ್ಯಕ್ಷ ಪಟ್ಟ ಖರೀದಿಸಿದ್ದಾನೆ.


ಈ ಬಾರಿ ನಗರಸಭೆಗೆ ಆರಿಸಿ ಬಂದಿರುವ ಒಂದಿಬ್ಬರನ್ನು ಬಿಟ್ಟು ಬಹುತೇಕ ಸದಸ್ಯರಿಗೆ ಹಬ್ಬವೋ ಹಬ್ಬ. ಅತ್ತ ಕಾಮಗಾರಿಗಳಲ್ಲಿ ಪರ್ಸೆಂಟೇಜ್ ಲೆಕ್ಕದಲ್ಲಿ ಕಾಸು ಜೇಬಿಗಿಳಿಯುತ್ತಿದೆ; ಇತ್ತ ಚುನಾವಣೆ ಸರ್ಕಸ್ ನೆಪದಲ್ಲಿ ಬೋನಸ್ ಅಮೌಂಟು ಅಕೌಂಟ್‌ಗೆ ಜಮಾ ಆಗುತ್ತಿದ್ದರೆ ಸಾಕು. ಹೀಗೆ ಆರಾರು ತಿಂಗಳಿಗೂ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿ ಎಂದು ದೇವರಲ್ಲಿ ಬೇಡಿಕೊಳ್ಳುತ್ತಿದ್ದಾರೆ. ಹಣಕ್ಕಾಗಿ ಮೂರು ಬಿಟ್ಟ ಇಂತಹ ಸದಸ್ಯರಿಂದ ನಗರದ ಅಭಿವೃದ್ಧಿ ಸಾಧ್ಯವೇ?

ಅಧಿಕಾರ ಬಿಡ್ತೇವೆ ಸಿದ್ದರಾಜು ಕೈಬಿಡಲ್ಲ, ಸಿದ್ದರಾಜು ಕೆಳಗಿಳಿಸಿದರೆ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದ ಸದಸ್ಯರು ಇನ್ನೂ ಜೀವಂತವಾಗೇ ಇದ್ದಾರೆ. ನನಗೆ ಹೃದಯಾಘಾತವಾದಾಗ ಉಳಿಸಿಕೊಂಡಿದ್ದೇ ಸಿದ್ದರಾಜು, ಆತನಿಗೆ ಮೋಸ ಮಾಡುವುದೂ ಒಂದೇ ತಲೆ ಹಿಡಿಯುವುದು ಒಂದೇ ಎಂದು ಹೇಳಿ ಕೊನೆಗೆ ಸಿದ್ದರಾಜು ವಿರುದ್ಧವೇ ಮತ ಹಾಕಿದ ಸದಸ್ಯನೂ ಇದ್ದಾನೆ. ಸಿದ್ದರಾಜು ಕೊಟ್ಟ ಪ್ರಸಾದ ಸ್ವೀಕರಿಸಿ ಆತನನ್ನು ಕೆಳಗಿಳಿಸುತ್ತಿರುವುದು ಸರಿಯಲ್ಲ ಎಂದು ಗೋಳಿಟ್ಟ ಜೆಡಿಎಸ್ ಸದಸ್ಯರು ನಂತರ ಅವನ ವಿರುದ್ಧವೇ ಮತ ಹಾಕಿದ್ದನ್ನು ಮಂಡ್ಯದ ಜನ ಕಣ್ಣಾರೆ ಕಂಡಿದ್ದಾರೆ. ಒಟ್ಟಿನಲ್ಲಿ ಇವರೆಲ್ಲ ಮಾರಾಟಕ್ಕಿಟ್ಟ ಸರಕಿನಂತೆ ದಿನಕ್ಕೊಬ್ಬರಿಗೆ ಬಕರಿಯಾಗುತ್ತಿರುವುದನ್ನು ನೋಡಿ ಮತ ಹಾಕಿದ ಜನ ತಲೆ ಚಚ್ಚಿಕೊಳ್ಳುತ್ತಿದ್ದಾರೆ.

ಹೆಚ್.ಡಿ.ಕೋಟೆ: ಅದು ಆತ್ಮಹತ್ಯೆಯೋ? ಕೊಲೆಯೋ?

ಹೆಚ್.ಡಿ.ಕೋಟೆ ತಾಲ್ಲೂಕಿನ ಕಾಳಿಹುಂಡಿ ಸಮೀಪದಲ್ಲಿ ಇತ್ತೀಚೆಗೆ ಘಟಿಸಿದ ಆತ್ಮಹತ್ಯೆ ಪ್ರಕರಣವೊಂದು ದಿನದಿಂದ ದಿನಕ್ಕೆ ಕೊಲೆಯ ಅನುಮಾನ ಹುಟ್ಟಿಸುತ್ತಾ ಸಾಗುತ್ತಿದೆ. ಜೂನ್13ನೇ ತಾರೀಖು,ಬೆಳ್ಳಂಬೆಳಗ್ಗೆ ಕಾಳಿ ಹುಂಡಿಯಿಂದ ಸ್ವಲ್ಪ ದೂರದ ನಿರ್ಜನ ಪ್ರದೇಶವೊಂದರ ಮರದಲ್ಲಿ ಒಬ್ಬ ವ್ಯಕ್ತಿಯ ಶವ ನೇಣುಬಿಗಿದ ಸ್ಥಿತಿಯಲ್ಲಿ ನೇತಾಡುತ್ತಿತ್ತು. ಹಾಗೆ ಅನುಮಾನಾಸ್ಪದ ರೀತಿಯಲ್ಲಿ ಸಿಕ್ಕಿದ್ದು ಪಕ್ಕದ ಕೆ.ಬೆಳತೂರು ಗ್ರಾಮದ ಬಿ.ಪಿ. ನಾಗರಾಜ್ ಎಂಬುವವರ ಶವ.

ಸರಳ, ಸಜ್ಜನ, ಜನಾನುರಾಗಿ ವ್ಯಕ್ತಿ ಅಂತಲೇ ಜನರ ನಡುವೆ ಹೆಸರು ಮಾಡಿದ್ದ ಬಿ.ಪಿ. ನಾಗರಾಜ್‌ರಿಗೆ ಆತ್ಮಹತ್ಯೆ ಮಾಡಿಕೊಳ್ಳುವಂತಹ ಯಾವ ಕಾರಣವೂ ಇರಲಿಲ್ಲ; ಅವರದು ಅಂತಹ ಕ್ಷುಲ್ಲಕ ಜಾಯಮಾನವೂ ಆಗಿರಲಿಲ್ಲ. ಅಖಿಲ ನಾಮಧಾರಿಗೌಡ ಸಂಘದ ಹೆಚ್.ಡಿ. ಕೋಟೆ ವಲಯದ ಕಾರ್ಯದರ್ಶಿಯಾಗಿ, ತಾಲ್ಲೂಕು ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ, ಕಬ್ಬು ಬೆಳೆಗಾರರ ಸಂಘದ ಸಕ್ರಿಯ ಸದಸ್ಯರಾಗಿ, ತೆಂಗುಬೆಳೆಗಾರರ ಸಂಘದ ಉಪಾಧ್ಯಕ್ಷರಾಗಿದ್ದ ಅವರು ಸಕ್ರಿಯ ರಾಜಕಾರಣದಲ್ಲಿ ಗುರುತಿಸಿಕೊಳ್ಳದೇ ಹೋಗಿದ್ದರೂ ಊರಿನ ಮತ್ತು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಗೌರವಾನ್ವಿತ ವ್ಯಕ್ತಿ ಎನಿಸಿದ್ದಂತವರು. ಅಂತಹ ನಾಗರಾಜ್ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂಬುದನ್ನು ಗ್ರಾಮಸ್ಥರು ಸುತರಾಂ ಒಪ್ಪುತ್ತಿಲ್ಲ. ಇದರ ಹಿಂದೆ, ಇತ್ತೀಚೆಗಷ್ಟೆ ಪರಿಸಮಾಪ್ತಿಯಾಗಿರುವ ಪಂಚಾಯ್ತಿ ಚುನಾವಣೆಯ ಲೋಕಲ್ ಪೊಲಿಟಿಕ್ಸ್ ಅಥವಾ ಹಳೆಯ ದ್ವೇಷ ಇಲ್ಲವೇ ದರೋಡೆಯ ದುರುದ್ದೇಶಗಳು ಅಡಗಿರಬಹುದೆನ್ನುವ ಗುಲ್ಲುಗಳು ಕೇಳಿಬರುತ್ತಿವೆ.



ಅಸಲಿಗೆ 2008ರಲ್ಲಿ ಇದೇ ಬೆಳತೂರು ಗ್ರಾಮದಲ್ಲಿ ದೊಂಬಿ ಗಲಾಟೆ ನಡೆದಿದ್ದಾಗ ಊರಿನ ಮುಖಂಡರಾಗಿ ನಾಗರಾಜ್‌ರವರು ಮುಂದೆ ನಿಂತಿದ್ದರು. ಅದು ಕೆಲವರಿಗೆ ರುಚಿಸದೆ ನಾಗರಾಜ್‌ರವರ ಕೊಲೆಯತ್ನಕ್ಕೂ ಮುಂದಾಗಿದ್ದರು. ಆಮೇಲೆ ಗಲಾಟೆ ತಣ್ಣಗಾಗಿತ್ತಾದರೂ ಆದಾದ ನಂತರವೂ ಒಂದೆರಡು ಬಾರಿ ಜೀವ ಬೆದರಿಕೆಯ ಸೂಚನೆಗಳು ಅವರಿಗೆ ಸಿಕ್ಕಿದ್ದವು. ಆಗಿನಿಂದ ಸಂಪೂರ್ಣ ಎಚ್ಚೆತ್ತುಕೊಂಡಿದ್ದ ನಾಗರಾಜ್‌ರವರು ರಾತ್ರಿಯ ವೇಳೆ ಒಬ್ಬೊಬ್ಬರೆ ಓಡಾಡುವುದನ್ನೇ ಬಿಟ್ಟುಬಿಟ್ಟಿದ್ದರು.

ಆದರೆ ಜೂನ್ 12ರ ಸಂಜೆ ಸುಮಾರು 4.30ರ ಸಮಯದಲ್ಲಿ ತಾವು ಬೆಳೆದು ಮಾರಾಟ ಮಾಡಿದ್ದ ಭತ್ತದ ಹಣವನ್ನು ಪಕ್ಕದ ಹುಲ್ಲಹಳ್ಳಿಯಲ್ಲಿರುವ ದಲ್ಲಾಳಿ ಬಕಳ್ಳಿ ರವಿ ಎಂಬಾತನಿಂದ ವಸೂಲಿ ಮಾಡಿಕೊಂಡು ಬರಲು ಏಕಾಂಗಿಯಾಗಿ ಹೋಗಿದ್ದರು. ಹಾಗೆ ಊರಿನಿಂದ ತೆರಳಿದ ನಾಗರಾಜ್‌ರವರು ರಾತ್ರಿ 7.10ರ ಸುಮಾರಿಗೆ ಪರಿಚಯಸ್ಥರೊಬ್ಬರಿಗೆ ಕರೆ ಮಾಡಿ ನೂತನ ಪಂಚಾಯ್ತಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯ ಕುರಿತು ನಡೆಸಲು ಉದ್ದೇಶಿಸಲಾಗಿದ್ದ ಸಭೆಗೆ ಇನ್ನು ಅರ್ಧ ಗಂಟೆಯಲ್ಲಿ ಬರುವುದಾಗಿ ಮತ್ತು ಸಭೆಯನ್ನು ಶುರು ಮಾಡಲು ಎಲ್ಲಾ ತಯಾರಿ ಮಾಡಿಕೊಳ್ಳುವಂತೆ ಅವರಿಗೆ ತಿಳಿಸಿದ್ದರು. ಆದಾದ ಕೆಲಕ್ಷಣಗಳಲ್ಲಿ ಹೆಂಡತಿ ಮತ್ತು ಮಗನಿಗೆ ಫೋನ್ ಮಾಡಿದ್ದರಾದರು ಅವರು ಕರೆಯನ್ನು ಸ್ವೀಕರಿಸುವ ಮುನ್ನವೇ ಕಾಲ್‌ಕಟ್ ಆಗಿತ್ತು. ಅವರ ಹೆಂಡತಿ ತಕ್ಷಣವೇ ವಾಪಾಸ್ ಮಾಡಿದಾಗ ರಿಂಗ್ ಆಯಿತೇ ವಿನಾ ಆತ್ತಕಡೆಯಿಂದ ಯಾವ ಪ್ರತಿಕ್ರಿಯೆಯೂ ಸಿಗಲಿಲ್ಲ.

ಇದರಿಂದ ಗಾಬರಿಗೊಂಡ ಸಂಬಂಧಿಕರು ಮತ್ತು ಗ್ರಾಮಸ್ಥರು, ಸರಿಹೊತ್ತಿನಲ್ಲೇ ಯುವಕರ ಒಂದು ತಂಡವನ್ನು ಹುಡುಕಾಟಕ್ಕೆಂದು ಕಳಿಸಿದ್ದರು. ಹುಲ್ಲಹಳ್ಳಿಯ ದಲ್ಲಾಳಿ ಬಕಳ್ಳಿ ರವಿಯ ಮನೆಗೆ ಬಂದು ನೋಡಿದರೆ ಬೀಗ ಹಾಕಿತ್ತು. ಅನುಮಾನ ಮತ್ತಷ್ಟು ಗಾಢವಾಗಿದ್ದೇ ತಡ ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ಹೋಗಿ ನಾಗರಾಜ್ ಕಾಣದಿರುವ ಬಗ್ಗೆ ಮೌಖಿಕ ಸುದ್ದಿ ಮುಟ್ಟಿಸಿದ್ದರು. ಬೆಳಗ್ಗಿನ ಜಾವ ಮತ್ತೊಂದು ತಂಡ ಹುಲ್ಲಹಳ್ಳಿಗೆ ಹೋಗಿ ವಿಚಾರಿಸಬೇಕೆಂದು ಹೊರಟಿದ್ದಾಗ, ರಸ್ತೆಯಲ್ಲಿ ಸಿಕ್ಕ ಒಂದಿಬ್ಬರು ದಾರಿಹೋಕರು ಕಾಳಿಹುಂಡಿ ಬಳಿಯಲ್ಲಿ ರಸ್ತೆಯ ಪಕ್ಕದ ಹಳ್ಳದಲ್ಲಿ ಒಂದು ಬೈಕ್ ಬಿದ್ದಿರುವ ಸಂಗತಿ ತಿಳಿಸಿದ್ದಾರೆ. ಆ ಮಾಹಿತಿಯನ್ನು ಆಧರಿಸಿ ಸ್ಥಳಕ್ಕೆ ಬಂದಾಗ, ಅಲ್ಲಿ ಬಿದ್ದಿದ್ದದ್ದು ನಾಗರಾಜ್‌ರವರ ಬೈಕೇ ಆಗಿತ್ತು. ಅಲ್ಲೇ ಆಸುಪಾಸಿನಲ್ಲಿ ಪರಿಶೀಲನೆ ನಡೆಸಿದಾಗ ದಾರಿಯಿಂದ ಸುಮಾರು ದೂರಕ್ಕೆ, ಕಲ್ಲಲ್ಲಿ ಸರಾಗವಾಗಿ ಹೋಗಲಾಗ ದಂತಹ ಗಿಡಗಂಟೆಗಳ ಸಮೂಹವೊಂದರ ಮರದಲ್ಲಿ ನಾಗರಾಜ್‌ರವರ ಶವ ನೇಣು ಬಿಗಿದ ಸ್ಥಿತಿಯಲ್ಲಿ ನೇತಾಡುತ್ತಿತ್ತು.

ಶವ ಇದ್ದ ಸ್ಥಿತಿಯೇ ಹಲವಾರು ಅನುಮಾನಗಳನ್ನು ಹುಟ್ಟಿಸುವಂತಿತ್ತು. ಸುಮಾರು ಹತ್ತು ಅಡಿ ಎತ್ತರದ ಮರದ ಕೊಂಬೆಯನ್ನು ಆ ಕಾರ್ಗತ್ತಲಿನಲ್ಲಿ ಹತ್ತಿ ಅಲ್ಲಿಗೆ ಹಗ್ಗ ಬಿಗಿದುಕೊಂಡು ಕೆಳಕ್ಕೆ ಜಿಗಿಯುವುದು ದುಸ್ಸಾಧ್ಯವೇ ಸರಿ. ಅಲ್ಲದೇ ಶವದ ಕಾಲುಗಳು ನೆಲಕ್ಕೆ ತುಂಬಾ ಸಲೀಸಾಗಿ ತಾಕುತ್ತಿದ್ದವು. ಸಾಮಾನ್ಯವಾಗಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಾಗ ಪ್ರಾಣ ಹೋಗುವ ಯಾತನೆಯಲ್ಲಿ ವ್ಯಕ್ತಿ ಒದ್ದಾಡಿದ, ನಾಲಗೆ ಹೊರಗೆ ಚಾಚಿಕೊಂಡ, ಮೂತ್ರ ಹರಿದ ಲಕ್ಷಣಗಳಿರುತ್ತವೆ. ಆದರೆ ಅಲ್ಲಿ ಅವ್ಯಾವುದರ ಸುಳಿವೂ ಇರಲಿಲ್ಲ. ಅವರು ತೊಟ್ಟಿದ್ದ ಅಂಗಿಯ ಇನ್‌ಶರ್ಟ್ ಕೂಡಾ ಅಚೀಚೆ ಕದಲಿರಲಿಲ್ಲ! ಜೇಬಲ್ಲಿ ಮೊಬೈಲ್ ಇತ್ತಾದರು ಪರ್ಸ್ ಶವವಿದ್ದ ಸುಮಾರು ಅರ್ಧ ಫರ್ಲಾಂಗು ದೂರದಲ್ಲಿ ಬಿದ್ದಿತ್ತು. ಒಂದೊಮ್ಮೆ ಅವರೇ ಆತ್ಮಹತ್ಯೆ ಮಾಡಿಕೊಂಡಿದ್ದರೆ ಪರ್ಸ್ ಅನ್ನು ಅಷ್ಟು ದೂರ ಎಸೆದು ಬರುವ ಮತ್ತು ಬೈಕ್ ಅನ್ನು ನಿಲ್ಲಿಸದೆ, ಹಳ್ಳಕ್ಕೆ ತಳ್ಳಿ ಬರುವ ಅವಶ್ಯಕತೆ ಏನಿತ್ತು? ಎಂಬುದು ಪ್ರಶ್ನೆಯಾಗಿ ಕಾಡುತ್ತವೆ. ಪೊಲೀಸರ ನಿಷ್ಪಕ್ಷಪಾತ ತನಿಖೆ ಮಾತ್ರ ನಿಜವನ್ನು ಬಯಲಿಗೆಳೆಯಬಹುದು.

■ ನಾಗೇಶ್

ಯೋಗ ಮೂಲ ಇರುವುದು ಜೈನ, ಬೌದ್ಧ ಧರ್ಮಗಳಲ್ಲಿ

ವಿಶ್ವಸಂಸ್ಥೆಯ ಅನುಮೋದನೆಯೊಂದಿಗೆ ಜೂನ್ 21 ಕ್ಕೆ ವಿಶ್ವಯೋಗ ದಿನ ಆಚರಿಸಲು ಭಾರತ ಸರಕಾರ ಹಾಗೂ ಹಿಂದೂತ್ವ ಸಂಘಟನೆಗಳು ಭಾರಿ ತಯಾರಿ ನಡೆಸಿವೆ. ಆದರೆ ಯೋಗದ ಇತಿಹಾಸ ನೋಡಿದಾಗ ಅದು ಹಿಂದೂ ಮೂಲದ್ದಲ್ಲ, ಮೂಲತಃ ಜೈನ ತೀರ್ಥಂಕರರು ಹಾಗೂ ಬೌದ್ಧ ಭಿಕ್ಷುಗಳಿಂದ ಯೋಗ ಜನ್ಮ ತಾಳಿದ್ದು ಎನ್ನುವುದು ಸ್ಪಷ್ಟವಾಗುತ್ತದೆ.

ಸುಮಾರು ಕ್ರಿಸ್ತಪೂರ್ವ 200 ರಲ್ಲಿ ಪತಾಂಜಲಿಯು ಕೇವಲ ಗುರು ಶಿಷ್ಯ ಪರಂಪರೆಯಲ್ಲಿ ಮೌಖಿಕವಾಗಿ ಪ್ರಚಲಿತವಿದ್ದ ಜ್ಞಾನವನ್ನು ಕ್ರೋಢೀಕರಿಸಿ ಯೋಗ ಸೂತ್ರವನ್ನು ವ್ಯವಸ್ಥಿತವಾಗಿ ಬರೆದ ಮೊದಲಿಗ. ಜತೆಗೆ ಅವನು ಸಂಸ್ಕೃತಕ್ಕೆ ವ್ಯಾಕರಣ ಹಾಗೂ ಆಯುರ್ವೇದದ ಸೂತ್ರಗಳನ್ನೂ ಬರೆದನು. ಸಂಸ್ಕೃತ ಭಾಷೆಗೆ ವ್ಯಾಕರಣ ಬರೆದ ಮಾತ್ರಕ್ಕೆ ಪತಾಂಜಲಿ ಸಂಸ್ಕೃತ ಭಾಷೆಯ ಜನಕ ಎನ್ನಲಾದೀತೇ? ಅದರಂತೆ ಪತಂಜಲಿಯು ಯೋಗದ ಜನಕನೂ ಅಲ್ಲ. ಹಲವಾರು ವೇದವ್ಯಾಸರು ಆಗಿಹೋದಂತೆ ಹಲವಾರು ಪತಾಂಜಲಿಗಳೂ ಆಗಿಹೋಗಿದ್ದಾರಂತೆ.


ಜೈನ ಮತ್ತು ಬೌದ್ಧ ಧರ್ಮ ಸ್ಥಾಪಿತವಾಗುವುದಕ್ಕೆ ಮುಂಚೆ ವೈದಿಕರು ದೇವರ ಸಂತೃಪ್ತಿಗಾಗಿ ಮತ್ತು ಆತ್ಮದ ಉನ್ನತಿಗಾಗಿ ಕೇವಲ ಯಜ್ಞ-ಯಾಗ ಮಾಡಿ ಅಮೂಲ್ಯ ದವಸ ಧಾನ್ಯ ಸುಟ್ಟು ಪ್ರಾಣಿಬಲಿ ಕೊಡುತ್ತಿದ್ದರೇ ವಿನಹ ದೇವರ ಮೂರ್ತಿಯ ಪೂಜೆ ಮಾಡುತ್ತಿರಲಿಲ್ಲ. ಆತ್ಮಶುದ್ಧಿ ಹಾಗೂ ಕರ್ಮಶುದ್ಧಿಗಾಗಿ ಧ್ಯಾನಯೋಗವನ್ನು ಮೊಟ್ಟಮೊದಲಿಗೆ ಹುಟ್ಟು ಹಾಕಿದವರು ಜೈನ ತೀರ್ಥಂಕರರು. ನಂತರ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕಾಗಿ ಯೋಗವನ್ನು ಸಂಶೋಧಿಸಿ ಬಳಸಿದವರು ಬೌದ್ಧ ಭಿಕ್ಷುಗಳು. ಇದಾದ ಮುನ್ನೂರು ವರ್ಷಗಳ ನಂತರ ಪತಾಂಜಲಿಯು ಜೈನ ಮತ್ತು ಬೌದ್ಧರಲ್ಲಿ ಪ್ರಚಲಿತವಿದ್ದ ವಿವಿಧ ಯೋಗ ಪದ್ಧತಿಗಳನ್ನು ಕ್ರೋಢೀಕರಿಸಿ ಸಂಪಾದಿಸಿ ಯೋಗ ಸೂತ್ರ ಬರೆದದ್ದು. ಪತಾಂಜಲಿ ಇದ್ದದ್ದು ಕ್ರಿಸ್ತಪೂರ್ವ 200 ನೇ ಇಸ್ವಿಯಲ್ಲಿ ಅಂದರೆ ಅಲೆಗ್ಸಾಂಡರ್‌ನ ದಾಳಿಯ ಕಾಲದಲ್ಲಿ ಎಂಬುದಕ್ಕೆ ಪುರಾವೆ - ಪತಾಂಜಲಿಯೇ ತನ್ನ ಕೆಲವು ರಚನೆಗಳಲ್ಲಿ ಯವನರು (ಗ್ರೀಕರು) ಅಯೋಧ್ಯೆ- ಸಾಕೇತ್ ಮೇಲೆ ದಾಳಿ ಮಾಡಿರುವುದನ್ನು ಉಲ್ಲೇಖಿಸಿರು ವುದು. ಜತೆಗೆ ಗ್ರೀಕರ ಇತಿಹಾಸದಲ್ಲೂ ಸಾಕೇತ್‌ನಲ್ಲಿ ಅವರು ಪತಾಂಜಲಿ ಎಂಬ ಮುನಿಯನ್ನು ಭೇಟಿ ಮಾಡಿರುವ ಬಗ್ಗೆ ಉಲ್ಲೇಖವಿದೆಯಂತೆ.

ಹಿಂದೂಗಳಲ್ಲಿ ಸಸ್ಯಾಹಾರ ಮತ್ತು ಮೂರ್ತಿ ಪೂಜೆ ಶುರುವಾಗಿದ್ದು ಜೈನ ಮತ್ತು ಬೌದ್ಧ ಧರ್ಮಗಳ ಉಗಮದ ನಂತರ. ಹಾಗಾಗಿ ಯೋಗ ಮುದ್ರೆಯಲ್ಲಿ ಕುಳಿತಿರುವ ಅತ್ಯಂತ ಹಳೆಯ ಮೂರ್ತಿಗಳು ಇರುವುದು ಜೈನರ ತೀರ್ಥಂಕರರದ್ದು ಹಾಗೂ ಗೌತಮ ಬುದ್ಧನದು. ಇದರಿಂದ ಪ್ರಭಾವಿತರಾದ ನಂತರವೇ ಹಿಂದೂಗಳು ಶಿವ ಹಾಗೂ ಹನುಮಂತನ ಮೂರ್ತಿಗಳನ್ನೂ ಯೋಗ ಮುದ್ರೆಯ ಭಂಗಿಯಲ್ಲಿ ನಿರ್ಮಿಸಲು ಶುರುಮಾಡಿದ್ದು. ಪ್ರಾಚೀನ ತಮಿಳು ಗ್ರಂಥಗಳ ಪ್ರಕಾರ ಪತಾಂಜಲಿ ಅಯೋಧ್ಯೆಯಲ್ಲಿ ವಾಸವಿದ್ದರೂ ಅವನು ಹುಟ್ಟಿದ್ದು ಈಗಿನ ಶ್ರೀಲಂಕಾದ ತ್ರಿಂಕೋಮಲಿ ಹತ್ತಿರದ ಗೋನಾರ್ದ ಎಂಬ ಊರಲ್ಲಿ, ಅವನ ಸಮಾಧಿ ಇರುವುದು ತಮಿಳುನಾಡಿನ ತಿರುಚಿ ಹತ್ತಿರದ ತಿರುಪತ್ತೂರಿನಲ್ಲಿ. ಅಂದರೆ ಜೈನ-ಬೌದ್ಧ ಮೂಲದ ಯೋಗವನ್ನು ಭರತಖಂಡದಲ್ಲಿ ಪ್ರಚಾರಕ್ಕೆ ತಂದವನು ದ್ರಾವಿಡ ಮೂಲದ ಮುನಿಯೆಂದಾಯಿತು (ಈ ಎಲ್ಲಾ ಮಾಹಿತಿ ಇಂಟರ್ನೆಟ್ಟಿನಲ್ಲಿ ಲಭ್ಯವಿದೆ). ಆದುದರಿಂದ ಯೋಗಕ್ಕೆ ಹಿಂದೂ ಧರ್ಮದ ಕಿರೀಟ ಮತ್ತು ಲಾಂಛನ ಸರಿಹೊಂದಲಾರವು.

- ಪ್ರವೀಣ್ ಎಸ್. ಶೆಟ್ಟಿ


ಹೇಳೋದು ಶಾಸ್ತ್ರ ಇಕ್ಕೋದು ಗಾಳ

ನಮಗೆಲ್ಲ ಗೊತ್ತಿರುವ ಹಾಗೆ ತೋರಿಕೆಗಳ ಹಿಂದೆ ಬೇರೆಯೆ ಸತ್ಯಗಳು ಅಡಗಿರುತ್ತವೆ ಮತ್ತು ಇತರರಿಗೆ ಶಾಸ್ತ್ರವನ್ನು ಬೋಧಿಸುವವರು ಹೆಚ್ಚಿನ ವೇಳೆ ದೊಡ್ಡ ಠಕ್ಕರಿಗಳಾಗಿರುತ್ತಾರೆ. ಈಗ ಪುರುಷಪ್ರಧಾನ ವ್ಯವಸ್ಥೆಯ ಕಟ್ಟರ್ ಹಿಂಬಾಲಕರಾದ ಆರೆಸ್ಸೆಸ್ ಕೃಪಾಪೋಷಿತ ಮೋದಿ ಸರ್ಕಾರದ 'ಬೇಟಿ ಬಚಾವೊ ಬೇಟಿ ಪಡಾವೊ' ಎಂಬ ತಥಾಕಥಿತ ಮಹಿಳಾಪರ ಕಾರ್ಯಕ್ರಮವನ್ನೇ ತೆಗೆದುಕೊಳ್ಳಿ. ನರೇಂದ್ರ ಮೋದಿಗೆ ಮದುವೆಯಾಗಿದೆ, ಅವನಿಗೊಬ್ಬಳು ಹೆಂಡತಿ ಇದ್ದಾಳೆ, ಇಬ್ಬರೂ ಒಟ್ಟಾಗಿ ಬದುಕುತ್ತಿಲ್ಲವೆಂದು ಹೆಚ್ಚಿನ ಜನರಿಗೆ ತಿಳಿದುದೇ ಕಳೆದ ಮಹಾಚುನಾವಣೆಗಳ ವೇಳೆ! ಅದೂ ನಾಮಪತ್ರದಲ್ಲಿ ಅನಿವಾರ್ಯವಾಗಿ ಹೆಂಡತಿಯ ಹೆಸರನ್ನು ನಮೂದಿಸಬೇಕಾಗಿ ಬಂದಾಗ. ಬಾಲ್ಯದಲ್ಲೇ ಜಶೋದಾಬೆನ್ ಜೊತೆ ವಿವಾಹವಾಗಿದ್ದ ಮೋದಿ ಆಕೆಯ ಜೊತೆ ಒಂದು ದಿನವೂ ಸಂಸಾರ ಮಾಡಿಲ್ಲ, ಹಾಗಂತ ವಿಚ್ಛೇದನೆ ಮಾಡಿಕೊಂಡಿದ್ದಾನೆಯೇ? ಅದೂ ಇಲ್ಲ. ಮೋದಿಯ ಸಾಂಸಾರಿಕ ಜೀವನದ ವಿಚಾರವನ್ನು ಗುಪ್ತವಾಗಿಡಲಾಗಿತ್ತು. ಆತ ಗುಜರಾತಿನ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಜಶೋದಾಬೆನ್ ಜೊತೆ ಭೇಟಿಯಾಗಲು ಪ್ರಯತ್ನಪಟ್ಟಿದ್ದ ಒಂದೆರಡು ಪತ್ರಕರ್ತರ ಮೇಲೆ ಆತನ ಕಾಕದೃಷ್ಟಿ ಬಿದ್ದಿತ್ತು. ಆದರೆ ಬಿಜೆಪಿ ಪಾಲಿಗೆ ಅತ್ಯಂತ ಮಹತ್ವಪೂರ್ಣವಾಗಿದ್ದ ರಾಷ್ಟ್ರೀಯ ಚುನಾವಣೆಗಳ ಸಂದರ್ಭದಲ್ಲಿ ಅಂಥಾ ಸೆನ್ಸಾರ್‌ಗಿರಿ ಮಾಡುವಂತಿರಲಿಲ್ಲವಲ್ಲ! ಅತ್ತ ಮೋದಿ ನಾಮಪತ್ರ ಸಲ್ಲಿಸುತ್ತಿದ್ದಂತೆ ಇತ್ತ ಪತ್ರಕರ್ತರ ದಂಡು ಜಶೋದಾಬೆನ್ ಮನೆಗೆ ದೌಡಾಯಿಸಿ ಸಂದರ್ಶನಗಳ ಮೇಲೆ ಸಂದರ್ಶನಗಳನ್ನು ನಡೆಸಿತು. ಅವರುಗಳ ಪ್ರಶ್ನೆಗಳಿಗೆ ಉತ್ತರಿಸಿದ ಆಕೆ, ಗಂಡ ಕರೆದರೆ ಆತನೊಂದಿಗೆ ಸಂಸಾರ ಹೂಡಲು ಈಗಲೂ ಸಿದ್ಧ. ಆತ ಅನುಮತಿಸಿದರೆ ಪ್ರತಿಜ್ಞಾಸ್ವೀಕಾರ ಸಮಾರಂಭಕ್ಕೆ ಹೋಗುವೆ ಎಂದೆಲ್ಲ ಹೇಳಿದ್ದಾಳೆ. ಆದರೆ ಮೋದಿಯ ಅಣ್ಣ [illegible]ಭಾಯಿ, ಜಶೋದಾಬೆನ್ ಮತ್ತು ಮೋದಿ



ಒಂದಾಗುವುದು ಅಸಾಧ್ಯ ಎಂದನಲ್ಲದೆ ಆಕೆ ಮಾಧ್ಯಮಗಳೊಂದಿಗೆ ಮಾತಾಡುವ ಬಗ್ಗೆ ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಬಗ್ಗೆ ತನ್ನ (ಅರ್ಥಾತ್ ಮೋದಿಯ) ಅಸಮಾಧಾನವನ್ನು ಹೊರಹಾಕಿದ. ಆಕೆ ತುದಿಗಾಲಿನಲ್ಲಿ ನಿಂತದ್ದೇ ಬಂತು. ಕರೆ ಬರಲಿಲ್ಲ. ಅಲ್ಲಿಗೆ ಜಶೋದಾಳನ್ನು ಮರೆತುಬಿಟ್ಟ ಮಾಧ್ಯಮಗಳಿಗೆ ಮತ್ತೆ ಆಕೆಯ ನೆನಪಾದದ್ದು ಆಕೆ ತನಗೆ ಒದಗಿಸಲಾದ ಭದ್ರತಾ ವ್ಯವಸ್ಥೆ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ಪ್ರಶ್ನೆಗಳನ್ನು ಕೇಳಿದಾಗ. ಸರ್ಕಾರ ಆಕೆಗೆ ಉತ್ತರ ನೀಡಲು ನಿರಾಕರಿಸಿದ ಸಂಗತಿ ಎಲ್ಲರಿಗೂ ಗೊತ್ತಿರಬಹುದು.

ಅಸಲಿಗೆ ಮೋದಿಭಾಯಿಗೆ ಜಶೋದಾಬೆನ್ ಹೆಸರು ತನ್ನ ಅಥವಾ ಬಿಜೆಪಿ ಜೊತೆ ಥಳಕು ಹಾಕಿಕೊಳ್ಳುವುದು ಬೇಕಾಗಿಲ್ಲ. ಇದನ್ನು ಸಾಬೀತುಪಡಿಸುವಂಥ ಘಟನೆಯೊಂದು ಇತ್ತೀಚೆಗೆ ನಡೆದರೂ ಅದಿಂದು ಬಹುತೇಕ ಮಾಧ್ಯಮಗಳ ಸುದ್ದಿ ಗಿರಣಿಗೆ ಗ್ರಾಸವಾಗದಿರುವುದು ದೇಶದ ಮಾಧ್ಯಮವಲಯದ ಪರಿಸ್ಥಿತಿ ಕುರಿತು ಅದರದೇ ಆದ ಕಥೆಯನ್ನು ಹೇಳುತ್ತದೆ. ಇರಲಿ. ಸರ್ಕಾರದ ಈ ಹೊಸಾ 'ಬೇಟಿ ಬಚಾವೊ ಬೇಟಿ ಪಡಾವೊ' ಯೋಜನೆಯ ಬಗ್ಗೆ ಅರಿವು ಮೂಡಿಸಲೆಂದು ಗುಜರಾತಿನ ಸೂರತ್ ನಗರದಲ್ಲಿ ಇದೇ ಜೂನ್ 3ರಿಂದ ಏಳು ದಿನಗಳ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿತ್ತು. ಇದನ್ನು ಆಯೋಜಿಸಿದವರು ನಮೋಸೇನೆಯ ಸ್ಥಳೀಯ ಘಟಕದ ಮಂದಿ. ಅವರು ಎರಡನೆ ದಿನದ ಕಾರ್ಯಕ್ರಮಕ್ಕೆ ಜಶೋದಾಬೆನ್‌ಳನ್ನು ಆಮಂತ್ರಿಸಿದ್ದರು. ಅಂತೆಯೆ ಆಕೆ ಜೂನ್ 4ರಂದು ಆಗಮಿಸಿ ಆಸೀನಳಾಗುತ್ತಿದ್ದಂತೆ ಸೂರತ್‌ನ ಬಿಜೆಪಿ ಅಧ್ಯಕ್ಷ ಪ್ರಾಣೇಶ್ ಮೋದಿ ಮತ್ತು ಪ್ರಫುಲ್ ಪನ್ಸೇರಿಯ ಮತ್ತು ಜನಕ್ ಕಬಾಡಿಯ ಎಂಬಿಬ್ಬರು ಶಾಸಕರ ಕಿವಿಗಳಿಗೆ ಸುದ್ದಿ ಮುಟ್ಟಿದೆ. ಇದಾದ ಕೆಲವೇ ನಿಮಿಷಗಳಲ್ಲಿ ನಮೋಸೇನೆಯ ಸಂಘಟಕರಾದ ಸಂಜಯ ಗೋಸ್ವಾಮಿ, ಆತನ ಪತ್ನಿ ಸಂಧ್ಯಾ, ಮೋದಿಸೇನೆಯ ರಾಷ್ಟ್ರಾಧ್ಯಕ್ಷ ಅವಿನಂದನ್ ಪಾಠಕ್ ಮತ್ತು ಸೂರತ್ ಘಟಕದ ಅಧ್ಯಕ್ಷ ರಾಕೇಶ್ ಜೈನ್‌ರಿಗೆ ಬುಲಾವ್ ಹೋಗಿದೆ. ಅವರೆಲ್ಲ ಬಿಜೆಪಿ ಅಧ್ಯಕ್ಷನ ಮನೆಗೆ ಬರುವಂತೆ ಸೂಚಿಸಲಾಗಿದೆ. ಸುಳಿವನ್ನರಿತ ಸಂಘಟಕರು ಕೂಡಲೆ ಕಾರ್ಯಪ್ರವೃತ್ತರಾಗಿದ್ದಾರೆ. ಜಶೋದಾಬೆನ್ ಸಭೆಯನ್ನುದ್ದೇಶಿಸಿ ಮಾತಾಡುವೆನೆಂದು ಹೇಳಿದಾಗ ಬೇಡ ಎಂದಿದ್ದಾರೆ. ಆಕೆಯೂ ವಿರೋಧಿಸಲು ಹೋಗದೆ ಸುಮ್ಮನಾಗಿದ್ದಾಳೆ. ಬಳಿಕ ಸಂಘಟಕರ ತಂಡ ಅಧ್ಯಕ್ಷನ ಮನೆಗೆ ದೌಡಾಯಿಸಿದೆ. ಅಲ್ಲಿ ಅವರನ್ನು ಸಮಾ ಬೈದು, ಬೆದರಿಸಿ ತಕ್ಷಣ ಇಡೀ ಕಾರ್ಯಕ್ರಮವನ್ನು ರದ್ದುಗೊಳಿಸುವಂತೆ ಆದೇಶಿಸಲಾಗಿದೆ. ಅವರು ಕಾರಣ ಕೇಳಿದಾಗ ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಶಾನನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ. ಶಾ ಅವರನ್ನೆಲ್ಲ ತೀವ್ರ ತರಾಟೆಗೆ ತೆಗೆದುಕೊಂಡಿದ್ದಾನೆ. ಶಾನ ಹುಕುಮಿನ ಮೇರೆಗೆ [illegible] ಶೀದಾ ತನ್ನೂರಾದ ಸಹಾರನ್‌ಪುರಕ್ಕೆ (ಉತ್ತರ ಪ್ರದೇಶ) ಕಂಬಿ ಕಿತ್ತಿದ್ದಾನೆ.



ಅಂತೆಯೆ ಇಡೀ ಕಾರ್ಯಕ್ರಮ ರದ್ದಾಯಿತು. ಪೆಂಡಾಲ್, ವೇದಿಕೆ ಎಲ್ಲವನ್ನೂ ಕಿತ್ತು ತೆಗೆಯಲಾಯಿತು. ಪತ್ರಕರ್ತನೊಬ್ಬ ಈ ಕುರಿತು ಪಾಠಕ್‌ನನ್ನು ವಿಚಾರಿಸಿದಾಗ ಆತ ಸಂಪನ್ಮೂಲದ ಕೊರತೆ ಅಂತ ಏನೇನೋ ಸಬೂಬು ಹೇಳಿ ಜಾರಿಕೊಂಡಿದ್ದಾನೆ. ಆದರೆ ಇದು ಶುದ್ಧ ಸುಳ್ಳೆಂದು ಹೇಳಿರುವ ಸೂರತ್‌ನ ಬಿಲ್ಡರ್ ಭೂಪತ್ ಧಮೇಲಿಯಾ, ಇಡೀ ಕಾರ್ಯಕ್ರಮದ ವೆಚ್ಚವನ್ನು ಭರಿಸಲು ತಾನು ಒಪ್ಪಿಕೊಂಡಿದ್ದೆನೆಂಬ ಸತ್ಯಾಂಶವನ್ನು ಹೊರಗೆಡವಿದ್ದಾನೆ. ಸ್ವಾರಸ್ಯಕರವಾಗಿ ಶಾ ಮತ್ತಿತರರ ಆಕ್ಷೇಪಣೆ ಇದ್ದುದು ಕಾರ್ಯಕ್ರಮದ ವೇಳೆ ಬಿಜೆಪಿಯ ಸಂಕೇತವನ್ನು ಬಳಸಿದುದಕ್ಕೆ! ಯಾರೊಬ್ಬರೂ ನೇರವಾಗಿ ಜಶೋದಾಬೆನ್ ಹೆಸರೆತ್ತಿಲ!

(ಆಧಾರ: telegraphindia.com)

ಸೋದರತೆ

ಬಹಳ ದೂರದಿಂದ ಇಸ್ಮಾಯಿಲ್ ತಂಗಿಯ ನೋಡಲು ಈ ಊರಿಗೆ ಮೊದಲ ಬಾರಿ ಬಂದಿದ್ದ. ರೇಷ್ಮ ಸುರೇಶನೊಂದಿಗೆ ಓಡಿಹೋಗಿ ಮದುವೆಯಾಗಿ ವರುಷವಾಗಿತ್ತು. ಸುರೇಶನ ಕಡೆಯವರು ಕೊಟ್ಟ ಕಿರುಕುಳದ ಬದಲಾಗಿ ಈತನು ಕೊಟ್ಟಿದ್ದ ಕಿರುಕುಳಗಳೆಲ್ಲಾ ಪ್ರಯಾಣದಲ್ಲಿ ಕಣ್ಣು ಮುಂದೆ ಬಂದುಹೋಗಿದ್ದವು. ಊರ ಹಾದಿ ಹಿಡಿದವನಿಗೆ ಒಂದು ಕಾಲು ಮುಂದಕ್ಕೆ ಎಳೆಯುತ್ತಿದ್ದರೆ ಮತ್ತೊಂದು ಹಿಂದಕ್ಕೆ ಎಳೆಯುತ್ತಿತ್ತು. ಹಾಸಿಗೆ ಹಿಡಿದಿರುವ ತಾಯಿಯ ಕಡೇ ಬಯಕೆ ಹೆಜ್ಜೆಗಳನ್ನು ಮುಂದಾಕಿಸಿತ್ತು. ಊರೊಳಗೆ ಪ್ರವೇಶಿಸುತ್ತಿದ್ದಂತೆ ಇದು ಊರೋ ಇಲ್ಲ ಸುಡುಗಾಡೊ ಎಂಬ ಪ್ರಶ್ನೆ ಅವನನ್ನು ಕಾಡಿತು. ಒಂದೇ ಒಂದು ನರಪಿಳ್ಳೆಯು ಊರಲ್ಲಿ ಕಾಣದಿರುವುದು ಅವನಲ್ಲಿ ಈ ತರಹದ ಭಾವನೆ ಮೂಡಿಸಿತ್ತು.

ಮಧ್ಯರಾತ್ರಿಯ ಭೂತದಂತೆ ಮಳೆ ಮೋಡ ಮುಚ್ಚಿದ್ದ ಮಟ ಮಟ ಮಧ್ಯಾಹ್ನದಲ್ಲಿ ಊರೊಳಗೆ ಹೊರಟಿದ್ದ. "ಪ್ಲೇಗು ಬಂದು ಗುಳೇ ಹೋಗಲು ಇದು ಆ ಕಾಲವೇನಲ್ಲ. ಆದರೂ ಇಂತಹ ವಿಚಿತ್ರವನ್ನು ನಾನೆಲ್ಲೂ ನೋಡಿಯೇ ಇಲ್ಲ. ಒಂದೇ ಒಂದು ನರಪಿಳ್ಳೆಯೂ ಕಾಣುತ್ತಿಲ್ಲವಲ್ಲ" ಎಂದುಕೊಳ್ಳುತ್ತ ಮುಂದೆ ನಡೆಯುತ್ತಿದ್ದವನಿಗೆ ಇನ್ನೂ ಆಶ್ಚರ್ಯಗಳು ಕಾದಿದ್ದವು. ಊರ ಮೊದಲ ಮನೆಯ ಬಾಗಿಲು ತೆರೆದಿದ್ದನ್ನು ನೋಡಿ ಸಂತೋಷಗೊಂಡ ಇಸ್ಮಾಯಿಲ್ ಅವಸರದಲ್ಲಿ ಮನೆಯ ಬಾಗಿಲು ತಲುಪಿದ. "ಅಣ್ಣಾವ್ರೆ... ಅಣ್ಣಾವ್ರೆ..." ಎಂದು ಕೂಗಿದ. ಎಷ್ಟೇ ಕೂಗಿದರೂ ಮನೆಯಿಂದ ಒಂದು ದನಿಯೂ ಕೇಳಲಿಲ್ಲ.



ಧೈರ್ಯ ಮಾಡಿದವನೇ ಮನೆಯೊಳಗೆ ಕಾಲಿಟ್ಟು ಒಳನಡೆದ. ಅರರೆ ಟಿ.ವಿ ನಡೆಯುತ್ತಲೇ ಇದೆ! ಎಲ್ಲೆಲ್ಲಿದ್ದ ವಸ್ತುಗಳು ಅಲ್ಲಲ್ಲೆ ಇವೆ! ಮನೆ ಅಚ್ಚುಕಟ್ಟಾಗಿಯೇ ಇದೆ. ಏನಾದರು ಅನಾಹುತ ನಡೆದಿರಬಹುದು ಎಂದುಕೊಂಡರೆ ಅಲ್ಲಿರುವ ವಸ್ತುಗಳೆಲ್ಲ ಅನಾಹುತವಾಗಿಲ್ಲ ಎಂದು ಸಾರಿಸಾರಿ ಹೇಳುತ್ತಿವೆ. ಇರಲಿ ಮುಂದಿನ ಮನೆಗೆ ಹೋಗೋಣವೆಂದುಕೊಂಡ ಇಸ್ಮಾಯಿಲ್‌ಗೆ ಮುಂದೆ ಹೋದಂತೆ ಕೆಲವು ಮನೆ ಬಾಗಿಲು ಬೀಗ ಹಾಕಿವೆ. ಕೆಲವು ಬೀಗ ಹಾಕದೆ ಚಿಲಕ ಮಾತ್ರ ಹಾಕಿವೆ. ಇನ್ನು ಕೆಲವಕ್ಕೆ ಬಾಗಿಲು ಹಾಕಿಲ್ಲ. ಒಂದೆರಡು ಮನೆಗೆ ಹೋಗಿ ಬಂದ ಇಸ್ಮಾಯಿಲ್‌ಗೆ ಮತ್ತೊಮ್ಮೆ ಆಶ್ಚರ್ಯ ಕಾದಿತ್ತು. ಮೊದಲ ಮನೆಯಲ್ಲಿ ನೋಡಿದಂತೆಯೆ ಈ ಮನೆಗಳಲ್ಲು ಟಿ.ವಿ ನಡೆಯುತ್ತಲೇ ಇದ್ದವು. ಫ್ಯಾನ್ ಓಡುತ್ತಲೇ ಇದ್ದವು. ಅರ್ಧ ತಿಂದ ತಟ್ಟೆಗಳು, ಸುತ್ತ ನೆಲನೋಡುತ್ತಿದ್ದ ಅಗುಳುಗಳು ಅಲ್ಲಿ ಏನೋ ನಡೆದಿದೆ ಎಂಬುದಕ್ಕೆ ಸಾಕ್ಷಿ ಆಗಿತ್ತು. ಗೋಡೆಯ ಮೇಲೆ ಮೆಕ್ಕಾದ ಭಾವಚಿತ್ರದೊಂದಿಗೆ ದುಗ್ಗಮ್ಮ ದೇವಿಯಿದ್ದಳು.

ಒಳಗೊಳಗೆ ಇಸ್ಮಾಯಿಲನಿಗೆ ಹೆದರಿಕೆ ಶುರುವಾಯಿತು. ತಂಗಿಯನ್ನು ನೆನೆದು ಊರ ಬೀದಿಬೀದಿಗಳನ್ನು ಸುತ್ತಿದ. ಆದರೆ ಮನಸಿಗೆ ಸಮಾಧಾನ ಸಿಗದಾಯಿತು. ಸುಸ್ತಾಗಿದ್ದ ಇಸ್ಮಾಯಿಲ್ ಊರ ಮುಂದಿನ ರಾಮಮಂದಿರದ ಕಟ್ಟೆಯ ಮೇಲೆ ಕುಳಿತ. ತನ್ನ ತಂಗಿಗೆ ಏನೂ ಆಗದಿರಲಿ ಎಂದು ಅಲ್ಲಾಹುನನ್ನು ಪ್ರಾರ್ಥಿಸಿದ. ಸಮಾಧಾನವಾಗಲಿಲ್ಲ. ಅಲ್ಲೇ ಇದ್ದ ರಾಮನ ಮೂರ್ತಿಗೆ ಕೈಮುಗಿದು ಪ್ರಾರ್ಥಿಸಿದ. ಕೆಲ ಹೊತ್ತಿನ ನಂತರ ಮತ್ತೆ ಸಮಾಧಾನವಾಗದೆ ಅಲ್ಲಾಹುನಲ್ಲಿ ಪ್ರಾರ್ಥಿಸಿದ. ಹೀಗೆ ಅವನ ಪ್ರಾರ್ಥನೆ ಮುಂದುವರೆದಿತ್ತು.

ಹೀಗೆ ಪ್ರಾರ್ಥನೆ ಮಾಡುತ್ತಿರುವಾಗ ಯಾರೋ ಮಾತನಾಡಿಕೊಂಡು ತನ್ನತ್ತ ಬರುತ್ತಿರುವುದನ್ನು ಅರಿತವನೇ ಆ ಕಡೆ ನೋಡಿದ. ಮನಸ್ಸಿಗೆ ಸಂತೋಷವಾಯಿತು. ತುಸು ದೂರದಲ್ಲಿ ಇಬ್ಬರು ಮಾತನಾಡಿಕೊಂಡು ಬರುತ್ತಿದ್ದರು. ಅವರ ಬಳಿ ಇಸ್ಮಾಯಿಲ್ ಓಡಿದ. ಅವರಿಗೆ ಹತ್ತಿರವಾಗುತ್ತಿದ್ದಂತೆ ಅವರಿಬ್ಬರು ಇಸ್ಮಾಯಿಲನನ್ನು ಯಾರೆಂದು ಪ್ರಶ್ನಿಸಿದರು. ಇಸ್ಮಾಯಿಲ್ ತನ್ನ ಪರಿಚಯ ಮಾಡಿಕೊಂಡು ತನ್ನ ತಂಗಿ ರೇಷ್ಮಳನ್ನು ನೋಡಲು ಬಂದಿರುವುದಾಗಿ ಹೇಳಿದ. ಅವರಿಬ್ಬರಲ್ಲಿ ಒಬ್ಬನು "ಓ ರೇಷ್ಮ ಭೇಟಿಸ? ನಮ್ಮ ಮನೆಯ ಪಕ್ಕದಲ್ಲೆ ಅವರ ಮನೆ ಇರುವುದು. ನನ್ನ ಹೆಸರು ಮಹದೇವಪ್ಪ" ಎಂದು ಪರಿಚಯಿಸಿಕೊಂಡ. ಇನ್ನೊಬ್ಬ ತನ್ನನ್ನು ಸುಬಾನ್‌ಸಾಬ್ ಎಂದು ಪರಿಚಯಿಸಿಕೊಂಡ. ಆದಾಗಲೇ ಇಸ್ಮಾಯಿಲ್‌ನ ಪಜೀತಿಯನ್ನು ಅರ್ಥಮಾಡಿಕೊಂಡಿದ್ದ ಮಹದೇವಪ್ಪ "ಈ ದಿನ ನಮ್ಮ ಊರಿನಲ್ಲಿ ಯಾರೂ ಇಲ್ಲ. ನಮ್ಮ ಬಾಬಾರವರು ಇನ್ನೇನು ಸ್ವರ್ಗ ಸೇರೋ ಸ್ಥಿತಿಯಲ್ಲಿ ಇರೋದರಿಂದ ವಿಷಯ ತಿಳಿದ ಎಲ್ಲರೂ ಸಹ ಅಲ್ಲಿಗೆ ಹೋಗಿದ್ದಾರೆ. ಸಾಯುವ ಮುನ್ನ ಅವರ ದರ್ಶನ ಮಾಡಬೇಕಂತ ಹೋಗಿದ್ದಾರೆ" ಎಂದ. ತನ್ನ ತಂಗಿ ಆಗಾಗ ಪತ್ರದಲ್ಲಿ ಬಾಬಾ ಬಗ್ಗೆ ಹೇಳುತ್ತಿದ್ದದ್ದನ್ನು ನೆನಪಿಸಿಕೊಂಡ ಇಸ್ಮಾಯಿಲನಿಗೆ ಇದೊಂದನ್ನೂ ನಂಬದಂತಾಯಿತು. ಅದು ಅವನಿಗೆ ಸಹಜವೂ ಆಗಿತ್ತು. ಅದನ್ನು ತೋರಿಸಿಕೊಳ್ಳದೆ "ಅವರಿಗೆ ಏನಾಗಿತ್ತು?" ಎಂದ.

"ವಯಸ್ಸಾಗಿತ್ತು" ಎಂದ ಸುಭಾನ ಸಾಬ್.

"ನಮಗೆ ಈಗ ತುಂಬ ಕೆಲಸ ಇದೆ. ಎಲ್ಲ ಮನೆಗೆ ಬೀಗ ಹಾಕಿಕೊಂಡು ಬರಬೇಕು. ನೀವು ಇಲ್ಲೆ ಕುಳಿತಿರಿ" ಎಂದ ಮಹದೇವಪ್ಪ.

ಸುಬಾನಿ ಮಹದೇವಪ್ಪ ಇಬ್ಬರೂ ದರಬರನೆ ನಡೆದರು.

ಜಗುಲಿಯ ಮೇಲೆ ಕುಳಿತ ಇಸ್ಮಾಯಿಲ್‌ಗೆ ಬಾಬಾನ ಚಿಂತೆಯೇ ಕಾಡಿತು. ಅವರು ಪವಾಡ ಪುರುಷರೇ ಇರಬೇಕೆಂದು ತಿಳಿದವನೇ ತಾನೂ ಸಹ ಅವರಿಬ್ಬರಿಗೆ ಸಹಕರಿಸಿದರೆ ಬೇಗ ಹೋಗಿ ತಂಗಿಯನ್ನೂ ಬಾಬಾರನ್ನೂ ನೋಡಬಹುದೆಂದು ಅಕ್ಕಪಕ್ಕದ ಮನೆಯ ವಿದ್ಯುತ್ ಆರಿಸಿ ಬೀಗ ಹುಡುಕಿ ಹಾಕುತ್ತಾ ಹೊರಟ. ಅರ್ಧ ದಾರಿಗೆ ಸಿಕ್ಕ ಮಹದೇವಪ್ಪ "ಅಯ್ಯೋ ನೀವೇಕೆ ಶ್ರಮಪಟ್ಟಿರಿ? ಇನ್ನೇನು ನಾವೇ ಮುಗಿಸಿಬಿಡುತ್ತಿದ್ದೆವು" ಎಂದು ಸುಬಾನ ಸಾಬ್‌ಗೆ ಕಾಯುತ್ತ ಜಗುಲಿಯ ಮೇಲೆ ಕುಳಿತರು. ಇಸ್ಮಾಯಿಲನ ಮನಸಿನಲ್ಲಿ ಹಲವಾರು ಪ್ರಶ್ನೆಗಳು ಕಾಡುತ್ತಿದ್ದವು. ಅದನ್ನು ಈಗಲೇ ಪರಿಹರಿಸಿಕೊಳ್ಳಲು ಬಯಸಿದವನೇ "ಮಹದೇವಪ್ನೋರೆ ಈ ಬಾಬಾ ನಿಮಗೆಲ್ಲ ಅಷ್ಟೊಂದು ಪ್ರಿಯರ?" ಎಂದ. "ಹೌದು ಸಾಹೇಬ್ರೆ, ಬಹಳ ಪ್ರೀತಿ, ಭಕ್ತಿ, ಗೌರವ. ನಾವು ಅವರ ಮೇಲಿಟ್ಟಿರುವ ಪ್ರೀತಿಗಿಂತ ಅವರು ನಮ್ಮ ಮೇಲಿಟ್ಟಿರುವ ಪ್ರೀತಿ ಅಪಾರ. ಅವರು ಬಂದ ಮೇಲೆ ನಮ್ಮ ಊರಿನ ಸಹಬಾಳ್ವೆ ಇನ್ನು ಹೆಚ್ಚಾಗಿದೆ. ಕುಡಿತ, ಜಗಳ, ಸುಳ್ಳು, ಮೋಸ, ಅನೈತಿಕತೆ ಇಲ್ಲದಂತಾಗಿದೆ" ಎಂದ ಮಹದೇವಪ್ಪ.

ಕತೆ

"ಅವರು ಇದೇ ಊರಿನವರಾ?"

"ಇಲ್ಲ, ಇಲ್ಲ. ಸುಮಾರು ನಲವತ್ತು ವರ್ಷಗಳಾಗಿರಬಹುದು ಅವರು ಇಲ್ಲಿಗೆ ಬಂದು. ಅವರಿಲ್ಲಿಗೆ ಬಂದಾಗ ನಾನು ನಾಲ್ಕನೇ ತರಗತಿ ಓದುತ್ತಿದ್ದೆ. ಹಿರಿಯರು ಅವರ ಬಗ್ಗೆ ಹಲವಾರು ಪವಾಡ ಕಥೆಗಳನ್ನು ಹೇಳುತ್ತಾರೆ. ಅವರಿಂದಾಗಿಯೇ ನಾನಿಂದು ಪದವಿ ಮಾಡಿದ್ದರೂ ಇಲ್ಲೆ ವ್ಯವಸಾಯ ಮಾಡಿಕೊಂಡು ಇದ್ದೇನೆ."

"ಪರವಾಗಿಲ್ವೇ, ಈಗಿನ ಕಾಲದಲ್ಲಿ ಹತ್ತನೇ ತರಗತಿ ಓದಿದವರು ಸಹ ಮನೆ ಕಸಪೊರಕೆ ಮುಟ್ಟಲಾರರು. ಅಂತದ್ದರಲ್ಲಿ ನಿಮ್ಮಂತವರು ನಮ್ಮ ದೇಶಕ್ಕೆ ಅವಶ್ಯ" ಎಂದು ನೆಲದಕಡೆ ಮುಖ ಮಾಡಿ ಯೋಚಿಸಿ "ನನಗೆ ಈ ಬಾಬಾ ಬಗ್ಗೆ ಹೇಳುತ್ತೀರ?" ಎಂದು ಕೇಳಿದ. ಅಷ್ಟರಲ್ಲಿ ಸುಬಾನ ಸಾಬ್ ಕೂಡ ಅವರನ್ನು ಸೇರಿಕೊಂಡ. ನಂತರ ಮೂವರು ಮಾತನಾಡುತ್ತ ಮುಂದೆ ಹೆಜ್ಜೆ ಹಾಕಿದರು.

ಬಾಬಾ ಬಗ್ಗೆ ಮಾತನಾಡಲು ಸುರುವಿಟ್ಟ ಸುಬಾನ ಸಾಬ್ "ನನಗೆ ಅವರ ಬಗ್ಗೆ ನಮ್ಮ ಮನೆಯವರು, ಊರಿನೋರು ಹೇಳಿದ ವಿಷಯ ಹೇಳ್ತೀನಿ ಕೇಳು" ಎಂದವನೇ "ಸುಮಾರು ನಲವತ್ತು ವರ್ಷದ ಹಿಂದೆ ಈ ಊರಿಗೆ ಬಾಬಾ ಭಿಕ್ಷೆ ಬೇಡೋಕೆ ಬಂದರಂತೆ. ಆವಾಗ ಈ ಊರು ತುಂಬ ಚಿಕ್ಕದು. ಒಂದು ಮನೆ ಭಿಕ್ಷೆ ಕೊಟ್ಟರೆ ಸಾಕು ಅದನ್ನೆ ತಿಂದು ಊರ ಮುಂದಿನ ರಾಮಮಂದಿರದಲ್ಲಿ ಕುಳಿತಿರುತ್ತಿದ್ದರಂತೆ. ಆರಂಭದಲ್ಲಿ ಅವರನ್ನು ಹುಚ್ಚನೆಂದೇ ಬಗೆದ ಜನಗಳು ಅವರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಮಕ್ಕಳು ಮಾತ್ರ ಕೀಟಲೆ ಮಾಡುವುದು, ಛೇಡಿಸುವುದು, ಮಲಗಿರುವಾಗ ಗಡ್ಡದ ಕೂದಲನ್ನು ಎಳೆಯುವುದು ಹೀಗೆಲ್ಲ ಮಾಡುತ್ತಿದ್ದರಂತೆ. ಆ ಗುಂಪಲ್ಲಿ ಈ ಮಹದೇವಪ್ಪನೂ ಒಬ್ಬ" ಎಂದೊಡನೆ ಮಹದೇವಪ್ಪ "ನಾನು ಆ ಗುಂಪಿನಲ್ಲಿ ಇದ್ದೆ ಆದರೆ ಯಾವತ್ತೂ ಬಾಬಾ ಹತ್ತಿರ ಹೋಗೋ ಧೈರ್ಯ ಮಾಡಲಿಲ್ಲ. ನಾವೆಲ್ಲ ಅಷ್ಟು ಕೀಟಲೇ ಮಾಡಿದರೂ ಅವರು ಮಾತ್ರ ಸ್ವಲ್ಪವೂ ಬೇಜಾರಾಗುತ್ತಿರಲಿಲ್ಲ. ವಿಚಿತ್ರವೆಂದರೆ ನಂತರದ ದಿನಗಳಲ್ಲಿ ಬಾಬಾ ಕಂಡರೆ ಮಕ್ಕಳೆಲ್ಲರಿಗೂ ಇಷ್ಟವಾಯಿತು. ಶಾಲೆ ಬಿಟ್ಟರೆ ಅವರ ಬಳಿಯೇ ಆಟ, ಹಾಡು, ಭಜನೆ" ಎಂದ. ಮಾತು ಮುಂದುವರೆಸಿದ ಸುಬಾನ ಸಾಬ್ "ನನಗೆ ಆ ದಿನದ ನೆನಪುಗಳೇ ಇಲ್ಲ. ನನಗೆ ತಿಳಿವಳಿಕೆ ಬರುವಷ್ಟರಲ್ಲಿ ಬಾಬಾ ದೇವರಾಗಿದ್ದರು" ಎಂದ. ಮತ್ತೆ ಮಧ್ಯೆ ಬಾಯಿ ಹಾಕಿದ ಮಹದೇವಪ್ಪ "ಹ್ಞಾಂ, ಆದರೆ ಬಾಬಾ ಯಾವಾಗಲೂ ನಾನು ದೇವರಲ್ಲ ದೇವರಲ್ಲ ಎಂದೆ ಹೇಳುತ್ತಿದ್ದರು. ಆದರೆ ಅವರು ಹಾಗೆಂದಷ್ಟು ನಮಗೆ ಇನ್ನೂ ದೇವರೆಂಬ ನಂಬಿಕೆಯೇ ಹೆಚ್ಚಾಯಿತು. ಅದಿರಲಿ ಸಾಹೇಬರೇ, ಒಂದು ಸಾರಿ ರಾಮಮಂದಿರದಲ್ಲಿ ಅಲ್ಲಾಹನು ಮಾತನಾಡಿದ.. ಇವನೇ ಅಲ್ಲಾಹ್.. ಇವನೇ ರಾಮ.. ರಾಮ ರಹೀಮ ಏಕ್ ಹೈ ಅಂತ ಇದ್ದರಂತೆ. ಮೊದಮೊದಲು ಇವರಿಗೆ ಬೆಲೆ ಕೊಡದ ಜನರು ನಂತರ ದಿನದಲ್ಲಿ ಅವರ ಹಾಡುಗಳಿಗೆ ಮಾರುಹೋದರಂತೆ. ಈಗ ನಾವೂ ಸಹ ಅವರಿಗೆ ಭಕ್ತರಾಗಿರುವುದು ಅವರ ಹಾಡುಗಳಿಗೆ ಸೋತೇ. ಅವರ ಹಾಡುಗಳು ಹಿಂದೂ ಮುಸಲ್ಮಾನ ಇಬ್ಬರಿಗೂ ಸೇರುತ್ತವೆ. ಆಶ್ರಮದಲ್ಲಿ ಈಗಲೂ ಸಹ ಹಾಡುಗಳನ್ನು ಪ್ರತಿದಿನ ಹಾಡಲಾಗುತ್ತೆ. ನಮ್ಮ ಊರಿನಲ್ಲಿ ಎಲ್ಲರಿಗು ಆ ಹಾಡುಗಳು ಬರುತವೆ. ತತ್ವಪದಗಳು ಅಂತ ದೊಡ್ಡ ಮನುಷ್ಯರೆಲ್ಲ ಪರಿನಲ್ಲಿ ಬರೀತಾರೆ" ಎಂದು ಹೇಳಿ ಥಿಮ್ಮನಾದ ಮಹದೇವಪ್ಪ. ಇಸ್ಮಾಯಿಲನಿಗೆ ಕುತೂಹಲ ಇನ್ನೂ ಹೆಚ್ಚಾಯಿತು "ಹಾಗಾದರೆ ಈ ಊರಿನಲ್ಲಿ ಹಿಂದೂ ಮುಸ್ಲಿಂ ಮನಸ್ತಾಪಗಳೇ ಇಲ್ಲವೆ?" ಎಂದು ಪ್ರಶ್ನಿಸಿದ. ಅದಕ್ಕುತ್ತರಿಸಿದ ಸುಭಾನಿ ಸಾಬ್ "ಇಲ್ಲ ಭಾಯ್, ಬಾಬಾ ಬಂದಾಗಿನಿಂದ ಇಲ್ಲಿ ಹಿಂದೂ ಮುಸ್ಲಿಂ ಗಲಾಟೆಗಳೇ ಆಗಿಲ್ಲ. ಆದರೆ ಕೆಲವು ಪುಢಾರಿಗಳು ಆಗಾಗ ನಮ್ಮ ನಡುವೆ ಬೆಂಕಿ ಹಚ್ಚುತ್ತಾರೆ. ಆಗೆಲ್ಲ ಕೆಲವು ಸಲ ಊರಿನವರ ಮನಸು ಕೆಟ್ಟಿದ್ದು ಉಂಟು. ಆದರೆ ಕೊನೆಗೆ ಬಾಬಾ ಬಳಿ ವಿಷಯ ಹೋದಾಗ ಅವರು ನಮ್ಮ ಅನುಮಾನವನ್ನು ಬಗೆಹರಿಸಿ ನಮ್ಮ ಎರಡು ಸಮುದಾಯವನ್ನು ಒಂದು ಮಾಡಿಸಿ ಕಳಿಸಿದ ಉದಾಹರಣೆಗಳು ಸಾಕಷ್ಟಿವೆ. ನಮ್ಮ ಕಣ್ಣಾರೆ ಅಂತಹ ಎಷ್ಟೋ ಸಂಧಾನಗಳನ್ನು ನೋಡಿದ್ದೇವೆ. ಇಲ್ಲಿ ಅಂತರ್‌ಧರ್ಮ ಮದುವೆಗಳು ಸಹ ಆಗಿವೆ, ಅಂತರ್ಜಾತಿ ಮದುವೆಗಳೂ ಆಗಿವೆ."

ಇಸ್ಮಾಯಿಲನಿಗೆ ಈ ಸಹಬಾಳ್ವೆ ನೋಡಿ ತುಂಬ ಖುಷಿಯಾಯಿತು. ಮಾಂಸಾಹಾರ, ಸಸ್ಯಾಹಾರ ಎಂದು ಕಚ್ಚಾಡುವ, ಹಳೇ ವೈಷಮ್ಯಗಳನ್ನು ಮರೆಯದೇ ಒದ್ದಾಡುವ, ಧರ್ಮಯುದ್ಧವೆಂದು ಪ್ರಾಣ ತೆಗೆಯುವ, ತನ್ನಂತೆ ಸಣ್ಣದಾಗಿ ಯೋಚನೆ ಮಾಡುವವರ ನಡುವೆ ಈ ಊರಿನವರು ಇಡೀ ದೇಶಕ್ಕೆ ಆದರ್ಶಪ್ರಾಯರಾಗಿದ್ದಾರೆ ಎನಿಸಿತು. ತನ್ನ ಬಗ್ಗೆಯೂ ನಾಚಿಕೆಯಾಯಿತು. ಸ್ವಲ್ಪ ಹೊತ್ತಿನ ನಂತ... ಸುಭಾನಿ ಸಾಬ್ "ನಮ್ಮ ಊರಿನಲ್ಲಿ ನಮ್ಮೆರಡು ಜನಾಂಗ... ಮೊಹರಂ ಅನ್ನು ಒಟ್ಟಿಗೆ ಆಚರಿಸುತ್ತೇವೆ. ನಾವು ಮೊಹರ... ಅಂತೀವಿ ಮಹದೇವಣ್ಣನವರು ಪೀರಲಹಬ್ಬ ಅಂತಾ... ಭಯ್ಯಾ ನಮ್ಮ ಮಹದೇವಣ್ಣ ಅದರಲ್ಲಿ ಬಹಳ ಮುಂದ... ರಾತ್ರಿ ಗುಂಡಿ ತೆಗೆದು ಬೆಂಕಿ ಹಾಕಿ, ಕೊಂಡ ಹಾಯ್ತೀವಿ... ರಾತ್ರಿಯೆಲ್ಲ ಜಾಗರಣೆ, ಕುಣಿತ ಯಾಕೇಳ್ತೀರಿ ಆ ಗಮ್ಮತ್ತು... ಬಾಬಾ ಹೇಳಿಕೊಟ್ಟಿರೋ ಆ ಹಾಡುಗಳನ್ನ ಹೇಳ್ತಾ ಕುಣಿ... ಅದರ ಮಜಾನೇ ಬೇರೆ" ಎಂದು ಒಂದು ಹಾಡ... ಇಬ್ಬರು ಹಾಡಿದರು.

"ಜನಿವಾರದ ಜಂಜಾಟವಿಲ್ಲ
ಜಪಮಾಲೆಯ ಜಂಜಾಟವಿಲ್ಲ
ಹಿಂದೂ ಮುಸ್ಲಿಮರ ಸತ್ವವುಂಟು
ದೇವರೊಬ್ಬನೆ ಎಂಬ ನಂಬಿಕೆಯಲ್ಲಿ,
ದೇವರೊಬ್ಬ ನಾಮ ಹಲವು.
ಮುಲ್ಲಾನಿಲ್ಲದೆಯೂ ಅಲ್ಲಾ ಕಾಣುವಾ
ಪೂಜಾರಿ ಇಲ್ಲದೆಯೂ ರಾಮ ಕಾಣುವ
ರಾಮನ ಕಾಣಿರೋ ಮುಸ್ಲಿಮನಲಿ.
ಅಲ್ಲಾಹನ ಕಾಣಿರೋ ಹಿಂದೂವಿನಲಿ."

ಇಸ್ಮಾಯಿಲನೂ ದನಿ ಸೇರಿಸಿದ. ಮನಸ್ಸು... ಹಾರಾಡುತಿತ್ತು. ಸುರೇಶನಲ್ಲಿ ಅಲ್ಲಾಹನನ್ನು ತಡಕಾಡಿ... ಹಾಗೆಯೇ ಅವನ ಮುಂದೆ ಹಲವರು ಬಂದು ಹೋದರು... ಮುಖದಲ್ಲಿ ನಗೆ ಮೂಡಿತು.

ಮಹದೇವಣ್ಣ ಮಾತು ಮುಂದುವರೆಸು... "ನಮಗೆಲ್ಲ ತಿಳಿದಂತೆ ಎಂಟು ವರ್ಷದ ಕೆ... ಊರ ಕೆರೆಯ ಪಕ್ಕದಲ್ಲಿ ಒಬ್ಬರೆ ಹೋಗಿ ಗುಡಿಸ... ಹಾಕಿಕೊಂಡು ಅಲ್ಲೆ ವಾಸಮಾಡುತ್ತೇನೆ ಎಂದರು... ನಾವೆಲ್ಲ ಏಕೆ ಎಂದು ಕೇಳಿದ್ದಕ್ಕೆ ನೀವುಗಳು ನ... ಒತ್ತಾಯಕ್ಕೆ ಮಣಿದು ಒಟ್ಟಿಗಿರಬಾರದು. ಅ... ನಿಮ್ಮ ನಿಮ್ಮ ಮನಸಿನಲ್ಲಿ ಮೂಡಬೇಕು. 'ಹಿಂದೂ ಮುಸ್ಲಿಂ ಭಾಯಿ ಭಾಯಿ' ಅನ್ನೋದು ನಿ... ರಕ್ತದಲ್ಲಿ ಬೆರೆತುಹೋಗಬೇಕು ಎಂದರು. ರಾಮ... ಮುಂದೆ ಎಷ್ಟೇ ಗಂಟೆ ಬಾರಿಸಿದರು ಅದು ರಾಮನಿ... ಕೇಳುವುದಿಲ್ಲ. ಅಲ್ಲಾಹನಿಗೆಷ್ಟೆ ಕೂಗಿ ಹೇಳಿದ... ಅದು ಅವನಿಗೆ ಕೇಳಲಾರದು. ಮನಸ್ಸಿನಿಂದ ಪ್ರಾರ್ಥ... ಸಲ್ಲಿಸಬೇಕು. ನಾನು ಈ ಗುಡಿಸಲಿನಿಂದ... ಪ್ರಾರ್ಥಿಸುತ್ತೇನೆ ಎಂದರು. ಅವರು ಊರು ಬಿ... ಕೆರೆಯ ಪಕ್ಕ ಗುಡಿಸಲಿಗೆ ಹೋದಾಗ ಹಲ... ಊಹಾಪೋಹಗಳು ಹುಟ್ಟಿಕೊಂಡವು. ಬಾಬಾ ಮುಸಲ್ಮಾ... ಅದಕ್ಕೆ ಹಿಂದೂ ದೇವಾಲಯದಲ್ಲಿ ಇರಲಾರ ಎಂದೆ... ಮಾತನಾಡಿಕೊಂಡರು. ನಾವು ಯಾವುದಕ್ಕೂ ಕಿವಿಗೊಡಲಿ... ಅವರಿಗೆ ನಾವೆಲ್ಲರು ಸರದಿಯ ಪ್ರಕಾರ ಊ... ಒದಗಿಸುತ್ತಿದ್ದೆವು. ಅಣ್ಣತಮ್ಮಂದಿರ ವ್ಯಾಜ್ಯ ಗಂಡಹೆಂಡತಿಯ... ಗಲಾಟೆ, ಸಮುದಾಯದ ವ್ಯಾಜ್ಯ ಎಲ್ಲವ... ಬಗೆಹರಿಸುತ್ತಿದ್ದರು. ನಮ್ಮ ಊರನ್ನೇ ಉದ್ಧಾರ ಮಾಡಿದರು... ಇತ್ತೀಚೆಗೆ ಬೇರೆ ಬೇರೆ ಕಡೆಯಿಂದಲೂ ಭಕ್ತ... ಬರುತ್ತಿದ್ದರು" ಎಂದು ಮಹದೇವಣ್ಣ ಮಾ... ಮುಗಿಸುವಷ್ಟರಲ್ಲಿ ಕೆರೆಯ ಪಕ್ಕದ ಅಂಗಳದಲ್ಲಿ ಜನಸಾ... ನೆರೆದಿರುವುದು ಇಸ್ಮಾಯಿಲನಿಗೆ ಕಂಡಿತು. ದೂರದೂರಿನಿ... ಬಂದಿದ್ದ ಜನರ ಕಾರು ಬೈಕುಗಳು ತುಂಬಿಹೋಗಿದ್ದ... ಇಸ್ಮಾಯಿಲನಿಗೆ ಬಾಬಾ ಮೇಲೆ ಭಕ್ತಿ ಬಂದು ಒ... ಅವರ ಕಾಲು ಮುಗಿಯಬೇಕು ಎಂದು ಮನಸ್ಸಿ... ಅಂದುಕೊಳ್ಳುತ್ತಿದ್ದಂತೆ ಆತುರಾತುರವಾಗಿ ನಡೆಯು... ಸುಭಾನಿ ಸಾಬ್ "ನೋಡು ಭಯ್ಯ ಬಾಬಾರ ಕಾ... ಹೋಗಿ ನಮಸ್ಕಾರ ಮಾಡಬೇಡ. ಅವರಿಗೆ ಅ... ಇಷ್ಟವಾಗದು. ಬರಿ ಕೈಮುಗಿ ಸಾಕು" ಎಂ... ಇಸ್ಮಾಯಿಲನಿಗೆ ವಿಚಿತ್ರವೆನಿಸಿದರೂ ಅವನಲ್ಲಿನ ಕುತೂ... ಇನ್ನೂ ಹೆಚ್ಚಾಯಿತು. ಜನಸಾಗರಕ್ಕೆ ಹತ್ತಿರವಾಗುತ್ತಿದ... ಅವನ ಕಾಲುಗಳು ಓಡಲು ಸುರುಮಾಡಿದವು. ಗುಡಿ... ಬಾಗಿಲತನಕ ಓಡಿಹೋದವನೆ ಸ್ವಲ್ಪಹೊತ್ತು ನಿ... ಒಳಪ್ರವೇಶಿಸಿದ.

ಬಾಬಾ ಮುಖ ಮೇಲೆ ಮಾಡಿ ಮಲಗಿದ್ದರು. ಮು... ತುಂಬ ಬಿಳಿ ಗಡ್ಡ, ಬಿಳಿ ತಲೆಗೂದಲು ಹುಬ್ಬು ವಿ... ಸುಕ್ಕುಗಟ್ಟಿರುವ ಮುಖದಲ್ಲಿ ಏನೋ ತೇಜಸ್ಸು. "ಬಾಬ... ಎಂದು ಬಾಯಿ ತೆರೆದ ಇಸ್ಮಾಯಿಲನ ದನಿಯಲ್ಲಿ... ತುಂಬಿತ್ತು. ಪಕ್ಕದಲ್ಲೆ ಕುಳಿತಿದ್ದ ಒಬ್ಬರು "ಮ... ನಿಂತೋಗಿದೆ" ಎಂದು ಕಣ್ಣೀರಾಕಿದರು. ತದೇಕಚಿತ್ತದಿ... ಬಾಬಾರನ್ನು ನೋಡಿದವನೇ ದುಃಖ ತಡೆಯಲಾ... ಹೊರಬಂದು ಸಮಾಧಾನ ಮಾಡಿಕೊಂಡ. ಪೆಂಡಾ... ಎದುರು ಬದುರು ಸ್ವಾಮೀಜಿಗಳು ಮತ್ತು ಮುಲ್ಲಾ... ಒಂದಷ್ಟು ಜನ ಕುಳಿತಿದ್ದರು. ಅಷ್ಟರಲ್ಲಿ ಓಡಿಬಂದ ರ... ಇಸ್ಮಾಯಿಲನನ್ನು ತಬ್ಬಿ ಅಳತೊಡಗಿದಳು. "ಭಯ್ಯಾ ... ದಿನ ನಿನ್ನನ್ನ ಕಳೆದುಕೊಂಡಿದ್ದೆ ಈಗ ಬಾಬಾ ... ಬಿಟ್ಟುಹೋಗುತ್ತಿದ್ದಾರೆ" ಎಂದು ಕಣ್ಣೀರಿಟ್ಟಳು. ... ದಿನ ತನ್ನ ತಂಗಿಯನ್ನು ಕೇವಲ ಹಿಂದೂವೊಬ್ಬ...

ನುವಮಯಾಗಿದ್ದಕ್ಕಾಗಿ ದೂರ ಮಾಡಿದೆನಲ್ಲ ಎಂದು ತನ್ನ ಮೇಲೆಯೇ ...ಕೆ ಹುಟ್ಟುಕೊಂಡ. ರೇಷ್ಮಳನ್ನು ಸಮಾಧಾನಪಡಿಸುತ್ತ ಪಕ್ಕದಲ್ಲಿಯೇ ಬಾಬಾರ ...ನಾದಗಳನ್ನು ಹೇಳುತ್ತಿದ್ದ ಅಜ್ಜಿಯ ಬಳಿ ಕುಳಿತುಕೊಂಡ. ಅಲ್ಲಿ ಬಾಬಾನ ...ವಾವ ಹೇಳುತ್ತಿದ್ದವಳು ಹನುಮಜ್ಜಿ

"ಒಮ್ಮೆ ತುರುಕರ ಹುಡುಗ ನಮ್ಮ ಜನದವಳನ್ನ ಇಷ್ಟಪಟ್ಟಿದ್ದ. ಹಿರೀಕರೆಲ್ಲ ...ಬ್ಬರನ್ನ ಬೈದು ಬುದ್ಧಿ ಹೇಳಿ, ಬಾಬಾರ ಹತ್ತಿರ ಕರೆದುಕೊಂಡು ಹೋದರು. ...ಬಾ ಆ ಇಬ್ಬರ ಅಪ್ಪಂದೀರನ್ನ ಕರೆಸಿ ಅವರ ಕೈಯನ್ನು ಬ್ಲೇಡಿನಿಂದ ...ಯ್ದು ಆಮೇಲೆ ಏನಂದ್ರು ಗೊತ್ತಾ? ನಿಮ್ಮಿಬ್ಬರ ರಕ್ತ ಬೇರೆ ಬೇರೆ ಬಣ್ಣ ...ರೆ ಆ ಮಕ್ಕಳನ್ನ ಬೇರೆ ಮಾಡಿ. ಒಂದೇ ಬಣ್ಣ ಇದ್ರೆ ಒಂದು ಮಾಡಿ ...ದ್ರು. ಅವೆರಡು ಕುಟುಂಬದವರಿಗೆ ಬುದ್ಧಿ ಬಂದು ಆ ಮಕ್ಕಳನ್ನ ಅಲ್ಲೇ ...ದುವೆ ಮಾಡಿದರು" ಎಂದು ಹೇಳಿ ಕಣ್ಣೀರು ಹಾಕಿದಳು.

"ಅಗೋ ಆ ಮಸೀದಿ ಗೋಡೆ ಕಟ್ಟಿದೋರು ಯಾರು ಗೊತ್ತಾ? ನಾವು. ...ವಲ್ಲ ಇಟ್ಟಿಗೆ, ಮಣ್ಣು ಹೊತ್ತು ಅದ ಕಟ್ಟೇವಿ. ಹಂಗೇ ಪ್ರತೀ ವರ್ಷ ...ಗಮ್ಮನ ಗುಡೀಗೆ, ರಾಮಮಂದಿರಕ್ಕೆ ಮುಸಲ್ಮಾನ್ರು ಬಣ್ಣ ಹಚ್ಚಿ ಸ್ವಚ್ಛ ...ತ್ತರೆ. ಇದು ಎಲ್ಲಾರ ಉಂಟಾ? ಎಲ್ಲ ಬಾಬಾ ಮಹಿಮೆನಪ್ಪ" ಮತ್ತೆ ...ರಿಟ್ಟಳು ಹನುಮಜ್ಜಿ

ತಟ್ಟನೆ ಏನೋ ನೆನಪಿಸಿಕೊಂಡ ಇಸ್ಮಾಯಿಲ್ ರೇಷ್ಮಳನ್ನು "ಭಾವ ...ಮ್ಮ" ಎಂದಾಗ ರೇಷ್ಮಳಿಗೆ ನಂಬಲಾಗಲಿಲ್ಲ. ಖುಷಿಯಿಂದ ತನ್ನ ಗಂಡನನ್ನು ...ದಳು. ಕಣ್ಣ ಮುಂದೆ ತನ್ನ ಭಾವನನ್ನು ನೋಡಿದ ಇಸ್ಮಾಯಿಲ್ ಅವನನ್ನು ...ಚಿ ತಬ್ಬಿಕೊಂಡ. ಅವನ ಕಣ್ಣಗಳಲ್ಲಿ ಅಲ್ಲಾನನ್ನು ಹುಡುಕಾಡಿದ. ಸುರೇಶನ ...ಗಳು ತುಂಬಿ ಮಿಂಚಿ ಫಳಾರ್ ಎಂದವು. ಕುಶಲೋಪರಿಯನ್ನು ...ಚಾರಿಸುವಷ್ಟರಲ್ಲಿ ಗುಡಿಸಲಿನಿಂದ ಒಮ್ಮೆಲೆ ಎಲ್ಲರೂ ಅಳುವುದು ಕೇಳಿಸಿತು. ...ಷ್ಮ "ಆಯ್ಯೋ ಬಾಬಾ" ಎಂದುಕೊಳ್ಳುತ್ತಲೇ ಗುಡಿಸಲ ಬಳಿ ಓಡಿದಳು. ...ಳಂತೆ ಎಲ್ಲರೂ ಗುಡಿಸಲಿನ ಬಳಿ ಓಡಿದಾಗ ಪೊಲೀಸರು ಅವರೆಲ್ಲರನ್ನು ...ಮಂತ್ರಿಸಿದರು. ಎಲ್ಲರಿಗೂ ದರ್ಶನ ಕಲ್ಪಿಸಲಾಗುವುದು ಎಂದು ಹೇಳಿ ...ಸಾಗಿ ನಿಲ್ಲುವಂತೆ ಸೂಚಿಸಿದರು. ಮಳೆ ತುಂತುರು ಆರಂಭವಾಗಿ ಎಲ್ಲರೂ ...ಡಾಲಿನ ಕೆಳಗಡೆ ನೆರೆದರು.

ಗುಡಿಸಲಿನ ಸುತ್ತ ಜನರ ಆಕ್ರಂದನ ಮುಗಿಲು ಮುಟ್ಟಿತು. ಎದೆ ...ಡಿದುಕೊಂಡು ಅಳುವವರೆಷ್ಟೋ, ನೆಲದ ಮೇಲೆ ಬಿದ್ದು ಒದ್ದಾಡುವವರೆಷ್ಟೋ. ...ತಹವರನ್ನು ಸಮಾಧಾನಪಡಿಸುವ ಕೆಲಸದಲ್ಲಿ ಮಹದೇವಣ್ಣ, ಸುಬಾನ ...ಬ್ ನಿರತರಾಗಿದ್ದರು. ಹೆಚ್ಚು ಕಡಿಮೆ ಸಂಜೆಯವರೆಗೂ ದರ್ಶನವಾಯಿತು. ...ಜಕಾರಣಿಗಳು ವಿವಿಧ ಮುಖಂಡರುಗಳೆಲ್ಲ ದರ್ಶನ ಮಾಡಿ. ಪೆಂಡಾಲಿನ ...ಗೆ ಆಸೀನರಾಗಿ ಅಂತ್ಯಕ್ರಿಯೆಯ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು. ಹನುಮಜ್ಜಿಯ ...ತ್ತ ಅರ್ಧ ಊರೇ ಜಮಾಯಿಸಿತ್ತು. ಒಂದು ಕಡೆ ಗುಡಿಸಲಿನಲ್ಲಿ ದರ್ಶನ ...ಡೆಯುತ್ತಿದ್ದರೆ ಇದ್ದಕ್ಕಿದ್ದಂತೆ ಪೆಂಡಾಲಿನ ಬಳಿ ಮಾತಿಗೆ ಮಾತು ಬೆಳೆದು ...ಲಾಟೆಯಾಗಿ ಪರಿವರ್ತನೆಯಾಯಿತು. ಊರಿನ ಜನರೆಲ್ಲ ಪೆಂಡಾಲಿನ ಬಳಿ ...ಮಾಯಿಸಿದರು. ಊರಿಗೆ ಆಗಾಗ ಬಂದುಹೋಗುವ ಪುಢಾರಿಗಳ ಎರಡು ...ಂಪು ಜಗಳವಾಡುತ್ತಿತ್ತು. ಇನ್ನೇನು ಕೈ ಕೈ ಮಿಲಾಯಿಸುವ ಹಂತಕ್ಕೂ ...ಹೋಗುತ್ತಿತ್ತು. ಅಷ್ಟರಲ್ಲಿ ಅಲ್ಲಿಗೆ ಆಗಮಿಸಿದ ಪೊಲೀಸರು ಗುಂಪನ್ನು ...ಯಂತ್ರಣಕ್ಕೆ ತಂದರು. ಅಷ್ಟರಲ್ಲಿ ಬಾಬಾರವರ ಬಳಿಯಿಂದ ಪೆಂಡಾಲಿಗೆ ...ಂದ ಊರಿನ ಹಿರಿಯ ರಂಗಜ್ಜ ವಿಷಯ ಏನೇದು ಕೇಳಲು ...ಂಪಿನಲ್ಲಿದ್ದವನೊಬ್ಬ "ಬಾಬಾರ ಅಂತ್ಯಸಂಸ್ಕಾರವನ್ನ ಹಿಂದೂ ಧರ್ಮದ ...ಕಾರ ಮಾಡಬೇಕಂತ ನಾವೆಲ್ಲರೂ ನಿಶ್ಚಯಿಸಿದ್ದೀವಿ" ಎಂದಾಕ್ಷಣ ಅದೇ ...ಂಪಿನಲ್ಲಿದ್ದ ಮತ್ತೊಬ್ಬ "ಅದು ಹೇಗಾಗತ್ತೆ? ಬಾಬಾ ಮುಸಲ್ಮಾನ, ಅದಕ್ಕೆ ...ಬಾನ ಮುಸ್ಲಿಂ ಧರ್ಮದ ಪ್ರಕಾರ ಸಮಾಧಿ ಮಾಡುತ್ತೀವಿ" ಎಂದ. ಮತ್ತೊಬ್ಬ "ಅದು ಹೇಗಾಗತ್ತೆ? ಬಾಬಾ ಮೂವತ್ತು ವರ್ಷ ಇದ್ದದ್ದು ನಮ್ಮ ...ಮಮಂದಿರದಲ್ಲಿ ಅದಕ್ಕೆ ಬಾಬಾ ಹಿಂದೂ. ಅವರನ್ನ ನಮ್ಮ ಸಂಪ್ರದಾಯದಂತೆ ...ಮಾಧಿ ಮಾಡಬೇಕು" ಎಂದ. ಅದಕ್ಕುತ್ತರಿಸುತ್ತ ಇನ್ನೊಬ್ಬ "ಬಾಬಾ ಮುಸಲ್ಮಾನ. ...ವರು ಹುಟ್ಟೂರಿನಿಂದಲೇ ಒಬ್ಬರನ್ನ ಕರೆಸಿದ್ದೀವಿ ಬೇಕಾದರೆ ಅವರನ್ನೆ ...ಳಿ" ಎಂದ. ಈ ಗಲಾಟೆಯಲ್ಲಿ ಗುಡಿಸಲೊಳಗೆ ಯಾರೊಬ್ಬರನ್ನೂ ಬಿಡದೆ ...ಲ್ಲರನ್ನೂ ಪೊಲೀಸರು ಹೊರ ದಬ್ಬಿದರು. ಬಾಬಾ ನೆಮ್ಮದಿಯಿಂದ ಒಬ್ಬರೆ ...ಮಲಗಿದ್ದರು. ಗುಡುಗು ಮಿಂಚು ಹೆಚ್ಚಾಗಿ ಮಳೆಯೂ ಜೋರಾಯಿತು. ಮತ್ತೊಮ್ಮೆ ಅಲ್ಲಿ ಗಲಾಟೆ ಆಗಿ ಅದನ್ನು ಪೊಲೀಸರು ನಿಯಂತ್ರಿಸಿದರು.

ಇದೆಲ್ಲವನ್ನೂ ನೋಡುತ್ತಿದ್ದ ರಂಗಜ್ಜ ಚೇರಿನ ಮೇಲೆ ನಿಂತು ...ಮಾತಾಡಲಾರಂಭಿಸಿದ. "ನೋಡಿ ಇದು ನಮ್ಮ ಊರಿನ ವಿಚಾರ. ಬಾಬಾ ...ಊರು ಬಿಟ್ಟು ಬೇರೆ ಕಡೆ ಹೋದವರಲ್ಲ. ನೀವೆಲ್ಲ ಅವರನ್ನ ಕಾಣಲು ...ಗೆ ಬರ್‍ತಾ ಇದ್ರಿ ಅನ್ನೋದನ್ನ ಮರಿಬೇಡಿ. ನಿಮಗಿಂತ ಬಾಬಾರನ್ನ ಅರ್ಥ ...ಮಾಡಿಕೊಂಡಿರೋರು ನಾವು. ಬಾಬಾ ನಮ್ಮ ಸಂಬಂಧ ಗುರುಶಿಷ್ಯರ ಸಂಬಂಧ. ...ಲ್ಲಿ ಗಲಾಟೆ ಮಾಡ್ತಾ ಇದ್ದೀರಲ್ಲ ಅವರಲ್ಲಿ ಒಬ್ಬರೂ ನಮ್ಮ ಊರಿನವರಲ್ಲ. ...ಂದು ದಿನವೂ ಬಾಬಾರಿಗೆ ಊಟ ತಂದು ಹಾಕಿದವರಲ್ಲ. ನಮ್ಮ ಊರಿನಲ್ಲಿ ...ಜಕೀಯ ಮಾಡಿದ್ರೆ ನಾವು ಸುಮ್ಮನೆ ಇರೋದಿಲ್ಲ. ಬಾಬಾ ಬದುಕಿದಾಗ ...ವರು ಅರೆಕ್ಷಣವೂ ನಾನು ಮುಸ್ಲಿಂ ನಾನು ಹಿಂದೂ ಎಂದವರಲ್ಲ. ಇದ್ದಷ್ಟು ...ವೂ ಕೂಡ ರಾಮ ರಹೀಮ ಏಕ್ ಹೈ, ಹಿಂದೂ ಮುಸ್ಲಿಂ ಭಾಯಿ ...ಯಿ ಎಂದು ನಮ್ಮ ರಕ್ತಗಳನ್ನು ಒಂದು ಮಾಡಿದವರು ಅವರು. ಅದನ್ನೆ ...ನಾವು ಮುಂದುವರೆಸಿಕೊಂಡು ಹೋಗುತ್ತೇವೆ. ಅವರ ದಾರಿ ಬಿಟ್ಟು ನಾವು ...ವುದೇ ದಾರಿ ಹಿಡಿಯೋರಲ್ಲ" ಎಂದ. ಮುಂದುವರೆದ ರಂಗಜ್ಜ ...ಜನರನ್ನು ಉದ್ದೇಶಿಸಿ "ನೋಡ್ರಪ್ಪ ನಾನು ಇಲ್ಲಿತನಕ ಹೇಳಿದ್ದು ಸರಿ ...ನೋ?" ಎಂದಾಗ ಇಡೀ ಊರಿಗೆ ಊರೇ ಸರಿ ಎಂದಿತು. ಮಾತು ಮುಂದುವರೆಸಿದ ರಂಗಜ್ಜ "ನೋಡಪ್ಪ ಆರು ಸೂರಾಗ್ಲಿ ಸೂರು ಆರಾಗ್ಲಿ ...ಬಾಬಾರನ್ನ ಎರಡೂ ಧರ್ಮದವರೂ ಒಟ್ಟಾಗಿ ಸೇರಿ ಮಣ್ಣು ಮಾಡೋಣ. ...ಮಗಿಷ್ಟ ಬಂದ ವಿಧಿವಿಧಾನ ನೀವು ಮಾಡಿ ನಮಗಿಷ್ಟ ಬಂದದ್ದು ನಾವು ...ಮಾಡ್ತೀವಿ" ಎಂದಾಗ ಇಸ್ಮಾಯಿಲನನ್ನೂ ಸೇರಿಸಿ ಎಲ್ಲರೂ ಒಪ್ಪಿಕೊಂಡರು.

ಇದ್ದಕ್ಕಿದ್ದಂತೆ ಸಿಡಿಲೊಂದು ಕೇಳಿಸಿ ಎದೆ ನಡುಗಿಸಿತು. ಎಲ್ಲರೂ ಅಲ್ಲಿಂದ ...ಡಿ ಹೋದರು. ಬಾಬಾರ ಕಳೆಬರವೊಂದೇ ಇದ್ದ ಗುಡಿಸಲಿಗೆ ಸಿಡಿಲು ...ಬಿದ್ದು, ಬೆಂಕಿ ಹತ್ತಿತು. ಪೊಲೀಸರು ಒಬ್ಬರನ್ನೂ ಗುಡಿಸಲೊಳಗೆ ಬಿಡಲಿಲ್ಲ. ...ಗ್ನಿಶಾಮಕ ದಳ ಬರುವಷ್ಟರಲ್ಲಿ ಬಾಬಾ ಬೂದಿಯಾಗಿದ್ದರು.

■ ವಿಕಾಸ ಆರ್ ಮೌರ್ಯ

ಮೂರ್ತಿಭಂಜನೆ ಮತ್ತು ಧಾರ್ಮಿಕ ಅಸಹನೆ

ತಾಲಿಬಾನಿಗಳು ಬುದ್ಧನ ವಿಗ್ರಹವನ್ನು ಭಂಜನೆಮಾಡುವಾಗ ಇಡೀ ಜಗತ್ತು ಅವರ ಧಾರ್ಮಿಕ ಅತಿರೇಕತನಕ್ಕೆ ಮರುಕಪಟ್ಟಿರುವದಿತ್ತು. ಕೇವಲ ಬುದ್ಧ ಮಾತ್ರವಲ್ಲ, ಅಂಬೇಡ್ಕರ್, ಗಾಂಧೀಜಿ, ಬಸವೇಶ್ವರ, ಏಸುಕ್ರಿಸ್ತರಂಥಾ ಅನೇಕ ಮಹಾಪುರುಷರ ಪುತ್ಥಳಿಗಳು ಆಗಾಗ ಧಾರ್ಮಿಕ ವಿಕೃತರ ಉಪಟಳಕ್ಕೆ ಸಿಲುಕಿ ವಿಕಾರವಾಗಿರುವದಿದೆ. ಈಚೆಗಷ್ಟೇ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಕೋಳೂರಿನಲ್ಲಿ ರಾಣಿ ಚೆನ್ನಮ್ಮಳ ಪುತ್ಥಳಿಗೆ ಮಾಡಲಾದ ಅವಮಾನದ ಹಿನ್ನೆಲೆಯಲ್ಲಿ ಇಡೀ ಕೋಳೂರು ಹೊತ್ತಿ ಉರಿಯಬೇಕಾಯಿತು. ಎಲ್ಲ ಕಾಲಕ್ಕೂ ಈ ಬಗೆಯ ಮೂರ್ತಿಭಂಜನೆಯ ಕುಕೃತ್ಯಗಳು ಇದ್ದೇ ಇವೆ. ಒಂದು ಕಾಲಘಟ್ಟದಲ್ಲಿ ಹುಟ್ಟಿಬಂದ ಧರ್ಮವೊಂದು ಇನ್ನೊಂದು ಧರ್ಮದೊಂದಿಗಿನ ಅಸಹನೆಯ ಅಂತರಕ್ರಿಯೆಯ ಪ್ರತಿರೂಪವಾಗಿ ಇಂಥಾ ಭಂಜನೆಯ ಕೆಲಸಗಳು ಮುಂಚಿನಿಂದಲೂ ನಡೆಯುತ್ತಾ ಬಂದಿವೆ. ಒಂದು ಧರ್ಮ ಇನ್ನೊಂದು ಧರ್ಮದ ಬೆಳವಣಿಗೆ ಮತ್ತು ಜನಪ್ರಿಯತೆಯನ್ನು ಸಹಿಸದೇ ಇದ್ದಾಗ ಈ ಬಗೆಯ ಭಂಜನೆಯ ಕೃತ್ಯಗಳು ಅನಾವರಣಗೊಳ್ಳುತ್ತವೆ. ಚೈನಾದಲ್ಲಿ ಕ್ರಿಶ್ಚಿಯನ್ ಧರ್ಮ ಮತ್ತು ಬೌದ್ಧ ಧರ್ಮದ ನಡುವೆ, ಭಾರತದಲ್ಲಿ ಒಂದು ಕಾಲದಲ್ಲಿ ಬೌದ್ಧ ಮತ್ತು ಹಿಂದೂ ಧರ್ಮದ ನಡುವೆ ಈ ಬಗೆಯ ಪ್ರತಿರೋಧದ ಮನೋಧರ್ಮಗಳು ಇದ್ದ ಬಗ್ಗೆ ಸಾಕಷ್ಟು ಚಾರಿತ್ರಿಕ ಆಧಾರಗಳಿವೆ. ಕೆಲ ಬೌದ್ಧ ಸ್ತೂಪಗಳು ದೇವಾಲಯಗಳಿಗೆ, ಕೆಲವು ದೇವಾಲಯಗಳು ಮಸೀದಿಗಳಿಗೆ ನೆಲೆಯಾದದ್ದು ಆ ಹಿನ್ನೆಲೆಯಲ್ಲಿಯೇ.. ಇನ್ನು ಮೂಲತಃ ನಾಸ್ತಿಕ ಧರ್ಮ ಎಂದು ಗುರುತಿಸಿಕೊಂಡ ಬೌದ್ಧ ಧರ್ಮ ಬುದ್ಧನ ಮೂರ್ತಿ ಸ್ಥಾಪನೆಯಲ್ಲಿ ತೊಡಗಿಕೊಂಡದ್ದು ಬಹುದೊಡ್ಡ ವಿಪರ್ಯಾಸ. ಯಾವುದೇ ಧರ್ಮದ



ಮಹಾಪುರುಷನ ಮೂರ್ತಿಯನ್ನು ಭಂಜನೆ ಮಾಡುವದು ಕೇವಲ ಆ ಕೃತ್ಯಕ್ಕೆ ಮಾತ್ರ ಸೀಮಿತವಾಗಿರದೇ, ಆ ಮೂರ್ತಿಯೊಂದಿಗಿನ ಧಾರ್ಮಿಕ ಕ್ರಿಯಾವಿಧಿಗಳ ಬಗೆಗಿನ ತಾತ್ಸಾರ ಮತ್ತು ಅವುಗಳನ್ನು ಅವಹೇಳನ ಮಾಡುವದಾಗಿರುತ್ತದೆ. ಅಂದರೆ ಪ್ರತಿಯೊಂದು ಧರ್ಮದಲ್ಲಿಯೂ ಒಂದು ಧಾರ್ಮಿಕ ಪ್ರಜ್ಞೆ ಎನ್ನುವದಿರುತ್ತದೆ ಅದಕ್ಕೆ ಮಂಕು ಕವಿಯುವಂತೆ ಮಾಡುವ ದಿಶೆಯಲ್ಲಿ ಈ ಮೂರ್ತಿ ಭಂಜನೆ ಆರಂಭದ ಪೀಠಿಕೆಯಾಗಿ ಕೆಲಸ ಮಾಡುವದೆಂಬ ನಂಬುಗೆ ಈ ಭಂಜಕರದು. ವಿಲಿಯಂ ಪಾವೆಲ್ ಎನ್ನುವ ಚಿಂತಕರು ಧರ್ಮಗಳಲ್ಲಿ ಮೂರ್ತಿಗಳಿಲ್ಲದಿರುವಾಗಲೂ ಆಚರಣೆಗಳಿಗೆ ಬರವಿರಲಿಲ್ಲ ಎನ್ನುತ್ತಾರೆ. ಒಂದು ಕಾಲದಲ್ಲಿ ಚೈನಾದಲ್ಲಿ ಮೂರ್ತಿಗಳು ಇಲ್ಲದೇ ಇರುವಾಗಲೂ ಖಾಲಿ ದೇಗುಲಗಳಿದ್ದವು, ಅಲ್ಲಿಯೂ ಕೆಲವು ಧಾರ್ಮಿಕ ಆಚರಣೆಗಳಿದ್ದವು. ಹಿರಿಯರು ಕಿರಿಯರಿಗೆ ಆ ಖಾಲಿದೇಗುಲಗಳ ನಡುವೆ ಹೇಗೆ ಬಾಗಬೇಕು, ಗೌರವಿಸಬೇಕು ಎನ್ನುವ ಬಗ್ಗೆ ಮಾರ್ಗದರ್ಶನ ಮಾಡುವದಿತ್ತು. ಪಾವೆಲ್ ಹೇಳುವಂತೆ ಮುಖ್ಯವಾಗಿ ಒಂದು ಧರ್ಮದಲ್ಲಿಯ ಮೂರ್ತಿಗಳು ಇನ್ನೊಂದು ಧರ್ಮದಲ್ಲಿಯ ಮೂರ್ತಿಗಳನ್ನು ವಿರೋಧಿಸಲೆಂದೇ ಹುಟ್ಟುತ್ತವೆ. ಆ ವಿರೋಧ ಅಮೂರ್ತವಾಗಿರುವಂತೆ ಮೂರ್ತವಾಗಿಯೂ ಇರುತ್ತದೆ. ಈ ಮೂರ್ತ ರೂಪದ ವಿಕಾರಗಳೇ ಚಪ್ಪಲಿಯ ಹಾರ, ಕನ್ನಡಕ ಭಗ್ನಗೊಳಿಸುವುದು, ಮೂರ್ತಿಯನ್ನು ಬೀಳಿಸುವುದು ಮುಂತಾದ ವಿಕೃತಿಗಳನ್ನು ಒಳಗೊಂಡಿರುತ್ತದೆ.

ಮಾರ್ಕ್ಸ್ ಹೇಳುವಂತೆ ಧರ್ಮ ಎನ್ನುವುದು ಅಫೀಮು ಇದ್ದಂತೆ. ನಿಜವಾದ ಮಾತು. ಅತಿಯಾದ ಧಾರ್ಮಿಕನಾಗಿರುವಾತ ಅಂದರೆ ಮೂಲಭೂತವಾದಿಯಾಗಿರುವಾತ ಮಾತನಾಡುವ, ವರ್ತಿಸುವ ರೀತಿಯಲ್ಲಿ ಯಾವ ಮಾದಕವ್ಯಸನಿಗೂ ಕಡಿಮೆಯಿರುವದಿಲ್ಲ. ಇಂಥವರು ಅನ್ಯ ಧರ್ಮಗಳ ಮೂರ್ತಿಗಳನ್ನು ಭಂಜನೆ ಮಾಡುವಲ್ಲಿ ವ್ಯಕ್ತಿಗತ ಹಿಂಸೆ ಮಾಡಿದಷ್ಟೇ ಖುಷಿಯನ್ನು ಅನುಭವಿಸುತ್ತಾರೆ. 'ಆಸೆಯೇ ದುಃಖಕ್ಕೆ ಮೂಲ' ಎಂದ ಬುದ್ಧನ ಮೂರ್ತಿಯೊಂದನ್ನು ರಾಯಚೂರಿನಲ್ಲಿ ಯಾರೋ ಕಿರಾತಕರು ಭಗ್ನಗೊಳಿಸಿರುವದಿದೆ. ಅಲ್ಲಿಯ ಕೆಲ ದಲಿತ ಸಂಘಟನೆಗಳು ಆ ಸಂಬಂಧ ಆದಾಗಲೇ ಪೊಲೀಸ್ ಠಾಣೆಯಲ್ಲಿ ಕೇಸೊಂದನ್ನು ದಾಖಲಿಸಿವೆ. ಭಾರತದಂತಹ ನೆಲದಲ್ಲಿ ಬಹುತ್ವಕ್ಕೆ ಎಲ್ಲ ಕಾಲಗಳಲ್ಲಿಯೂ ಅವಕಾಶವಿದೆ. ಭಿನ್ನತೆಯಲ್ಲಿ ಏಕತೆ ಎನ್ನುವದು ಇಲ್ಲಿಯ ನೆಲದ ಗುಣ. ಇದು ವಾಸ್ತವದಲ್ಲಿ ಸಾಧ್ಯವಾಗಬೇಕಾದರೆ ಪರಧರ್ಮ ಸಹಿಷ್ಣುತೆಯ ಗುಣ ಬಹಳ ಮುಖ್ಯ. ಆಗಾಗ ಸುದ್ದಿಯಾಗುವ ಚರ್ಚುಗಳ ಮೇಲಿನ ಧಾಳಿ, ಯಾವುದೋ ದೇವರ ವಿಗ್ರಹ ಭಂಜನೆ, ಮಹಾಪುರುಷರ ಮೂರ್ತಿಗಳಿಗೆ ಅಪಮಾನವಾಗುವ ಹಾಗೆ ನಡೆದುಕೊಳ್ಳುವುದು ಇದು ನಿರಂತರವಾಗಿ ಇದ್ದೇ ಇದೆ. ಚಾರಿತ್ರಿಕವಾಗಿಯೂ ಈ ಬಗೆಯ ಭಂಜನೆಯ ಕೆಲಸಗಳು ಧಾರ್ಮಿಕ ವಿಷಯವಾಗಿ ನಡೆಯುತ್ತಲೇ ಬಂದಿವೆ. ನಮ್ಮ ನೆಲದಲ್ಲಿಯೇ ನಡೆದ ಅನೇಕ ಆಕ್ರಮಣಗಳು, ದೇಗುಲಗಳ ಲೂಟಿ ಮತ್ತು ಭಂಜನೆಯಂಥ ಕೃತ್ಯಗಳು ನಡೆದಿರುವಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಅತೃಪ್ತಿಯೇ ಅತಿ ಮುಖ್ಯವಾದ ಕಾರಣ. 1892 ರಲ್ಲಿ ಚೈನಾದಲ್ಲಿ ಅನೇಕ ಕ್ರಿಶ್ಚಿಯನ್ ಮಿಶಿನರಿಗಳ ಮೇಲೆ ನಡೆಯಲಾದ ಹಲ್ಲೆ ಮತ್ತು ದಾಳಿ ಇದೇ ರೀತಿಯ ಪರೂಪಕ್ಕೆ ಸೇರುತ್ತದೆ. ಜಪಾನದಲ್ಲಿಯೂ 11 ಮತ್ತು 16 ನೇ ಶತಮಾನದಲ್ಲಿ ಭಿನ್ನ ಭಿನ್ನ ಧಾರ್ಮಿಕ ಪಂಥಗಳ ನಡುವೆ ಒಂದು ಬಗೆಯ ಶೀತಲಸಮರ ಇದ್ದೇ ಇತ್ತು. ಇದರರ್ಥ ಒಂದು ಧರ್ಮದ ಸಿದ್ಧಾಂತ ಇನ್ನೊಂದು ಧರ್ಮದ ಸಿದ್ಧಾಂತಕ್ಕೆ ಸಂವಾದಿಯಾಗಿ ನಿಲ್ಲುವ ಅದರಷ್ಟೇ ಸಮಸಮನಾಗಿ ಗುರುತಿಸಿಕೊಳ್ಳುವ, ಬೇರೆಯದ ಧರ್ಮಗಳನ್ನು ಸಹಿಸಿಕೊಳ್ಳಲಿರುವ ಸಂದರ್ಭದಲ್ಲಿ ಈ ಬಗೆಯ ಮೂರ್ತಿ ಭಂಜನೆಯ ಕೆಲಸಗಳು ಆರಂಭವಾಗುತವೆ. ಬುದ್ಧನ ವಿಗ್ರಹಗಳು ವಿಶ್ವದ ಅನೇಕ ಕಡೆಗಳಲ್ಲಿ ಭಿನ್ನ ಭಿನ್ನ ಕಾಲಘಟ್ಟಗಳಲ್ಲಿ ವಿರೂಪಗೊಂಡಿದ್ದು ಇದೇ ಕಾರಣಕ್ಕಾಗಿ ಎನ್ನುವದನ್ನು ಅಲ್ಲಗಳೆಯುವಂತಿಲ್ಲ.

ಬುದ್ಧ ಮೂಲಭೂತವಾಗಿ ಮೂರ್ತಿ ಪೂಜೆಯನ್ನು ಇಷ್ಟಪಟ್ಟವನಲ್ಲ. ಅವನ ಅನುಯಾಯಿಗಳು ಹಾಗೆ ಅವನನ್ನು ಮೂರ್ತಿ ಮಾಡಿ ಕುಳ್ಳಿರಿಸಿರುವದಿದೆ. ಇದು ಕೇವಲ ಬುದ್ಧ ಮಾತ್ರವಲ್ಲ, ಸ್ಥಾವರಕ್ಕಳಿವುಂಟು ಎಂದಿರುವ ಬಸವಣ್ಣನವರ ಮೂರ್ತಿ ಕೂಡಾ ರಾಜ್ಯದ ಅದೆಷ್ಟು ಸರ್ಕಲ್‌ಗಳಲ್ಲಿ ಅವತರಿಸಿಲ್ಲ..? ಬೇರೆ ದೇಶಗಳ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂದರ್ಭ ಬೇರೆ, ನಮ್ಮದೇ ಬೇರೆ. ನಮ್ಮಲ್ಲಿ ಅನೇಕ ಧರ್ಮಗಳು, ಜಾತಿಗಳು, ಭಾಷೆಗಳು ಒಂದೇ ಕಾಲಘಟ್ಟದಲ್ಲಿ ಕೂಡಿ ಬದುಕಿರುವದಿದೆ. ಆದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮೊದಲಿನ ಸಾಮರಸ್ಯತೆ ತೋರುತ್ತಿಲ್ಲ. ಒಂದು ಧರ್ಮದ ಉತ್ಸವ, ಹಬ್ಬಹರಿದಿನಗಳು ಅನ್ಯಧರ್ಮೀಯರನ್ನು ತೊಡಗಿಸಿಕೊಳ್ಳುವಲ್ಲಿ ಮುಂಚಿನಂತೆ ಸಫಲವಾಗದೇ ವಿಫಲವಾಗುತ್ತಿವೆ. ಧಾರ್ಮಿಕ ಆಚರಣೆಗಳು ಬಹಿರಂಗದ ಪ್ರದರ್ಶನ, ವಿಜೃಂಭಣೆಗಳಾಗುತ್ತಿರುವದರಿಂದ ಅವುಗಳ ಆರಂಭದ ಉತ್ಕರ್ಷಣೆ ಈಗ ಅವಸರ್ಪಿಣಿಯಾಗಿ ಮಾರ್ಪಟ್ಟಿದೆ. ಪರಿಣಾಮವಾಗಿ ಒಂದು ಧರ್ಮದ ಉತ್ಸವ ಇನ್ನೊಂದು ಧರ್ಮದವರಲ್ಲಿ ಒಂದು ಬಗೆಯ ದುಗುಡವನ್ನು ಸೃಷ್ಟಿಸುವ ಹಂತಕ್ಕೆ ಬಂದು ತಲುಪಿವೆ. ನನ್ನೂರಿನಲ್ಲಿ ಬಾಲ್ಯದಲ್ಲಿ ಮೊಹರಂ ಎನ್ನುವುದು ಒಂದು ಧರ್ಮದ ಆಚರಣೆಯಾಗಿರದೇ ಆ ಊರಿನ ಒಟ್ಟು ಜನರ ಒಂದು ಜನಪದ ಕಲೆಯಾಗಿತ್ತು. ಹೀಗಾಗಿ ಆಗ ಒಂದು ಧರ್ಮದ ಧಾರ್ಮಿಕ ಉತ್ಸವ ಇನ್ನೊಂದು ಧರ್ಮದ ಅನುಯಾಯಿಗಳಲ್ಲಿ ಅಸಹನೆಗೆ ಕಾರಣವಾಗಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಯಾವುದೋ ಒಂದು ಧರ್ಮದ ಹಬ್ಬ ಮತ್ತು ಉತ್ಸವಗಳು ಅನ್ಯ ಧರ್ಮದ ಅನುಯಾಯಿಗಳಲ್ಲಿ ಭಯ ಮತ್ತು ಉದ್ವೇಗದ ಹುಟ್ಟಿಗೆ ಕಾರಣವಾಗುವಂಥ ಪರಿಸರ ನಿರ್ಮಾಣವಾಗುತ್ತಿದೆ. ಇದು ಪರೋಕ್ಷವಾಗಿ ಈ ಬಗೆಯ ಯಾವುದೇ ಧರ್ಮದ ಮಹಾಪುರುಷರ ಮೂರ್ತಿ ಭಂಜನೆಗೆ ಕಾರಣವಾಗುತ್ತಿದೆ. ಬುದ್ಧನನ್ನು ಧಾರ್ಮಿಕ ತತ್ವ ಮತ್ತು ಸಿದ್ಧಾಂತಗಳ ಹಿನ್ನೆಲೆಯಲ್ಲಿ ಗ್ರಹಿಸಿದಾಗ ಯಾರಿಗೂ ಅವನ ಮೂರ್ತಿಯನ್ನು ಭಂಜಿಸುವ ಮನೋಸ್ಥೈರ್ಯ ಸಾಧ್ಯವಿಲ್ಲ. ಧರ್ಮದ ಕಪ್ಪು ಮುಖದ ಜೊತೆಗಿನ ಸಹವಾಸ ದೋಷವೇ ಈ ಬಗೆಯ ಅಪಕೃತ್ಯಗಳಿಗೆ ಕಾರಣ. ರಾಯಚೂರಿನ ದಲಿತ ಮುಖಂಡರು ಹೀಗೆ ವಿರೂಪಗೊಳಿಸಿದ ಬುದ್ಧನ ಮೂರ್ತಿಯ ಬಗ್ಗೆ ತಳಹಳಿಸದೇ, ಆ ಬಗೆಯ ಕೃತ್ಯ ಎಸಗಿದವರ ಮನಃಸ್ಥಿತಿಯ ಬಗ್ಗೆ ಮರುಕಪಡಬೇಕು. ಯಾಕೆಂದರೆ ಅವರಿಗೆ ಬುದ್ಧನಂಥ ವ್ಯಕ್ತಿತ್ವದ ಒಂದೇ ಒಂದು ಮಗ್ಗಲಿನ ಪರಿಚಯವಾಗದಿರುವ ಬಗ್ಗೆ ಖೇದ ಪಡಬೇಕು. ಒಬ್ಬ ಮಹಾಪುರುಷನ ಮೂರ್ತಿ ಭಂಜನೆಯಿಂದ ಅವನ ತತ್ವಸಿದ್ಧಾಂತಗಳು ಕುಸಿಯುವದಿಲ್ಲ. ಸತ್ಯ ಎಲ್ಲ ಬಗೆಯ ಕಠೋರತೆಗಳನ್ನು ಮೀರಿ ನಿಂತಿರುವಂಥದ್ದು. ಬುದ್ಧ ಮಾತ್ರವಲ್ಲ, ಯಾವುದೇ ಮಹಾನುಭಾವರ ಮೂರ್ತಿಭಂಜನೆಯಿಂದ ಅವರ ಘನತೆಯಂತೂ ಎಳ್ಳಷ್ಟೂ ಕುಗ್ಗುವದಿಲ್ಲ ಎನ್ನುವದನ್ನು ಈ ಬಗೆಯ ಮೂರ್ತಿ ಭಂಜಕರು ಅರಿಯಬೇಕಿದೆ.

ಬುದ್ಧನನ್ನಾಗಲಿ ಇಲ್ಲವೇ ಆತನ ಮೂರ್ತಿಯನ್ನಾಗಲೀ, ಆತ ಪ್ರತಿಪಾದಿಸಿರುವ ತತ್ವಗಳನ್ನಾಗಲೀ ಅಸಹನೆಯಿಂದ ನೋಡುವಲ್ಲಿ ಕಾರಣಗಳೇ ಇರಬಾರದು. ಲೌಕಿಕ ಜಗತ್ತಿನ ಎಲ್ಲ ವ್ಯಾಮೋಹಗಳನ್ನು ಹರಿದೊಗೆದು, ಸತ್ಯ, ಅಹಿಂಸೆ, ತ್ಯಾಗದಂತಹ ಗುಣಗಳನ್ನು ಪ್ರತಿಪಾದನೆ ಮಾಡುತ್ತಲೇ ಮೋಕ್ಷ ಗಳಿಸಿಕೊಂಡ ಬುದ್ಧ ಓರ್ವ ಮಹಾನ್ ಸಾಧಕ. ಅಂಬೇಡ್ಕರ್‌ರಂಥಾ ಮಹಾನ್ ಮೇಧಾವಿಗಳು ವಿಶ್ವದ ಎಲ್ಲ ಧರ್ಮಗಳ ನಡುವೆ ಬೌದ್ಧ ಧರ್ಮವನ್ನು ಒಪ್ಪಿಕೊಂಡಿದ್ದು ಅಪ್ಪಿಕೊಂಡಿದ್ದು ಈಗ ಚರಿತ್ರೆ. ಕೇವಲ ಬುದ್ಧ ಮಾತ್ರವಲ್ಲ, ಯಾರೇ ಮಹಾಪುರುಷರ ಮೂರ್ತಿಗಳನ್ನು ವಿರೂಪಗೊಳಿಸುವ ಮಟ್ಟಕ್ಕೆ ನಾಗರಿಕ ಸಮುದಾಯಗಳು ಇಳಿಯಬಾರದು. ಮೂರ್ತಿಗಳು, ಚಿತ್ರಪಟಗಳು ನಮ್ಮ ಭಾವನೆಗಳನ್ನು ಕೆರಳಿಸುತ್ತವೆ ಎನ್ನುವದಾದರೆ ನಮ್ಮ ಮನಃಸ್ಥಿತಿ ಇನ್ನೂ ಸರಿಯಾಗಿ ಸಂಸ್ಕಾರಗೊಂಡಿಲ್ಲ ಎಂದರ್ಥ. ಮನುಷ್ಯನ ಸಹವಾಸದಲ್ಲಿ ಮಾತ್ರ ಈ ಬಗೆಯ ಸಂಕುಚಿತತೆಗಳು ನೆಲೆ ಕಂಡುಕೊಳ್ಳುವುದು ವಿಚಿತ್ರ ಮತ್ತು ವಿಪರ್ಯಾಸ. ರಜನೀಶ ತಮ್ಮ ಒಂದು ಕೃತಿಯಲ್ಲಿ ಮಾನವನ ಸ್ವಭಾವ ಮತ್ತು ಅವನಲ್ಲಿರುವ ವ್ಯಂಜಕ ಗುಣದ ಬಗ್ಗೆ ಅತ್ಯಂತ ಸೊಗಸಾಗಿ ವಿವರಿಸಿದ್ದಾರೆ. ಒಂದು ವಿಶಾಲವಾದ ಸಾಗರದಲ್ಲಿ ಎರಡು ನೌಕೆಗಳು ಎದುರುಬದುರಾಗಿ ಬರುತ್ತಿದ್ದರೆ ಅವೆರಡೂ ಖಾಲಿಯಿದ್ದು ಎಲ್ಲೋ ಒಂದೆಡೆ ಡಿಕ್ಕಿ ಹೊಡೆಯುವ ಪ್ರಸಂಗ ಬಂದರೆ ಅಲ್ಲಿ ಯಾವುದೇ ಕಲಹಗಳಿಲ್ಲ, ಅದೇರೀತಿ ಒಂದು ನೌಕೆಯಲ್ಲಿ ಜನರಿದ್ದಾರೆ ಇನ್ನೊಂದು ನೌಕೆಯಲ್ಲಿ ಜನರಿಲ್ಲ, ಜನರಿದ್ದ ನೌಕೆ ಜನರಿಲ್ಲದ ನೌಕೆಗೆ ಡಿಕ್ಕಿ ಹೊಡೆದಾಗಲೂ ಅಲ್ಲಿ ಯಾವುದೇ ಬಗೆಯ ಮನಸ್ತಾಪಗಳಿಲ್ಲ. ಅದೇ ಒಂದೊಮ್ಮೆ ಎರಡೂ ನೌಕೆಗಳಲ್ಲಿ ಜನರಿದ್ದು ಆಕಸ್ಮಿಕವಾಗಿ ಅವೆರಡು ಎದುರುಗೊಳ್ಳುವ ಪ್ರಸಂಗ ಬಂದಾಗ, ಡಿಕ್ಕಿ ಹೊಡೆಯುವಂತಾದರೆ ಸಹಜವಾಗಿ ಅಲ್ಲಿ ವೈಮನಸ್ಯ ಮೈದಾಳುತ್ತದೆ. ಮನುಷ್ಯನಿರುವಲ್ಲಿ ಅರಿಷಡ್ವರ್ಗಗಳು ತಳ ಊರಿರುವದು, ಕೆರಳುವುದು ಕಟುಸತ್ಯ. ಈ ಅರಿಷಡ್ವರ್ಗಗಳನ್ನು ಕೂಡಾ ಅರ್ಥವತ್ತಾಗಿ ಬಳಸಿಕೊಳ್ಳಲು ಸಾಧ್ಯ ಆ ದಿಸೆಯಲ್ಲಿ ಸೂಕ್ತ ಮಾರ್ಗದರ್ಶನ ಸಾಮಾಜೀಕರಣ ಮುಖ್ಯ. ಇವು ಅಮುಖ್ಯವಾದಾಗ ಈ ಬಗೆಯ ಭಂಜನೆಯ ಕೃತ್ಯಗಳು ಜರುಗುತವೆ.

■ ಡಾ.ಎಸ್.ಬಿ.ಜೋಗುರ

ದಲಿತರು ಗಾಂಧಿ ದ್ವೇಷದಲ್ಲೇ ಕಳೆದುಹೋಗುವ ಅಪಾಯವಿದೆ...

ಪತ್ರಿಕೆಯಲ್ಲಿ ಬರುತ್ತಿರುವ ಗಾಂಧೀಜಿ ಹಾಗು ಅಂಬೇಡ್ಕರರ ಕುರಿತಾದ ಕೆಲ ವಿಚಾರಗಳನ್ನು ನೋಡಿ ಇದನ್ನು ಬರೆಯಬೇಕೆನಿಸಿತು. ನಮ್ಮ ಕುಟುಂಬದಲ್ಲಾಗಲೀ ನಮ್ಮ ಕಾರ್ಯಕ್ಷೇತ್ರದಲ್ಲಾಗಲೀ ಓರ್ವ ವ್ಯಕ್ತಿಯನ್ನ ನಾವು ದ್ವೇಷಿಸುತ್ತಿರುವುದಾದರೆ ಆತನ ಪ್ರತೀ ನಡೆಯಲ್ಲೂ ನೆಗೆಟಿವ್ ಅಂಶಗಳೇ ನಮಗೆ ಗೋಚರಿಸುವುದು ಸಾಮಾನ್ಯ. ಗಾಂಧೀಜಿಯನ್ನು ಕೂಡ ನಮ್ಮಂತಹ ಕೆಲವರು ನೋಡುತ್ತಿರುವುದು ಇಂಥದ್ದೇ ದೃಷ್ಟಿಯಿಂದ. ಹಲವರಿಗೆ ಗಾಂಧೀಜಿ ದಲಿತರನ್ನ 'ಹರಿಜನ' ಎಂದು ಕರೆದದ್ದು ತಪ್ಪಾಗಿ ಕಂಡರೆ ಮತ್ತೊಬ್ಬರಿಗೆ ಯಾರೋ ಒಬ್ಬ ಅವರನ್ನ 'ಮಹಾತ್ಮ' ಎಂದದ್ದೂ ತಪ್ಪೆನಿಸಬಹುದು. ಗಾಂಧಿ ಅಲ್ಲಿ ಹಾಗೆ ನಿಂತದ್ದೂ ತಪ್ಪು, ಗಾಂಧಿ ಇಲ್ಲಿ ಹೀಗೆ ಕುಳಿತಿದ್ದೂ ತಪ್ಪು, ಒಟ್ಟಾರೆ ಎಲ್ಲವೂ ತಪ್ಪುತಪ್ಪುಗಳೇ... ಅಂಬೇಡ್ಕರರಿಗೆಂದು ಮೀಸಲಿಟ್ಟು ಕೇವಲ ಅವರ ವಿಚಾರ ಚರ್ಚಿಸುತ್ತಿರುವಾಗಲೂ ಗಾಂಧಿ ಬೇಡವೆಂದರೂ ನುಸುಳಿಕೊಳ್ಳುತ್ತಾರೆ. ರಾಮನಿದ್ದಲ್ಲಿ ರಾವಣನ ವಿಚಾರ ಬರುವಂತೆ ತೋರುವ ವಿರೋಧೀ ನೆಲೆಯಲ್ಲಿ ಚರ್ಚಿಸಲಾಗುತ್ತಿರುವ ಗಾಂಧಿಯ ವಿಚಾರ ಇಲ್ಲಿ ಎಷ್ಟು ಪ್ರಸ್ತುತ?

ನಾನು ಚಿಕ್ಕಂದಿನಿರುವಾಗ ನನ್ನ ದೊಡ್ಡಣ್ಣ ಖಾಸಗಿ ಲೈಬ್ರರಿಯಿಂದ ಆಗಾಗ ತರುತ್ತಿದ್ದ ಕ್ರಾಂತಿಕಾರಿ ಚಂದ್ರಶೇಖರ್ ಆಜಾದ್‌ರ ಆತ್ಮ ಚರಿತ್ರೆ(ಅಜೇಯ)ಯನ್ನು ಓದಿದ್ದ ನನಗೆ ಭಾರತಕ್ಕೆ ಬರೀ ಗಾಂಧಿಯಿಂದಷ್ಟೇ ಸ್ವಾತಂತ್ರ್ಯ ಸಿಕ್ಕಿದೆಂದಾಕ್ಷಣ ಕಿರಿಕಿರಿಯೆನಿಸುತ್ತದೆ. ಆದರೆ ಕ್ರಾಂತಿಕಾರಿಗಳಿಗಿಂತಲೂ ಬರೀ ಗಾಂಧಿಯ ಹೆಸರಿನ ಮೋಡಿಗೆ ಆ ಸಮಯದಲ್ಲಿ ಇಡೀ ದೇಶವೇ ಸಮ್ಮೋಹಕ್ಕೊಳಗಾದವರಂತೆ ಒಂದಾಗುತ್ತಿದ್ದುದ್ದಾಗಲೀ, ಎದುರಾಳಿಗಳನ್ನು ಬೆಚ್ಚಿಬೀಳಿಸುವ ಗಾಂಧೀಜಿಯ ಸತ್ಯಾಗ್ರಹ-ಅಹಿಂಸೆಗಳಂತಹ (ಓಡುವವನನ್ನು, ಎದುರಿಸುವವನ್ನು ಮತ್ತು ಪ್ರತಿರೋಧಿಸುವವನ ವಿರುದ್ಧ ಆಕ್ರಮಣ ಸುಲಭ ಆದರೆ ಹೊಡಿ ಮಾರಾಯ ಎಂದು ಅಂಗಿಯೆತ್ತಿ ಬೆನ್ನನ್ನೇ ಎತ್ತಿ ಕೊಟ್ಟವನಿಗೆ ಎದುರಾಳಿ ಎಷ್ಟೂಂತ ಹೊಡೆಯಬಹುದು? ಅಸಲಿಗೆ ಒಂದು ಹಂತದಲ್ಲಿ ಮನಸ್ಸೇ ಬಾರದು-ಇದೊಂದು ಸ್ವಲ್ಪ ಸರಳೀಕರಿಸಿದ ವಿಶ್ಲೇಷಣೆ ಅಷ್ಟೆ) ಪ್ರತಿತಂತ್ರಗಳ ಕೊಡುಗೆ ದೇಶದ ಸ್ವಾತಂತ್ರ್ಯದ ಪ್ರಕ್ರಿಯೆಯಲ್ಲಿ ಸಣ್ಣದೇನೂ ಆಗಿರಲಿಲ್ಲ.

ಗಾಂಧೀಜಿಯ ಜೀವನಾದರ್ಶಗಳನ್ನು ಅವರು ಬದುಕಿದ ರೀತಿಯನ್ನು ನೋಡಿ ಇಡೀ ವಿಶ್ವವೇ ಅಚ್ಚರಿಗೊಂಡು ಹೆಮ್ಮೆಯಿಂದ ನೋಡಿದ್ದರೆ (ಪ್ರಪಂಚದ ಅನೇಕಾನೇಕ ದೇಶಗಳು ಗಾಂಧೀಜಿಯ ಅಂಚೆಚೀಟಿಯನ್ನು ಹೊರತಂದಿವೆ. ಈ ಮಟ್ಟದ ಗೌರವವನ್ನು ವಿಶ್ವದ ಮತ್ತೊಬ್ಬ ವ್ಯಕ್ತಿ ಪಡೆದಿಲ್ಲ. ಐನ್‌ಸ್ಟೈನ್‌ನಂತವರಂತೂ ಇಂತಹ ವ್ಯಕ್ತಿ ಬದುಕಿದ್ದನ್ನು ಮುಂದೆ ಅನುಮಾನಿಸುವ ದಿನಗಳು ಬರಬಹುದು ಎಂದು ಗಾಂಧಿಯ ಬಗ್ಗೆ ಅಚ್ಚರಿಯಿಂದ ನೋಡಿದ್ದರು) ನಮ್ಮ ದೇಶದಲ್ಲಿ ಈ ರಾಷ್ಟ್ರಪಿತನನ್ನು ಗೌರವಿಸುವವರೂ ಇದ್ದಾರೆ ಅದೇ ರೀತಿ ಇತ್ತೀಚೆಗಿನ ದಿನಗಳಲ್ಲಂತೂ ವಿರೋಧಿಸುವವರ ಸಂಖ್ಯೆಯೇ ವಿಪರೀತ ಎಂಬಂತೆ ಹೆಚ್ಚುತ್ತಲೂ ಇದೆ. ಆದರಿದು ಗಾಂಧೀಜಿಯ ಸಮಸ್ಯೆಯಲ್ಲ ಯಾಕೆಂದರೆ, ಗಾಂಧೀಜಿಗೆ ವಿರೋಧ ಹೊಸತೇನಲ್ಲ ತಮ್ಮ ಬದುಕಿನುದ್ದಕ್ಕೂ ವಿರೋಧಗಳ ನಡುವೆಯೇ ಅವರು ಬದುಕಿದ್ದರು. ಅವರ ಕುಟುಂಬದಲ್ಲೇ ಅವರ ಮಕ್ಕಳು ಅಸಂತುಷ್ಟರಿದ್ದರೆ, ತನ್ನದೇ ವಯಸ್ಸಿನ ಪತ್ನಿಯ ಜತೆಗೂ ತೀವ್ರ ನಿಷ್ಠೂರ ಬದುಕನ್ನು ಗಾಂಧಿ ನಡೆಸಬೇಕಾಗಿ ಬಂತು. (ಇದು ಕಸ್ತೂರ್ ಬಾ ಅವರ ಪಾಡು ಕೂಡ ಹೌದು) ಕೆಲವೊಮ್ಮೆ ತೀರಾ ಅತಿಯೆನಿಸುವಂತೆ ತೋರುವ (ತನ್ನ ಮೈತಿಕ್ಕುವ ಕಲ್ಲು ಬಿಟ್ಟು ಬಂದ ಸಹಾಯಕಿಯನ್ನು ಆ ಕಲ್ಲು ತರಲು ಏಕಾಂಗಿಯಾಗಿ ಕಳುಹಿಸಿದ್ದರಂತೆ ಗಾಂಧೀಜಿ) ತನ್ನ ನಿಲುವಿನ ಕುರಿತಾಗಿ ಯಾವ ರಾಜಿಗೂ ಇಳಿಯದ ಬದ್ಧತೆ ನಿಷ್ಠುರತೆ ಗಾಂಧೀಜಿಗೆ ಅನೇಕ ಗುಪ್ತ ವಿರೋಧಿಗಳನ್ನು ಹುಟ್ಟು ಹಾಕಿತ್ತು. ಇಂತಹ ಹಿತಶತ್ರುಗಳೇ ಅವರ ಕೊನೆಗಾಲದಲ್ಲಿ ಗಾಂಧಿ ಹಾಗು ಅವರ ತತ್ವಗಳನ್ನು ಮೀರಿ ಮೆರೆದದ್ದು ಇತಿಹಾಸ. (ಬಸವಾನುಯಾಯಿಗಳಿಂದ ಬಸವಣ್ಣನನ್ನು, ಬೌದ್ಧರಿಂದ ಬುದ್ಧನನ್ನು ಹೇಗೆ ಅಳಿಯಲಾಗದೋ ಅದೇ ರೀತಿ ಗಾಂಧಿವಾದಿಗಳಿಂದ ಗಾಂಧೀಜಿಯನ್ನು ಅಳೆಯುವುದೇ ತಪ್ಪು)

ಇತಿಹಾಸ ಗಾಂಧಿಯನ್ನು ಬ್ರಿಟಿಷರ ಎದುರಾಳಿ ಎಂದು ಪರಿಗಣಿಸಿದರೆ ನಂತರದ ದಿನಗಳಲ್ಲಿ ಗಾಂಧಿ ಎಲ್ಲರ ಎದುರಾಳಿ ಎಂಬಂತೆ ಕುಖ್ಯಾತರಾಗಿಬಿಟ್ಟರು. ಅಂದರೆ ಭಾರತದ ಅನೇಕ ಸನಾತನವಾದಿಗಳು, ಹುಸಿ ದೇಶಭಕ್ತರು, ಮುಸಲ್ಮಾನರು ಹಾಗು ದಲಿತರಿಗೆ ಗಾಂಧೀಜಿ ಏಕಕಾಲದಲ್ಲಿ ವಿಲನ್‌ನಂತೆ ಕಂಡುಬರತೊಡಗಿದ್ದು ವಿಚಿತ್ರವಾದರೂ ಸತ್ಯ. ಕರ್ಮ ಸಿದ್ಧಾಂತದಂತೆ ಪಾಪಯೋನಿಗಳಾದ ದಲಿತರನ್ನು ಮುಟ್ಟಿಸಿಕೊಂಡು ಅದನ್ನೇ ಸರಿಯೆಂದು ಡಂಗುರ ಸಾರುತ್ತಾ ಮನುಧರ್ಮಶಾಸನಕ್ಕೆ ವಿರುದ್ಧವಾದ ನಡೆಯನ್ನು ಅವರು ಹುಟ್ಟುಹಾಕಿದರಲ್ಲದೇ (ಗಾಂಧಿಗೂ ಮುನ್ನ ಇಂತಹ ದಲಿತೋದ್ಧಾರಕರಿದ್ದರೂ ಅದನ್ನು ಇಡೀ ದೇಶಕ್ಕೆ ಪ್ರಭಾವಿಸಿದ್ದು ಗಾಂಧೀಜಿ) ಅದಕ್ಕೂ ಅತಿರೇಕಕ್ಕೆ ಹೋಗಿ ಪರಮಪವಿತ್ರ ಸ್ಥಳವಾದ ದೇಗುಲಕ್ಕೇ ಅವರನ್ನು ನುಗ್ಗಿಸಿ ಅಪವಿತ್ರತೆಗೆ ನಾಂದಿಹಾಡಿದಂತಹ ಗಾಂಧಿ ಸನಾತನವಾದಿಗಳ ಕಣ್ಣನ್ನು ಕೆಂಪನ್ನಾಗಿಸಿದ್ದರು. ಅಲ್ಲದೇ ಜಾತ್ಯತೀತತೆ-ಸಮಾನತೆಯ ಹೆಸರಲ್ಲಿ ಈಗ ಮೆರೆಯುತ್ತಿರುವ ದಲಿತರ ಬೊಬ್ಬೆಗಳಿಗೆಲ್ಲ ಮೂಲಕಾರಣವೇ ಈತನೆನ್ನುವ ಅಸಹನೆ (ಗೋಡ್ಸೆಯಂತಹ ಕೊಲೆಗಡುಕನ ಹುಟ್ಟಿಗೆ ಕಾರಣವಾದ) ಸನಾತನವಾದಿಗಳದ್ದಾದರೆ, ದಲಿತರು ಮುಸಲ್ಮಾನರು ಅವರದ್ದೇ ಆದ ಕಾರಣಗಳಿಗಾಗಿ ಗಾಂಧೀಜಿಯನ್ನು ವಿರೋಧಿಸುತ್ತಾರೆ.



ಭಾರತ ವಿಭಜನೆಗೊಂಡು ನಡೆದ ಗಲಾಟೆ ರಕ್ತಪಾತದ ಸಮಯದಲ್ಲಿ ದಣಿದಿರುವ ವಯೋವೃದ್ಧ ಗಾಂಧೀಜಿಯ ಮಾತನ್ನು ಯಾರೂ ಕೇಳುವವರಿಲ್ಲ, ಪರಿಸ್ಥಿತಿ ಅವರನ್ನೂ ಮೀರಿ ಬೆಳೆದು ಕೋಮುದಳ್ಳುರಿ ಇನ್ನಿಲ್ಲದಂತೆ ಹಬ್ಬಿತ್ತು. ಇದಕ್ಕಾಗಿ ತಮ್ಮದೇ ರೀತಿಯಲ್ಲಿ ಏಕಾಂಗಿಯಾಗಿ ಚಡಪಡಿಸಿದರಾದರೂ ಅವರದ್ದು ಮಾತ್ರ ಅರಣ್ಯರೋದನವಾಗಿತ್ತು. ಸ್ವತಂತ್ರ ಭಾರತದ ಕನಸನ್ನು ನನಸಾಗಿಸಿ ಕೊನೆಗೆ ಅದರಲ್ಲೇ ನೋವನ್ನುಂಡ ವಯೋವೃದ್ಧ ಗಾಂಧಿಗೆ ತನ್ನ ಪ್ರಾಮಾಣಿಕ ಹೋರಾಟಕ್ಕೆ ಸಿಕ್ಕ ಭಕ್ಷೀಸೆಂದರೆ ಕೊನೆಗೆ ಹಿಂದೂ ಮುಸ್ಲಿಮರ ದ್ವೇಷ ಅಷ್ಟೆ. ಎಲ್ಲಕ್ಕೂ ಗಾಂಧೀಜಿಯೇ ಕಾರಣ ಎಂದು ಬೇಕುಬೇಕಾದವರು ಆಡಿಕೊಂಡವರಿಗೆ ಉತ್ತರ ಹೇಳಲು ಆಗ ಗಾಂಧಿಯೂ ದಣಿದಿದ್ದರು ಅಲ್ಲದೇ ಗೋಡ್ಸೆಯೇ ಸ್ವಲ್ಪ ದಿನದಲ್ಲಿ ಶಾಶ್ವತವಾಗಿ ಗಾಂಧೀಜಿಯ ಬಾಯ್ಮುಚ್ಚಿಸಿದ್ದ ಬೇರೆ.

ಇನ್ನು ದಲಿತರ ವಿಚಾರವಾಗಿ ಬಂದರೆ ಅಂಬೇಡ್ಕರ್‌ರ ನಿಲುವುಗಳು, ಪೂನಾ ಒಪ್ಪಂದ ಹರಿಜನ ಪದ ಇತ್ಯಾದಿಗಳೆಂದು ಗಾಂಧೀಜಿ ಅವರ ವಿರೋಧಿ ಪಾಳಯದಲ್ಲಿ ನಿಂತುಬಿಡುತ್ತಾರೆ ಅಥವ ನಿಲ್ಲಿಸಲ್ಪಟ್ಟಿದ್ದಾರೆ. ಅವರು ಕೊಟ್ಟ ಹರಿಜನ ಪದದ ಹಿಂದಿರುವ ಉದ್ದೇಶ ಹಾಗು ಪ್ರಾಮಾಣಿಕತೆಯನ್ನು ನಾವು ನೋಡಬೇಕೇ ವಿನಹ ಆ ಪದವೇ ಪತಿತಗೊಂಡ ಸಾಮಾಜಿಕ ಪ್ರಕ್ರಿಯೆಯ ಪರಿಣಾಮವನ್ನಲ್ಲ. ಒಂದು ವೇಳೆ ದಲಿತರನ್ನು ಗಾಂಧೀಜಿ ಹರಿಜನ (ದೇವರ ಮಕ್ಕಳು) ಎಂಬ ಬದಲು 'ನಿಜ ಬ್ರಾಹ್ಮಣ' ಎಂಬ ಪದದಲ್ಲಿ ಕರೆದರೂ ಅದನ್ನು ಒಪ್ಪದ ಮನಸ್ಥಿತಿ ಇರುವ ಸಮಾಜದಲ್ಲಿ ಆ ಪದವೂ ಕೂಡ ಇದೇ ರೀತಿ ಪತಿ (ಕೀಳಾಗಿ ಪರಿಗಣಿಸಲ್ಪಡುತ್ತಿತ್ತು) ಗೊಳ್ಳುತ್ತಿತ್ತು, ಇದಕ್ಕೆ ಇ ತಕ್ಷಣಕ್ಕೆ ಬದಲಾಗದ ಜಿಗುಟು ಸಾಮಾಜಿಕ ಪರಿಸ್ಥಿತಿಯ ಕಾರಣ ಹೊರತು ಗಾಂಧೀಜಿಯಲ್ಲ, ಇನ್ನು ಅಂಬೇಡ್ಕರ ಹಾಗು ಗಾಂಧೀಜಿಯ ನಡುವೆ ತಾತ್ವಿಕ ಭೇದಗಳಿದ್ದವ ವಿನಹ ಇಬ್ಬರ ಹೋರಾಟದಲ್ಲಿ ಬೆರೆತಿರುವ ಪ್ರಾಮಾಣಿಕ ಮಾತ್ರ ಪ್ರಶ್ನಾತೀತವಾಗಿತ್ತು, ಇಬ್ಬರ ಹೋರಾಟದ ಹಿಂ ಯಾವುದೋ ಒಂದು ಸದುದ್ದೇಶವಿತ್ತೇ ವಿನಃ ಅಧಿಕಾರಲಾಲ ಸ್ವಾರ್ಥಚಿಂತನೆ ಖಂಡಿತ ಇದ್ದಿರಲಿಲ್ಲ. ಅಂಬೇಡ್ಕರ ಹಿಂದೂಗಳಿಂದ ನೇರವಾಗಿ ನೋವುಂಡವರಾಗಿದ್ದ ಗಾಂಧೀಜಿಗೆ ಹಿಂದೂಗಳ ಬಗ್ಗೆ ಮೃದುಧೋರಣ ಇದ್ದದ್ದಂತೂ ಹೌದು, ಈ ಕಾರಣಕ್ಕಾಗಿ ಅಂಬೇಡ್ಕರ ಕೆಲ ನಿಲುವುಗಳಿಗೆ ಗಾಂಧೀಜಿ ಅಡ್ಡಗಾಲು ಹಾಕಿದ ಹೌದಾದರೂ ಇದರ ಹಿಂದೆ ಅವರದ್ದೇ ಆದ ಭಾರತ ಸಮಗ್ರತೆಯ ಚಿಂತನೆ ಇತ್ತೇ ಹೊರತು ದಲಿತ ದ್ವೇಷವ ಬ್ರಾಹ್ಮಣರು, ದಲಿತೇತರರೆಲ್ಲರೂ ಕೆಟ್ಟವರೇನಲ್ಲ ಅದೇರೀ ದಲಿತರೆಲ್ಲರೂ ಸುಭಗ(ಭ್ರಷ್ಟ ಮತ್ತೂರು ಸಮಯಸಾಧ ಅಂಗಾರಗಳಂತೆ) ರಲ್ಲ (ನಾನೂ ದಲಿತನೇ) ಎಲ್ಲರೂ ಒಂದಾ ಒಗ್ಗಟ್ಟಾಗಿ ಸ್ವತಂತ್ರ ಭಾರತದಲ್ಲಿ ಭಾರತೀಯ ಮುಂದುವರೆಯಲಿ, ಯಾರಿಗೆ ಯಾರೂ ಮಗ್ಗು ಮುಳ್ಳಾಗದಿರಲಿ ಎಂಬ ಮುಂದಾಲೋಚ ಗಾಂಧಿಯದ್ದಾಗಿತ್ತು, ಅವರ ದೃಷ್ಟಿಯಲ್ಲಿ ಇದು ತಪ್ಪಾಗಿರಲಿ "ನಡೆಯುವವರು ಎಡವುವವರೇ ವಿನಃ ಕುಳಿತವರಲ್ಲ" ಎನ್ನುವ ಕವಿವಾಣಿಯಂತೆ ಗಾಂಧಿಯಂತಹ ನಿಷ ಹೋರಾಟಗಾರನ ಕೆಲ ನಿಲುವುಗಳು ಕೆಲವರಿಗೆ ಅನ್ಯಾ ಮಾಡಿರುವುದು ಹೌದಾದರೂ ನ್ಯಾಯ ಹಂಚಿಕೆ ಪ್ರಕ್ರಿಯೆಯಲ್ಲಿ ಇದು ಅನಿರೀಕ್ಷಿತವೇನಲ್ಲ. ಹಾಗ ಉದ್ದೇಶಪೂರ್ವಕವಾಗಿ ಗಾಂಧೀಜಿ ಯಾರಿಗೂ ಕೇ ಬಯಸಿದವರಲ್ಲ ದಲಿತರು ಹಾಗು ಮುಸಲ್ಮಾನರ ನೋವಿ ಅವರ ಸ್ಪಂದನೆ ಪ್ರಾಮಾಣಿಕವಾಗಿತ್ತು. ಇದನ ಅಲ್ಲಗಳೆಯುವುದು ಕಷ್ಟಸಾಧ್ಯ.

ಮೋದಿ ಭಾರತದ ಮಹಾನ್ ದೇಶಭಕ್ತನೆನಿ ಗೋಡ್ಸೆಯ ಗುಂಪೇ ಇದೀಗ ಗಾಂಧೀಜಿಯನ್ನು ರಾಜಕೀ ಕಾರಣಗಳಿಗಾಗಿ ಮಾನ್ಯ ಮಾಡತೊಡಗಿದೆ. ಆದರೆ ಬಹ ಹಿಂದಿನಿಂದಲೂ ದಲಿತರು ಹಾಗು ಮುಸಲ್ಮಾನರನ್ನು ಅ ನಿಜ ವಿರೋಧಿಯೆಡೆಗಿರುವ ಗಮನವನ್ನು ತಪ್ಪಿಸು ಸಲುವಾಗಿ ಕೆಲವರು ಯಾವುದೋ ಹುಸಿ ವಿರೋಧಿಯ ಉದ್ದೇಶಪೂರ್ವಕವಾಗಿ ಅವರೆದುರು ತಂದು ನಿ ಬೇಕೆಂತಲೇ ಎಲ್ಲರ ದಿಕ್ಕು ತಪ್ಪಿಸುತ್ತಿದ್ದಾರೆ. ಇಂಥ ಪ್ರಕಾರ ಎಲ್ಲ ಅನಿಷ್ಟಕ್ಕೂ ಗಾಂಧಿ-ನೆಹರೂಗಳೇ ಕಾರ ಈ ಚಾಣಕ್ಯ(ಕು) ತಂತ್ರವನ್ನು ನಾವೆಲ್ಲ ಮನಗಾಣದಿ ಅವರು ತೋಡಿರುವ ಖೆಡ್ಡದಲ್ಲಿ ಬಿದ್ದವೆಂದೇ ಅ ವಿಚಿತ್ರವೆಂದರೆ ಮನುವಾದಿಗಳ ಹುಟ್ಟಾಟಕ್ಕೆ ಮುಳ್ಳಾಗಬಹುದಾದ "ಸಮಾನ ಮನಸ್ಕ"ರದ್ದು ಎಂದ ಒಂದಾಗದ ಮನಸ್ಥಿತಿ. ಉದಾ- ರಾಜ್ಯದಲ್ಲಿ ಮತಾಂ ವಿವಾದ ತಲೆದೋರಿದಾಗ ಇವರೆಲ್ಲ ಸಂಬಂಧವಿದ್ದ (ದಲಿತರ ಮತಾಂತರ-ಮರುಮತಾಂತರವೆಂ ನೇರಸಂಬಂಧವಿಲ್ಲದ ಮನುವಾದಿಗಳು ಅನ್ಯ ಧರ್ಮೀಯ ವಿರುದ್ಧ ತೋಳೇರಿಸಿದ್ದರು. ಇವರದ್ದು ಸ್ವಾರ್ಥಚಿಂತನೆ ವಿನಃ ನೈಜಕಾಳಜಿಯಲ್ಲ, ಯಾಕೆಂದರೆ, ಮತಾಂತ ಮೂಲಕಾರಣ ಮನುವಾದಿಗಳ ನಡವಳಿಕೆಯಲ್ಲೇ ತಾನೆ?) ಕೂಡ ನಮಗ್ಯಾಕೆ ಕ್ರಿಶ್ಚಿಯನ್ನರ ವಕಾಲತ್ತು? ಎಂ ಸುಮ್ಮನಿದ್ದರೇ ವಿನಃ "ನೀವ್ಯಾರಯ್ಯ ಮಾತಾಡಲು?" ಎಂ ದನಿಯೆತ್ತಲಿಲ್ಲ, ಕೇವಲ ಸಣ್ಣದೊಂದು ಪ್ರತಿರೋ ತೋರಿದ್ದರೇ ಸಾಕಿತ್ತು ಮನುವಾದಿಗಳು ಬಾಲಮು ಓಡುತ್ತಿದ್ದರು. ಆದರೆ ಹಾಗಾಗಲಿಲ್ಲ, ಇದೇ ಅವರಲ್ಲಾ ಎಲ್ಲರನ್ನೂ ಎಲ್ಲವನ್ನೂ ದ್ವೇಷ-ವಿರೋಧ ಮರೆತುಕೊಂ ಸೇರಿಸುತ್ತಾರೆ. ಕಾರ್ಯಸಾಧನೆಯ ವಿಚಾರದಲ್ಲಿ ಅವರಲ್ಲಿ ಒಗ್ಗಟ್ಟು ನಮ್ಮಲ್ಲಿಲ್ಲ. ಹಳೆಯ ಗಾಂಧಿಗಾಯವ ಕೆರೆಯುವುದರಲ್ಲೇ ಮುಳುಗಿಕೊಂಡು ಜೀವಂತವಿರ ಶಕುನಿಗಳ ದಂಡನ್ನು ಮರೆತುಬಿಡುತ್ತೇವೆ. ಇದೇ ನ ಸಮಸ್ಯೆ.

ರಾಷ್ಟ್ರಪಿತ ಎಂದಾಕ್ಷಣ ಗಾಂಧೀಜಿ ಪ್ರಶ್ನಾತೀತರೇ ಗಾಂಧೀಜಿಯ ತಪ್ಪುಗಳನ್ನು ಖಂಡಿತಾ ವಿಮರ್ಶಿಸೋ ಆದರೆ, ಮುಂದಿನ ಪೀಳಿಗೆಗೆ ಗಾಂಧೀಜಿಯೇ ದಲಿ ಮೊದಲ ಶತ್ರು ಎಂಬಂತಹ ತಪ್ಪು ಸಂದೇಶ ಮ ಬೇಡ. ಯಾಕೆಂದರೆ, ಸನಾತನವಾದಿಗಳ ಕಾಲಾಳುಗಳ ನಡೆಸಿಕೊಳ್ಳಲಾಗುತ್ತಿರುವ ಈ ಹೊಸಪೀ ಎದುರುಗೊಳ್ಳಬೇಕಿರುವ ನಿಜಶತ್ರುಗಳ ಸಂಖ್ಯೆ ಸಾಕ ದೊಡ್ಡದಿದೆ. ಇದಕ್ಕೆ ಸಣ್ಣ ಉದಾಹರಣೆಯಾಗಿ ಜ 24ರ ಸಂಚಿಕೆಯಲ್ಲಿ ವಿಕಾಸ್ ಆರ್ ಮೌರ್ಯ ಬರೆದಂತಹ 'ಸ್ವತಂತ್ರ ಭಾರತದ ನವಅಗ್ರಹಾರ'ಗ ಸ್ವಲ್ಪ ಇಣುಕಿ ನೋಡಿದರೇ ಸಾಕು.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ

ಭಾರತದಲ್ಲಿ 'ದಲಿತರ ಪುಂಡಾಟ' ನಡೆಯುತ್ತಾವ?

ಸಾವಿರಾರು ಕಂದಮ್ಮಗಳನ್ನು ಮಾನವೀಯತೆಯಿಲ್ಲದೆ ಕಲ್ಲು ಮನಸ್ಸಿನವರು ಕೊಂದುಹಾಕಿದಾಗ ಇದು "ಮುಸ್ಲಿಮ್ ಭಯೋತ್ಪಾದನೆ" ಎಂದೋ ಮತ್ತು ದನಗಳನ್ನು ಮಾರುವ ರೈತರನ್ನು ಬೆತ್ತಲಾಗಿಸಿ ಬಡಿದು ಕೊಲ್ಲುವ ಮೃಗೀಯರನ್ನು "ಹಿಂದೂ ಭಯೋತ್ಪಾದನೆ" ಎಂದು ಬಳಸುವ ಪದಗಳು ಭಯೋತ್ಪಾದನೆಯನ್ನು ಧರ್ಮ/ಜಾತಿಗಳಿಗೆ ಅಂಟಿಸುವ ಅಪಾಯವಿದೆ. ಇದರಿಂದ ಭಯೋತ್ಪಾದನೆಯಂತಹ ಸಮಾಜಘಾತುಕ ಕೃತ್ಯಗಳ ಅಸಲಿ ಬೇರುಗಳನ್ನು ತಿಳಿಯುವ ಮತ್ತು ಅದರ ನಿರ್ಮೂಲನೆಯ ದಾರಿಯಿಂದ ತಪ್ಪಿಸಿಕೊಂಡು ಭಿನ್ನ ಕೋಮುಗಳ ನಡುವೆ ವೈಷಮ್ಯ-ಜಗಳಗಳಿಗೆ ನಾಂದಿ ಹಾಡಿದಂತಾಗುತ್ತದೆ.

ಅಂತೆಯೇ ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟವಾದ ವರದಿಯೊಂದರಲ್ಲಿ "ಮಳವಳ್ಳಿ ಮಾಜಿ ಶಾಸಕ ಅನ್ನದಾನಿಯ ದಲಿತ ಪುಂಡಾಟ" ಎಂಬ ಪದವೂ ಕೂಡ ಬಲಪಂಥೀಯರು ಬಳಸುವ ಪದವಾಗಿದೆ. ದಲಿತ ಪರ, ಪ್ರಗತಿಪರವೆಂದು ಗುರುತಿಸಿಕೊಂಡಿರುವ ಗೌರಿ ಲಂಕೇಶ್ ಅಂತಹ ಪತ್ರಿಕೆಯಲ್ಲಿ ಇಂತಹ ತಲೆಬರಹವಿರುವ ವರದಿಯನ್ನು (ಅದೂ ಪತ್ರಿಕೆಯ ಮುಖಪುಟದಲ್ಲಿ!!) ನೋಡಿ ಆಶ್ಚರ್ಯವಾಗಿದೆ. ಕಿಡಿಗೇಡಿ ರಾಜಕಾರಣಿಯೊಬ್ಬನ ದೌರ್ಜನ್ಯದ ಬಗ್ಗೆ ಯಾವುದೇ ಮುಲಾಜಿಲ್ಲದೆ ವರದಿ ಮಾಡಿರುವ ಪತ್ರಿಕೆಯ ಎದೆಗಾರಿಕೆ ಮೆಚ್ಚುವಂಥದ್ದೆ, ಆದರೆ ಆ ಕೃತ್ಯವನ್ನು 'ದಲಿತ ಪುಂಡಾಟ' ಎಂದು ಬರೆದು ಇಡೀ ದಲಿತರನ್ನೆ ಹೊಣೆಮಾಡಿದಂತಾಗಲಿಲ್ಲವೆ?

ಸಾವಿರಾರು ವರ್ಷಗಳಿಂದ ದಲಿತರ ಮೇಲೆ ಶೋಷಣೆ ನಡೆಯುತ್ತಿರುವುದು ಬಹಿರಂಗ ಸತ್ಯ. ದಲಿತ ಹೆಣ್ಣುಮಕ್ಕಳ ಮೇಲೆ ಭೂಮಾಲೀಕರ/ಸವರ್ಣೀಯರ ಅತ್ಯಾಚಾರಗಳು ನಿರಂತರವಾಗಿ ನಡೆಯುತ್ತಲಿದೆ, ದಲಿತರ ಮಾರಣಹೋಮಗಳು ನಡೆದು, ಸಾಕ್ಷಿಗಳು ಇದ್ದಾಗ್ಯೂ ದಲಿತರಿಗೆ 'ನ್ಯಾಯ' ಸಿಗದೆ ಕಾನೂನುಗಳು ಸವರ್ಣೀಯರ ಹಿಂತ ಕಾಯುತ್ತಿರುವುದು ನಗ್ನಸತ್ಯವಲ್ಲವೆ? ದಲಿತರನ್ನು ಪ್ರೀತಿಸಿದ ಕಾರಣಕ್ಕೆ ಮರ್ಯಾದೆ ಹೀನಹತ್ಯೆಗಳು ನಡೆಯುತ್ತವೆ. ಬಹುತೇಕ ಕೋಮುಗಲಭೆಗಳು/ಜಾತಿಜಗಳಗಳಲ್ಲಿ ದಲಿತರ ಕೇರಿಗಳೇ ಮೊದಲ ಬಲಿಗಳಾಗುತ್ತವೆ. ಅಷ್ಟೆ ಯಾಕೆ ಪತ್ರಿಕೆಯ ವರದಿಯಲ್ಲೇ ಹೇಳಿರುವಂತ ಅನ್ನದಾನಿ ಯಾರೋ ಬಲಿಷ್ಠ ಜಾತಿಯವರನ್ನು 'ಮುಟ್ಟಲು' ಸಾಧ್ಯವಾಗಿಲ್ಲ. ಅವನಾದರು ತನ್ನ ಗೂಂಡಾಗಿರಿಯನ್ನು ತೋರಿಸಿದ್ದು ಅಮಾಯಕ ದಲಿತರ ಮೇಲೆಯೇ ತಾನೆ? ಹೌದು ಇಂತಹ ಗೂಂಡಾಗಿರಿಯನ್ನು ದಲಿತ ಮಾಡಿದರೂ ಅಥವ ಬಲಿತ ಮಾಡಿದರೂ ನಾವೆಲ್ಲರು ಖಂಡಿಸಲೇಬೇಕು. ಆದರೆ ದೇಶದಲ್ಲಿ ದಲಿತರ ಸ್ಥಿತಿ ಶೋಚನೀಯವಾಗಿರುವಾಗ, ದಲಿತರ ಮೇಲೆಯೇ ಹಲ್ಲೆಯಾಗಿರುವ ಸಂದರ್ಭದಲ್ಲಿ, ದಲಿತ ಪರವೆಂದು ಗುರುತಿಸಿಕೊಳ್ಳುವ ಪತ್ರಿಕೆಯ ವರದಿಯಲ್ಲಿ 'ದಲಿತ ಪುಂಡಾಟ' 'ದಲಿತ ದೌರ್ಜನ್ಯ' ಎಂಬ ಪದಗಳು ದಲಿತರನ್ನು ಅವಮಾನಿಸಿದಂತೆಯೇ ಸರಿ. ಅನ್ನದಾನಿ ದಲಿತನೇ (ಆದರೆ ದಲಿತಪರನಲ್ಲ) ಆಗಿರಬಹುದು ಆದರೆ ನಾನು "ದಲಿತನೆಂಬ ಗರ್ವ"ದಿಂದ (ಹೆಮ್ಮೆಯಿಂದ) ಅವನು ಈ ಹಲ್ಲೆಯನ್ನು ಮಾಡಿರಲು ಸಾಧ್ಯವಿಲ್ಲ, ಯಾಕೆಂದರೆ ನಾನು ದಲಿತನೆಂದು ಹೇಳಿಕೊಂಡು ಹೆಮ್ಮೆ ಪಡುವಂತಹ ಅಥವ ಬೆಲೆ ಗೌರವ ಸಿಗುವ (ಇತರೆ ಸವರ್ಣೀಯ ಜಾತಿಗಳಿಗೆ ಸಿಗುವಂತೆ) ಸ್ಥಿತಿ ಸಮಾಜದಲ್ಲಿಲ್ಲ, ಹಾಗಾಗಿ ದಲಿತ ಪುಂಡಾಟ ಎಂಬಂತಹ ಪದಗಳನ್ನು ಬಳಸುವಾಗ ಬಹಳ ಎಚ್ಚರಿಕೆಯಿಂದಿರಬೇಕು.

-ಸರೋವರ್ ಬೆಂಕಿಕೆರೆ, ಈ ಮೇಲ್ ಮೂಲಕ

ಕರ್ನಾಟಕದಲ್ಲಿ ದಲಿತರ ಪರವಾಗಿ ಮಾತನಾಡುತ್ತಿರುವ ವಾರಪತ್ರಿಕೆಗಳಲ್ಲಿ ಗೌರಿ ಲಂಕೇಶ್ ಅಗ್ರಮಾನ್ಯ. ಗೌರಿ ಲಂಕೇಶ್ ಪತ್ರಿಕೆ ದಲಿತರಿಗೆ ಮಾಡಿರುವ ಉಪಕಾರವನ್ನು ಯಾರೂ ಮರೆಯಲಾರರು. ಅದನ್ನು 'ನಮ್ಮ ಪತ್ರಿಕೆ' ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಆದರೆ ಕಳೆದ ವಾರ ಮಾಜಿ ಶಾಸಕ ಅನ್ನದಾನಿಯ ಪುಂಡಾಟಗಳನ್ನು ವಿವರಿಸಲು 'ದಲಿತ ಪುಂಡಾಟ' ಎಂಬ ಪದ ಬಳಸಿದ್ದು ನಿಜಕ್ಕೂ ದುಃಖಕರ. ಆ ಪದ ಬಳಕೆ ಉಗ್ರವಾದವನ್ನು ಇಡೀ ಮುಸ್ಲಿಂ ಜನಾಂಗಕ್ಕೆ ಹೋಲಿಸುವಷ್ಟೆ ಅಪರಾಧ.

ಪುಂಡಾಟಗಳು ಯಾವ ಜನಾಂಗಕ್ಕೂ ಮೀಸಲಾಗಿರುವುದಿಲ್ಲ, ಅದು ಜಾತಿ ಧರ್ಮಗಳನ್ನು ಮೀರಿದ್ದು. ಹಿಂದೊಮ್ಮೆ ಗಂಡಂದಿರಿಗೆ ಕಿರುಕುಳ ಕೊಡುವ ಮಹಿಳೆಯರನ್ನು ಬಿಂಬಿಸುವ ಲೇಖನ ಸರಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು, ಅದು ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ಗೌಣಗೊಳಿಸುವವರಿಗೆ ಸಹಕಾರಿಯಾಗುವಂತಿತ್ತು. ಈಗ ದಲಿತರ ವಿಚಾರದಲ್ಲಿ ಮತ್ತೊಮ್ಮೆ ಅದೇ ರೀತಿಯ ಅಪರಾಧವಾಗಿದೆ. ಇದು ನಮ್ಮೆಲ್ಲರಿಗೆ ನೋವುಂಟು ಮಾಡಿದೆ.

- ವಿಕಾಸ ಆರ್ ಮೌರ್ಯ, ಬೆಂಗಳೂರು

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಕೃಷಿಕ ಬುಡಕಟ್ಟಿನ ಶಾಕ್ಯ ಸಮುದಾಯ

ಪಶುಪಾಲನೆಯಿಂದ ಕೃಷಿಗೆ ಮಾರ್ಪಡುತ್ತಿದ್ದ ಕಾಲವದು. ಹಾಗೆಯೇ ಸಮುದಾಯಗಳ ರೂಪುಗೊಂಡ ಗಣಗಳಿದ್ದು ಅವರಲ್ಲಿ ಸ್ಥಿರವಾದ ರಾಜವಂಶದ ಕಲ್ಪನೆಯಾಗಲಿ, ಚಕ್ರವರ್ತಿಯೆಂಬ ಸಾಮ್ರಾಜ್ಯಶಾಹಿಯ ಪರಿಕಲ್ಪನೆಗಳಾಗಲಿ ಇಲ್ಲವಾಗಿದ್ದು, ಮುಖ್ಯಸ್ಥನಾಗಿರುವವನನ್ನೇ ಪ್ರಮುಖನಾಗಿ ಪರಿಗಣಿಸುತ್ತಿದ್ದರು. ಆ ಪ್ರಮುಖ ಕೂಡ ಸದಾ ವಂಶಪಾರಂಪರ್ಯವಾಗಿ ಇರುವವನೇನಲ್ಲ, ಅವರ ಒಡೆತನ ಅಥವಾ ರಾಜತನವೆಂಬುದು ಬದಲಾಗುವಂತಿದ್ದು ಶುದ್ಧೋದನನೂ, ಅವನ ಶಾಕ್ಯವಂಶವೂ ಅದೇ ರೀತಿಯಲ್ಲಿದ್ದು ಅಂತಹ ಪ್ರಮುಖನ ಮಗನೇ ಸಿದ್ಧಾರ್ಥ. ಅವನು ರಾಜಕುಮಾರನೇನಲ್ಲ ಮತ್ತು ಉತ್ಪ್ರೇಕ್ಷೆಯಿಂದ ಕೇಳುವಂತೆ ಅವನೇನೂ ಸದಾ ರಾಜವೈಭವದಲ್ಲಿ ಮುಳುಗಿಹೋಗುವಂತಹ ವಿಲಾಸಿ ಒಡೆತನದಲ್ಲೇನೂ ಇರಲಿಲ್ಲ, ಆದಾಗ್ಯೂ ಅವರಿಗೊಂದು ವೈಭವ ಮತ್ತು ಘನತೆ ಇದ್ದದ್ದು, ಅದರ ಎಲ್ಲಾ ಅನುಕೂಲಗಳನ್ನು ಮತ್ತು ಸುಖವನ್ನು ಪಡೆಯುತ್ತಿದ್ದುದ್ದನ್ನು ಅಲ್ಲಗಳೆಯಲಾಗದು.

ಮುಖ್ಯವಾಗಿ ಎಲ್ಲರೂ ಕೆಲಸ ಮಾಡಬೇಕಾದವರೇ ಆಗಿದ್ದರು. ಶುದ್ಧೋದನನೂ ನೇಗಿಲು ಹಿಡಿದು ಉಳಬೇಕಿತ್ತು ಅಂತೆಯೇ ಸಿದ್ಧಾರ್ಥನೂ ಕೂಡ. ಮಿಥಿಲೆಯ ಅರಸ ಜನಕನೂ ನೇಗಿಲು ಹಿಡಿದು ಉಳುತ್ತಿದ್ದುದ್ದನ್ನು ನೆನಪಿಸಿಕೊಳ್ಳುವುದು ಇಲ್ಲಿ ಪ್ರಸ್ತುತ. ಮಿಥಿಲೆಯೂ ನೇಪಾಳದ ಗಡಿಯಲ್ಲಿಯೇ ಈಗ ಗುರುತಿಸಿಕೊಳ್ಳಲ್ಪಡುವುದು. ಇವರೆಲ್ಲರೂ ಸಣ್ಣ ಪ್ರಮಾಣದ ಪ್ರಾಂತ್ಯಗಳ ನಾಯಕರಾಗಿದ್ದು, ಭೂಮಾಲಿಕತ್ವದ ಉನ್ಮತ್ತತೆಯಲ್ಲಿದ್ದವರೇನಲ್ಲ ಹಾಗೂ, ಎಲ್ಲೆಗಳನ್ನು ಗುರುತಿಸಿ ವ್ಯಕ್ತಿಗತವಾದಂತಹ ಸ್ವಾಮಿತ್ವವನ್ನು ಹೊಂದಿರುವಂತಹ ಹಕ್ಕುಗಾರಿಕೆಯೇನೂ ಗಾಢವಾಗೇನೂ ಇರಲಿಲ್ಲ, ಆದರೂ ಒಂದೊಂದು ಸಮುದಾಯದವರು, ಗಣದವರು ತಾವಿರುವಂತಹ ಮತ್ತು ಕೆಲಸ ಮಾಡುತ್ತಿದ್ದಂತಹ ಕ್ಷೇತ್ರವನ್ನು ಗುರುತಿಸಿಕೊಳ್ಳುವಂತಹ ಗಡಿಯನ್ನು ರೂಪಿಸಿಕೊಂಡಿರುತ್ತಿದ್ದರೂ ಅದರ ಹಿಗ್ಗುವಿಕೆ ಅಥವಾ ಕುಗ್ಗುವಿಕೆಯು ನಡೆಯುತ್ತಿತ್ತು.

ಕೃಷಿಕವರ್ಗದ ಪ್ರತಿನಿಧಿಗಳು


ಬುದ್ಧ ಶಾಕ್ಯ ಮುಖ್ಯನ ಮಗನಾದರೆ, ಅಂತಹುದೇ ಲಿಚ್ಛವಿ ಸಮುದಾಯಕ್ಕೆ ಸೇರಿದವನು ಮಹಾವೀರ. ಇಬ್ಬರೂ ಕೃಷಿಕ ವರ್ಗಸಮಾಜವನ್ನೇ ಪ್ರತಿನಿಧಿಸುವವರು. ಆದರೆ ಅದೇ ಸಮಯದಲ್ಲಿ ನಮಗೆ ಈಗ ಅರಿವಿರುವ ರಾಜಪ್ರಭುತ್ವದ ಅಧಿಪತ್ಯಗಳೂ ತಲೆ ಎತ್ತಿದ್ದವು. ಅವುಗಳ ಅಧಿಕಾರಗಳಲ್ಲಿ ಚಲನಶೀಲತೆಯಿರಲಿಲ್ಲ, ಅದರಲ್ಲಿ ಇದ್ದಂತಹ ವ್ಯಕ್ತಿಕೇಂದ್ರಿತ ಮತ್ತು ವಂಶಕೇಂದ್ರಿತ ಅಧಿಕಾರ ಸ್ಥಾಪನೆ ಮತ್ತು ಜನ್ಮದಾರಭ್ಯ ಅಧಿಕಾರಕ್ಕೆ ಉತ್ತರಾಧಿಕಾರಿಯಾಗುವಂತಹ ಲಕ್ಷಣಗಳು ಬುಡಕಟ್ಟುಗಳ ಗಣಗಳಲ್ಲಿ ಇರಲಿಲ್ಲ, ಅವುಗಳು ಸ್ವತಂತ್ರವಾಗಿದ್ದವು ಮತ್ತು ಅವುಗಳಲ್ಲಿ ಸ್ವಾತಂತ್ರ್ಯ, ಸಮಾನತೆ ಹಾಗೂ ಸೌಭ್ರಾತ್ವಗಳು ಅಳಿದಿರಲಿಲ್ಲ, ಜೊತೆಗೆ ಪ್ರಾಬಲ್ಯಕ್ಕೆ ಬರುತ್ತಿದ್ದ ರಾಜನಿಷ್ಠ ಪ್ರಭುತ್ವಗಳು ಅಂತಹ ಜನತಂತ್ರಗಳ ಅಸ್ತಿತ್ವವನ್ನು ಸಹಿಸುತ್ತಿರಲಿಲ್ಲ. ತಮಗೆ ಅಧೀನರಾಗದ ಅಥವಾ ತಮ್ಮ ಪ್ರಾಬಲ್ಯದಿಂದ ಅಧೀರರಾಗದ ಇಂತಹ ಬುಡಕಟ್ಟುಗಳ ಮೇಲೆ ರಾಜಪ್ರಭುತ್ವಗಳು ದಾಳಿ ನಡೆಸುತ್ತಿದ್ದವು. ಬುದ್ಧನ ಕಾಲಾವಧಿಯಲ್ಲಿಯೇ ಕೋಸಲದ ರಾಜಕುಮಾರ ವಿದೂಡಭ ಶಾಕ್ಯ ಬುಡಕಟ್ಟಿನ ಮೇಲೆ ಘೋರವಾದ ದಾಳಿಯನ್ನು ನಡೆಸಿದ್ದ, ಸ್ತ್ರೀಯರನ್ನೂ ಮತ್ತು ಮಕ್ಕಳನ್ನೂ ನಾಶ ಮಾಡಿದ್ದ. ಮಗಧದ ರಾಜ ಅಜಾತಶತ್ರು ವಜ್ಜಿಗಳನ್ನು ಬೇರುಸಹಿತ ಕಿತ್ತೊಗೆಯುವ ಘೋಷಣೆ ಮಾಡಿದ್ದ, ಇದಕ್ಕಾಗಿ ಬುದ್ಧನ ಆಶೀರ್ವಾದವನ್ನೂ ಪಡೆಯಲು ಹೋದಾಗ ಬುಡಕಟ್ಟಿನ ಮೇಲೆ, ಕೃಷಿಕ ಸಮಾಜದ ಮೇಲೆ ಒಲವಿರುವ ಮತ್ತು ತನ್ನದೇ ಬೇರುಗಳನ್ನು ಕಂಡುಕೊಂಡಿದ್ದ ಬುದ್ಧ ಆಘಾತಗೊಂಡಿದ್ದ, ದಿಗ್ಭ್ರಮೆಗೊಂಡಿದ್ದ, ಇಂತಹ ಅಧಿಕಾರ ದಾಹ ಮತ್ತು ಐಶ್ವರ್ಯಮೋಹವನ್ನು ಖಂಡಿಸಿದ್ದ.


ಇದೆಲ್ಲದರ ಜೊತೆಗೆ ನಾವು ಸ್ಪಷ್ಟೀಕರಿಸಿಕೊಳ್ಳಬೇಕಾದುದೇನೆಂದರೆ, ಶುದ್ಧೋದನ ರಾಜವೈಭವದಲ್ಲಿ ಇದ್ದಿರಬಹುದಾದ ಶಾಕ್ಯ ಮುಖ್ಯನಾದರೂ ಅವನು ನಮ್ಮ ಪರಿಕಲ್ಪನೆಯಲ್ಲಿರುವಂತಹ ಸಾಮ್ರಾಟನಲ್ಲ ಹಾಗೂ ಅವನ ಮುಖ್ಯಸ್ಥ ಅಧಿಕಾರವು ಬದಲಾಗುವಂತಹುದ್ದಾಗಿದ್ದು, ಬುದ್ಧನು ಹುಟ್ಟುವ ಸಮಯದಲ್ಲಿ ಅವನು ಪ್ರಮುಖನಾಗಿ ತನ್ನ ಸಮುದಾಯದ ಕರ್ತವ್ಯವನ್ನು ನಿಭಾಯಿಸುತ್ತಿದ್ದನು.

ಬ್ರಾಹ್ಮಣರ ಭವಿಷ್ಯದ್ವಾಣಿಗಳು

ಶುದ್ಧೋದನ ಮತ್ತು ಮಹಾಮಾಯೆಗೆ ಮಗುವು ಹುಟ್ಟಿದಾಗ ಅಸಿತನೆಂಬ ಋಷಿಯು ಮಗುವು ಅದ್ಭುತವಾದ ಮತ್ತು ಶ್ರೇಷ್ಠವಾದ ಲಕ್ಷಣಗಳನ್ನು ಹೊಂದಿದೆ ಎಂದು ಗುರುತಿಸಿದ್ದ. ಆದರೆ, ಅಂತಹ ಭವಿಷ್ಯದ್ವಾಣಿಗಳು ತೀರಾ ಸಾಧಾರಣವಾಗಿ ಬ್ರಾಹ್ಮಣರು ಅಥವಾ ಪುರೋಹಿತರು ಹೆತ್ತವರ ಮುಂದೆ ಒದರುತ್ತಾರೆ. ಕೆಟ್ಟದಾಗಿ ಹೇಳಿ ತಮ್ಮ ದಕ್ಷಿಣೆಗೆ ಸಂಚಕಾರ ತಂದುಕೊಳ್ಳುವುದಿಲ್ಲ, ಆದರೆ, ಎಲ್ಲಿಗೂ ಕೇಳುವಂತೆ ಅಥವಾ ಆಶೀರ್ವದಿಸಿದಂತೆ ನಿಜವಾಗಿ ನಡೆದಾಗ ಅದನ್ನು ನೆನಪಿಸಿಕೊಳ್ಳುವಂತಾಗುತ್ತದೆ. ಆ ಮಗು ಮುಂದೆ ಹಾಗೆ ಆಗದೇ ಇದ್ದಾಗ ಸಹಜವಾಗಿ ಆಡಿದ ಭವಿಷ್ಯದ್ವಾಣಿಯೂ, ಆಶೀರ್ವಾದವೂ ಮರೆತುಹೋಗುತ್ತದೆ. ಹಾಗೆಯೇ ಸಿದ್ಧಾರ್ಥ ಹುಟ್ಟಿದ ಸಮಯದಲ್ಲಿ ಅಸಿತನೇ ಆಗಲಿ, ಇತರ ಋಷಿವರೇಣ್ಯರೇ ಆಗಲಿ ಆಡಿರುವ ಭವಿಷ್ಯದ್ವಾಣಿಗಳಿಗೆ ಮತ್ತು ಆಶೀರ್ವಾದಗಳಿಗೆ ಯಾವ ವಿಶೇಷ ಮಾನ್ಯತೆಯೇನೂ ಕೊಡುವ ಅಗತ್ಯವಿಲ್ಲ.

ಅದೇನೇ ಇರಲಿ, ಮಗುವಿನ ನಾಮಕರಣ ಸಿದ್ಧಾರ್ಥ ಎಂದು ಮಾಡಿದ ಮೇಲೆ, ವಂಶದ ಹೆಸರು ಗೌತಮನೆಂಬುದೂ ಸೇರಿ ಸಿದ್ಧಾರ್ಥ ಗೌತಮ ಎಂದು ಆಯಿತು. ಸಿದ್ಧಾರ್ಥ ಬರಿಯ ಏಳುದಿನಗಳ ಮಗುವಾಗಿದ್ದಾಗಲೇ ತಾಯಿಯು ಮರಣಿಸಿದಳು. ಅವನಿಗೆ ಸಾಕುತಾಯಿಯಾಗಿ ಅವನ ತಂದೆಯ ಕೈ ಹಿಡಿದವಳು ಮಹಾಪ್ರಜಾಪತಿ. ಅವಳಿಂದ ಒಂದು ಮಗುವು ಹುಟ್ಟಿತು. ಅವನೇ ನಂದ. ಸಿದ್ಧಾರ್ಥನ ತಮ್ಮ. ಅದಲ್ಲದೇ ಅವನ ಚಿಕ್ಕಪ್ಪನ ಮಕ್ಕಳು ಜೊತೆಗಿದ್ದು ಅವನ ಬಾಲ್ಯವೆಲ್ಲವೂ ಅವರ ಜೊತೆಯಲ್ಲಿಯೇ ಚೆನ್ನಾಗಿಯೇ ಕಳೆಯಿತು.





ಅಭಯ ಎಂಬ ಗ್ರಾಮದೇವತೆಯನ್ನು ಅವರು ಆರಾಧಿಸುತ್ತಿದ್ದರು. ಸಿದ್ಧಾರ್ಥನಿಗೆ ಬ್ರಾಹ್ಮಣ ಪಂಡಿತರಿಂದ, ಭಾಷಾಶಾಸ್ತ್ರ, ವ್ಯಾಕರಣ, ವೇದವೇದಾಂಗಗಳು ಮತ್ತು ಉಪನಿಷತ್ತುಗಳ ಪಾರಂಗತನಾಗಿದ್ದ ಸಬ್ಬಮಿತ್ತನೆಂಬ ಗುರುವಿನಿಂದ ವಿದ್ಯಾಭ್ಯಾಸವಾಯಿತು.

ಸಿದ್ಧಾರ್ಥನ ಒಲವು ನಿಲುವುಗಳು

ಮಲ್ಲರು, ಶಾಕ್ಯರು, ವಜ್ಜಿಗಳಂತಹ ಪ್ರಾಕೃತ ಸಮುದಾಯದ ಪರಂಪರೆಯಿದ್ದ ಬುದ್ಧನ ಒಲವು ಮತ್ತು ನಿಲುವುಗಳು ಸಹಜವಾಗಿಯೇ ಸರಳತೆ ಮತ್ತು ಮುಕ್ತತೆಯನ್ನು ಹೊಂದಿದ್ದವು. ರಾಜಪ್ರಭುತ್ವದ ಅಧಿಕಾರವಾಗಲಿ, ವಿಲಾಸಿ ಪರಂಪರೆಯ ರಾಜರಸಿಕತೆಯೇನೂ ಇರಲಿಲ್ಲ, ಬುಡಕಟ್ಟಿನ, ಶ್ರಮಿಕರ, ಕೃಷಿಕರ ಬಾಳ್ವೆಯ ವೈಭವ ಮತ್ತು ಅಭಿರುಚಿಯ ರಸಿಕತೆಯಷ್ಟೇ ಆತನಲ್ಲಿ ಇದ್ದದ್ದು. ಆದರೆ ತನ್ನ ವಿಶೇಷ ಚಿಂತನಾಕ್ರಮದಿಂದ ತಾನೇ ರೂಢಿಸಿಕೊಂಡ ಒಲವು, ನಿಲುವು, ಧೋರಣೆಗಳಿಂದ ಅವನು ಕರುಣೆ, ಪ್ರೀತಿಗಳಿಂದ ಶಾಂತಿಯನ್ನು ಕಂಡುಕೊಂಡು ಎಲ್ಲರಿಗಿಂತ ಮಿಗಿಲಾದ ಅಥವಾ ಹೊರತಾಗಿ ಕಂಡುಬರುವುದಷ್ಟೇ ಅಲ್ಲದೇ ಇತರರಿಗೆ ಮಾರ್ಗ ಮತ್ತು ಬೆಳಕು ಆದ. ತಾನು ಕಂಡುಕೊಂಡ ದಾರಿ ಮತ್ತು ಒಳದೃಷ್ಟಿಗಳನ್ನು ಹಂಚಿಕೊಂಡು ಮಾರ್ಗದರ್ಶಕನಾದನೇ ಹೊರತು, ತಾನೇ ತನ್ನ ಅನುಗ್ರಹದಿಂದ ಇತರರಿಗೆ ಮೋಕ್ಷಪ್ರದಾತನಾಗಲಿಲ್ಲ, ಹಾಗೆ ಆಗುವುದಿಲ್ಲ ಎಂದು ಅವನಿಗೂ ಚೆನ್ನಾಗಿ ತಿಳಿದಿತ್ತು, ಅದನ್ನು ತಾನೇ ಪದೇಪದೇ ಹಲವು ಸಂದರ್ಭಗಳಲ್ಲಿ ಹೇಳುತ್ತಾನೆ. ಅವನು ತನಗಾಗಿ ಸಿದ್ಧಪಡಿಸಿಕೊಂಡ ಮಾರ್ಗಕ್ಕೆ ಬದ್ಧರಾಗಿ ಪ್ರಬುದ್ಧತೆಯನ್ನು ಪಡೆದುಕೊಂಡು ಯಾರಾದರೂ ಬುದ್ಧರಾಗಬಹುದೇ ಹೊರತು, ಬುದ್ಧನ ಆಶೀರ್ವಾದದ ಪ್ರಭಾವದಿಂದ ಬುದ್ಧತ್ವವನ್ನು ಅನುಗ್ರಹಿಸಲು ಆಗುವುದಿಲ್ಲ, ಅದು ವ್ಯಕ್ತಿಯೊಬ್ಬನ ವ್ಯಕ್ತಿಗತವಾದ ಬದ್ಧತೆಯ ಮೇಲೆಯೇ ಅವಲಂಬಿಸುತ್ತದೆ.

ಶಾಕ್ಯ ಸಂಘದ ಸದಸ್ಯ

ಶಾಕ್ಯರು ತಮ್ಮದೇ ಆದ ಸಂಘವನ್ನು ಸ್ಥಾಪಿಸಿಕೊಂಡಿದ್ದರು. ತಮ್ಮ ಶಾಕ್ಯ ಸಮುದಾಯದ ಉಳಿವಿಗಾಗಿ ಮತ್ತು ಅದರ ಪ್ರವರ್ಧಮಾನಕ್ಕಾಗಿ ಶ್ರಮಿಸುವುದೇ ಆ ಸಂಘದ ಮುಖ್ಯ ಉದ್ದೇಶವಿದ್ದಿರಬಹುದು. ಯಾವುದೇ ಸಂಘದ ಸಾಮಾನ್ಯ ಉದ್ದೇಶವು ಉಳಿವು ಮತ್ತು ವಿಕಾಸವೇ ಆಗಿರುತ್ತದೆ. ಕಪಿಲವಸ್ತುವಿನಲ್ಲಿ ಈ ಸಂಘದ ನೆಲೆಯಿದ್ದು ಶಾಕ್ಯರ ಪ್ರತಿಯುವಕ ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಈ ಸಂಘಕ್ಕೆ ಸದಸ್ಯನಾಗಬೇಕಿತ್ತು. ಅದರಂತೆ ಸಿದ್ಧಾರ್ಥ ಗೌತಮನೂ ಸದಸ್ಯನಾದ. ಸಿದ್ಧಾರ್ಥನು ಶಾಕ್ಯ ಸಂಘದ ಸದಸ್ಯನಾಗಿ ಬಹಳ ಜವಾಬ್ದಾರಿಯಿಂದ ಮತ್ತು ಆಸಕ್ತಿಯಿಂದ ಕಾರ್ಯ ನಿರ್ವಹಿಸುತ್ತಿದ್ದ. ಎಂಟು ವರ್ಷಗಳ ತರುವಾಯ ಒಂದು ದುರಂತ ನಡೆಯಿತು.

ರೋಹಿಣಿ ನದಿಯ ನೀರು ಹಂಚಿಕೆ ವಿವಾದ

ಶಾಕ್ಯರ ಪ್ರಾಂತ್ಯದ ಪಕ್ಕದಲ್ಲಿಯೇ ಕೋಲಿಯರೆಂಬ ಮತ್ತೊಂದು ಬುಡಕಟ್ಟಿನ ಕ್ಷೇತ್ರವಿತ್ತು. ಈ ಎರಡೂ ಪ್ರಾಂತ್ಯಗಳನ್ನು ಬೇರೆ ಮಾಡುತ್ತಿದ್ದದ್ದು ರೋಹಿಣೀ ನದಿ. ಶಾಕ್ಯರೂ ಮತ್ತು ಕೋಲಿಯರಿಬ್ಬರೂ ಈ ನದಿಯ ನೀರನ್ನು ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದರು. ಬೇಸಾಯದಾರಂಭದಲ್ಲಿ ಮೊದಲು ಯಾರು ನೀರನ್ನು ಪಡೆಯಬೇಕು, ಎಷ್ಟು ಪಡೆಯಬೇಕು ಎಂಬುದರ ಬಗ್ಗೆ ಈ ಎರಡೂ ಸಮುದಾಯಗಳ ನಡುವೆ ಆಗಾಗ್ಗೆ ಸಂಘರ್ಷ ನಡೆಯುತ್ತಿತ್ತು. ಆದರೆ ಈ ಬಾರಿ ದೊಡ್ಡ ಘರ್ಷಣೆಯೇ ಆಗಿಬಿಟ್ಟಿತು. ಎರಡೂ ಕಡೆಯವರು ಗಾಯಗೊಂಡರು.

ಬಹುಶಃ ಶಾಕ್ಯ ಸಂಘದ ಸೇನಾಧಿಪತಿಯು ಬಹಳ ವ್ಯಗ್ರನೂ ಮತ್ತು ಆಕ್ರೋಶಭರಿತನೂ ಆಗಿದ್ದಿರಬಹುದೆಂದು ಕಾಣುತ್ತದೆ. ಕೋಲೀಯರು ನೀರು ತೆಗೆದುಕೊಳ್ಳುವುದನ್ನು ಒಪ್ಪದ ಶಾಕ್ಯರ ಕಡೆಯವರು ರೋಹಿಣಿ ನದಿಗೆ ವಿಷ ಬೆರೆಸಿದರೆಂಬ ಆರೋಪಗಳೂ ಕೆಲವು ಮೂಲಗಳಲ್ಲಿ ಉಂಟು. ಇದರಿಂದ ಸಿದ್ಧಾರ್ಥನು ತೀವ್ರವಾಗಿ ಮನ ನೊಂದನೆಂದು ಹೇಳುತ್ತಾರೆ. ಅದೇನೇ ಇರಲಿ, ಶಾಕ್ಯರ ಸಂಘದ ಸೇನಾಧಿಪತಿಯು ಕೋಲೀಯರ ಮೇಲೆ ಯುದ್ಧವನ್ನು ಸಾರಿ ಅವರನ್ನು ಸಂಪೂರ್ಣವಾಗಿ ಮಟ್ಟಹಾಕಬೇಕೆಂಬ ಸಲಹೆಯನ್ನು ಸಿದ್ಧಾರ್ಥ ಒಪ್ಪಲಿಲ್ಲ. "ಕೊಂದವನ್ನು ಕೊಲ್ಲಲು ಮತ್ತೊಬ್ಬನು ಹುಟ್ಟಿಕೊಳ್ಳುತ್ತಾನೆ. ಆಕ್ರಮಿಸಿಕೊಂಡವನನ್ನು ಆಕ್ರಮಿಸಲು ಮತ್ತೊಬ್ಬನು ಆಕ್ರಮಣ ಮಾಡುತ್ತಾನೆ. ದ್ವೇಷಕ್ಕೆ ಪ್ರೀತಿ ಮತ್ತು ಶಾಂತಿಯೇ ಮದ್ದು" ಎಂಬರ್ಥದಲ್ಲಿ ತನ್ನ ಸಾತ್ವಿಕ ಬಂಡಾಯದ ದನಿಯನ್ನು ಸಿದ್ಧಾರ್ಥ ಎತ್ತುತ್ತಾನೆ.

ಕತ್ತಿ ಎತ್ತಿದವರೆಲ್ಲ ಕತ್ತಿಯಿಂದಲೇ ಮರಣಿಸುವರು ಎಂಬ ಯೇಸುವಿನ ಮಾತಿನ ಧ್ವನ್ಯಾರ್ಥವೂ ಇದೇ ಆಗಿದೆ.

ಪರಿವ್ರಾಜಕನಾಗಿ ಬಹಿಷ್ಕೃತನಾದ

ಸೇನಾಪತಿಯು ಯುದ್ಧ ಮಾಡಲೇಬೇಕೆಂಬ ತನ್ನ ನಿಲುವಳಿಯನ್ನು ಮತಕ್ಕೆ ಹಾಕುತ್ತಾನೆ. ಸಂಘದಲ್ಲಿ ಅದು ಒಪ್ಪಿಗೆಯನ್ನೂ ಪಡೆಯುತ್ತದೆ. ಸಿದ್ಧಾರ್ಥನ ನಿಲುವಳಿ ಬಿದ್ದುಹೋಗುತ್ತದೆ. ಸಂಘವು ಯುದ್ಧಕ್ಕೆ ಸಿದ್ಧವಾದಾಗ ಸಿದ್ಧಾರ್ಥ ತಾನು ಯುದ್ಧದಲ್ಲಿ ಭಾಗವಹಿಸುವುದಿಲ್ಲ ಎಂಬ ಸ್ಪಷ್ಟ ಅಭಿಪ್ರಾಯವನ್ನು ಕೊಡುತ್ತಾನೆ. ಆದರೆ, ಸಂಘದ ಸದಸ್ಯನಾಗುವಾಗ ತಾನು ಸಂಘದ ನಡಾವಳಿಗೆ ಬದ್ಧನಾಗಿರುತ್ತೇನೆ ಎಂದು ಮಾಡಿದ ಪ್ರತಿಜ್ಞೆಯನ್ನು ಸಿದ್ಧಾರ್ಥ ಮುರಿಯಬೇಕಾಗುತ್ತದೆ. ಈಗ ಅವನಿಗೆ ಮೂರು ಬಗೆಯ ಶಿಕ್ಷೆಯನ್ನು ಕೊಡಬಹುದಾಗಿತ್ತು, ಒಂದು, ಅವನ ಮನೆತನಕ್ಕೆ ಸಾಮಾಜಿಕ ಬಹಿಷ್ಕಾರ ನೀಡಬಹುದು. ಸಿದ್ಧಾರ್ಥನಿಗೆ ಗಡಿಪಾರಿನ ಶಿಕ್ಷೆ ಅಥವಾ ಗಲ್ಲಿಗೇರಿಸುವುದಾಗಿರಬಹುದು ಅಥವಾ ಮೂರನೆಯದಾಗಿ ಅವನ ಕುಟುಂಬದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಅವರನ್ನು ಹೊರಗೆ ಹಾಕಬಹುದು.

ಸಿದ್ಧಾರ್ಥ ಎರಡನೆಯದಕ್ಕೇ ಸಿದ್ಧನಾಗುತ್ತಾನೆ. ಆದರೆ ಸಂಘವು ಈ ರೀತಿ ಮುಖ್ಯನ ಮಗನಿಗೆ ಶಿಕ್ಷೆ ವಿಧಿಸಿದೆ ಎಂದು ಕೋಸಲದ ಪ್ರಭುತ್ವಕ್ಕೆ ತಿಳಿದರೆ ಅದು ಸಂಘದ ಮೇಲೆ ಕ್ರಮ ತೆಗೆದುಕೊಳ್ಳಬಹುದು ಎಂಬ ಆತಂಕದಿಂದ, ಸಿದ್ಧಾರ್ಥನು ಸ್ವಇಚ್ಛೆಯಿಂದ ಪರಿವ್ರಾಜಕನಾಗಿ ದೀಕ್ಷೆ ತೆಗೆದುಕೊಂಡು ಊರು ಬಿಟ್ಟು ಹೊರಟು ಹೋಗಲು ನಿರ್ಧರಿಸುತ್ತಾನೆ. ಮನೆಯಲ್ಲಿ ತಂದೆ ಮತ್ತು ತನ್ನ ಸಾಕು ತಾಯಿಯ ಬಳಿ ಇದರ ಬಗ್ಗೆ ಚರ್ಚಿಸಿಯೇ ಕಪಿಲವಸ್ತುವಿನಲ್ಲಿರುವ ಭಾರದ್ವಾಜ ಋಷಿಗಳಿಂದ ಅಲೆಮಾರಿ ಸಂನ್ಯಾಸದ ದೀಕ್ಷೆ ಪಡೆದು ಪರಿವ್ರಾಜಕನಾಗುತ್ತಾನೆ.

ಅನೋಮ ನದಿಯ ದಂಡೆಯವರೆಗೂ ಹಿಂಬಾಲಿಸಿದ ತನ್ನ ನೆಚ್ಚಿನ ಸೇವಕ ಮಿತ್ರನಾದ ಚನ್ನನನ್ನು ಬಿಟ್ಟ ಸಿದ್ಧಾರ್ಥ ಅಲ್ಲಿಂದ ಮುಂದಕ್ಕೆ ಅರಣ್ಯವನ್ನು ಪ್ರವೇಶಿಸಿ ತನ್ನ ಪರಿವ್ರಾಜಕ ಅಲೆದಾಟವನ್ನು ಮುಂದುವರಿಸುತ್ತಾನೆ.

ಹೀಗೆ ರಾಜಕೀಯ ಮತ್ತು ತಾಂತ್ರಿಕ ಕಾರಣಗಳಿಂದಾಗಿ ಹಾಗೂ ತನ್ನದೇ ಆದಂತಹ ಒಲವು ನಿಲುವುಗಳಿಂದಾಗಿ ಸಿದ್ಧಾರ್ಥ ಗೌತಮನು ರಾಜ್ಯವನ್ನು ಬಿಟ್ಟು ಹೊರಡುತ್ತಾನೆಯೇ ಹೊರತು, ವಯಸ್ಸಾದ, ರೋಗಿಷ್ಟ ಮತ್ತು ಮರಣ ಹೊಂದಿದವರನ್ನು ನೋಡಿ ಹೋದನೆಂಬುದು ಕೇವಲ ಕಟ್ಟುಕಥೆ.

ಸಿದ್ಧಾರ್ಥನ ಯುದ್ಧವಿರೋಧಿ ಮತ್ತು ಸರ್ವಜೀವ ಪ್ರೇಮದ ಒಲವುಗಳಿಂದಾಗಿಯೇ ಅವನು ಇತರ ಎಲ್ಲರಿಗಿಂತ ವಿಭಿನ್ನವಾಗಿ ಕಾಣುತ್ತಿದ್ದನೇ ಹೊರತು, ವಿಲಾಸದಲ್ಲಿದ್ದು ಒಮ್ಮೆಲೆ ಮನುಷ್ಯನ ದುಃಖಕ್ಕೆ ಕಾರಣವಾಗುವ ಪರಿಸ್ಥಿತಿಗಳನ್ನು ನೋಡಿ, ಜಿಗುಪ್ಸೆಯಿಂದ ಹೊರಗೆ ಬಂದವನೇನಲ್ಲ, ಅವನಿಗೆ ಹಾಗೆ ಬರದೇ ಆಗ ಬೇರೆ ದಾರಿಯೂ ಇರಲಿಲ್ಲ, ಒಂದು ವೇಳೆ ಸಂಘದ ಇತರ ಸದಸ್ಯರು ಸಿದ್ಧಾರ್ಥನಿಗೆ ಮಾನ್ಯತೆ ಕೊಟ್ಟಿದ್ದೇ ಆಗಿದ್ದಲ್ಲಿ ಅವನು ಹೊರಗೆ ಬರುವ ಸಾಧ್ಯತೆಗಳೂ ಇರುತ್ತಿರಲಿಲ್ಲವೇನೋ.

ರೋಹಿಣಿ ನದಿಯ ವಿವಾದ ಮತ್ತು ಸಂಘದ ಬಹಿಷ್ಕಾರಕ್ಕೆ ಒಳಗಾಗಬಹುದಾದ ಸಿದ್ಧಾರ್ಥನ ಪರಿಸ್ಥಿತಿಯು ಯಾವ ರೀತಿಯಲ್ಲಿ ಮಾನ್ಯತೆಗೆ ಈಡಾಗದೇ ಹೋಗುವುದೋ ತಿಳಿಯದು. ವಾಸ್ತವವಾಗಿ ಸಿದ್ಧಾರ್ಥನ ಮಹಾ ಮಾನವತಾವಾದ ಮತ್ತು ಸರ್ವಜನ ಪ್ರೇಮ ಸೂಚಿತವಾಗುವುದೇ ಇಲ್ಲಿ. ಕ್ಷತ್ರಿಯನೆನಿಸಿಕೊಂಡವನು ಹೋರಾಡಲೇ ಬೇಕೆಂಬ ಹೋರಾಟದ ಕರ್ತವ್ಯವನ್ನು ನಿರಾಕರಿಸುವ ಸಿದ್ಧಾರ್ಥ ಪ್ರತಿಯೊಂದನ್ನೂ ಪ್ರೇಮದಿಂದಲೂ, ಸಾಮರಸ್ಯದ ಮಾತುಕತೆಯಿಂದಲೂ ಬಗೆಹರಿಸಿಕೊಳ್ಳಬಹುದಲ್ಲಾ ಎಂದೇ ಬಾಲ್ಯದಿಂದಲೇ ಅವನು ಮಾಡುತ್ತಿದ್ದ ಆಲೋಚನೆಗಳಾಗಿದ್ದಿತು.

ಜೈನರ ಪಾರ್ಶ್ವನಾಥ ಇಂದ್ರಾದಿ ದೇವತೆಗಳೊಡನೆ ತನ್ನ ರಾಜ್ಯವಾದ ಅಯೋಧ್ಯೆಯಲ್ಲಿ ನೀಲಾಂಜನೆಯ ನೃತ್ಯವನ್ನು ನೋಡುತ್ತಿದ್ದಾಗ ಅವಳು ನೃತ್ಯದ ಮಧ್ಯದಲ್ಲಿ ಸತ್ತು ಹೋಗುತ್ತಾಳೆ. ಸಭೆಯ ರಸಭಂಗಕ್ಕೆ ತೊಡಕಾಗಬಾರದೆಂದು ಇಂದ್ರನು ಅವಳಿಗೆ ಜೀವವನ್ನು ಕೊಟ್ಟು ನೃತ್ಯವನ್ನು ಮುಂದುವರಿಯುವಂತೆ ಮಾಡುತ್ತಾನೆ. ಆದರೆ ಇದರ ಒಳಗುಟ್ಟನ್ನು ಅರಿತ ಜಿನದೇವನು ವೈರಾಗ್ಯವನ್ನು ಹೊಂದುತ್ತಾನೆ.

ಸಾವಿನ ಸತ್ಯತೆ ಮತ್ತು ಬದುಕಿನ ಕೃತಿಮತೆಯನ್ನು ಕಂಡ ಪಾರ್ಶ್ವನಾಥ ವೈರಾಗ್ಯದಿಂದ ಕೇವಲ ಜ್ಞಾನ ಪಡೆಯಲು ಹೋದ ಕಥೆಯನ್ನು ಬುದ್ಧನಿಗೂ ಏಕೆ ಹಚ್ಚಿದರೋ ತಿಳಿಯದು.

ಒಟ್ಟಾರೆ ಬುದ್ಧನ ಹುಟ್ಟು ಮತ್ತು ರಾಜ್ಯತ್ಯಾಗದ ವಿಷಯಗಳು ಕಾಗಕ್ಕ ಮತ್ತು ಗುಬ್ಬಕ್ಕನ ಕಥೆಯಂತಾಗಿದ್ದು ಮಾತ್ರ ವಿಪರ್ಯಾಸ. ■

ಯೋಗ ವಿಚಾರದಲ್ಲಿ ಸರ್ಕಾರ ದೂರವಿದ್ದಷ್ಟೂ ಅದರ ಮರ್ಯಾದೆ ಹೆಚ್ಚುತ್ತದೆ

ಹೊಗಳಿಕೆ ತೆಗಳಿಕೆ

ದೇವರು ಇದೆಯೋ ಇಲ್ಲವೋ ಎನ್ನುವುದು, ದೇವರನ್ನು ನಂಬಬೇಕೋ ಬೇಡವೋ ಎನ್ನುವುದೆಲ್ಲವೂ ಅವರವರ ಭಾವಕ್ಕೆ ಅವರವರ ಭಕುತಿಗೆ ಬಿಟ್ಟ ವಿಚಾರ.

ಆದರೆ ದೇವರು ಇದ್ದಾನೆ ಎನ್ನುವುದಾದರೆ ಮತ್ತು ದೇವರು ಪವಿತ್ರ ಎನ್ನುವುದಾದರೆ ದೇವರೊಂದಿಗೆ ಭಕ್ತನ ಸಾಂಗತ್ಯವೂ ಪವಿತ್ರವಾಗಿರಬೇಕು ಮತ್ತು ಅದು ಪವಿತ್ರವಾದ ಸ್ಥಳದಲ್ಲಿಯೇ ನಡೆಯಬೇಕು. ಅದು ದೇವರೊಂದಿಗಿನ ಸಂವಹನಕ್ಕೆ ಅತ್ಯಗತ್ಯ ಏಕಾಗ್ರತೆಗೆ, ಪೂರಕವಾದ ಅಂತರಂಗದ ಕ್ರಿಯೆಯಾಗಬೇಕು. ಅದು ಮುಚ್ಚಿದ ಬಾಗಿಲುಗಳ ಒಳಗೆ ನಡೆಯಬೇಕು (ಲೈಂಗಿಕ ಕ್ರಿಯೆಯನ್ನು ನಾವು ಮುಚ್ಚಿದ ಕೋಣೆಯೊಳಗೆ ಗುಟ್ಟಾಗಿ ನಡೆಸುತ್ತೇವೆ. ಆದರೆ ದೇವರ ಪೂಜೆಯನ್ನು ಬಹಿರಂಗವಾಗಿ ನಡೆಸುತ್ತೇವೆ. ಲೈಂಗಿಕ ಕ್ರಿಯೆಗೆ ನೀಡಿದ ಪಾವಿತ್ರ್ಯವನ್ನೂ ನಾವು ದೇವರ ಪೂಜೆಗೆ ನೀಡಲಿಲ್ಲ' ಎಂದು ವೀಣಾ ಬನ್ನಂಜೆಯವರು ಮೂಡಬಿದಿರೆಯ ಒಂದು ಕಾರ್ಯಕ್ರಮದಲ್ಲಿ ಕೆಲ ತಿಂಗಳ ಹಿಂದೆ ಹೇಳಿದ್ದು ಇಲ್ಲಿ ಉಲ್ಲೇಖನೀಯ); ಬೀದಿಯಲ್ಲಂತೂ ಅಲ್ಲ. ದೇವರನ್ನು ಬೀದಿಗೆ ತರುತ್ತಲೇ ನಾವು ನಮ್ಮ ಮರ್ಯಾದೆ ತೆಗೆದು ಕೊಳ್ಳುವುದರ ಜತೆಗೆ ಸಾರಾಸಗಟಾಗಿ ದೇವರ ಮರ್ಯಾದೆಯನ್ನೂ ಕಳೆಯುತ್ತೇವೆ. ಶಾಂತಿಗೆ ಕಾರಣರಾಗಬೇಕಾದ ದೇವರು ಆಗ ಹಿಂಸೆಗೆ ಕಾರಣರಾಗುತ್ತಾರೆ. ದೇವರನ್ನು ಬೀದಿಗೆ ತಂದುದರ ಪರಿಣಾಮವನ್ನು ದೇಶ ಈಗಾಗಲೇ ಅನುಭವಿಸಿಯಾಗಿದೆ, ಅನುಭವಿಸುತ್ತಲೇ ಇದೆ.

ಜ್ಯೋತಿಷದ ಕತೆಯೂ ಹಾಗೆಯೇ. ಜ್ಯೋತಿಷ್ಯದಲ್ಲಿ ವಿಜ್ಞಾನದ ಅಂಶಗಳಿರುವುದು ಸುಳ್ಳಲ್ಲ. ಫಲಜ್ಯೋತಿಷ್ಯವೂ ಒಂದು ವ್ಯಾಪಾರ ವ್ಯವಹಾರವಾಗದಿದ್ದ ಕಾಲದಲ್ಲಿ ಅದಕ್ಕೂ ತಕ್ಕಮಟ್ಟಿನ ಮರ್ಯಾದೆ ಇತ್ತೋ ಏನೋ. ಅದು ದುಡ್ಡು ಮಾಡುವ ದಂಧೆಯಾಗುತ್ತಲೇ, ಗಲ್ಲಿಗಲ್ಲಿಗಳಲ್ಲಿ ಜ್ಯೋತಿಷಿಗಳು ಹುಟ್ಟಿಕೊಂಡು, ಬೋರ್ಡು ಹಾಕಿ ಜ್ಯೋತಿಷ್ಯದ ಅಂಗಡಿ ತೆರೆದುಕೊಂಡು, ಈಗ ಜ್ಯೋತಿಷ್ಯದ ಮಾನ ಕಳೆಯುವುದಕ್ಕೆ ಅಲ್ಲಿ ಉಳಿದಿರುವುದು ಏನೂ ಇಲ್ಲ. ಈ ಜ್ಯೋತಿಷಿಗಳು ಟಿವಿಯಲ್ಲಿ ನಡೆಸಿಕೊಡುವ ಕಾರ್ಯಕ್ರಮಗಳ ಮುಂದೆ ಇತರ ಯಾವ (ಹಿಂದಿಯ ಕಪಿಲ್ ಸಹಿತ) ಹಾಸ್ಯಕಾರ್ಯಕ್ರಮಗಳೂ ಲೆಕ್ಕಕ್ಕಿಲ್ಲದಂತಾಗಿದೆ (ಹಿರಿಯ ಜಾನಪದ ತಜ್ಞ, ವಿಮರ್ಶಕ, ಚಿಂತಕ ಡಾ.ಪುರುಷೋತ್ತಮ ಬಿಳಿಮಲೆಯವರಿಗೆ ವಿದ್ಯಾ ಯೋಗವೇ ಇಲ್ಲ ಎಂದು ಅವರ ಜಾತಕ ಬರೆದ ಜ್ಯೋತಿಷಿ ಹೇಳಿದ್ದನಂತೆ!).

ಇದೀಗ ಯೋಗದ ಸರದಿ. ಅದೂ ಒಂದು ರೀತಿಯ ವ್ಯಾಯಾಮ ಎನ್ನುವುದರಲ್ಲಿ ಅನುಮಾನವಿಲ್ಲ, ಅದನ್ನು ಮನೆಯ ಕೋಣೆಗಳಲ್ಲಿ, ಹಾಲ್‌ಗಳಲ್ಲಿ ಒಟ್ಟಿನಲ್ಲಿ ನಾಲ್ಕು ಗೋಡೆಗಳ ನಡುವೆ (ರಾಜಪಥಕ್ಕೆ ತಾರದೆ) ಲಿಂಗ, ಜಾತಿ, ಧರ್ಮಭೇದ ಮರೆತು ಸದ್ದುಗದ್ದಲವಿಲ್ಲದೆ ಅವರವರ ಪಾಡಿಗೆ ಜನ ನಡೆಸುತ್ತಿದ್ದರು. ವ್ಯಾಯಾಮದಿಂದಾಗುವ ಲಾಭ ಪಡೆದುಕೊಳ್ಳುತ್ತಿದ್ದರು. ಆದರೆ ಅದನ್ನೂ ದಂಧೆ ಮಾಡಿಕೊಳ್ಳುವ ಪರಂಪರೆ ಶುರುವಾಯಿತು. ಯೋಗದ ಮಾರಾಟದ ಮೂಲಕ ಅನೇಕ ತಥಾಕಥಿತ ಯೋಗಗುರುಗಳು ಮಹಾ ಸಾಮ್ರಾಜ್ಯಗಳನ್ನೇ ಕಟ್ಟಿಕೊಂಡರು. ಒಟ್ಟಿನಲ್ಲಿ ಯೋಗದ ಮಾನ ಕಳೆದರು.


ಯಾವುದು ಎಲ್ಲಿರಬೇಕೋ ಅಲ್ಲೇ ಇದ್ದರೆ ಚೆನ್ನ. ಅದನ್ನು ಬೀದಿಗೆ ತರುತ್ತಿದ್ದಂತೆ, ಅದು ತನ್ನೆಲ್ಲ ಪಾವಿತ್ರ್ಯ ಕಳೆದುಕೊಂಡು ಬೀದಿರಂಪಕ್ಕೆ ಕಾರಣವಾಗುವುದರಲ್ಲಿ ಅಚ್ಚರಿಯಿಲ್ಲ, ಈಗ ಆಗಿರುವುದು ಅದೇ ಅಲ್ಲವೇ? ಈ ವಿಚಾರದಲ್ಲಿ ಪ್ರಭುತ್ವ (ಸ್ಟೇಟ್) ಎಷ್ಟರಮಟ್ಟಿಗೆ ಪಾತ್ರವಹಿಸಬೇಕು ಮತ್ತು ಹಾಗೆ ಪಾತ್ರ ವಹಿಸುವುದು ಎಷ್ಟು ಸರಿ? ಎಂಬುದು ಯೋಚಿಸತಕ್ಕ ವಿಚಾರ.

ಹಿಂದಿಯನ್ನು ಭಾರತ ಸರಕಾರ ಹೇರತೊಡಗಿದಾಗ ತಮಿಳುನಾಡಿನವರು ಅದನ್ನು ತೀವ್ರವಾಗಿ ವಿರೋಧಿಸಿದರು. ಮುಂದೆ ವಿಷಯ ತಣ್ಣಗಾಯಿತು. ಯಾರೂ ಬಲವಂತಪಡಿಸದಿದ್ದಾಗ ತಮಿಳರು ಸದ್ದುಗದ್ದಲವಿಲ್ಲದೆ ಹಿಂದಿಯನ್ನು ಸ್ವೀಕರಿಸಿದರು, ಕಲಿತರು. ಯಾವ ವಿವಾದವೂ ಇರಲಿಲ್ಲ. ಮೊನ್ನೆ ಮೊನ್ನೆ ಮೋದಿ ಸರಕಾರ ಹಿಂದಿಯನ್ನು ಸಂಸ್ಕೃತವನ್ನು ಮತ್ತೆ ಹೇರತೊಡಗಿದಾಗ ಮತ್ತೊಮ್ಮೆ ತಮಿಳರು ಎದ್ದು ನಿಂತರು, ಪ್ರತಿಭಟಿಸಿದರು. ವಿವಾದ ಉಂಟಾಯಿತು. ಹಾಗಾದರೆ ವಿವಾದ ಸೃಷ್ಟಿಸುತ್ತಿರುವವರು ಯಾರು? ಹೀಗೆ ವಿವಾದ ಸೃಷ್ಟಿಸುತ್ತಿರುವ ಅಗತ್ಯವಾದರೂ ಏನು? ಇಂತಹ ವಿಚಾರಗಳಲ್ಲಿ ಸ್ಟೇಟ್ ತೆಪ್ಪಗಿದ್ದಷ್ಟೂ ಅದರ ಫಲ ಉತ್ತಮವಾಗಿರುತ್ತದೆ. ಹಾಗಾಗಿ ಯೋಗದ ವಿಚಾರದಲ್ಲೂ ಸ್ಟೇಟ್ (ಅದೂ ಈಗಾಗಲೇ ಧರ್ಮದ ನೆಲೆಯಲ್ಲಿ ಬ್ರಾಂಡ್ ಆದ ಸರಕಾರ) ಒಂದಷ್ಟು ದೂರ ನಿಂತು ಅದು ಜನರ ಕಾರ್ಯಕ್ರಮವಾಗಲು ಅನುವು ಮಾಡಿಕೊಟ್ಟಷ್ಟೂ ಯೋಗದ ಮರ್ಯಾದೆ ಹೆಚ್ಚೀತು, ಅದು ಮತಧರ್ಮಗಳಾಚೆಗೆ ಎಲ್ಲರಿಂದಲೂ ಸ್ವೀಕೃತವಾದೀತು (ಅನಿಷ್ಟಪಕ್ಷ ವಿವಾದಕ್ಕಂತೂ ಕಾರಣವಾಗದಿದ್ದೀತು), ಅಲ್ಲವೇ?

- ಶ್ರೀನಿವಾಸ ಕಾರ್ಕಳ, ಮಂಗಳೂರು

ಯೋಗ ಎಂಬ ಚಿನ್ನಕ್ಕೆ ಮೋದಿಯ ಬೆಳ್ಳಿಯ ಲೇಪನ

ಪತ್ರಿಕೆಯ ಜೂನ್ 24ರ ಸಂಚಿಕೆಯ ಸಂಪಾದಕೀಯದಲ್ಲಿ ಹೇಳಿರುವಂತೆ ದೇಹ ಹಾಗೂ ಮನಸ್ಸಿನ ಆರೋಗ್ಯಕ್ಕೆ ಯೋಗ ಉತ್ತಮ ವ್ಯಾಯಾಮ ನಿಜ. ಆದರೆ ಅದಕ್ಕೆ ಧಾರ್ಮಿಕ ಲೇಪನ ಕೊಡಲು ಮೋದಿ ಸರಕಾರ ಪ್ರಯತ್ನಿಸುತ್ತಿರುವುದು ಚಿನ್ನಕ್ಕೇ ಬೆಳ್ಳಿಯ ಲೇಪನ ಕೊಡುವ ಮೂರ್ಖತನದಂತೆ. ಅನೇಕ ದೇಶಗಳಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರು ಅನೇಕ ವರ್ಷಗಳಿಂದ ಯೋಗವನ್ನು ದಿನಾಲೂ ಮಾಡಿ ಅದರ ಲಾಭ ಪಡೆಯುತ್ತಿದ್ದಾರೆ. ಆದರೆ



ಅವರೆಂದೂ ಇದು ಹಿಂದೂ ಮೂಲದ್ದು ಎಂಬ ಯೋಚನೆಯೇ ಮಾಡಿರಲಿಲ್ಲ. ಆದರೆ ಈಗ ಹಿಂದೂ ಮೂಲಭೂತವಾದಿಗಳು ಯೋಗಕ್ಕೆ ಹಿಂದೂ ಧರ್ಮದ ಲೇಪನ ಕೊಟ್ಟು ದುರ್ಲಾಭ ಪಡೆಯಲು ಹವಣಿಸುತ್ತಿದ್ದಾರೆ ಅಷ್ಟೇ. ಪ್ರತಿಯೊಂದು ಕ್ರಿಯೆಗೆ ಅಷ್ಟೇ ಪ್ರಮಾಣದ ವಿರುದ್ಧ ಕ್ರಿಯೆ ಇದ್ದೇ ಇರುತ್ತದೆ ಎಂಬ ನ್ಯೂಟನ್ನನ ಸಿದ್ಧಾಂತ ಮೂಲಭೂತವಾದಕ್ಕೂ ಅನ್ವಯವಾಗುತ್ತದೆ ಎಂದು ಎಲ್ಲಾ ಧರ್ಮದ ನೇತಾರರಿಗೂ ಗೊತ್ತು. ಒಂದು ಧರ್ಮದವರು ಮೂಲಭೂತವಾದ ತೋರಿಸಿದರೆ ಅದಕ್ಕೆ ಎದುರಾಗಿ ಇನ್ನೊಂದು ಧರ್ಮದವರೂ ವಿಶಾಲ ಮನಸ್ಸು ತೊರೆದು ಮೂಲಭೂತವಾದದತ್ತ ವಾಲುತ್ತಾರೆ ಎಂಬುದು ಮನೋವೈಜ್ಞಾನಿಕ ಸತ್ಯ. ಅದಕ್ಕಾಗಿಯೇ ಸಂಘಗಳು ಯೋಗಕ್ಕೆ ಧಾರ್ಮಿಕ ಲೇಪನ ಕೊಟ್ಟು ಇತರ ಧರ್ಮದವರನ್ನು ಚಿವುಟಿ ಅವರಲ್ಲಿ ಮೂಲಭೂತವಾದ ಜಾಗ್ರತಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಅಲ್ಪಸಂಖ್ಯಾತರು ಎಷ್ಟು ಹೆಚ್ಚು ಮೂಲಭೂತವಾದಿಗಳಾಗುತ್ತಾರೋ ಅಷ್ಟೇ ಹೆಚ್ಚು ಲಾಭ ಸಂಘಗಳಿಗೆ ಸಿಗುತ್ತದೆ. ಕಾರಣ ಅಲ್ಪಸಂಖ್ಯಾತರ ಮೂಲಭೂತವಾದದತ್ತ ಬೊಟ್ಟು ತೋರಿಸಿ ಹೆಚ್ಚು ಹೆಚ್ಚು ಹಿಂದೂಗಳನ್ನು ತಮ್ಮ ಮೂಲಭೂತವಾದದ ಸುಳಿಗೆ ಎಳೆಯಬಹುದು ಅಲ್ಲವೇ! ಜತೆಗೆ ಸಣ್ಣ ಶಾಲಾಮಕ್ಕಳ ಜಗಳದಂತೆ- ಅವನು ಮೊದಲು ಹೊಡೆದ ಅದಕ್ಕಾಗಿ ನಾನೂ ಹೊಡೆದೆ ಎಂದು ಸಮರ್ಥಿಸಿಕೊಳ್ಳಬಹುದು ತಾನೇ! ಈ ಜಗಳಕ್ಕೆ ಪರೋಕ್ಷ ಪ್ರಚೋದನೆ ತಾನೇ ಕೊಟ್ಟಿದ್ದು ಎನ್ನುವುದನ್ನು ಆ ಮಗು ಬಚ್ಚಿಡುತ್ತದೆ ಅಷ್ಟೇ.

ಹೈಕೋರ್ಟು ಸಲಿಂಗ ಸಂಬಂಧಗಳು ಸಕ್ರಮ ಎಂದು ತೀರ್ಪು ಕೊಟ್ಟ ಮೇಲೆ ಯೋಗಗುರು ರಾಮದೇವ್ ಚೇಳು ಕಚ್ಚಿದವರಂತೆ ಹಾರಾಡುತ್ತಿದ್ದು, ಅದು ಘೋರ ಪಾಪ, ಹಿಂದೂ ಧರ್ಮ ವಿರೋಧಿ ಅದಕ್ಕಾಗಿ ಭಾರತೀಯರು ಈ ತೀರ್ಪನ್ನು ವಿರೋಧಿಸಬೇಕು ಎಂದು ಹೇಳಿಕೆ ಕೊಟ್ಟಿದ್ದಾನೆ. ಅಗತ್ಯ ಬಿದ್ದರೆ ತಾನು ಈ ಸಲಿಂಗ ಕಾಮಿಗಳನ್ನು ಕೌನ್ಸಲಿಂಗ್ ಮಾಡಿ ಯೋಗ ಮತ್ತು ಆಯುರ್ವೇದ ಥೆರಪಿಗಳಿಂದ ಅವರ ವಿಕೃತ ಮನಸ್ಥಿತಿಯನ್ನು ಗುಣಪಡಿಸಬಲ್ಲೆ ಎಂದು ರಾಮದೇವ್ ಹೇಳಿಕೊಂಡಿದ್ದಾನೆ.

ಸಲಿಂಗ ರತಿ ಒಂದು ಖಾಸಗಿಯಾದ ಮಾನಸಿಕ ಮತ್ತು ಲೈಂಗಿಕ ಆಯ್ಕೆ, ಅದನ್ನು ಸನಾತನ ಧರ್ಮವಿರೋಧಿಯೆಂದು ಹೇಳಿರುವ ಬಾಬಾ ರಾಮದೇವ್ ಭಸ್ಮಾಸುರ ಮೋಹಿನಿ ಎಂಬ ಸನಾತನ ಕಥೆ ಕೇಳಿರಲೇಬೇಕು.

ಒಂದಿಷ್ಟೂ ತರ್ಕವಿಲ್ಲದ ಶತಮೂರ್ಖ ಕತೆಯಾದ ಭಸ್ಮಾಸುರ ಮೋಹಿನಿ ಕಥೆಯಲ್ಲಿ ಭಸ್ಮಾಸುರ ಸುಟ್ಟು ಸತ್ತ ನಂತರ ಮೋಹಿನಿ-ಉರ್ಫ್-ವಿಷ್ಣು ತನ್ನ ಹೆಣ್ಣು ವೇಷದ ಉದ್ದೇಶ ಈಡೇರಿದ ತಕ್ಷಣ ಅಂದರೆ ಭಸ್ಮಾಸುರ ಸತ್ತ ಕೂಡಲೇ ತನ್ನ ಮೂಲ ಗಂಡು ರೂಪಕ್ಕೆ ಯಾಕೆ ಮರಳಲಿಲ್ಲ ಎಂಬುದು ಇಂದಿಗೂ ಅರ್ಥವಿಲ್ಲದ ರಹಸ್ಯವಾಗಿದೆ. ಮೋಹಿನಿ ರೂಪದಲ್ಲಿಯೇ ವಿಷ್ಣು ವಿನಾಕಾರಣ ಮುಂದುವರಿದಿದ್ದನ್ನು ನೋಡಿ ಶಿವನಿಗೆ ಕಾಮ ಕೆರಳುತ್ತದೆ ಹಾಗೂ ಮೋಹಿನಪ್ಪನನ್ನು ಶಿವಪ್ಪ ಬೆನ್ನು ಹತ್ತುತ್ತಾ ಇಡೀ ಬ್ರಹ್ಮಾಂಡದ ಆಕಾಶದಲ್ಲೆಲ್ಲಾ ಓಡಾಡುತ್ತಾನೆ. (ಆಗ ಬ್ರಹ್ಮಾಂಡವೆಂದರೆ ಭಾರತ ಉಪಖಂಡ ಮಾತ್ರ ಆಗಿತ್ತು). ಹಾಗೇ ಬೆನ್ನು ಹತ್ತಿ ಆಕಾಶದಲ್ಲಿ ಓಡುವಾಗ ಆ ಎರಡೂ ದೇವರ ವೀರ್ಯ ಸೋರುತ್ತಾ ಹೋಗಿ ಅದು ಇಡೀ ಬ್ರಹ್ಮಾಂಡದಲ್ಲೆಲ್ಲಾ ಚೆಲ್ಲಾಡುತ್ತದೆ. ಹೀಗೆ ವೀರ್ಯ ಬಿದ್ದ ಪ್ರತಿ ಸ್ಥಳದಲ್ಲೂ ಒಂದೊಂದು ಶೈವ-ವೈಷ್ಣವ-ಶಾಕ್ತ ಪವಿತ್ರ ಕ್ಷೇತ್ರಗಳುಂಟಾಗಿ ಅವು ಇಂದಿಗೂ ಹೆಣ್ಣು-ಗಂಡು ಜನನಾಂಗ ಆಕಾರದಲ್ಲಿ ಪೂಜೆಗೊಳ್ಳುತ್ತಿವೆ. ಕೊನೆಗೆ ಮೋಹಿನಿ ಮತ್ತು ಶಿವ ಎಂಬ ಎರಡು ಗಂಡು ದೇವರುಗಳ ಲೈಂಗಿಕ ಮಿಲನವಾಗಿ ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ಅವರಿಗೆ ಹರಿಹರಪುತ್ರ ಜನಿಸುತ್ತಾನೆ (ಯಾವುದೇ ವೈದಿಕ ದೇವರಿಗೂ ಅಪ್ಪಿತಪ್ಪಿಯೂ ಹೆಣ್ಣು ಮಗು ಜನಿಸುವುದೇ ಇಲ್ಲ ಬಿಡಿ!). ಈ ಮೇಲಿನ ಪುರಾಣ ಕಥೆ ವೈದಿಕ ದೇವರಲ್ಲೂ ಇದ್ದ ಸಲಿಂಗ ಕಾಮವನ್ನು ಪುಷ್ಟೀಕರಿಸುತ್ತದೆ ತಾನೇ?

ದೇವರೆಂದ ಮೇಲೆ ಅಂತರ್‌ಜ್ಞಾನ ಇರಲೇಬೇಕು ಅಲ್ಲವೇ. ಆದರೂ ಆ ಶಿವದೇವರಿಗೆ ತನ್ನ ಎದುರು ಹೆಣ್ಣು ವೇಷದಲ್ಲಿ ನಿಂತಿರುವ ಮೋಹಿನಿಯು ಮೂಲದಲ್ಲಿ ಗಂಡು ಎಂದು ಅಂತರ್‌ಜ್ಞಾನದಿಂದ ತಿಳಿಯುವುದಿಲ್ಲ ಎಂದಮೇಲೆ ಈ ಪುರಾಣ ಕಥೆ ಬರೆದವನು ಎಂತಹ ದಡ್ಡನಿರಬೇಕು? ಅಷ್ಟೇ ಅಲ್ಲ ಮೋಹಿನಿಯು ಇನ್ನೊಬ್ಬ ಗಂಡು ದೇವರು ಕಾಮತೃಷೆಯಿಂದ ತನ್ನ ಬೆನ್ನು ಹತ್ತುವಾಗ ತಕ್ಷಣ ತನ್ನ ಮೂಲ ಗಂಡು ರೂಪಕ್ಕೆ ಮರಳಿ - ನೋಡಪ್ಪ ನಾನು ಹೆಣ್ಣಲ್ಲ ಗಂಡು- ಎಂದು ಏಕೆ ಹೇಳಲಿಲ್ಲ ಎಂಬುದು ಇನ್ನೊಂದು ತರ್ಕವಿಲ್ಲದ ರಹಸ್ಯ. ತನ್ನ ಗಂಡ ಒಂಬತ್ತು ತಿಂಗಳು ಹೆಣ್ಣು ರೂಪದಲ್ಲಿಯೇ ಮುಂದುವರಿದು ಬಸಿರು ಹೊತ್ತು ತಿರುಗುವುದನ್ನು ಕಂಡು ಪಾಪ ಲಕ್ಷ್ಮಿದೇವಿಗೆ ಎಷ್ಟು ಅಸಹ್ಯವೆನಿಸಿರಬಹುದು ಊಹಿಸಿ. ಇಂತಹ ಸ್ವಲ್ಪವೂ ತರ್ಕವಿಲ್ಲದ ಹಿಂದೂ ಪುರಾಣ ಕಥೆ ಬಾಬಾ ರಾಮದೇವನಿಗೆ ಗೊತ್ತಿಲ್ಲದಿರಲು ಸಾಧ್ಯವಿಲ್ಲ. ಹೀಗಾಗಿ ಸಲಿಂಗರತಿ ಬಗೆಗಿನ ಸುಪ್ರೀಂಕೋರ್ಟಿನ ತೀರ್ಪು ಸನಾತನ ಧರ್ಮ ವಿರೋಧಿ ಹಾಗೂ ಭಾರತೀಯತೆಗೆ ವಿರುದ್ಧವಾದುದು ಎಂದು ರಾಮದೇವ್ ಹಾರಾಡುತ್ತಿರುವುದು ಯಾವ ಆಧಾರದಲ್ಲಿ?

ಈ ಯೋಗಗುರು ರಾಮದೇವನ ಪುತ್ರಜೀವಿಕಾ ಎಂಬ ಔಷಧ ಕೇವಲ ಗಂಡು ಮಕ್ಕಳನ್ನು ಮಾತ್ರ ಹುಟ್ಟಿಸುವ ಔಷಧವಾಗಿದ್ದು ಅದು ಶುದ್ಧ ಮನುವಾದಿ ಮಾನಸಿಕತೆಗೆ ಮಾತ್ರ ಫಿಟ್ ಆಗುತ್ತದೆ. ಮನುವಾದಿ ಅಥವಾ ಆರ್ಯ-ವೈದಿಕ ಮನಸ್ಥಿತಿಯವರು ಕೇವಲ ಗಂಡು ಮಗ ಮಾತ್ರ ವಂಶಾಭಿವೃದ್ಧಿ ಮಾಡಲು ಹಕ್ಕುದಾರನು, ಹೆಣ್ಣು ಮಕ್ಕಳು ನಿಕೃಷ್ಟರು ಎಂಬ ನಂಬಿಕೆ ಇಂದಿಗೂ ಹೊಂದಿದ್ದಾರೆ. ಇದರಿಂದ ಯೋಗಿ ರಾಮದೇವ್ ಸಹ ಮನುವಾದಿ ಮನಸ್ಥಿತಿಯವನು ಎಂದು ಸಾಬೀತಾಗುತ್ತದೆ. ಆದರೂ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಲು ಮಾತ್ರ ಈ ಬಾಬಾನಿಗೆ ಮೋಹಿನಿಯಂತೆ ಹೆಣ್ಣಿನ ವೇಷವೇ ಬೇಕು! ಯೋಗದಿಂದ ಭೋಗದವರೆಗೆ ಎಲ್ಲವನ್ನೂ ವಾಣಿಜ್ಯೀಕರಣಗೊಳಿಸಿ ಬಿಲಿಯನ್‌ಗಟ್ಟಲೆ ಗಳಿಸಿರುವ ಬಾಬಾ ರಾಮದೇವ್ ... ಜೂನ್ 21 ರ ವಿಶ್ವಯೋಗ ದಿನದ ಹಿಂದಿನ ಮುದ್ದು... ಎಂಬುದು ನಿಜವಿರಬಹುದು.

- ವೀರಪ್ಪ ದಿ.ಎನ್., ಮದಿಕೇ...

ರೈತರಿಗೆ ನೆರವಾಗಿದ್ದರೆ ಆತನ ಕರ್ಮ... ಪುಸ್ತಿಕೆ ಸ್ವಚ್ಛವಾಗುತ್ತಿತ್ತು

ಇತ್ತೀಚೆಗೆ ಅಹ್ಮದಾಬಾದಿನಲ್ಲಿ ಭನ್ವರ್ಲಾಲ್ ದೋ... ಎಂಬ ಉದ್ಯಮಿ ಜೈನ ಸನ್ಯಾಸಿಯಾಗಿ ದೀಕ್ಷೆ ಸ್ವೀಕರಿಸು... ಸಮಾರಂಭಕ್ಕೆ ನೂರು ಕೋಟಿ ರೂಪಾಯಿ ಖರ್ಚು... ಮಾಡಿರುವರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ನಿಜವಾ... ದೋಷಿಯು ಈ ನೂರು ಕೋಟಿ ರೂಪಾಯಿಯನ್ನು ತನ್ನದೇ ಗುಜರಾತಿನಲ್ಲಿ ಸಾಲಬಾಧೆಯಿಂದ ಆತ್ಮಹ... ಮಾಡಿಕೊಂಡಿರುವ ಬಡರೈತ ಕುಟುಂಬಗಳ ಪರಿಹಾರ... ಕೊಟ್ಟಿದ್ದರೆ ಅದು ಸಾರ್ಥಕವೆನಿಸುತ್ತಿತ್ತು ಹಾಗೂ ಆ... ದೋಷಿಯ ಕರ್ಮ ಪುಸ್ತಿಕೆ ಸ್ವಚ್ಛವಾಗಿ ಅವರ ಸನ್ಯಾಸ... ಒಂದು ಅರ್ಥವಿರುತ್ತಿತ್ತು (ಮೋದಿಯವರ ಸೋಕಾ... ಮಾದರಿ ಅಭಿವೃದ್ಧಿಯ ಹೊರತಾಗಿ ಗುಜರಾತಿನಲ್ಲಿ ರೈತ... ಆತ್ಮಹತ್ಯೆ ಮಾಡಿಕೊಳ್ಳುವ ದುರ್ಭರ ಪರಿಸ್ಥಿತಿ ಈಗಲ... ಇದೆ, ಅಲ್ಲಿಯ ಕೃಷಿಕ್ಷೇತ್ರ ಈಗಲೂ ತೀವ್ರ ಬಿಕ್ಕಟ್ಟು... ಎದುರಿಸುತ್ತಿದೆ). ಮೋದಿಯವರ ಬಲಗೈ ಬಂಟ ಅಮಿ... ಷಾ ಸಹ ಗುಜರಾತಿ ಜೈನ. ಭನ್ವರ್ಲಾಲ್ ದೋಷಿಯ... ಅಮಿತ್ ಷಾ ಸಹ ಸನ್ಯಾಸ ಸ್ವೀಕರಿಸಿದ್ದರೆ ಬಹುಶಃ ಸ... ಭಾರತೀಯ ಸಮಾಜ ಸುರಕ್ಷಿತವಾಗಿರುತ್ತಿತ್ತೇನೋ!

- ಅಭಿಷೇಕ್ ಪಡಿವಾಳ್ ಜೈನ್, ಸು...

ಮಂದಿರಕ್ಕೆ ಮುನ್ನ ಬಸದಿ ಮತ್ತು ವಿಹಾರಗಳನ್ನು ಹಿಂದಿರುಗಿಸಲಿ

ರಾಮಮಂದಿರಕ್ಕೆ ಮುನ್ನ ಹಿಂದೂಗಳೂ ತಾವು ಕೈ... ಮಾಡಿಕೊಂಡಿರುವ ಜೈನ-ಬೌದ್ಧ ಧರ್ಮದ ಪೂಜಾಸ್ಥಳಗಳ... ಹಿಂದಿರುಗಿಸಲಿ ಎಂದು ಅಭಿಷೇಕ್ ಪಡಿವಾಳ್, ಸು... ಇವರು ತಮ್ಮ ಪತ್ರದಲ್ಲಿ ಬರೆದಿರುವುದು ಸಮರ್ಥನೀ... (ಲಂಕೇಶ್-ಜೂನ್ 17, 2015). ಮಂಗಳೂರಿನ ಕ... ಕ್ಷೇತ್ರವು ಬೌದ್ಧ ವಿಹಾರವಾಗಿತ್ತು ಎಂಬುದಕ್ಕೆ ಅಲ್ಲಿ ಈಗ... ಮರದ ಪಂಜರದಲ್ಲಿ ಪ್ರದರ್ಶನಕ್ಕೆ ಇಟ್ಟಿರು... ಅವಲೋಕಿತೇಶ್ವರ ಮತ್ತು ಮಂಜುಶ್ರೀ ಎ... ಬೋಧಿಸತ್ವನ ಅವತಾರದ ಒಂದು ಸಾವಿರ ವರ್ಷ ಹಳೆ... ಅದ್ಭುತ ಪಂಚಲೋಹದ ಪ್ರತಿಮೆಗಳೇ ಸಾಕ್ಷಿ (ವೈದಿಕ... ಅಪ್ಪಿ ತಪ್ಪಿಯೂ ಈ ಪ್ರತಿಮೆಗಳಿಗೆ ಪೂಜೆ ಮಾಡುವುದಿ...

ಈಗ ನಮ್ಮ ಕರಾವಳಿಯಲ್ಲಿ ಮೂಲ ಬೌದ್ಧ... ಉಳಿದಿಲ್ಲ ನಿಜ. ಆದರೆ ಮೂಲ ತುಳು-ಕನ್ನಡ ಜೈನ... ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಹಾಗಾಗಿ ವೈದಿಕರು ಕೈ... ವಶಮಾಡಿಕೊಂಡಿರುವ ಜೈನರ ಬಸದಿ ಹಾ... ಯಕ್ಷ-ಯಕ್ಷಿಯರ ಆಲಯಗಳನ್ನು ಜೈನರಿಗೆ ಮರಳಿಸುವ... ಸೂಕ್ತ. ಕಟೀಲು ಹತ್ತಿರದ ಬಂಟ ಮನೆತನದವರಾದ... ಹಿರಿಯರೇ ಕಟೀಲು ದುರ್ಗಾಪರಮೇಶ್ವರಿ ಕ್ಷೇತ್ರ... ಮೂಲತಃ ಜೈನರ ಪದ್ಮಾವತಿ ಎಂಬ ಯಕ್ಷಿಯ ಬ... ಯಾಗಿತ್ತು ಎಂದು ಹೇಳುತ್ತಿದ್ದರು. ಸ್ಥಳೀಯ ಪ್ರಬಲ ಬ... ಜಮೀನುದಾರರು ಬಾಹುಬಲದಿಂದ ಈ ಜೈನರ ಪದ್ಮಾ... ಆಲಯವನ್ನು ವಶಪಡಿಸಿಕೊಂಡು ದುರ್ಗಾಪರಮೇಶ್ವರಿ... ಆಲಯವಾಗಿ ಪರಿವರ್ತಿಸಿ ಸುಳ್ಯ ಕಡೆಯ ವೈ... ಅರ್ಚಕರನ್ನು ಕರೆತಂದು ದುರ್ಗಾ ಪೂಜೆಗೆ ನೇಮಿಸಿ... ಅರುಣೇಶ್ವರ ಎಂಬ ಒಬ್ಬ ಜೈನ ಮುಖಂಡ ಅ... ವಿರೋಧಿಸಿದನಂತೆ. ಅದಕ್ಕಾಗಿ ನಂತರ ಹೊಸದಾಗಿ ಕಟೀ... ಕ್ಷೇತ್ರ ಪುರಾಣ ಎಂಬ ಕಾಲ್ಪನಿಕ ಕಥೆ ಹೊಸೆಯು... ಅರ್ಚಕರು ಹಾಗೂ ಬಂಟ ಮುಕ್ತೇಸರರು ಕುತಂತ್ರದಿ... ಅರುಣೇಶ್ವರ ಎಂಬ ಹೆಸರನ್ನೇ ಅರುಣಾಸುರ ಎ... ಬದಲಾಯಿಸಿ ದೇವಿಮಹಾತ್ಮೆ ಕಥೆಯಲ್ಲಿ ಬರುವ ಕಾ... ರಾಕ್ಷಸನಿಗೆ ಅರುಣಾಸುರ ಎಂಬ ಹೆಸರಿಟ್ಟು ಆ ವಿರೋ... ಜೈನ ಮುಖಂಡನ ಮೇಲೆ ಸೇಡು ತೀರಿಕೊಂಡರು... (ವಿಪರ್ಯಾಸವೆಂದರೆ ಬಂಟರು ಪರವೂರಿನಿಂದ ಕರೆತಂ... ನಯವಂಚಕ ಅರ್ಚಕರೇ ನಂತರ ಆ ಬಂಟ ಮುಕ್ತೇಸರ... ಒದ್ದೋಡಿಸಿ ಈ ಕ್ಷೇತ್ರವನ್ನು ಸಂಪೂರ್ಣ ತಮ್ಮ ಕೈ... ಮಾಡಿಕೊಂಡರು). ಕೆಲವರು ಹೇಳುವಂತೆ ಆ ಜೈನ ಗ... ಅರುಣೇಶ್ವರನನ್ನು ಅಲ್ಲಿಯೇ ನದಿಯ ತಟದಲ್ಲಿ ಯಾ... ಮೋಸದಿಂದ ಕೊಂದಿದ್ದರಿಂದ ದುರ್ಗಾದೇವಿ... ಅರುಣಾಸುರ ರಾಕ್ಷಸನನ್ನು ಸಂಹರಿಸಿದ್ದು ಎಂಬ ಕಟ್ಟು... ಹುಟ್ಟಿಕೊಂಡಿತಂತೆ. ಪುರಾಣದಲ್ಲಿ ಎಲ್ಲಾ ರಾಕ್ಷಸರಿ... ಅನಿಷ್ಟ ಹೆಸರುಗಳನ್ನೇ ವೈದಿಕರು ಕೊಟ್ಟಿರುವಾಗ ಕಟೀ... ಅರುಣಾಸುರನಿಗೆ ಮಾತ್ರ ಅರುಣ ಎಂಬ ಸಭ್ಯ ಹ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ಚುಟುಕಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.



ಕೊಡುವಷ್ಟು ಹೃದಯವೈಶಾಲ್ಯ ವೈದಿಕರಲ್ಲಿ ಬರಲು ಮೂಲಕಾರಣ ಅರುಣಾಸುರ (ಅರುಣೇಶ್ವರ) ಸ್ಥಳೀಯ ಸಭ್ಯ ಸಾತ್ವಿಕ ಜೈನನಾಗಿದ್ದದ್ದು.

ಜೈನ ಧರ್ಮದಲ್ಲಿ ದೇವರ ಕಲ್ಪನೆಯೇ ಇಲ್ಲದಿರುವುದರಿಂದ ಅವರು ಪೂಜಿಸುವುದು ತೀರ್ಥಂಕರರನ್ನು ಹಾಗೂ ಯಕ್ಷ-ಯಕ್ಷಿಯರನ್ನು. ಕರಾವಳಿಯ ತುಳುವ ಹಿಂದೂಗಳ ನಾಗಾರಾಧನೆಯ ಹಿಂದೆ ಜೈನ ಧರ್ಮದ ಪ್ರಮುಖ ಯಕ್ಷ-ಯಕ್ಷಿಯರಾದ ನಾಗರಾಜ ಧರಣೇಂದ್ರ ಮತ್ತು ನಾಗ ರಾಣಿ ಪದ್ಮಾವತಿ ಇವರ ಪ್ರಭಾವವಿದ್ದರೆ ಭೂತಾರಾಧನೆಯ ಹಿಂದೆ ಇತರ ಯಕ್ಷ-ಯಕ್ಷಿಯರ ಪ್ರಭಾವವಿದೆ ಎನ್ನಲಾಗುತ್ತದೆ. ಪದ್ಮಾವತಿ ದೇವಿಯ ಇನ್ನೊಂದು ಹೆಸರು 'ಧರ್ಮವತ್ಸಲ'. ಅದೇ ಮುಂದೆ ಉಜಿರೆಯಲ್ಲಿ ಧರ್ಮಸ್ಥಳ ಎಂದು ಬದಲಾಯಿತು. ಈ ಮೌಖಿಕ ಕಥೆ ಏನೇ ಇರಲಿ ಇಂತಹ ಜೈನ ಹಾಗೂ ಬೌದ್ಧ ಮೂಲದ ಪೂಜಾ ಸ್ಥಳಗಳ ಬಗ್ಗೆ ಪರಿಣಿತರು ಸರಿಯಾಗಿ ಸಂಶೋಧನೆ ನಡೆಸಿದರೆ ಅದು ಮುಂದಿನ ಪೀಳಿಗೆಗೆ ಒಂದು ದಾರಿದೀಪವಾಗಬಹುದು ಹಾಗೂ ಕಟೀಲು, ಕೊಲ್ಲೂರು, ಧರ್ಮಸ್ಥಳ, ಉಡುಪಿ ಈ ಕ್ಷೇತ್ರಗಳಿಗೆ ಹೊರ ಪ್ರದೇಶದಿಂದ ಬರುವ ಪ್ರವಾಸಿಗಳಿಗೆ ತಾವು ನಿಜವಾಗಿ ಯಾವ ಪರಧರ್ಮದ ದೇವರನ್ನು ತಪ್ಪಾಗಿ ವೈದಿಕ ದೇವರೆಂದೆಣಿಸಿ ಪೂಜಿಸುತ್ತಿದ್ದೇವೆ ಎಂದು ಅರ್ಥವಾದರೆ ಕುರುಡು ಭಕ್ತಿ ಕಡಿಮೆಯಾಗಬಹುದು.

- ಆರ್.ಬಿ. ಶೇಣಾವ, ಮಂಗಳೂರು

ಸರಗಳ್ಳತನದ ಹಿಂದಿರುವುದು ಬಂಡವಾಳಶಾಹಿ ವ್ಯವಸ್ಥೆ

ಈಚೆಗೆ ಸರಗಳ್ಳತನ ಹೆಚ್ಚುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ. ಮಹಿಳೆಯರು ಚಿನ್ನದ ಒಡವೆಗಳನ್ನು ಧರಿಸುವುದು ಚಿನ್ನದ ಮೇಲಿನ ಮೋಹಕ್ಕಾಗಿ ಇರಬಹುದು. ಆದರೆ ಸರಗಳ್ಳರು ಚಿನ್ನ ಕದಿಯುವುದು ಮತ್ತು ಕದ್ದ ಚಿನ್ನವನ್ನು ವ್ಯಾಪಾರಿಗಳು ಗೊತ್ತಿದ್ದೂ ಖರೀದಿಸುವುದು ಚಿನ್ನದ ಮೇಲಿನ ವ್ಯಾಮೋಹಕ್ಕಾಗಿ ಅಲ್ಲ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು ಉಂಟುಮಾಡುವ ಹಣದುಬ್ಬರ, ಚಿನ್ನದ ಬೆಲೆಯೇರಿಕೆ ಮತ್ತು ಕೆಲವರಿಗೆ ಮಾತ್ರ ಸಾಧ್ಯ ಮಾಡುವ ಐಷಾರಾಮಿ ಜೀವನದ ಪ್ರಲೋಭನೆಯಿಂದ. ಇದರ ಬಲಿಪಶುಗಳು ಸರಗಳ್ಳರು ಮತ್ತು ಕೆಳಮಧ್ಯಮವರ್ಗದ ಮಹಿಳೆಯರು. ಕೋಟ್ಯಾಧೀಶರು ಹೆಚ್ಚಿದಂತೆಲ್ಲಾ ಬಡತನ, ಕಳ್ಳತನಗಳ ಹೆಚ್ಚಳ ಅನಿವಾರ್ಯ. ಈ ವಿದ್ಯಮಾನವನ್ನು ಅಪರಾಧದ ಹೆಚ್ಚಳವೆಂದು ಬಿಂಬಿಸುವವರು ರಾಜಕೀಯ ನಿರಕ್ಷರಿಗಳು ಅಥವಾ ಬಂಡವಾಳಶಾಹಿಗಳು. ಹೊಟ್ಟೆ ಕೆಟ್ಟ ವ್ಯಕ್ತಿ ಮನೆಯೊಳಗಿನ ದುರ್ವಾಸನೆಗೆ ಸಾಕುಪ್ರಾಣಿಯನ್ನು ದೂರಿದಂತೆ. ಸಾಲಬಾಧೆಯ ರೈತರ' ಆತ್ಮಹತ್ಯೆಗಳನ್ನು ದುರ್ಬಲ ಮನಸ್ಸಿನ ವ್ಯಕ್ತಿಗಳ ಹತಾಶ ಕ್ರಮವೆಂದು 'ಮನೋವಿಜ್ಞಾನಿ'ಗಳು ಅರ್ಥೈಸುವಂತೆ.

ದುಡಿಮೆಗಾರರ ರಕ್ತ-ಮಾಂಸಗಳನ್ನು ಬಡ್ಡಿ, ಬಾಡಿಗೆ ಮತ್ತು ಲಾಭಗಳ ರೂಪದಲ್ಲಿ ಲಪಟಾಯಿಸಿ, ಚಿನ್ನದ ರೂಪದಲ್ಲಿ ಘನೀಕರಿಸಿ, ಹಣವನ್ನಾಗಿ ಹರಿಸಿ ಅದೇ ಹಣದ ಮೂಲಕವೇ ಜನರಿಂದ ಮತ್ತಷ್ಟು ಹಣವನ್ನು ಅಂದರೆ ಜನರ ಶ್ರಮಶಕ್ತಿಯನ್ನು ನಗದು-ಚಿನ್ನಗಳನ್ನಾಗಿ ಸಂಚಯಿಸಿ ಕೊಳ್ಳುವ ವ್ಯಾಪಾರಿಗಳ ವ್ಯವಸ್ಥೆ ಅಂದರೆ ಬಂಡವಾಳಶಾಹಿ ವ್ಯವಸ್ಥೆ ಸರಗಳ್ಳತನದ ಹಿಂದೆ ಅಗೋಚರವಾಗಿದೆ. ರಾಜಕೀಯ ಪ್ರಜ್ಞೆಯಿಲ್ಲದೆ ಇದು ಗೋಚರವಾಗುವುದಿಲ್ಲ. ಧೀರ ವ್ಯಧ್ದರ 'ಸಾಹಸ', ಚಿನ್ನದ ಆಸೆಗೆ ಬಲಿಬಿದ್ದ ಅಸಹಾಯಕ ಮಹಿಳೆಯರ 'ಅಮಾಯಕತೆ' ಮತ್ತು ಸುಲಭದಲ್ಲಿ ಐಷಾರಾಮ ಜೀವನ ನಡೆಸಬಯಸುವ ಅವಿವೇಕಿ ಸರಗಳ್ಳರ 'ನೀಚತನ'ವೆಂಬಂತೆ ಬಿಂಬಿಸುವ ಇಂಥ ವರದಿಗಳನ್ನು ತಯಾರಿಸುವ ವರದಿಗಾರರಿಗೆ ರಾಜಕೀಯಪ್ರಜ್ಞೆ ಇಲ್ಲದಿರಬಹುದು. ಆದರೆ ಓದುಗರಿಗೆ ಅತ್ಯಗತ್ಯ.

- ವಿ.ಎನ್. ಲಕ್ಷ್ಮೀನಾರಾಯಣ, ಮೈಸೂರು

ನಿಜ! ಕೊಳಗೇರಿ ಬೇಡ, ಶ್ರಮಿಕನಗರ ಇರಲಿ!!

ಜೂನ್ 10ರ ಸಂಚಿಕೆಯಲ್ಲಿ ಡಾ. ವಾಸುರವರು, ಸ್ಲಂ ಕೊಳಗೇರಿ ಕುರಿತು ಬರೆದ ಲೇಖನ ಶ್ಲಾಘನೀಯ. ನಿಜವಾಗಲೂ ಒಂದು ವರ್ಗದ ಜನರು, ಬೀದಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಹಮಾಲಿ ಕಾರ್ಮಿಕರು, ಮಂಡಕ್ಕಿ ಭಟ್ಟಿ ಕಾರ್ಮಿಕರು, ವಾಸ ಮಾಡುವ, ನಗರಗಳನ್ನು ಸ್ಲಂ ಜನರು, ಕೊಳಗೇರಿ ಜನರು, ಕೊಳಚಿ ಪ್ರದೇಶದ ಜನರು ಎಂದು ಅವಮಾನಿಸುವ ರೀತಿಯಲ್ಲಿ ಪದಗಳನ್ನು ಅಧಿಕಾರಿಶಾಹಿವರ್ಗ, ಶೋಷಕ ವರ್ಗ ಹುಟ್ಟುಹಾಕಿದ ಹುನ್ನಾರವನ್ನು ನಾವು ಸಹ ಅರ್ಥಮಾಡಿಕೊಂಡಿಲ್ಲ. ನಿಜವಾಗಲೂ ದುಡಿಯುವ ವರ್ಗ, ಅಸಂಘಟಿತ ಕಾರ್ಮಿಕರು ವಾಸಿಸುವ ಏರಿಯಾಗಳನ್ನು ಸ್ಲಂ, ಕೊಳಗೇರಿ ಎನ್ನುವ ಬದಲು "ಶ್ರಮಿಕ ನಗರ" ಅಂತ ಕರೆಯುವುದೇ ಸ್ವಾಭಿಮಾನದ ವಿಷಯ. ಹಾಗಾಗಿ ಡಾ. ವಾಸು ಅವರು ಬರೆದ/ತಿಳಿಸಿದ 'ಶ್ರಮಿಕ ನಗರ' ವಿಷಯವನ್ನು ನಾವು ಆ ಜನರೊಟ್ಟಿಗೆ ಕೆಲಸ ಮಾಡುವ ಕಾರ್ಯಕರ್ತರು ಈಗ ರಾಜ್ಯಾದ್ಯಂತ ಚರ್ಚೆ ಮಾಡುವ ಅವಶ್ಯಕತೆ ಇದೆ.

-ಎಂ. ಕರಿಬಸಪ್ಪ, ದಾವಣಗೆರೆ

ಅವಮಾನ ಸಿನಿಮಾರಂಗಕ್ಕೆ ಕರೆತಂದಿತು

ತೆಲುಗಿನಲ್ಲಿ ಕನ್ನಡದ ನಿರ್ದೇಶಕರಿಗೆ ಅವಕಾಶ ಅಪರೂಪ. ಅಲ್ಲಿನ ಸ್ಟಾರ್ ನಟರು ಕಾಲ್‌ಶೀಟ್ ಕೊಡುವುದಿಲ್ಲ ಎಂಬ ಮಾತೂ ಇದೆ. ಅಂತಹ ಸನ್ನಿವೇಶದ ಮಧ್ಯೆ ಕನ್ನಡದ ನಿರ್ದೇಶಕ ಆರ್.ಚಂದ್ರು ತೆಲುಗಿನಲ್ಲಿ ಸಿನಿಮಾ ಮಾಡಿದ್ದಾರೆ. ಈ ಕುರಿತಾದ ಮಾತುಕತೆ ಇಲ್ಲಿದೆ.



** ಸಿನಿಮಾ ರಂಗಕ್ಕೆ ಬರುವುದೇ ನಿಮ್ಮ ಕನಸಾಗಿತ್ತಾ?*

ನಾನು ಖಂಡಿತಾ ಆಕಸ್ಮಿಕವಾಗಿ ಬಂದವನಲ್ಲ. ಸಿನಿಮಾ ಅಂದರೆ ನನಗೆ ಪ್ರಾಣ. ನಮ್ಮೂರಿನ ಸುತ್ತಮುತ್ತ ಎಲ್ಲೇ ಶೂಟಿಂಗ್ ನಡೆದರೂ ನಾನು ನೋಡೋಕೆ ಹೋಗುತ್ತಿದ್ದೆ. ಅದೆಷ್ಟೋ ಬಾರಿ ಸ್ಕೂಲ್ ಬಿಟ್ಟು ಶೂಟಿಂಗ್ ನೋಡಲು ಹೋಗಿದ್ದಿದೆ. ನನ್ನ ಸಹೋದರರು ಮೆಡಿಕಲ್ ಹಾದಿ ಹಿಡಿದರೆ, ನಾನು ಸೀದಾ ಬಂದದ್ದು ಗಾಂಧಿನಗರಕ್ಕೆ. ಸಿನಿಮಾ ರಂಗಕ್ಕೆ ಬರುವುದು ಅಪ್ಪನಿಗೆ ಇಷ್ಟವೇ ಇರಲಿಲ್ಲ.

** ಬಂದ ತಕ್ಷಣವೇ ಗಾಂಧಿನಗರ ನಿಮ್ಮನ್ನು ಒಪ್ಪಿಕೊಂಡಿತಾ?*

ಸಿನಿಮಾ ಎನ್ನುವುದು ಮಾಯಾಲೋಕ. ಎಲ್ಲರನ್ನೂ ಅದು ಕೈಬೀಸಿ ಕರೆಯುತ್ತದೆ. ಕೆಲವರನ್ನು ಮಾತ್ರ ಅದು ಆಯ್ಕೆ ಮಾಡಿಕೊಳ್ಳುತ್ತದೆ. ಆಯ್ಕೆಯಾಗಲು ನಾನು ಅದೆಷ್ಟೊ ಬಾರಿ ಉಪವಾಸ ಇದ್ದೇನೆ. ಹಿರಿಯ ನಿರ್ದೇಶಕರ ಬಳಿ ಕೆಲಸ ಕೇಳಿ ನಿಂತಿದ್ದೇನೆ. ಕಿರುತೆರೆಯಲ್ಲಿ ಕೆಲಸ ಮಾಡಿದ್ದೇನೆ. 'ತಾಜ್‌ಮಹಲ್' ಸಿನಿಮಾ ಮಾಡುವುದಕ್ಕಿಂತ ಮುಂಚಿ ನರಕಯಾತನೆ ಕಂಡಿದ್ದೇನೆ.

** ಚೊಚ್ಚಲು ಸಿನಿಮಾ ಸಿಕ್ಕಿದ್ದು ಹೇಗೆ?*

ಅದೊಂದು ರೋಚಕ ಕತೆ. ಅದನ್ನೇ ಸಿನಿಮಾ ಮಾಡಬಹುದು. ಬೇರೆ ಬೇರೆ ನಿರ್ದೇಶಕರ ಬಳಿ ಕೆಲಸ ಮಾಡುವಾಗಲೇ, ನಮ್ಮದೇ ಒಂದು ತಂಡ ರಚನೆ ಮಾಡಿದ್ದೆವು. ಬಿಡುವಿನ ಸಮಯ ಸಿಕ್ಕರೆ ಸಾಕು ಬರೆಯುತ್ತಾ ಕೂರುತ್ತಿದ್ದೆ. ಆಗಲೇ ಒಂದಿಷ್ಟು ಕತೆಗಳನ್ನು ಬರೆದಿದ್ದೆ. ಹುಡುಕಾಟದಲ್ಲೇ ನಿರ್ಮಾಪಕರು ಸಿಕ್ಕರು. ನಾಯಕ ನಾಯಕಿಯರ ಆಯ್ಕೆ ಆಯಿತು. ಮುಹೂರ್ತ ಕೂಡ ನಡೆಯಿತು. ಸಿನಿಮಾ ಗೆದ್ದೇ ಗೆಲ್ಲುತ್ತದೆ ಎಂಬ ನಂಬಿಕೆ ನನಗಿತ್ತು. ಅದು ಸುಳ್ಳಾಗಲಿಲ್ಲ.

** ಸಿನಿಮಾದ ಗೆಲುವಿನ ಗುಟ್ಟೇನು?*

ಇಂಥದ್ದೇ ಅಂತ ಹೇಳುವುದು ಕಷ್ಟ. ಹಾರ್ಡ್‌ವರ್ಕ್‌ನಲ್ಲೇ ಗೆಲುವು ಇದೆ ಅಂದುಕೊಂಡಿದ್ದೇನೆ. ಸಿನಿಮಾದ ಕೆಲಸದಲ್ಲಿ ಇದ್ದಾಗ ನಾನು ಎಷ್ಟೋ ಸಲ ಊಟ ಮರೆತಿದ್ದೇನೆ. ಮನೆಗೂ ಹೋಗುತ್ತಿರಲಿಲ್ಲ. ಕನಸು ಕಾಣುವುದು ಮಹತ್ವದ್ದಲ್ಲ. ಅದನ್ನು ಕಾರ್ಯರೂಪಕ್ಕೆ ತಂದಾಗ ಎಲ್ಲರೂ ಗೆಲ್ಲುತ್ತಾರೆ.

** ನಿಮ್ಮ ಪಾಲಿಗೆ ಸಿನಿಮಾ ಅಂದರೆ?*

ಸಿನಿಮಾ ಬಿಟ್ಟರೆ ನನಗೆ ಬೇರೆ ಪ್ರಪಂಚವೇ ಇಲ್ಲ. ನನ್ನ ಜೀವನದ ಒಂದು ಭಾಗವೇ ಆದಾಗಿದೆ. ಹೀಗಾಗಿ ಕಡಿಮೆ ಅವಧಿಯಲ್ಲಿ ಹೆಚ್ಚು ಸಿನಿಮಾಗಳನ್ನು ಮಾಡಲು ನನಗೆ ಸಾಧ್ಯವಾಯಿತು. ಇಲ್ಲಿ ಎಲ್ಲವನ್ನೂ ಕಂಡಿದ್ದೇನೆ. ಒಳ್ಳೆಯದನ್ನು ಕಲಿತಿದ್ದೇನೆ.

** ಸ್ಟಾರ್ ನಟರ ಜತೆಗಿನ ಕೆಲಸ ಹೇಗಿತ್ತು?*

ಸಾಮಾನ್ಯವಾಗಿ ಹೊಸ ಕಲಾವಿದರ ಜತೆ ಕೆಲಸ ಮಾಡುವಾಗ ಟೆನ್‌ಷನ್ ಇರುವುದಿಲ್ಲ ಅನ್ನುವ ಮಾತಿದೆ. ಸ್ಟಾರ್ ನಟರ ಜತೆ ಸಿನಿಮಾ ಮಾಡುವಾಗಲೂ ನನಗೆ ಏನೂ ಅನಿಸಲಿಲ್ಲ. ಕೆಲಸದಲ್ಲಿ ಪಕ್ಕಾ ಇದ್ದರೆ ಖಂಡಿತಾ ಭಯ ಆಗುವುದಿಲ್ಲ. ಬಹುತೇಕ ಕಲಾವಿದರಿಂದ ನಾನು ಸಾಕಷ್ಟು ಕಲಿತದ್ದಿದೆ. ಅವರ ಅನುಭವಗಳನ್ನು ಅಳವಡಿಸಿಕೊಂಡಿದ್ದೇನೆ.

** ಸದ್ಯ ಹೆಚ್.ಎಂ.ರೇವಣ್ಣ ಪುತ್ರ ಅನೂಪ್ ಚಿತ್ರಕ್ಕೆ ನಿರ್ದೇಶನ ಮಾಡುತ್ತಿದ್ದೀರಿ: ತಯಾರಿ ಹೇಗಿದೆ?*

ಅನೂಪ್ ನನ್ನ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಪದಾರ್ಪಣೆ ಮಾಡುತ್ತಿದ್ದಾನೆ. ಅವರ ತಂದೆಯವರು ನನ್ನ ಮೇಲೆ ನಂಬಿಕೆ ಇಟ್ಟಿದ್ದಾರೆ. ಖಂಡಿತಾ ಅದನ್ನು ಉಳಿಸಿಕೊಳ್ಳುತ್ತೇನೆ. 'ಲಕ್ಷ್ಮಣ' ಒಂದೊಳ್ಳೆ ಸಿನಿಮಾ ಆಗುವುದರಲ್ಲಿ ಅನುಮಾನ ಬೇಡ.

** ಕನ್ನಡದಲ್ಲಿ ಅಷ್ಟೊಂದು ಆಫರ್ಸ್ ಇದ್ದವು. ಆದರೂ ಸಡನ್ನಾಗಿ ತೆಲುಗಿಗೆ ಹೋಗಿದ್ದೇಕೆ?*

ಜಗತ್ತು ಚಿಕ್ಕದಾಗುತ್ತಿದೆ. ಹೀಗಾಗಿ ತೆಲುಗಿನಲ್ಲಿ ಸಿನಿಮಾ ಮಾಡುವುದು ಇಂದು ಅಚ್ಚರಿಯಾಗಿ ಉಳಿದಿಲ್ಲ. ಎರಡು ವರ್ಷದ ಹಿಂದೆಯೇ ನಾನು ತೆಲುಗಿನಲ್ಲಿ ಸಿನಿಮಾ ಮಾಡಬೇಕಿತ್ತು, ಆಗಿರಲಿಲ್ಲ. ನನ್ನದೇ 'ಚಾರ್‌ಮಿನಾರ್' ಸಿನಿಮಾವನ್ನು ಮೆಚ್ಚಿದ ನನ್ನ ನಿರ್ಮಾಪಕರು, ತೆಲುಗಿನಲ್ಲೂ ಸಿನಿಮಾ ಮಾಡಲು ಹೇಳಿದರು. ಅವರ ಒತ್ತಾಸೆಗಾಗಿ ನಾನು ಹೋದೆ. ಇದೇ ವಾರದಲ್ಲೇ ಸಿನಿಮಾ ಬಿಡುಗಡೆ ಆಗುತ್ತಿದೆ.

** ತೆಲುಗು ಸಿನಿಮಾರಂಗದ ಅನುಭವ ಹೇಗಿತ್ತು?*

ನಾನು ಆಗಲೇ ಹೇಳಿದಂತೆ, ನಾವು ಹೇಗೆ ಇರುತ್ತೇವೋ, ನಮ್ಮೊಂದಿಗೆ ಕೆಲಸ ಮಾಡುವವರು ಹಾಗೇ ಇರುತ್ತಾರೆ. ಇಲ್ಲಿ ಕೆಲಸ ಮಾಡಿದಂತೆ ಅಲ್ಲಿಯೂ ಮಾಡಿದ್ದೇನೆ. ಖುಷಿಯ ವಿಚಾರವೆಂದರೆ, ನನ್ನ ಕನ್ನಡದ ಸಿನಿಮಾಗಳನ್ನು ಅಲ್ಲಿಯ ತಂತ್ರಜ್ಞರು ಮತ್ತು ಕಲಾವಿದರು ನೋಡಿದ್ದರು. ಹೀಗಾಗಿ ಸಿನಿಮಾ ಮಾಡಲು ಕಷ್ಟ ಅನಿಸಲಿಲ್ಲ. ಆ ಸಿನಿಮಾರಂಗಕ್ಕೆ ನಾನು ಹೊಸಬ ಅಂತ ಅನ್ನಿಸಲಿಲ್ಲ.

** ತೆಲುಗಿನ ನಿಮ್ಮ ಸಿನಿಮಾ 'ಕೃಷ್ಣಮ್ಮ ಕಲಿಪಿಂದಿ ಇದ್ದರಿನಿ'ಯ ವಿಶೇಷತೆ ಏನು?*

ಪ್ರಿನ್ಸ್ ಮಹೇಶ್ ಬಾಬು ಅವರ ಸೋದರಳಿಯ ಸುಧೀರ್ ಸಿನಿಮಾಗೆ ನಾಯಕ. ಹೆಸರಾಂತ ಕಲಾವಿದರಾದ ನಾಗ ಚೈತನ್ಯ ಮತ್ತು ರಾಣಾ ದುಗ್ಗುಬಾಟಿ ಕೂಡ ಸಿನಿಮಾದಲ್ಲಿ ನಟಿಸಿದ್ದಾರೆ. ಎಲ್ಲರಿಗೂ ಗೊತ್ತಿರುವಂತೆ, ನನ್ನದೇ ಸಿನಿಮಾವನ್ನು ತೆಲುಗಿಗೆ ಮಾಡಿದ್ದೇನೆ. ಅಲ್ಲಿನ ನೇಟಿವಿಟಿಗೆ ತಕ್ಕಂತೆ ಒಂದಿಷ್ಟು ಬದಲಾವಣೆ ಮಾಡಿಕೊಂಡು ಚಿತ್ರಿಸಿದ್ದೇನೆ. ಕನ್ನಡ ಸಿನಿಮಾಗಿಂತಲೂ ವಿಭಿನ್ನವಾಗಿ ಈ ಸಿನಿಮಾ ಮೂಡಿ ಬಂದಿದೆ. ■

ಖಾಕಿ ತೊಟ್ಟ ಗಣೇಶ್



ಇದೇ ಮೊದಲ ಬಾರಿಗೆ ಗಣೇಶ್ ಪೊಲೀಸ್ ಆಫೀಸರ್ ಪಾತ್ರ ನಿರ್ವಹಿಸುತ್ತಿದ್ದಾರೆ. ಇನ್ನೂ ಹೆಸರಿಡದ ಚಿತ್ರದಲ್ಲಿ ಅವರು ಖಡಕ್ ಪೊಲೀಸ್ ಆಫೀಸರ್ ಪಾತ್ರ ನಿರ್ವಹಿಸುತ್ತಿದ್ದಾರೆ. ಈ ಸಿನಿಮಾವನ್ನು 'ಶ್ರಾವಣಿ ಸುಬ್ರಮಣ್ಯ' ಖ್ಯಾತಿಯ ಮಂಜು ಸ್ವರಾಜ್ ನಿರ್ದೇಶಿಸುತ್ತಿದ್ದಾರೆ.

'ಮುಂಗಾರು ಮಳೆ'ಯಿಂದ ಇನ್ನೇನು ಬಿಡುಗಡೆ ಆಗಬೇಕಿರುವ 'ಬುಗುರಿ' ಸಿನಿಮಾದವರೆಗೂ ಗಣೇಶ್ ಲವರ್‌ಬಾಯ್ ಆಗಿ ಕಾಣಿಸಿಕೊಂಡಿದ್ದರು. ಫಸ್ಟ್ ಟೈಮ್ ಅವರು ಖಾಕಿತೊಟ್ಟಿದ್ದಾರೆ. ಹೀಗಾಗಿ ಜಿಮ್‌ನಲ್ಲಿ ಕಸರತ್ತು ನಡೆಸಿದ್ದಾರೆ.


ಚಿತ್ರಕ್ಕೆ ಸದ್ಯ 'ಗಣಿ' ಎಂದು ಹೆಸರಿಡಲಾಗಿದೆ. ಇದೇ ಅಂತಿಮ ಶೀರ್ಷಿಕೆ ಅಲ್ಲ ಎನ್ನುವುದು ನಿರ್ದೇಶಕರ ಮಾತು. ಮುಂದಿನ ವಾರದಲ್ಲಿ ಫೋಟೋ ಶೂಟ್‌ಗೆ ರೆಡಿ ಆಗಿರುವ ಚಿತ್ರತಂಡ, ಆಷಾಢ ಕಳೆದ ನಂತರ ಮುಹೂರ್ತವಂತೆ.

"ಎಲ್ಲರಿಗೂ ಗೊತ್ತಿರುವಂತೆ ಈವರೆಗೂ ನಾನು ಬೇರೆ ಬೇರೆ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದೇನೆ. ಫಸ್ಟ್‌ಟೈಮ್ ಖಡಕ್ ಆಫೀಸರ್ ಕ್ಯಾರೆಕ್ಟರ್ ನಿರ್ವಹಿಸುತ್ತಿರುವೆ. ಅದಕ್ಕಾಗಿ ಮಾಂಸಖಂಡಗಳನ್ನು ಹುರಿಗೊಳಿಸಿಕೊಳ್ಳುತ್ತಿದ್ದೇನೆ. ಪೊಲೀಸ್ ಪಾತ್ರಕ್ಕೆ ಬೇಕಿರುವ ತಯಾರಿ ಮಾಡಿಕೊಂಡೇ ಶೂಟಿಂಗ್‌ಗೆ ಹೊರಡುವೆ" ಎನ್ನುವುದು ಗಣೇಶ್ ಮಾತು.

ಈಗಾಗಲೇ ಗಣೇಶ್ ಅವರ ಮೂರು ಸಿನಿಮಾಗಳು ಬಿಡುಗಡೆಗೆ ರೆಡಿ ಆಗಿವೆ. 25ನೇ ದೊಡ್ಡೆಯಷ್ಟೇ 'ಮುಂಗಾರು ಮಳೆ-2' ಸಿನಿಮಾದ ಮುಹೂರ್ತ ಕೂಡ ಆಗಿದೆ. 25ನೇ ಸಿನಿಮಾದ ಸಂಭ್ರಮದಲ್ಲಿರುವ ಗಣೇಶ್ ಕಳೆದ ವಾರವಷ್ಟೇ ಹೊಸ ಮನೆಗೆ ಶಿಫ್ಟ್ ಆಗಿದ್ದಾರೆ. ■

ಅಪ್ಪನ ಹಾದಿಯಲ್ಲಿ ಮರಿ ಟೈಗರ್

ಕನ್ನಡ ಚಿತ್ರೋದ್ಯಮ ಕಂಡ ಅಪರೂಪದ ನಟ ಪ್ರಭಾಕರ್. ಅಪ್ಪನಿಗೆ ಅಪಾರ ಅಭಿಮಾನಿಗಳಿದ್ದರೂ ಇವರ ಪುತ್ರ ವಿನೋದ್ ಪ್ರಭಾಕರ್‌ಗೆ ಸ್ಯಾಂಡಲ್‌ವುಡ್‌ನಲ್ಲಿ ನೆಲೆಯೂರಲು ಇನ್ನೂ ಸಾಧ್ಯವಾಗಿಲ್ಲ. ಪ್ರತಿ ಸಲದ ಪ್ರಯತ್ನದಂತೆ ಈ ಸಾರಿಯೂ ಇವರು ಹಿಟ್ ಸಿನಿಮಾ ನೀಡಲು ಕಸರತ್ತು ನಡೆಸಿದ್ದಾರೆ. ಪಾತ್ರಕ್ಕಾಗಿ ಹಲವು ರೀತಿಯ ತಯಾರಿ ಮಾಡಿಕೊಂಡಿದ್ದಾರೆ.



ಸದ್ಯ ವಿನೋದ್ 'ಟೈಸನ್' ಹೆಸರಿನ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇದು ರಾಮ್‌ನಾರಾಯಣ್ ನಿರ್ದೇಶನದಲ್ಲಿ ಮೂಡಿಬರುತ್ತಿದೆ. ಪಾತ್ರ ನಿರ್ವಹಣೆಗಾಗಿಯೇ ವಿನೋದ್ ತೂಕ ಇಳಿಸಿಕೊಂಡಿದ್ದಾರೆ. ಹೇರ್‌ಸ್ಟೈಲ್ ಕೂಡ ಬದಲಾಯಿಸಿದ್ದಾರೆ. ಅದು ಪೊಲೀಸ್ ಆಫೀಸರ್ ಪಾತ್ರವಾಗಿದ್ದರಿಂದ ದೇಹ ಹುರಿಗೊಳಿಸಿದ್ದಾರೆ.

ಹಾಗೆಂದಮಾತ್ರಕ್ಕೆ ಇದು ಸಾಹಸ ಪ್ರಧಾನ ಚಿತ್ರವಲ್ಲ ಎನ್ನುವುದು ವಿನೋದ್ ಮಾತು. ಇದು ಪಕ್ಕಾ ಸೆಂಟಿಮೆಂಟ್ ಸಿನಿಮಾವಂತೆ. ತಂದೆ ಮತ್ತು ಮಗನ ಬಾಂಧವ್ಯವನ್ನು ಈ ಸಿನಿಮಾದ ಮೂಲಕ ವಿಭಿನ್ನವಾಗಿ ತೋರಿಸಲಿದ್ದಾರಂತೆ.

'ಟೈಸನ್' ಹೆಸರು ಕೇಳಿದ ತಕ್ಷಣ ಖ್ಯಾತ ಬಾಕ್ಸರ್ ಮೈಕ್ ಟೈಸನ್ ನೆನಪಾಗಬಹುದು. ಆದರೆ ಅವರಿಗೂ ಈ ಚಿತ್ರಕ್ಕೂ ಯಾವುದೇ ಸಂಬಂಧವಿಲ್ಲವಂತೆ. ಪೊಲೀಸ್ ಆಫೀಸರ್ ಆಗಲು ಹುಡುಗನೊಬ್ಬ ಎಷ್ಟೆಲ್ಲ ಕಷ್ಟ ಪಡುತ್ತಾನೆ ಎಂಬ ಸರಳ ಕತೆಯನ್ನು ಸಿನಿಮಾ ಮಾಡಿದ್ದಾರೆ. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 01-07-2015 RNI No. KARKAN2005

ಮಳೆ ಹುಡುಗಿಗೆ ಶೋಧ



ಗಣೇಶ್‌ಗೆ ಗೋಲ್ಡನ್ ಸ್ಟಾರ್ ಪಟ್ಟ ತಂದುಕೊಟ್ಟ 'ಮುಂಗಾರು ಮಳೆ' ಸಿನಿಮಾದ ಎರಡನೇ ಭಾಗ ಮೂಡಿಬರುತ್ತಿರುವ ವಿಷಯ ಹಳೆಯದು. ಈ ಚಿತ್ರಕ್ಕಾಗಿ ನಿರ್ದೇಶಕ ಶಶಾಂಕ್ ಸದ್ಯ ನಾಯಕಿಯ ಹುಡುಕಾಟ ನಡೆಸಿದ್ದಾರೆ. ಅಚ್ಚರಿಯ ಸಂಗತಿಯೆಂದರೆ 'ಮಳೆ ಹುಡುಗಿ' ಪಾತ್ರ ಮಾಡಲು ಇನ್ನೂರಕ್ಕೂ ಹೆಚ್ಚು ಹುಡುಗಿಯರು ಸರದಿ ಸಾಲಲ್ಲಿದ್ದಾರೆ.

ಯೋಗರಾಜ್ ಭಟ್ ನಿರ್ದೇಶನದಲ್ಲಿ



ರಚಿತಾರಾಮ್ ... ರಾಧಿಕಾ ಪಂಡಿತ್

ಮೂಡಿಬಂದ 'ಮುಂಗಾರು ಮಳೆ' ಸಿನಿಮಾ ಕನ್ನಡ ಚಿತ್ರೋದ್ಯಮದಲ್ಲಿ ಹೊಸ ಇತಿಹಾಸವನ್ನೇ ಬರೆಯಿತು. ಈ ಸಿನಿಮಾದಲ್ಲಿ ಕೆಲಸ ಮಾಡಿದ ಅಷ್ಟೂ ಕಲಾವಿದರು ಮತ್ತು ತಂತ್ರಜ್ಞರು ಇಂದು ಬಿಜಿ ಆಗಿದ್ದಾರೆ. ಹೀಗಾಗಿ ಮುಂಗಾರು ಮಳೆ-2 ಚಿತ್ರದ ಬಗ್ಗೆ ಸಾಕಷ್ಟು ಕುತೂಹಲ ಮೂಡಿದೆ. ತಮ್ಮ ಸಿನಿಮಾದ ನಾಯಕಿಯ ಕುರಿತು ನಿರ್ದೇಶಕ ಶಶಾಂಕ್ ಏನೂ ಹೇಳದೇ ಇದ್ದರೂ, ಗಾಂಧಿನಗರದಲ್ಲಿ ಹಲವು ನಾಯಕಿಯರ ಹೆಸರು ಗಿರಕಿ ಹೊಡೆಯುತ್ತಿವೆ. ಅದರಲ್ಲೂ ಶಶಾಂಕ್ ನಿರ್ದೇಶನದ ಹಲವು ಚಿತ್ರಗಳಲ್ಲಿ ನಟಿಸಿರುವ ರಾಧಿಕಾ ಪಂಡಿತ್ ಹೆಸರು ಪ್ರಮುಖವಾಗಿ ಕೇಳಿಬರುತ್ತಿದೆ. ಅದರ ಜತೆ ಹರಿಪ್ರಿಯಾ, ರಚಿತಾರಾಮ್, ಕೃತಿ ಕರಬಂಧ ಹೆಸರುಗಳೂ ರೇಸಲ್ಲಿವೆ. ಈ ಕುರಿತು ಶಶಾಂಕ್ ಹೇಳುವುದು ಹೀಗೆ:

"ನಾಯಕಿಯ ಹುಡುಕಾಟವಂತೂ ನಡೆದಿದೆ. ನೂರಾರು ಹುಡುಗಿಯರ ಫೋಟೋ ಮುಂದಿಟ್ಟುಕೊಂಡು ಕೂತಿದ್ದೇನೆ. ಆದಷ್ಟು ಹೊಸ ಹುಡುಗಿಯರಿಗೆ ಅವಕಾಶ ಕೊಡುವ ಉದ್ದೇಶ ನನ್ನದು. ಇನ್ನೂ ನಾಯಕಿಯ ಆಯ್ಕೆ ಆಗಿಲ್ಲ, ಕತೆಗೆ ಹೊಸ ಮುಖವೇ ಬೇಕು. ಆಯ್ಕೆಯಾದ ನಂತರ ತರಬೇತಿಯಲ್ಲಿ ಆ ಹುಡುಗಿ ಪಾಲ್ಗೊಳ್ಳಬೇಕು. ಮೊದಲನೇ ಹಂತದಲ್ಲಿ ಸೂಕ್ತ ಹುಡುಗಿ ಸಿಗದೇ ಹೋದರೆ, ಮತ್ತೊಂದು ಹಂತದ ಆಡಿಷನ್ ಮಾಡುತ್ತೇನೆ. ನಾಯಕಿಯ ವಿಷಯದಲ್ಲಿ ಅವಸರವೇನೂ ಇಲ್ಲ."

ಚಿತ್ರಕತೆ ಬರೆಯಲು ಸಕಲೇಶಪುರದಲ್ಲಿ ಬೀಡು ಬಿಟ್ಟಿದ್ದ ಶಶಾಂಕ್ ಈಗ ಬೆಂಗಳೂರಿಗೆ ಬಂದಿದ್ದಾರೆ. ಇವರ 'ಸಿಕ್ಸರ್' ಸಿನಿಮಾ ಸೇರಿದಂತೆ ಹಲವು ಚಿತ್ರಗಳಿಗೆ ಸಂಭಾಷಣೆ ಬರೆದಿರುವ ಎಂ.ಎಲ್.ಪ್ರಸನ್ನ ಅವರಿಂದ ಈ ಚಿತ್ರಕ್ಕೆ ಡೈಲಾಗ್ ಬರೆಸುತ್ತಿದ್ದಾರೆ. ಜುಲೈ 15ರಿಂದ ಚಿತ್ರೀಕರಣ ಪ್ರಾರಂಭವಾಗಲಿದ್ದು, ಮೊನ್ನೆಯಷ್ಟೇ ಚಿತ್ರಕ್ಕೆ ಮುಹೂರ್ತವಾಗಿದೆ.

ಕಾಮಿಡಿ ಪಾತ್ರದಲ್ಲಿ ನಿಖಿತಾ ತುಕ್ರಾಲ್




ನಿಖಿತಾ ತುಕ್ರಾಲ್

ದರ್ಶನ್, ಪುನೀತ್ ಸೇರಿದಂತೆ ಹಲವು ಸ್ಟಾರ್ ನಟರ ಜತೆ ತೆರೆ ಹಂಚಿಕೊಂಡಿರುವ ನಿಖಿತಾ ತುಕ್ರಾಲ್, ಇದೇ ಮೊದಲ ಬಾರಿಗೆ ಹೊಸ ಹುಡುಗರ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಅದು ಕಾಮಿಡಿ ಸಿನಿಮಾ ಎನ್ನುವುದೇ ವಿಶೇಷ.

'ಬಿಗ್‌ಬಾಸ್' ನಂತರ ಕನ್ನಡದಲ್ಲಿ ಇವರಿಗೆ ಹೇಳಿಕೊಳ್ಳುವಂತಹ ಅವಕಾಶಗಳು ಸಿಗಲಿಲ್ಲ. ತಮಿಳು, ತೆಲುಗು ಸುತ್ತಿ ಬಂದರೂ ಮ್ಯಾಜಿಕ್ ನಡೆಯಲಿಲ್ಲ. ಹೀಗಾಗಿ ಹೊಸ ನಾಯಕನ ಚಿತ್ರಕ್ಕೆ ನಿಖಿತಾ ಸಹಿ ಮಾಡಿದ್ದಾರೆ ಎನ್ನುವುದು ಲೇಟೆಸ್ಟ್ ನ್ಯೂಸ್. ಚಿತ್ರಕ್ಕೆ 'ತಲೆ ಬಾಚ್ಕೊಳ್ಳಿ ಪೌಡ್ರು ಹಾಕ್ಕೊಳ್ಳಿ' ಎಂಬ ಶೀರ್ಷಿಕೆ ಇಡಲಾಗಿದೆ. 'ಜೈಹಿಂದ್', 'ಸೈಲೆನ್ಸ್' ಮತ್ತಿತರ ಸಿನಿಮಾ ನಿರ್ದೇಶಿಸಿದ್ದ ಎ.ವೇಣುಗೋಪಾಲ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಚಿಕ್ಕಣ್ಣ ಸೇರಿದಂತೆ ಹಲವು ಹಾಸ್ಯ ಕಲಾವಿದರು ನಟಿಸುತ್ತಿದ್ದಾರೆ.

"ಕನ್ನಡದಲ್ಲೂ ಸಾಕಷ್ಟು ಆಫರ್ಸ್ ಇವೆ. ಆದರೆ ಒಳ್ಳೆಯ ಪಾತ್ರಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುತ್ತಿದ್ದೇನೆ. ಇದು ಕಾಮಿಡಿ ಸಿನಿಮಾವಾದರೂ ಒಳ್ಳೆಯ ಕತೆ ಇಲ್ಲಿದೆ. ಹೀಗಾಗಿ ನಟಿಸಲು ಒಪ್ಪಿಕೊಂಡೆ" ಅಂತಾರೆ ನಿಖಿತಾ. ಈ ಸಿನಿಮಾದಲ್ಲಿ ಮೂವರು ನಾಯಕರು. ಇಬ್ಬರು ನಾಯಕಿಯರು. ಅದರಲ್ಲಿ ನಿಖಿತಾ ಒಬ್ಬರು.

ಹಿಟ್ ವಿಕೆಟ್ ಆದ ದಿಗಂತ್



ದಿಗಂತ್

ದಿಗಂತ್ ಸದ್ಯ ಏನು ಮಾಡುತ್ತಿದ್ದಾರೆ ಎಂಬ ಕುತೂಹಲ ಅವರ ಅಭಿಮಾನಿಗಳಲ್ಲಿತ್ತು. ಅದಕ್ಕೀಗ ಉತ್ತರ ಸಿಕ್ಕಿದೆ. ಬಾಲಿವುಡ್‌ಗೆ ಹೋಗಲು ತಯಾರಿ ಮಾಡಿಕೊಳ್ಳುತ್ತಿರುವ ದಿಗಂತ್, ಈ ಮಧ್ಯೆ ಮತ್ತೊಂದು ಕನ್ನಡ ಸಿನಿಮಾದಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ. 'ಹಿಟ್ ವಿಕೆಟ್' ಹೆಸರಿನಲ್ಲಿ ತಯಾರಾಗುತ್ತಿರುವ ಚಿತ್ರಕ್ಕೆ ಸಂದೀಪ್ ಗೌಡ ನಿರ್ದೇಶಕ.


ಮೂರು ವರ್ಷಗಳ ಹಿಂದೆ ಇವರದ್ದೇ ನಿರ್ದೇಶನದ 'ಬಿಸಿಲೆ' ಎನ್ನುವ ಚಿತ್ರದಲ್ಲಿ ದಿಗಂತ್ ನಟಿಸಿದ್ದರು. ಈ ಕಾಂಬಿನೇಷನ್‌ನಲ್ಲೇ 'ಹಿಟ್ ವಿಕೆಟ್' ಸಿನಿಮಾ ಕೂಡ ಮೂಡಿಬರುತ್ತಿದೆ. ಇದು ಕ್ರಿಕೆಟ್ ಆಟಗಾರನೊಬ್ಬನ ಖಾಸಗಿ ಜೀವನ ಕತೆ ಅಂತಾರೆ ದಿಗಂತ್. ಸಿನಿಮಾದ ಮತ್ತೊಂದು ವಿಶೇಷತೆ ಅಂದರೆ, ಮೊಟ್ಟಮೊದಲ ಬಾರಿಗೆ ಒಂದೇ ಚಿತ್ರಕ್ಕೆ ಐದು ಜನ ಸಂಗೀತ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿರುವುದು. ಮಿಥುನ್, ಗಗನ್ ... ವಿವೇಕ್, ಜೂಡಾ ಮತ್ತು ಅಭಿಮಾನ್ ಈ ಚಿತ್ರದ ಸಂಗೀತ ನಿರ್ದೇಶಕರು. ಅಪೂರ್ವ ರೈ ನಾಯಕಿ. ಈಗಾಗಲೇ ಇವರು ... ತಮಿಳಿನಲ್ಲಿ ಅರ್ಜುನ್ ಸರ್ಜಾ ಜತೆ ತೆರೆ ಹಂಚಿಕೊಂಡಿದ್ದಾರೆ.

ದಿಗಂತ್ ಅಭಿನಯದ ಬಹುತೇಕ ಸಿನಿಮಾಗಳಲ್ಲಿ ನಟಿಸ... ಅನಂತ್ ನಾಗ್ ಕೂಡ ಪ್ರಮುಖ ಪಾತ್ರ ಮಾಡುತ್ತಿರುವುದು ಮತ್ತೊಂದು ವಿಶೇಷ.

ಗಡ್ಡದ ಗುರುವಿನ ಚಿತ್ರ... ಸಂಗೀತಾ ನಾಯ...



ಸಂಗೀತಾ ಭಟ್



ಗುರುಪ್ರ...

ಪವನ್ ಒಡೆಯರ್ ನಾಯಕನಾಗಿ ನಟಿಸಿದ್ದ 'ಪ್ರ... ಗೀತೆ ಇತ್ಯಾದಿ' ಚಿತ್ರ ಬಾಕ್ಸ್ ಆಫೀಸ್‌ಲ್ಲಿ ಮಕಾಡೆ ಮಲಗಿದ ವಿಷಯ ಗೊತ್ತೇ ಇದೆ. ಆ ಸಿನಿಮಾದ ... ನಂತರ ಪವನ್ ಮತ್ತೆ ನಾಯಕನಾಗಲಿಲ್ಲ, ನಾಯಕಿ ಸಂಗೀತಾ ಭಟ್ ಚಿತ್ರೋದ್ಯಮದಲ್ಲೇ ಕಾಣಿಸಿಕೊಳ್ಳಲಿಲ್ಲ. ಪವನ್ ಮತ್ತೆ ನಿರ್ದೇಶನಕ್ಕೆ ಹೊರಳಿದರೆ ಸಂಗೀತಾ ಸ್ಯಾಂಡಲ್‌ವುಡ್ ತೊರೆದೆರು ಅನ್ನುವ ಮಾತಿತ್ತು, ಈಗ ಮತ್ತೆ ಅವರು ಸಿನಿಮಾರಂಗದಲ್ಲಿ ಪ್ರತ್ಯಕ್ಷರಾಗಿದ್ದಾರೆ. ಧನಂಜಯ್ ನಾಯಕನಾಗಿ ನಟಿಸುತ್ತಿರುವ 'ಎರಡನೇ ಸಲ' ಚಿತ್ರ... ನಾಯಕಿಯಾಗಿ ಆಯ್ಕೆ ಆಗಿದ್ದಾರೆ. ಅಚ್ಚರಿಯ ಸಂಗತಿ ಅಂದರೆ ಈ ... ಆಕ್ಷನ್ ಕಟ್ ಹೇಳುತ್ತಿರುವುದು ... ಅಲಿಯಾಸ್ ಗಡ್ಡದ ಗುರುಪ್ರಸಾದ್ ...

'ಡೈರೆಕ್ಟರ್ ಸ್ಪೆಷಲ್' ಸಿನಿಮಾದ ... ಗುರುಪ್ರಸಾದ್ ಕೂಡ ಚಿತ್ರರಂಗದಿಂದ ದೂರವೇ ಉಳಿದಿದ್ದರು. ಕಿರುತೆರೆಯಲ್ಲಿ ಸಕ್ರಿಯರಾಗಿದ್ದ ಗುರು ಈಗ ಮತ್ತೆ ಸಿನಿಮಾ... ಮುಖ ಮಾಡಿದ್ದಾರೆ. ತಾವೇ ಸ್ಯಾಂಡಲ್‌ವು... ಪರಿಚಯಿಸಿದ ಧನಂಜಯ್‌ರನ್ನು ನಾಯಕನ... ಆಯ್ಕೆ ಮಾಡಿಕೊಂಡಿದ್ದಾರೆ.

ಈ ಸಿನಿಮಾದ ಮುಹೂರ್ತ ಕಳೆದ ... ವರ್ಷವೇ ನಡೆದಿತ್ತು. ಆನಂತರ ಯಾವುದೇ ಸುದ್ದಿ ... ಇರಲಿಲ್ಲ. ಈಗ ದಿಢೀರ್ ಅಂತ ಸಿನಿಮಾ ಮಾಡು... ಸೂಚನೆ ಕೊಟ್ಟಿದ್ದಾರೆ. ಎಲ್ಲವೂ ಅಂದುಕೊಂಡಂತೆ ... ನಡೆದರೆ ಮುಂದಿನ ತಿಂಗಳು ಶೂಟಿಂಗ್ ನಡೆಯ... ಸದ್ದಿಲ್ಲದೇ ಫೋಟೋ ಶೂಟ್ ಕೂಡ ಮುಗಿದಿ... ಸಿನಿಮಾದ ಮತ್ತೊಂದು ವಿಶೇಷತೆ ಅಂದರೆ ನಾ... ನಾಯಕಿಯರಿಗೆ ಸಿನಿಮಾದ ಕತೆ ಹೇಳಿಲ್ಲವಂತೆ ... ನಿರ್ದೇಶಕರು. ಪಾತ್ರದ ಹಿನ್ನೆಲೆಯಷ್ಟೇ ಹೇಳು... ಮೂಲಕ ಅವರಿಗೂ ಕುತೂಹಲ ಮೂಡಿಸಿದ್ದಾರಂತೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com